# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸಿನಿಮಾ ಪುರವಣಿ**
ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿರುವ ಕಿರುತೆರೆ ನಟಿ ಅಂಕಿತಾ ಅಮರ್ 'ಅಬ ಜಬ ದಬ' ಸಿನಿಮಾದಲ್ಲಿ ಗಾಯಕಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ

**ಆಳ-ಅಗಲ**
ಕೋವಿಡ್ ದೃಢ ದರ ರಾಜ್ಯಗಳ ನಡುವೆ ಭಾರಿ ಅಂತರ

'ಕಣವಿ ಚಿಕಿತ್ಸಾ ವೆಚ್ಚ ಸರ್ಕಾರ ಭರಿಸಲಿದೆ' 4

ಶಿರಾಡಿಘಾಟ್ ರಸ್ತೆ ಮೇಲ್ದರ್ಜೆಗೆ: ಕೇಂದ್ರ ಒಪ್ಪಿಗೆ 6

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 59,464 ▼ | 17,757 ▼ | ₹50,220 (ಬೆಂಗಳೂರು) ▲ | ₹66,100 (ಬೆಂಗಳೂರು) ▲ | 74.51 ▼ |




### ಕೋವಿಡ್ ಭೀಕರತೆಯಲ್ಲೂ ಜೀವರಕ್ಷಕವಾಗದ 'ಆರೋಗ್ಯ ಕವಚ'

# '108'ಕ್ಕೆ ಬೇಕು ತುರ್ತು 'ಚಿಕಿತ್ಸೆ'

• ರಾಜೇಶ್ ರೈ ಚಟ್ಲ

| 'ಆರೋಗ್ಯ ಕವಚ'ದ ವಸ್ತುಸ್ಥಿತಿ | 710 | 340 | 555 | 155 | 489 | 1,350 |
|---|---|---|---|---|---|---|
| | ಒಟ್ಟು '108' ಆಂಬುಲೆನ್ಸ್‌ಗಳು | ಅವುಗಳಲ್ಲಿ 7 ವರ್ಷಕ್ಕಿಂತ ಹಳೆಯವು | ಬಿಎಲ್‌ಎಸ್ ಆಂಬುಲೆನ್ಸ್‌ಗಳು | ಎಎಲ್‌ಎಸ್ ಆಂಬುಲೆನ್ಸ್‌ಗಳು | ಸದ್ಯ ಕಾರ್ಯ ನಿರ್ವಹಿಸುತ್ತಿರುವ ಆಂಬುಲೆನ್ಸ್‌ಗಳು | ಆಂಬುಲೆನ್ಸ್‌ಗಳಲ್ಲಿ ಇರುವ ಚಾಲಕರು, ಸಿಬ್ಬಂದಿ |

ಕಲಬುರಗಿ ಆರೋಗ್ಯ ಇಲಾಖೆಯ ಕಾರ್ಯಾಲಯದ ಬಳಿ ಕೆಟ್ಟು ನಿಂತಿರುವ 108 ಆಂಬುಲೆನ್ಸ್‌ಗಳು
– ಪ್ರಜಾವಾಣಿ ಚಿತ್ರ /ತಾಜುದ್ದೀನ್ ಆಜಾದ್

**ಬೆಂಗಳೂರು:** ರಾಜ್ಯದ ಯಾವುದೇ ಭಾಗದಿಂದ '108' ಸಂಖ್ಯೆಗೆ ತುರ್ತು ಕರೆ ಮಾಡಿದರೆ ನಗರ ಪ್ರದೇಶದೊಳಗೆ 20 ನಿಮಿಷ, ಗ್ರಾಮೀಣ ಪ್ರದೇಶದಲ್ಲಿ 30 ನಿಮಿಷದ ಒಳಗೆ ಅಗತ್ಯ ಇರುವ ಆಂಬುಲೆನ್ಸ್ ತಲುಪುವ ವ್ಯವಸ್ಥೆಯೇ 'ಆರೋಗ್ಯ ಕವಚ-108'. ಸರ್ಕಾರಿ-ಖಾಸಗಿ ಸಹಭಾಗಿತ್ವದಲ್ಲಿ ಲಭ್ಯವಿರುವ ಈ ಸೇವೆಗೆ ಕೋವಿಡ್ ಮೂರನೇ ಅಲೆಯ ನೆಪದಲ್ಲಿಯಾದರೂ ಸರ್ಕಾರ ತುರ್ತು 'ಚಿಕಿತ್ಸೆ' ನೀಡಬೇಕಾದ ಸಂದರ್ಭ ಬಂದಿದೆ.

2008ರಲ್ಲಿ 150, 2009-10ರಲ್ಲಿ 367 ಆಂಬುಲೆನ್ಸ್‌ಗಳನ್ನು '108'ಕ್ಕೆ ಸೇರಿಸಿ 'ಆರೋಗ್ಯ ಕವಚ' ಯೋಜನೆ ಆರಂಭಿಸಲಾಗಿತ್ತು. 2014-15ರ ವೇಳೆಗೆ ಈ ವ್ಯವಸ್ಥೆಯಡಿ 710 ಆಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದವು. ಈ ಪೈಕಿ, ಬೇಸಿಕ್ ಲೈಫ್ ಸಪೋರ್ಟ್ (ಬಿಎಲ್‌ಎಸ್) ಸೌಲಭ್ಯದ 555, ಆಧುನಿಕ ಉಪಕರಣಗಳಿರುವ ಅಡ್ವಾನ್ಸ್‌ಡ್ ಲೈಫ್ ಸಪೋರ್ಟ್ (ಎಎಲ್‌ಎಸ್) 155 ಆಂಬುಲೆನ್ಸ್‌ಗಳು. ಅವುಗಳಲ್ಲಿ 340 ಆಂಬುಲೆನ್ಸ್‌ಗಳು ಏಳು ವರ್ಷಕ್ಕಿಂತಲೂ ಹೆಚ್ಚು ಹಳೆಯವು. ಪ್ರತಿ 5 ವರ್ಷಗಳಿಗೊಮ್ಮೆ ಆಂಬುಲೆನ್ಸ್‌ಗಳನ್ನು ಬದಲಿಸಬೇಕೆಂಬ ನಿಯಮವೂ ಪಾಲನೆ ಆಗಿಲ್ಲ.

ಸದ್ಯ 108 ಸೇವೆಯಲ್ಲಿ ಬಳಸುವ ತಂತ್ರಜ್ಞಾನ 13 ವರ್ಷಗಳಷ್ಟು ಹಳೆಯದು. ಸಾರ್ವಜನಿಕರಿಗೆ ಸುಗಮ ಸೇವೆ ನೀಡಲು ಸಾಧ್ಯ ಆಗದಿರಲು ಇದೂ ಕಾರಣ. ಹೀಗಾಗಿ, ಆಂಬುಲೆನ್ಸ್ ಸೇವೆಯಲ್ಲಿ ಬದಲಾವಣೆ ತಂದು, 108 ತುರ್ತು ವೈದ್ಯಕೀಯ ಪ್ರತಿಕ್ರಿಯೆ ತಂತ್ರಜ್ಞಾನವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಸಜ್ಜುಗೊಳಿಸಬೇಕಿದೆ. 108 ಕರೆ ಕೇಂದ್ರ, ತಂತ್ರಜ್ಞಾನ, ತರಬೇತಿ ಕೇಂದ್ರ ಮುಂತಾದವುಗಳನ್ನು ಮೇಲ್ದರ್ಜೆಗೆ ಏರಿಸಬೇಕಿದೆ. ಕೋವಿಡ್ ಭೀಕರತೆ ಈ ದಿಕ್ಕಿನತ್ತ ಕಾರ್ಯಪ್ರವೃತ್ತರಾಗುವಂತೆ ಸರ್ಕಾರವನ್ನು ಎಚ್ಚರಿಸಿದೆ. ಆಯ್ಕೆ ಈಗ ಸರ್ಕಾರದ ಮುಂದಿದೆ.




ಸಿಕಂದರಾಬಾದ್‌ನ ಎಮರ್ಜೆನ್ಸಿ ಮ್ಯಾನೇಜ್‌ಮೆಂಟ್ ರೀಸರ್ಚ್ ಇನ್‌ಸ್ಟಿಟ್ಯೂಟ್ (ಜಿವಿಕೆ-ಇಎಂಆರ್‌ಐ) ಜೊತೆ ಒಪ್ಪಂದ ಮಾಡಿಕೊಂಡು 2008ರ ಆಗಸ್ಟ್ 14ರಂದು 10 ವರ್ಷ ಅವಧಿಗೆ ಸೇವೆ ಆರಂಭಿಸಲಾಗಿದೆ. ಆದರೆ, ಅವ್ಯವಹಾರ, ಅಸಮರ್ಪಕ ಸೇವೆ ಸೇರಿದಂತೆ ನಾನಾ ಕಾರಣಗಳಿಗೆ ಸಂಸ್ಥೆಯ ಜೊತೆಗಿನ ಒಡಂಬಡಿಕೆಯನ್ನು ಅವಧಿಗೆ ಮೊದಲೇ (2017ರ ಜುಲೈ 14) ರದ್ದುಗೊಳಿಸಲಾಗಿದೆ. ಆಂಬುಲೆನ್ಸ್ ತುರ್ತು ಸೇವೆಯಾಗಿರುವುದರಿಂದ ಮುಂದಿನ ಸೇವಾದಾರರನ್ನು ಆಯ್ಕೆ ಮಾಡುವವರೆಗೆ ಜಿವಿಕೆ-ಇಎಂಆರ್‌ಐಗೆ ನೀಡಿದ್ದ ಅವಧಿಯನ್ನು ವಿಸ್ತರಿಸಿಕೊಂಡು ಬರಲಾಗುತ್ತಿದೆ.

ಕೋವಿಡ್ ಮೊದಲ ಮತ್ತು ಎರಡನೇ ಅಲೆ ಉತ್ತುಂಗ ಸ್ಥಿತಿಯಲ್ಲಿದ್ದಾಗ ರಾಜ್ಯದಾದ್ಯಂತ ಆಂಬುಲೆನ್ಸ್ ಸೇವೆ ಸಿಗದೇ ಜನ ಹೈರಾಣಾಗಿದ್ದರು. ಖಾಸಗಿ ಆಂಬುಲೆನ್ಸ್‌ಗಳು, ಟೆಂಪೊ ಟ್ರಾವಲರ್‌ಗಳನ್ನು ವಶಕ್ಕೆ ಪಡೆದು ಬಳಸಬೇಕಾದ ಅನಿವಾರ್ಯತೆ, ಸವಾಲು ಸರ್ಕಾರಕ್ಕೆ ಎದುರಾಗಿತ್ತು. ಈ ದಿನಗಳಲ್ಲಿ ಸಮರ್ಪಕವಾಗಿ ಸೇವೆ ನೀಡಬೇಕಿದ್ದ 'ಆರೋಗ್ಯ ಕವಚ-108', ತುರ್ತು ಕರೆಗೆ ಸ್ಪಂದಿಸದ, ರಸ್ತೆ ಮಧ್ಯದಲ್ಲಿಯೇ ಕೆಟ್ಟು ನಿಂತ, ಜೀವರಕ್ಷಕ ಸಾಧನಗಳು, ಅಗತ್ಯ ಔಷಧಗಳು ಇಲ್ಲದ, ಚಾಲಕ, ಸಿಬ್ಬಂದಿ ವಸೂಲಿಗಿಳಿದ ಕಾರಣಗಳಿಗೆ ಹೆಚ್ಚು ಸುದ್ದಿಯಾಗಿತ್ತು. ಹಲವು ಪ್ರಕರಣಗಳಲ್ಲಿ ಆಂಬುಲೆನ್ಸ್‌ಗಳಲ್ಲೇ ಬಡಜೀವಗಳ ಪ್ರಾಣಪಕ್ಷಿ ಹಾರಿಹೋಗಿತ್ತು.

ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ 108 ಆಂಬ್ಯುಲೆನ್ಸ್ ಸೇವೆಯಲ್ಲಿ ಭಾರಿ ಲೋಪ ಆಗಿದೆ. ಸಮರ್ಪಕವಾಗಿ ಸೇವೆ ಸಲ್ಲಿಸಿದರೆ ಸಂಸ್ಥೆಗೆ ಪ್ರತಿ ಮೂರು ತಿಂಗಳಿಗೆ ₹ 40 ಕೋಟಿ ಸರ್ಕಾರ ನೀಡಬೇಕಿದೆ. ಆದರೆ, ಲೋಪದ ಕಾರಣಕ್ಕೆ ಎರಡು ಮತ್ತು ಮೂರನೇ ಕಂತಿನ ಹಣವನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಹೀಗಾಗಿ, ಈ ಸಾಲಿನಲ್ಲಿ ಈ ಸೇವೆಗೆ ಒದಗಿಸಿದ್ದ ಅಂದಾಜು ಮೊತ್ತದಲ್ಲಿ ಅರ್ಧದಷ್ಟು (₹ 86.31 ಕೋಟಿ) ಮಾತ್ರ ವೆಚ್ಚವಾಗಿದೆ.

4ನೇ | ಪುಟ ನೋಡಿ

### ಹೊಸ ಆಂಬುಲೆನ್ಸ್ ಪ್ರಸ್ತಾಪಕ್ಕೆ ಅಸಮ್ಮತಿ

ಆರೋಗ್ಯ ಕವಚ- 108 ಆಂಬುಲೆನ್ಸ್‌ಗಳ ಸಂಖ್ಯೆಯನ್ನು 1,000ಕ್ಕೆ ಹೆಚ್ಚಿಸಬೇಕೆಂಬ ಆರೋಗ್ಯ ಇಲಾಖೆಯ ಪ್ರಸ್ತಾವಕ್ಕೆ ಆರ್ಥಿಕ ಇಲಾಖೆ ಅನುಮೋದನೆ ನೀಡಿಲ್ಲ. ಆಂಬುಲೆನ್ಸ್‌ಗಳ ಸಂಖ್ಯೆಯನ್ನು 710ರಿಂದ 750ಕ್ಕೆ ಹೆಚ್ಚಿಸಲು ಮಾತ್ರ ಒಪ್ಪಿದೆ. ಆದರೆ, ಕರೆ ಕೇಂದ್ರದಲ್ಲಿ ಕರೆ ಸ್ವೀಕರಿಸುವವರ ಸಂಖ್ಯೆಯನ್ನು 75ಕ್ಕೆ ಹೆಚ್ಚಿಸಲು ಅನುಮೋದನೆ ನೀಡಿದೆ. ಆ ಮೂಲಕ, 5 ವರ್ಷಗಳ ಅವಧಿಗೆ ಆರೋಗ್ಯ ಕವಚ ಸೇವೆಯನ್ನು ₹ 1,260.44 ಕೋಟಿ ವೆಚ್ಚದಲ್ಲಿ ಟೆಂಡರ್ ಕರೆದು ಅನುಷ್ಠಾನಗೊಳಿಸಲು ಇದೇ ಡಿ. 7ರಂದು ಆರ್ಥಿಕ ಇಲಾಖೆ ಸಹಮತಿ ಸೂಚಿಸಿದೆ. ಆದರೆ, ಆಂಬುಲೆನ್ಸ್ ಸಂಖ್ಯೆ ಹೆಚ್ಚಿಸಬೇಕಾದ ಅಗತ್ಯದ ಬಗ್ಗೆ ಸಮರ್ಥನೆ ನೀಡಿ ಮತ್ತೆ ಕಡತ ಮಂಡಿಸಲಾಗಿದೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

**ಸದ್ಯದ ಆರೋಗ್ಯ ಕವಚ-108 ಆಂಬುಲೆನ್ಸ್ ವ್ಯವಸ್ಥೆಯಲ್ಲಿ ಸಾಕಷ್ಟು ಲೋಪಗಳಿವೆ. ಅವುಗಳನ್ನು ನಿವಾರಿಸಿ ಆಧುನಿಕ ತಂತ್ರಜ್ಞಾನ ಮತ್ತು ಜಾಗತಿಕ ಗುಣಮಟ್ಟದ ನಿರ್ವಹಣಾ ಪದ್ಧತಿ ಅಳವಡಿಸಿಕೊಳ್ಳಲು ಸಿದ್ಧತೆ ನಡೆದಿದೆ**
**ಡಾ.ಕೆ. ಸುಧಾಕರ್,** ಆರೋಗ್ಯ ಸಚಿವ

ಇನ್ನಷ್ಟು ಸುದ್ದಿಗಳು | 4

## ಕೆಲ ಜಿಲ್ಲೆ: ವಾರಾಂತ್ಯ ಕರ್ಫ್ಯೂ ಹಿಂದಕ್ಕೆ?

### ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದ ಸಭೆ ಇಂದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಪ್ರಕರಣ ಕಡಿಮೆ ಇರುವ ಜಿಲ್ಲೆಗಳಲ್ಲಿ ರಾತ್ರಿ, ವಾರಾಂತ್ಯ ಕರ್ಫ್ಯೂ ಹಿಂತೆಗೆದುಕೊಳ್ಳುವ, ಬೆಂಗಳೂರು ಸೇರಿದಂತೆ ಕೆಲವೆಡೆ ಮುಚ್ಚಿರುವ ಶಾಲೆ-ಕಾಲೇಜುಗಳನ್ನು ಪುನರಾರಂಭಿಸುವ ಬಗ್ಗೆ ರಾಜ್ಯ ಸರ್ಕಾರ ಶುಕ್ರವಾರ ಮಹತ್ವದ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 1ಗಂಟೆಗೆ ಸಭೆ ನಡೆಯಲಿದ್ದು, ಸಚಿವರು ಹಾಗೂ ಆರೋಗ್ಯ ಕ್ಷೇತ್ರದ ತಜ್ಞರು ಭಾಗಿಯಾಗಲಿದ್ದಾರೆ. ನಿರ್ಬಂಧ ಸಡಿಲಗೊಳಿಸುವ ಬಗ್ಗೆ ತಜ್ಞರು ನೀಡುವ ಶಿಫಾರಸು ಆಧರಿಸಿ ನಿರ್ಣಯ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಈಗಾಗಲೇ ಹೇಳಿದ್ದಾರೆ.

ಕರ್ಫ್ಯೂ ಅಗತ್ಯ ಇಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿಪಾದಿಸಿದ್ದಾರೆ. ಕೈಗಾರಿಕೆ, ಹೋಟೆಲ್ ಹಾಗೂ ವಿವಿಧ ಸಂಘಟನೆಗಳು ವಾರಾಂತ್ಯ ಕರ್ಫ್ಯೂ ಕೈಬಿಡುವಂತೆ ಸರ್ಕಾರವನ್ನು ಒತ್ತಾಯಿಸಿವೆ.

ಈ ಕುರಿತು ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, ಕೋವಿಡ್ ನಿಯಂತ್ರಿಸುವ ಸಲುವಾಗಿ ರಾತ್ರಿ ಮತ್ತು ವಾರಾಂತ್ಯ ಎರಡು ದಿನ ಕರ್ಫ್ಯೂ ಹೇರಲಾಗಿತ್ತು. ಈ ಕ್ರಮಕ್ಕೆ ವಿರೋಧ ಪಕ್ಷದ ಕಾಂಗ್ರೆಸ್, ವಿವಿಧ ಸಂಘ ಸಂಸ್ಥೆಗಳು, ಉದ್ದಿಮೆಗಳು ಅಸಮಾಧಾನ ವ್ಯಕ್ತಪಡಿಸಿವೆ. ಶುಕ್ರವಾರದ ಸಭೆಯಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕಾಂಗ್ರೆಸ್, ಜೆಡಿಎಸ್ ನಾಯಕರು ನೀಡಿದ ಸಲಹೆ, ಕೇಂದ್ರ ಸರ್ಕಾರದ ನಿರ್ದೇಶನ, ತಜ್ಞರು ನೀಡುವ ಶಿಫಾರಸು ಆಧರಿಸಿ ಹೊಸ ಮಾರ್ಗಸೂಚಿ ಹೊರಡಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು. 18ರಿಂದ 20 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ಇಲ್ಲ. ಹಾಗಿದ್ದರೂ ಜನರ ಜೀವ, ಜೀವನ ಗಮನದಲ್ಲಿಟ್ಟುಕೊಂಡು ಸರ್ಕಾರ ನಿರ್ಣಯ ಕೈಗೊಳ್ಳಲಿದೆ ಎಂದರು.

ಸಾರ್ವಜನಿಕರ ಸಹಕಾರ ಇಲ್ಲದೇ ಕೋವಿಡ್ ಕಡಿಮೆ ಮಾಡಲು ಆಗುವುದಿಲ್ಲ. ನಮ್ಮಲ್ಲಿ ಸಾವು-ನೋವುಗಳ ಸಂಖ್ಯೆ ಕಡಿಮೆ ಇರುವುದು ಸಮಾಧಾನದ ಸಂಗತಿ. ಆರ್ಥಿಕ ವ್ಯವಹಾರವೊಂದನ್ನೇ ಇಟ್ಟುಕೊಂಡು ತೀರ್ಮಾನ ಕೈಗೊಳ್ಳಲಾಗುವುದಿಲ್ಲ ಎಂದು ಹೇಳಿದರು.

### 'ಡಿಕೆಶಿ ವೇಗಕ್ಕೆ ತಕ್ಕಂತೆ ಬಿಜೆಪಿ ಬೆಳೆಸುವುದು ಅನಿವಾರ್ಯ'

## ತಕ್ಷಣವೇ ಸಂಪುಟ ಪುನಾರಚಿಸಿ: ಯತ್ನಾಳ-ರೇಣುಕಾಚಾರ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲ ಸಚಿವಗಿರಿ ಅನುಭವಿಸಿದ ಹಿರಿಯರನ್ನು ಪಕ್ಷದ ಕೆಲಸಕ್ಕೆ ನಿಯೋಜಿಸಿ, ಪಕ್ಷ ನಿಷ್ಠರಾದ ಹೊಸಬರಿಗೆ ಅವಕಾಶ ಕೊಡುವಂತೆ ಮುಖ್ಯಮಂತ್ರಿ ಮೇಲೆ ಒತ್ತಡ ಹೇರಲು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ಎಂ.ಪಿ. ರೇಣುಕಾಚಾರ್ಯ ತಯಾರಿ ನಡೆಸಿದ್ದಾರೆ.

ನಗರದಲ್ಲಿ ಗುರುವಾರ ಸಭೆ ನಡೆಸಿದ ಇಬ್ಬರು, ಸಂಪುಟ ಪುನಾರಚನೆ ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಪಕ್ಷದ ಮುಖಂಡರ ಮೇಲೆ ಒತ್ತಡ ಹೇರಲು ನಿರ್ಧರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ವೇಗಕ್ಕೆ ಸರಿಯಾಗಿ ಬಿಜೆಪಿಯನ್ನು ಸಂಘಟನಾತ್ಮಕವಾಗಿ ಬಲಪಡಿಸಬೇಕಾದರೆ ಸಚಿವ ಸಂಪುಟ ಪುನಾರಚನೆಯನ್ನು ತಕ್ಷಣವೇ ಮಾಡಬೇಕು. 2006ರ ಮೈತ್ರಿ ಸರ್ಕಾರ, 2008-2013 ರ ಅವಧಿ, ಬಿ.ಎಸ್. ಯಡಿಯೂರಪ್ಪ ಸರ್ಕಾರ ಹಾಗೂ ಬೊಮ್ಮಾಯಿ ನೇತೃತ್ವದ ಸಂಪುಟದಲ್ಲಿ ಸಚಿವರಾಗಿರುವವರನ್ನು ಕೈಬಿಡಬೇಕು. ಮುಖ್ಯಮಂತ್ರಿ ಹೊರತುಪಡಿಸಿ ಇಡೀ ಸಂಪುಟವನ್ನೇ ಬದಲಾಯಿಸಿ, ಪಕ್ಷ ನಿಷ್ಠರು ಮತ್ತು ಹೊಸಬರಿಗೆ ಅವಕಾಶ ಕೊಟ್ಟರೆ 2023ರ ಚುನಾವಣೆಯಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಲು ಸಾಧ್ಯ ಇದೆ' ಎಂಬ ಅಂಶವನ್ನು ಮನವರಿಕೆ ಮಾಡಿಕೊಡುವ ಬಗ್ಗೆಯೂ ಚರ್ಚೆ ನಡೆಯಿತು.

ಕೆಲವು ಸಚಿವರ ಬಳಿ ಹೋದರೆ ಶಾಸಕರ ಕೆಲಸಗಳನ್ನು ಮಾಡಿಕೊಡುವುದಿಲ್ಲ. ತಾಂತ್ರಿಕ ಕಾರಣ ಉಲ್ಲೇಖಿಸಿ ಕುಂಟು ನೆಪ ಹೇಳುತ್ತಾರೆ. ಅಧಿಕಾರಕ್ಕಾಗಿಯೇ ಬಂದಿರುವವರನ್ನು ಮುಲಾಜಿಲ್ಲದೆ ಕಿತ್ತು ಹಾಕಬೇಕು. ಇಂತಹವರಿಂದ ಸರ್ಕಾರ, ಪಕ್ಷಕ್ಕೆ ಏನೂ ಉಪಯೋಗವಿಲ್ಲ. ಕೆಲವು ಸಚಿವರ ವರ್ತನೆಯಿಂದಲೇ ಇತ್ತೀಚೆಗೆ ನಡೆದ ಉಪ ಚುನಾವಣೆ, ಮೇಲ್ಮನೆ ಚುನಾವಣೆಯಲ್ಲಿ ಹಿನ್ನಡೆಯಾಗಿದೆ ಎಂಬುದನ್ನು ಪಕ್ಷದ ಹಿರಿಯರ ಗಮನಕ್ಕೆ ತರಲು ನಿರ್ಧರಿಸಿದ್ದಾರೆ ಎಂದು ತಿಳಿಸಿವೆ.

4ನೇ | ಪುಟ ನೋಡಿ

## ಎಸ್ಸೆಸ್ಸೆಲ್ಸಿ: ಫೆ.21ರಿಂದ ಪೂರ್ವಸಿದ್ಧತಾ ಪರೀಕ್ಷೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಸ್ಸೆಸ್ಸೆಲ್ಸಿ ಪೂರ್ವ ಸಿದ್ಧತಾ ಪರೀಕ್ಷೆಗಳು ಫೆ.21ರಿಂದ 26ರವರೆಗೆ ನಡೆಯಲಿವೆ.

21ರಂದು ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ ವಿಷಯಗಳ ಪರೀಕ್ಷೆ ನಡೆಯಲಿದೆ ಎಂದು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿರ್ದೇಶಕರು ತಿಳಿಸಿದ್ದಾರೆ.

22ರಂದು ಸಮಾಜ ವಿಜ್ಞಾನ, 23ರಂದು ದ್ವಿತೀಯ ಭಾಷೆಗಳಾದ ಇಂಗ್ಲಿಷ್ ಮತ್ತು ಕನ್ನಡ, 24ರಂದು ಗಣಿತ, 25ರಂದು ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, 26ರಂದು ವಿಜ್ಞಾನ ಪರೀಕ್ಷೆಗಳು ನಡೆಯಲಿವೆ.

ಕೋವಿಡ್‌ನಿಂದಾಗಿ ಈ ವರ್ಷವೂ ಪೂರ್ಣ ಪ್ರಮಾಣದಲ್ಲಿ ತರಗತಿಗಳಿಗೆ ಖುದ್ದು ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಆದರೆ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ

**ಚಿನಕುರಳಿ**
ಪ್ರಕಾಶ್ ಶೆಟ್ಟಿ

## ಒಳ ಪುಟಗಳು

ಪ್ರಿಯಾಂಕಾ ಮೌರ್ಯ, ಮುಲಾಯಂ ಸಂಬಂಧಿ ಬಿಜೆಪಿಗೆ 5

ಇಡಬ್ಲ್ಯುಎಸ್‌ಗೆ ಮೀಸಲಾತಿ ಅನುಷ್ಠಾನಕ್ಕೆ 'ಸುಪ್ರೀಂ' ಅನುಮತಿ 3

ತೈಲ ಆಮದು: ತಗ್ಗಿದ ಒಪೆಕ್ ಪಾಲು 11

ಶುಕ್ರವಾರದ ಉಷ್ಣಾಂಶ 30° ಗರಿಷ್ಠ 15° ಕನಿಷ್ಠ

**ಹವಾಮಾನ ಮುನ್ಸೂಚನೆ** ನಗರದಲ್ಲಿ ಬೆಳಗ್ಗೆ ಮಂಜು ಕವಿದ ವಾತಾವರಣ. ಮಧ್ಯಾಹ್ನ ಶುಭ್ರ ಆಕಾಶ.

ಮುನ್ನೋಟ: ಶನಿವಾರ 29° 16° | ಭಾನುವಾರ 28° 17° | ಸೋಮವಾರ 29° 17°

ಸೂರ್ಯೋದಯ: 6:46 ಸೂರ್ಯಾಸ್ತ : 6:15 ಚಂದ್ರೋದಯ: ರಾ. 8:22 ಚಂದ್ರಾಸ್ತ: ಬೆ. 8:31 ಗುರುವಾರದ ಹವಾಮಾನ : ಗರಿಷ್ಠ 29° ಕನಿಷ್ಠ 16°

ಪ್ರಜಾವಾಣಿ

## ಗ್ರಾಮ ಲೆಕ್ಕಿಗನ ಕೆಲಸ ಕೊಡಿಸುವುದಾಗಿ ವಂಚನೆ: ವ್ಯಕ್ತಿ ಬಂಧನ

**ಬೆಂಗಳೂರು:** ಗ್ರಾಮ ಲೆಕ್ಕಿಗ ಕೆಲಸ ಕೊಡಿಸುವುದಾಗಿ ನಂಬಿಸಿ ಹಲವರನ್ನು ವಂಚಿಸಿದ್ದ ಆರೋಪಿಯನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆ ಕಂಪನಹಳ್ಳಿಯ ಈರಣ್ಣ ಬಂಧಿತ. 'ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೌಕರ' ಎಂದು ಈತ ಹೇಳಿಕೊಳ್ಳುತ್ತಿದ್ದ.

'ಆರೋಪಿಯು ಉತ್ತರ ಕರ್ನಾಟಕದ ನಿರುದ್ಯೋಗಿ ಯುವಕರನ್ನೇ ಗುರಿಯಾಗಿಸಿಕೊಂಡು ವಂಚನೆ ನಡೆಸುತ್ತಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

### ಮೆಟ್ರೊ ರೈಲು, ಬಿಎಂಟಿಸಿ ಬಸ್ ಹತ್ತಲು ರಸ್ತೆ ದಾಟುವುದು ಅನಿವಾರ್ಯ; ಪ್ರಯಾಣಿಕರ ಪರದಾಟ

# ಕೆಂಗೇರಿಯಲ್ಲಿ ರಸ್ತೆ ದಾಟುವ ಸರ್ಕಸ್

• ವಿಜಯಕುಮಾರ್ ಎಸ್.ಕೆ.

**ಬೆಂಗಳೂರು:** ಅಡ್ಡಾದಿಡ್ಡಿ ನಿಲ್ಲುವ ಬಸ್‌ಗಳು, ಕಾಣೆಯಾಗಿರುವ ಪಾದಚಾರಿ ಮಾರ್ಗ, ಜೀವ ಬಿಗಿ ಹಿಡಿದು ರಸ್ತೆ ದಾಟುವ ಪಾದಚಾರಿಗಳು...

ಇದು ಕೆಂಗೇರಿಯ ಬಿಎಂಟಿಸಿ ಮತ್ತು ಮೆಟ್ರೊ ರೈಲು ನಿಲ್ದಾಣದ ಆಸುಪಾಸಿನ ದೃಶ್ಯ. ಮೈಸೂರು ರಸ್ತೆ ಮೂಲಕ ನಗರ ಪ್ರವೇಶಿಸುವವರಿಗೆ ಕೆಂಗೇರಿ ಜಂಕ್ಷನ್ ಹೆಬ್ಬಾಗಿಲು. ವಾಹನಗಳ ದಟ್ಟಣೆ ಇಲ್ಲಿ ಸಾಮಾನ್ಯವಾದ ದೃಶ್ಯ.

ಕೆಂಗೇರಿ ತನಕ ಮೆಟ್ರೊ ರೈಲು ಸಂಚಾರ ಆರಂಭವಾಗಿದೆ. ಮೆಟ್ರೊ ರೈಲು ನಿಲ್ದಾಣದ ಪಕ್ಕದಲ್ಲೇ ಬಿಎಂಟಿಸಿ ಟರ್ಮಿನಲ್ ಕೂಡ ಇದೆ. ಈ ಟಿಟಿಎಂಸಿ ಪ್ರವೇಶಿಸಿದರೆ ವಿಶಾಲವಾದ ನಿಲ್ದಾಣ ಇದೆ. ಈ ನಿಲ್ದಾಣದ ಒಳಕ್ಕೆ ನೆಪಮಾತ್ರಕ್ಕೆ ಪ್ರವೇಶಿಸುವ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳು ಪ್ರಯಾಣಿಕರನ್ನು ಹತ್ತಿಸಿಕೊಳ್ಳುವುದು ನಿಲ್ದಾಣದ ಹೊರಗಿನ ಮೈಸೂರು ರಸ್ತೆಯಲ್ಲೇ.

ನಿಲ್ದಾಣದಿಂದ ಹೊರಗೆ ಬರುವ ಪ್ರವೇಶ ದ್ವಾರದಲ್ಲೇ ಬಸ್‌ಗಳು ಅಡ್ಡಾದಿಟ್ಟಿಯಾಗಿ ನಿಲ್ಲುತ್ತವೆ. ಪಾದಚಾರಿಗಳು ನಿಲ್ದಾಣ ಪ್ರವೇಶಿಸಲು ಈ ಬಸ್‌ಗಳ ಸಂದುಗಳಲ್ಲಿ ನುಸಳಿ ಸರ್ಕಸ್ ಮಾಡಿ ಸಾಗಬೇಕು. ಪಾದಚಾರಿ ಮಾರ್ಗ ಇದ್ದರೂ ಅದರ ಮೇಲೆ ವ್ಯಾಪಾರ ವಹಿವಾಟು ವಿಸ್ತರಿಸಿಕೊಂಡಿದೆ.

ಕೆಂಗೇರಿಯಲ್ಲಿ ಬಿಎಂಟಿಸಿ ಬಸ್ ನಿಲ್ದಾಣದ ಕಡೆಗೆ ಹೋಗಲು ರಸ್ತೆ ದಾಟುತ್ತಿರುವ ಪ್ರಯಾಣಿಕರು —ಪ್ರಜಾವಾಣಿ ಚಿತ್ರ/ರಂಜು ಪಿ.

ಮೈಸೂರು, ಮಂಡ್ಯ, ರಾಮನಗರ ಕಡೆಯಿಂದ ಬರುವ ಎಲ್ಲಾ ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳಿಗೂ ಕೆಂಗೇರಿಯಲ್ಲಿ ನಿಲುಗಡೆಗೆ ಅವಕಾಶ ಇದೆ. ಅಲ್ಲಿ ಬಸ್ ಇಳಿದು ಬಿಎಂಟಿಸಿ ಬಸ್ ಅಥವಾ ಮೆಟ್ರೊ ರೈಲು ನಿಲ್ದಾಣ ಪ್ರವೇಶಿಸಬೇಕೆಂದರೆ ರಸ್ತೆ ದಾಟಲೇಬೇಕು.

ಮಕ್ಕಳ ಜೊತೆಗೆ ಬ್ಯಾಗ್ ಹಿಡಿದು ಅಥವಾ ಚೀಲಗಳನ್ನು ಹೊತ್ತು ಬರುವ ಪ್ರಯಾಣಿಕರಂತೂ ರಸ್ತೆ ದಾಟಲು ಹರಸಾಹಸವನ್ನೇ ಮಾಡಬೇಕು. ಮೈಸೂರು ಕಡೆಯಿಂದ ಬರುವ ರೈಲುಗಳಲ್ಲಿ ಕೆಂಗೇರಿ ನಿಲ್ದಾಣದಲ್ಲೇ ಸಾಕಷ್ಟು ಪ್ರಯಾಣಿಕರು ಇಳಿದು ಬೇರೆ ಕಡೆಗೆ ಸಾಗಲು ಬಿಎಂಟಿಸಿ ಬಸ್ ಮತ್ತು ಮೆಟ್ರೊ ರೈಲು ನಿಲ್ದಾಣದತ್ತ ಹೋಗುತ್ತಾರೆ. ಈ ಎಲ್ಲ ಪ್ರಯಾಣಿಕರು ಪ್ರಯಾಸದಲ್ಲಿ ರಸ್ತೆ ದಾಟಬೇಕಾದ ಅನಿವಾರ್ಯತೆ ಇದೆ.

'ಮೈಸೂರು ಕಡೆಗೆ ಸಾಗುವ ಲಾರಿ ಮತ್ತು ಕಾರುಗಳು ವೇಗವಾಗಿ ಸಾಗುತ್ತವೆ. ಸ್ವಲ್ಪ ದೂರದಲ್ಲೇ ಸಂಚಾರ ಸಿಗ್ನಲ್ ಇದೆ. ಆ ಸಿಗ್ನಲ್‌ನಲ್ಲಿ ಹಸಿರು ದೀಪಗಳಿದ್ದರೆ ಕಾರು ಮತ್ತು ಲಾರಿ ಚಾಲಕರು ಪಾದಚಾರಿಗಳನ್ನು ಗಮನಿಸದೆ ವೇಗವಾಗಿ ಚಾಲನೆ ಮಾಡಿಕೊಂಡು ಸಾಗುತ್ತಾರೆ. ಬೆಳಿಗ್ಗೆ ಮತ್ತು ಸಂಜೆ ವೇಳೆಯಂತೂ ಪಾದಚಾರಿಗಳು ರಸ್ತೆ ದಾಟಲು ಪರಾದಾಟ ತಪ್ಪಿದಲ್ಲ' ಎಂದು ಅಳಲು ತೋಡಿಕೊಳ್ಳುತ್ತಾರೆ ಸ್ಥಳೀಯರು.

**ಹೊರ ವಲಯ ಒಳ ಬೇಗುದಿ**

### ಅರ್ಧಕ್ಕೆ ನಿಂತ ಪಾದಚಾರಿ ಮೇಲ್ಸೇತುವೆ ಕಾಮಗಾರಿ

ಪಾದಚಾರಿಗಳು ರಸ್ತೆ ದಾಟಲು ಅನುಕೂಲ ಆಗುವಂತೆ ಪಾದಚಾರಿ ಮೇಲ್ಸೇತುವೆ ನಿರ್ಮಾಣ ಕಾರ್ಯವನ್ನು ಬಿಬಿಎಂಪಿ ಆರಂಭಿಸಿ ಅರ್ಧಕ್ಕೆ ನಿಲ್ಲಿಸಿದೆ.

ರಸ್ತೆಯ ಎರಡೂ ಬದಿ ಮತ್ತು ರಸ್ತೆ ವಿಭಜಕದ ಮೇಲೆ ಕಬ್ಬಿಣದ ಕಂಬಗಳನ್ನು ನಿಲ್ಲಿಸಲಾಗಿದೆ. ಪಾದಚಾರಿ ಮಾರ್ಗ ಅಳವಡಿಕೆ ಮಾಡಲು ಸಿದ್ಧಪಡಿಸಿ ತಂದಿರುವ ಸಲಕರಣೆಗಳನ್ನು ರಸ್ತೆ ಬದಿಯಲ್ಲೇ ಬಿಸಾಡಲಾಗಿದೆ.

'ಇಡೀ ಜಂಕ್ಷನ್‌ನಲ್ಲಿ ಸದಾ ಗಿಜಿಗುಡುವ ವಾತಾವರಣ ಇರುತ್ತದೆ. ಪಾದಚಾರಿ ಮಾರ್ಗವೂ ಇಲ್ಲ, ರಸ್ತೆ ದಾಟಲು ಅನುಕೂಲವೂ ಇಲ್ಲ. ಮೈಸೂರು ಕಡೆಯಿಂದ ಬರುವ ಬಸ್ ಮತ್ತು ರೈಲು ಪ್ರಯಾಣಿಕರಿಗೆ ಇದು ಪ್ರಮುಖ ಜಂಕ್ಷನ್. ಇಲ್ಲಿನ ಎಲ್ಲ ಸಮಸ್ಯೆಗಳನ್ನು ಸಮಗ್ರವಾಗಿ ಸರಿಪಡಿಸಬೇಕು. ಪಾದಚಾರಿ ಮೇಲ್ಸೇತುವೆಯನ್ನು ತುರ್ತಾಗಿ ನಿರ್ಮಿಸಬೇಕು' ಎಂದು ರೈಲ್ವೆ ಹೋರಾಟಗಾರ ಕೃಷ್ಣ ಪ್ರಸಾದ್ ಒತ್ತಾಯಿಸಿದರು.

ಪಾದಚಾರಿ ಮಾರ್ಗದ ಕಾಮಗಾರಿ ಅರ್ಧಕ್ಕೆ ನಿಂತಿರುವ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿಬಿಎಂಪಿ ಅಧಿಕಾರಿಗಳನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಅಧಿಕಾರಿಗಳು ಸಂಪರ್ಕಕ್ಕೆ ಬರಲಿಲ್ಲ.

### ಕಸ ಸಂಸ್ಕರಣಾ ಘಟಕಗಳ ಸುತ್ತಮುತ್ತ ಮೂಲಸೌಕರ್ಯ

## 'ಗ್ರಾಮಗಳ ಅಭಿವೃದ್ಧಿಗೆ ಅನುದಾನ ಅಗತ್ಯ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಯಶವಂತಪುರ ಕ್ಷೇತ್ರದಲ್ಲಿ ಐದು ಕಸ ಸಂಸ್ಕರಣಾ ಘಟಕಗಳನ್ನು ಆರಂಭಿಸುವ ಮುನ್ನ ಸುತ್ತಮುತ್ತಲಿನ ಪ್ರದೇಶಗಳಿಗೆ ಮೂಲಸೌಕರ್ಯ ಒದಗಿಸಲಾಗುತ್ತದೆ ಎಂದು ಭರವಸೆ ನೀಡಲಾಗಿತ್ತು. ಹೀಗಾಗಿ, ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಲು ಸುತ್ತಮುತ್ತಲಿನ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದು ಬಿಬಿಎಂಪಿಯ ರಾಜರಾಜೇಶ್ವರಿನಗರ ವಲಯದ ಮುಖ್ಯ ಎಂಜಿನಿಯರ್ ಸ್ಪಷ್ಟಪಡಿಸಿದ್ದಾರೆ.

'ಪ್ರಜಾವಾಣಿ ಪತ್ರಿಕೆ'ಯಲ್ಲಿ ಜನವರಿ 18ರಂದು ಪ್ರಕಟವಾದ 'ಮೂಲಸೌಕರ್ಯಕ್ಕೆ ಮತ್ತೆ ₹50 ಕೋಟಿ ಪ್ರಸ್ತಾವ' ವರದಿಗೆ ಪ್ರತಿಕ್ರಿಯೆ ನೀಡಿರುವ ಅವರು, 'ಕ್ಷೇತ್ರದ ಐದು ಕಸ ಸಂಸ್ಕರಣಾ ಘಟಕಗಳ ಪೈಕಿ ಮೂರು ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಈ ಘಟಕಗಳಿಗೆ ಯಶವಂತಪುರ ಕ್ಷೇತ್ರ, ಬೆಂಗಳೂರು ನಗರ ಹಾಗೂ ಇತರ ವಿಧಾನಸಭಾ ಕ್ಷೇತ್ರಗಳಿಂದ ಲಾರಿಗಳ ಮೂಲಕ ನಿತ್ಯ ಕಸ ವಿಲೇವಾರಿ ಮಾಡಲಾಗುತ್ತಿದೆ. ಇದರಿಂದಾಗಿ, ಸುತ್ತಮುತ್ತಲಿನ ಜನರಿಗೆ ಕಸದ ದುರ್ವಾಸನೆ ಬರುತ್ತಿದೆ. ಜತೆಗೆ, ಲಾರಿಗಳ ಓಡಾಟದಿಂದಾಗಿ ಗ್ರಾಮಗಳ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಈ ರಸ್ತೆಗಳನ್ನು ಕಾಲಕಾಲಕ್ಕೆ ನಿರ್ವಹಣೆ ಮಾಡುವುದು ಬಿಬಿಎಂಪಿಯ ಆದ್ಯ ಕರ್ತವ್ಯವಾಗಿದೆ.

ಗ್ರಾಮಗಳ ಅಭಿವೃದ್ಧಿಗೆ ಅನುದಾನ ಬೇಕಾಗಿದೆ. ಇದನ್ನು ಅಭಿವೃದ್ಧಿಪಡಿಸಬೇಕು ಎಂದು ಗ್ರಾಮಸ್ಥರು ಕಾಲಕಾಲಕ್ಕೆ ಧರಣಿ, ಪ್ರತಿಭಟನೆ ನಡೆಸುತ್ತಿದ್ದಾರೆ. ಗ್ರಾಮಗಳಿಗೆ ಮೂಲಸೌಕರ್ಯ ಒದಗಿಸದೆ ಇದ್ದರೆ ಘಟಕಗಳ ನಿರ್ವಹಣೆಗೆ ತೊಂದರೆಯಾಗುತ್ತದೆ. ಈ ಪ್ರದೇಶಗಳ ಅಭಿವೃದ್ಧಿ ಮಾಡುವಂತೆ ಶಾಸಕರಿಗೆ ಗ್ರಾಮಸ್ಥರು ನಿತ್ಯ ಮನವಿ ಸಲ್ಲಿಸುತ್ತಿದ್ದಾರೆ. ಹಾಗಾಗಿ, ಈ ಕಾಮಗಾರಿಗಳನ್ನು ಕಾಲಕಾಲಕ್ಕೆ ನಿರ್ವಹಿಸಲು ಅನುದಾನ ಕೋರಲಾಗಿದೆ' ಎಂದು ಅವರು ತಿಳಿಸಿದ್ದಾರೆ.

## ಭೂಸ್ವಾಧೀನ ಕಾಯ್ದೆ–2013 ಬಿಡಿಎಗೆ ಅನ್ವಯಿಸದು: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

**ನವದೆಹಲಿ:** ಅಧಿಕ ಪರಿಹಾರ ನೀಡಲು ಅವಕಾಶ ನೀಡುವ ಭೂಸ್ವಾಧೀನ ಕಾಯ್ದೆ–2013, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯಡಿ (ಬಿಡಿಎ) ಮಾಡಲಾದ ಭೂ ಸ್ವಾಧೀನಕ್ಕೆ ಅನ್ವಯವಾಗುವುದಿಲ್ಲ ಎಂದು ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಹಾಗೂ ಸಂಜೀವ್ ಖನ್ನಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿ, ಈ ವಿಷಯವಾಗಿ ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪನ್ನು ವಜಾಗೊಳಿಸಿತು.

ಬೆಂಗಳೂರು ನಗರದಲ್ಲಿ 116 ಕಿ.ಮೀ. ಉದ್ದದ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಾಣಕ್ಕಾಗಿ ಬಿಡಿಎ ಭೂ ಸ್ವಾಧೀನಪಡಿಸಿಕೊಂಡಿತ್ತು. ಈ ಸ್ವಾಧೀನ ಪ್ರಕ್ರಿಯೆಗೂ ಭೂಸ್ವಾಧೀನ ಕಾಯ್ದೆ–2013 ಅನ್ವಯವಾಗುತ್ತದೆ ಎಂದು ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಬಿಡಿಎ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.



ಅರ್ಜಿಯಲ್ಲಿ ಬಿಡಿಎಯು, ಕರ್ನಾಟಕ ಹೈಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲಿ ಬಿಡಿಎ ಯೋಜನೆ ಕುರಿತ ಬಜೆಟ್ ಲೆಕ್ಕಾಚಾರವೇ ಏರುಪೇರಾಗುತ್ತಿದೆ. ಆಫ್‌ಶೋರ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಸಂಬಂಧಿಸಿದ ಪ್ರಕರಣದಲ್ಲಿ ಸಂವಿಧಾನದ ಪೀಠ ನೀಡಿದ್ದ ತೀರ್ಪನ್ನು ಹೈಕೋರ್ಟ್ ಗಮನಿಸಿಲ್ಲ ಎಂದು ಪ್ರತಿಪಾದಿಸಿತು.

ಬಿಡಿಎ ಕಾಯ್ದೆಯ ಉದ್ದೇಶ ಯೋಜಿತ ರೀತಿಯಲ್ಲಿ ಭೂಸ್ವಾಧೀನ ಮತ್ತು ಬಡಾವಣೆ ಅಭಿವೃದ್ಧಿಪಡಿಸುವುದೇ ಆಗಿದೆ. ಇದು, ಅಂತಹದೇ ಒಂದು ಯೋಜನೆಯಾಗಿದೆ ಎಂಬುದನ್ನು ಕೋರ್ಟ್ ಗಮನಿಸಿತು. ಬಿಡಿಎ ಕಾಯ್ದೆಯ ಕೆಲ ನಿರ್ದಿಷ್ಟ ಭಾಗಗಳಿಗೆ ಭೂಸ್ವಾಧೀನ ಕಾಯ್ದೆಯ ಅಂಶಗಳು ಅನ್ವಯವಾಗುವುದಿಲ್ಲ ಎಂಬುದನ್ನು ಪೀಠ ಎತ್ತಿಹಿಡಿಯಿತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅನ್ವಯಿಸಿ ಬಿಡಿಎ ಕಾಯ್ದೆ ರಚನೆಯಾಗಿದೆ. ಬೆಂಗಳೂರು ನಗರ ಮತ್ತು ಹೊರವಲಯದ ಪ್ರದೇಶಗಳ ಅಭಿವೃದ್ಧಿ ಇದರ ಉದ್ದೇಶ. ನಿರ್ದಿಷ್ಟವಾಗಿ ಬಿಡಿಎ ಕಾಯ್ದೆ ಅನ್ವಯವಾಗದ ಪ್ರಕರಣಗಳಲ್ಲಿ ಭೂ ಸ್ವಾಧೀನ ಕಾಯ್ದೆಯ ಸೆಕ್ಷನ್ 36 ಅನ್ನು ಉಲ್ಲೇಖಿಸಲಾಗಿದೆ. ಕಾಯ್ದೆಯ ಉದ್ದೇಶ ಭೂಸ್ವಾಧೀನ ಕಾಯ್ದೆಯ ಅಂಶಗಳನ್ನು ಸೀಮಿತವಾಗಿ ಬಳಸಲಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

## ಇಂದು 'ಕೈ' ಹಿಡಿಯಲಿರುವ ಬೆಮೆಲ್ ಕಾಂತರಾಜು

**ಬೆಂಗಳೂರು:** ಜೆಡಿಎಸ್ ಮುಖಂಡ, ವಿಧಾನಪರಿಷತ್ ಮಾಜಿ ಸದಸ್ಯ ಬೆಮೆಲ್ ಕಾಂತರಾಜು ಅವರು ಶುಕ್ರವಾರ ಕಾಂಗ್ರೆಸ್ ಸೇರಲಿದ್ದಾರೆ.

ಈ ಬಗ್ಗೆ ಮಾತನಾಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಲ್ಲಿ ಮಧ್ಯಾಹ್ನ 12ಕ್ಕೆ ಅವರು ಕಾಂಗ್ರೆಸ್‌ಗೆ ಸೇರುವರು. ಕೋವಿಡ್ ಕಾರಣದಿಂದ ಕಾರ್ಯಕ್ರಮಕ್ಕೆ ಕಾರ್ಯಕರ್ತರು ಯಾರೂ ಬರಬಾರದು' ಎಂದು ಮನವಿ ಮಾಡಿದ್ದಾರೆ. 'ಜನರ ಆರೋಗ್ಯದ ಹಿತದೃಷ್ಟಿಯಿಂದ ನನ್ನ ಮನವಿಗೆ ಸ್ಪಂದಿಸಬೇಕು. ಆಹ್ವಾನಿತ ಮುಖಂಡರನ್ನು ಹೊರತುಪಡಿಸಿ ಬೇರೆ ಯಾರೂ ಕಾರ್ಯಕ್ರಮಕ್ಕೆ ಬರಬಾರದು' ಎಂದಿದ್ದಾರೆ.

**ತುರುವೇಕೆರೆ ಕ್ಷೇತ್ರದಿಂದ ಕಣಕ್ಕೆ:** ಸ್ಥಳೀಯ ಸಂಸ್ಥೆ ಚುನಾಯಿತ ಪ್ರತಿನಿಧಿಗಳ ಕ್ಷೇತ್ರದಿಂದ ಜೆಡಿಎಸ್ ಪಕ್ಷದಿಂದ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಕಾಂಗ್ರೆಸ್ ಪಕ್ಷ ಸೇರಿ ತುರುವೇಕೆರೆ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ ಎಂಬ ಚರ್ಚೆ ಪಕ್ಷದ ವಲಯದಲ್ಲಿ ನಡೆದಿದೆ.

### ನಗರದಲ್ಲಿ ಇಂದು

**ರಂಗ ಪ್ರವೇಶ:** ಸುನೇತ್ರಾ ಬಲ್ಲಾಳ್, ಮುಖ್ಯ ಅತಿಥಿ: ಸತ್ಯನಾರಾಯಣ ರಾಜು, ಗೌರವ ಅತಿಥಿ: ಬೆಂಗಳೂರು ವಿ. ಪ್ರವೀಣ್, ಆಯೋಜನೆ: ನಂದಿ ಭರತನಾಟ್ಯ ನೃತ್ಯ ಶಾಲೆ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ


ಚಾಲನೆಯಲ್ಲಿರುವ ಮೂಗು ಕೆಮ್ಮು ಮತ್ತು ಶೀತದಿಂದ ಪರಿಹಾರ

ನೀವು ಉಸಿರಾಡುವ ಸಂತೋಷವನ್ನು ಅನುಭವಿಸಿ....

ಪ್ರಿನ್ಸ್ ಕೇರ್ ಪರಿಮಳ ಇನ್ಹೇಲರ್

ನಿಂಬೆ Lemon ಪುದೀನ Mint ಕಿತ್ತಳೆ Orange

PRINCE FRAGRANCE INHALER

ಎಲ್ಲಾ ಔಷಧ ಅಂಗಡಿ ಮತ್ತು ಸಾಮಾನ್ಯ ಅಂಗಡಿಯಲ್ಲಿ ಲಭ್ಯವಿದೆ

ವ್ಯಾಪಾರ ವಿಚಾರಣೆಗಾಗಿ : NIRMAL DISTRIBUTORS (South C & F)

ನಿರ್ಮಲ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು. ಮೊ: 9743001522

MaaPrinters



ಕರ್ನಾಟಕ ಸರ್ಕಾರ, ಕಾಲೇಜು ಶಿಕ್ಷಣ ಇಲಾಖೆ

**ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ–572216**

(ತುಮಕೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟಿದೆ) ಸ್ವಾಯುತ್ತ

ಸಂಖ್ಯೆ: ಸಪ್ರದಕಾಗುಬ್ಬಿ/ಸ್ವಾಯುತ್ತ/227/2021–22 ದಿನಾಂಕ: 19.01.2022

**ಟೆಂಡರ್ ಪ್ರಕಟಣೆ**

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ. ಇಲ್ಲಿಗೆ ಪ್ಲಾಸ್ಟಿಕ್ ಕುರ್ಚಿಗಳನ್ನು ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿದೆ.

| ಕ್ರ.ಸಂ. | ಸರಬರಾಜು ಮಾಡುವ ವಸ್ತುಗಳ ವಿವರ | ಅಂದಾಜು ಮೊತ್ತ | ಠೇವಣಿ ಮೊತ್ತ | ಷೆಡ್ಯೂಲ್ ದರ (ಅರ್ಜಿ ಶುಲ್ಕ) |
|---|---|---|---|---|
| 1. | ಪ್ಲಾಸ್ಟಿಕ್ ಕುರ್ಚಿಗಳು | ರೂ. 4,80,000.00 | ರೂ. 12,000 | ರೂ. 150–00 |

ಷರತ್ತುಗಳು: (1) ಟೆಂಡರ್ ಫಾರಂ ಪಡೆಯಲು ದಿನಾಂಕ: 21.01.2021ರಿಂದ 19.02.2022ರವರೆಗೆ ಸಮಯ ಅಪರಾಹ್ನ 1.00 ಗಂಟೆ. (2) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 19.02.2022, ಸಮಯ ಅಪರಾಹ್ನ 4.00 ಗಂಟೆಯವರೆಗೆ ಪಡೆಯಲಾಗುವುದು. (3) ಟೆಂಡರ್‌ಗಳನ್ನು ದಿನಾಂಕ: 22.02.2022ರಂದು ಅಪರಾಹ್ನ 3.00 ಗಂಟೆಗೆ ತೆರೆಯಲಾಗುವುದು (4) ಟೆಂಡರ್ ಷರತ್ತುಗಳನ್ನು ಕಾಲೇಜಿನ ಕಛೇರಿಯಲ್ಲಿ ವಿಚಾರಿಸಿ ಪಡೆದುಕೊಳ್ಳತಕ್ಕದ್ದು.

ಸಹಿ/– ಪ್ರಾಂಶುಪಾಲರು, ಸ.ಪ್ರ.ದ.ಕಾ., ಗುಬ್ಬಿ.



**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂ: ಬೆಂಅಪ್ರಾ/2021–22/ಇಎಲ್/ವರ್ಕ್–ಇಂಡೆಂಟ್1471 ದಿನಾಂಕ: 19.01.2022

**ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ**

ಜೆಪಿನಗರ 8 ನೇ ಹಂತ ಮತ್ತು ಜೆಪಿ ನಗರ 9 ನೇ ಹಂತದ ವಿವಿಧ ಬ್ಲಾಕ್‌ಗಳಲ್ಲಿ ಸಂಪರ್ಕ ಬಿಡಿಭಾಗಗಳೊಂದಿಗೆ ವಿವಿಧ ವ್ಯಾಟೇಜ್‌ಗಳ ಹೊಸ ಎಲ್‌ಇಡಿ ಬೀದಿ ದೀಪಗಳನ್ನು ಸರಬರಾಜು ಮಾಡುವುದು ಹಾಗೂ ಅರ್ಥಿಂಗ್, ಹಾಲಿ ಇರುವ ವಿತರಣಾ ವಿದ್ಯುತ್ ಪರಿವರ್ತಕ ಕೇಂದ್ರಗಳಿಗೆ ಎಲ್‌ಟಿ ವಿತರಣಾ ಬಾಕ್ಸ್ ಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ವೇಳಾಪಟ್ಟಿ:-

(1) ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ದಿನಾಂಕ: 24.1.2022, ಬೆಳಿಗ್ಗೆ 11.00 ಗಂಟೆಯಿಂದ. (2) ಅಗತ್ಯ ದಾಖಲೆಗಳೊಂದಿಗೆ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 07.02.2022, 17.00 ಗಂಟೆ. (3) ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 11.02.2022, 17.00 ಗಂಟೆಗೆ.

ಹೆಚ್ಚಿನ ವಿವರಗಳಿಗೆ ದಯವಿಟ್ಟು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://www.eproc.karnataka.gov.in ವೀಕ್ಷಿಸುವುದು ಅಥವಾ ಈ ಕೆಳಕಂಡ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: + 919845630164

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್), ವಿದ್ಯುತ್ ವಿಭಾಗ, ಬೆಂಅಪ್ರಾ, ಬೆಂಗಳೂರು

BDA/PRO/TN/18/2021-22



**ಕೋಲಾರ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.ಕೋಲಾರ**

ಡೇರಿ ಆವರಣ, ಪಿ.ಬಿ.ನಂ 63, ಎನ್ ಹೆಚ್ 4, ಹುತ್ತೂರು ಅಂಚೆ, ಕೋಲಾರ 563102

[Ph.No 08152-282310,7760964517, E-mail: komulpurchase@yahoo.com]

ಕ್ರ.ಸಂ: ಕೋಚಿಹಾಒ: ಖರೀದಿ: ಇ–ಟೆಂಡರ್: 10154 : 2021-22 ದಿನಾಂಕ: 20.01.2022

**ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕೋಲಾರ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಈ ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಅರ್ಹ ಬಿಡ್ಡುದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು www.eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

| ಕ್ರ.ಸಂ. | ಸಾಮಗ್ರಿ / ಸಲಕರಣೆ / ಯಂತ್ರೋಪಕರಣ ವಿವರ | ಪರಿಮಾಣ |
|---|---|---|
| 1 | ಚಿಕ್ಕಬಳ್ಳಾಪುರದ ಮೆಗಾ ಡೇರಿಯಲ್ಲಿರುವ 20,000LPH ಸಾಮರ್ಥ್ಯದ ಆರ್.ಓ ಘಟಕಕ್ಕೆ ಆರ್.ಓ ಮೆಂಬರೇನ್‌ಗಳನ್ನು ಸರಬರಾಜು ಮಾಡಿ ಅಳವಡಿಸಲು | 20 ಸಂಖ್ಯೆ |
| 2 | ಕೋಮುಲ್‌ನ ಎಂ.ಐ.ಎಸ್ ವಿಭಾಗಕ್ಕೆ Transactional SMS ಸರಬರಾಜು ಮಾಡಲು | 50 ಲಕ್ಷ ಎಸ್.ಎಂ.ಎಸ್ |
| 3 | ಕೋಲಾರ ಡೇರಿಯ ಪ್ರೀ–ಪ್ಯಾಕ್ ವಿಭಾಗದಲ್ಲಿರುವ ಜೆಟ್ ಇಂಕ್ ಕೋಡಿಂಗ್ ಯಂತ್ರಗಳಿಗೆ ಕೋಡಿಂಗ್ ಸಾಮಗ್ರಿಗಳನ್ನು ವಾರ್ಷಿಕ ಗುತ್ತಿಗೆ ದರಗಳಲ್ಲಿ ಸರಬರಾಜು ಮಾಡಲು | 01 ಲಾಟ್ |

ಟೆಂಡರ್ ಶುರುವಾಗುವ ದಿನಾಂಕ: 20.01.2022 ರಿಂದ 05.02.2022 5.30 ಗಂಟೆಯವರೆಗೆ
ಟೆಂಡರ್ ಅಪ್‌ಲೋಡ್ ಮಾಡಲು ಕಡೆಯ ದಿನಾಂಕ: 05.02.2022 ರ ಸಂಜೆ 5.30 ಗಂಟೆಯವರೆಗೆ
ಟೆಂಡರ್ ತಾಂತ್ರಿಕ ಭಾಗ–1ನ್ನು ತೆರೆಯುವ ದಿನಾಂಕ: 07.02.2022 ರಂದು ಬೆಳಗ್ಗೆ 11.00 ಗಂಟೆ ನಂತರ

ಸಹಿ/– ವ್ಯ.ನಿ.,ಕೋಮುಲ್



**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ**

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

#49, 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001.

ದೂರವಾಣಿ ಸಂಖ್ಯೆ: 080–22265383 ಇ–ಮೇಲ್: ee2elec@kiadb.in

ಸಂಖ್ಯೆ:ಕೆಐಎಡಿಬಿ/ಕೇಂ.ಕ/ಕಾ.ಅ(ವಿ)/460/2021–22 ದಿನಾಂಕ: 20–01–2022

**ಸಾರ್ವಜನಿಕರ ಎಚ್ಚರಿಕೆಗಾಗಿ**

ಈ ಮೂಲಕ ತಿಳಿಯಪಡಿಸುವುದೇನೆಂದರೆ, ವೇಮಗಲ್‌ನಿಂದ–ಕ್ಯಾಲ್‌ನೂರುಗೆ ಹಾದು ಹೋಗಿರುವ 66ಕೆ.ವಿ ಲೈನ್‌ನಿಂದ ಸುಮಾರು 1.1 ಕಿ.ಮೀ ಉದ್ದ 66ಕೆ.ವಿ ಲೈನ್‌ನ್ನು ಕೆಐಎಡಿಬಿ 66ಕೆ.ವಿ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿತವಾಗಿರುವ 66/11ಕೆ.ವಿ ವಿದ್ಯುತ್ ಉಪಕೇಂದ್ರದ ವರೆಗೂ ಕೆಐಎಡಿಬಿ ವತಿಯಿಂದ ಅಳವಡಿಸಿದ್ದು ದಿನಾಂಕ: 21.01.2022ರಂದು ಸದರಿ 66ಕೆ.ವಿ 1.1 ಕಿ.ಮೀ ಲೈನ್ ಹಾಗೂ 66/11ಕೆ.ವಿ ವೇಮಗಲ್ ಕೈಗಾರಿಕಾ ಪ್ರದೇಶದ ವಿದ್ಯುತ್ ಉಪಕೇಂದ್ರವನ್ನು ಚಾಲನೆಗೊಳಿಸಲಾಗುತ್ತದೆ.

ಆದ್ದರಿಂದ, ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ವಿದ್ಯುತ್ ಮಾರ್ಗದಿಂದ ದೂರವಿರಬೇಕು. ಸದರಿ ವಿದ್ಯುತ್ ಗೋಪರಗಳನ್ನು ಮುಟ್ಟುವುದಾಗಲಿ ಹತ್ತುವುದಾಗಲಿ ಅಥವಾ ಜಾನುವಾರುಗಳನ್ನು ಗೋಪುರಕ್ಕೆ ಕಟ್ಟುವುದು, ವಿದ್ಯುತ್ ತಂತಿಯ ಮೇಲೆ ಹಸಿ ಬಳ್ಳಿ, ಬಟ್ಟೆ ಇತ್ಯಾದಿಗಳನ್ನು ಎಸೆಯುವುದು ಮಾಡಬಾರದೆಂದು ತಿಳಿಸಲಾಗಿದೆ. ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗುವುದಿಲ್ಲ ಹಾಗೂ ಇದರಿಂದ ಆಗುವ ಕೆ.ಐ.ಎ.ಡಿ.ಬಿ ನಷ್ಟವನ್ನು ಸಂಬಂಧಪಟ್ಟವರು ಭರಿಸಬೇಕಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಕೆಐಎಡಿಬಿ, ಖನಿಜ ಭವನ, ಬೆಂಗಳೂರು.

ವಾಸಾಸಂಇ/ಬೆಂ.ನ/ಅಡ್ವರ್ಟೋರ್/2957/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**TENDER NOTICE**

**OFFICE OF THE DIGP GROUP CENTRE CRPF, YELAHANKA, BENGALURU-560064.**

No. A.11-04/2021-22 GC BLR Bldg. dated 21/01/2022

Sealed tenders for plucking of fruit from plants inside the CRPF Camp premises at Yelahanka, Bengaluru.

1. Mango - 269 Trees, 2. Jack fruit - 76 Trees,
3. Tamarind - 50 Trees, 4. Chiku - 181 Trees,
5. Jamun - 181 Trees, 6. Coconut - 53 Trees
Grand Total:- 810 Trees.

2. Sealed tender will be opened on 31/01/2022 at 1100 Hrs. Willing Firm/Contractor can participate in the tender by depositing an earnest money of Rs. 20,000/- only. After opening of the tender, the responsibility of taking care of the above trees will be of contractor/firm. The DIGP-Cum-Estate officer has reserves the right to cancel the tender without giving any reason.

3. The Tender forms, details of earnest money with terms and conditions may be obtained from Group Centre CRPF Yelahanka, Bengaluru-560064 within 07 days from the date of advertisement

Order By
DIGP, GC CRPF BENGALURU.



**ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿ.,**

ನಂ.14, ರಜತಾ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.

ದೂ. 23300497 41159606 , ಫ್ಯಾಕ್ಸ್ : 23359600 ಇ–ಮೇಲ್ : vjn@jscbl.com

**ಸ್ವಾಧೀನ ಸೂಚನೆ** ನಿಯಮ 8(1)ರಡಿಯಲ್ಲಿ (ಸ್ಥಿರಾಸ್ತಿಗಳಿಗಾಗಿ)

ಶ್ರೀ. ಎಂ ಎಲ್ ಬಿ ಗೌಡ | ಶ್ರೀ. ಅಶೋಕ. ಎಂ. ವಿ

ಕೆಳಸಹಿದಾರರು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು 1. **ದಿನಾಂಕ : 12.10.2021**ರಂದು ಇದ್ದಂತೆ **BL/476 & BL/EMI/4 ರೂ.3,72,15,395/–** (ರೂಪಾಯಿ ಮೂರು ಕೋಟಿ ಎಪ್ಪತ್ತೆರಡು ಲಕ್ಷದ ಹದಿನೈದು ಸಾವಿರದ ಮುನ್ನೂರ ತೊಂಭತ್ತೈದು ಮಾತ್ರ), 2. **ದಿನಾಂಕ : 12.10.2021**ರಂದು ಇದ್ದಂತೆ **BL/480 - ರೂ.6,49,77,261/–** (ರೂಪಾಯಿ ಆರು ಕೋಟಿ ನಲವತ್ತೊಂಭತ್ತು ಲಕ್ಷದ ಎಪ್ಪತ್ತೇಳು ಸಾವಿರದ ಇನ್ನೂರ ಅರವತ್ತೊಂದು ಮಾತ್ರ), ಪಾವತಿ ಮಾಡಲು **ಸಾಲಗಾರರಾದ : ಮೆ॥ ಎಸ್‌ಎಲ್‌ಎನ್ ಸಿಎನ್‌ಸಿ ಟೆಕ್ ಪ್ರೈ. ಲಿ.** ಕಚೇರಿ ವಿಳಾಸ : ನಂ.8, 9ನೇ ಕ್ರಾಸ್, ರಾಜಗೋಪಾಲನಗರ ಮುಖ್ಯರಸ್ತೆ, ಗಣಪತಿನಗರ, ಪೀಣ್ಯ 2ನೇ ಹಂತ, ಬೆಂಗಳೂರು–560058. **ಇದರ ಪ್ರತಿನಿಧಿಸುವ ನಿರ್ದೇಶಕರು : (1) ಶ್ರೀ. ಅಶೋಕ. ಎಂ.ವಿ.** ಬಿನ್ ಶ್ರೀ ಎಂ.ಬಿ. ವಿರೂಪಾಕ್ಷರಾಧ್ಯ, ವಾಸ ನಂ.02, 6ನೇ ಕ್ರಾಸ್, ನಾಗದೇವನಹಳ್ಳಿ, ಜ್ಞಾನಭಾರತಿ ಅಂಚೆ, ಬೆಂಗಳೂರು–560056, **(2) ಶ್ರೀ. ಎಂ ಎಲ್ ಬಿ ಗೌಡ** ಬಿನ್ ಶ್ರೀ. ತಡವಾಗಿ. ಲಿಂಗಪ್ಪ. ಎಂ, ವಾಸ ನಂ.6, ಲೇಕ್ ವ್ಯೂ ಡಿಫೆನ್ಸ್ ಕಾಲೋನಿ, ಶೆಟ್ಟಿಹಳ್ಳಿ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು –560 015.ಇವರಿಗೆ ದಿನಾಂಕ: **12.10.2021** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್ 13(8) ರೊಂದಿಗೆ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 18.01.2022** ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ನಿರ್ದಿಷ್ಟವಾಗಿ ಸಾಲಗಾರರು ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಮಹಾಲಕ್ಷ್ಮಿಪುರಂ, ಬೆಂಗಳೂರು** ಇವರಿಗೆ ಸಂದಾಯವಾಗತಕ್ಕ ಮೊಬಲಗು 1. **ಲೋನ್ ನಂ. BL/476 - ರೂ.2,69,23,784/–** (ರೂಪಾಯಿ ಎರಡು ಕೋಟಿ ಅರವತ್ತೊಂಭತ್ತು ಲಕ್ಷದ ಇಪ್ಪತ್ತ ಮೂರು ಸಾವಿರದ ಏಳು ನೂರ ಎಂಭತ್ತ ನಾಲ್ಕು ಮಾತ್ರ), 2. **ಲೋನ್ ನಂ. BL/EMI/4 - ರೂ.65,70,089/–** (ರೂಪಾಯಿ ಅರವತ್ತೈದು ಲಕ್ಷದ ಎಪ್ಪತ್ತು ಸಾವಿರದ ಎಂಭತ್ತೊಂಭತ್ತು ಮಾತ್ರ), 3. **ಲೋನ್ ನಂ. BL/480 - ರೂ.6,73,28,891/–** (ರೂಪಾಯಿ ಆರು ಕೋಟಿ ಎಪ್ಪತ್ತ ಮೂರು ಲಕ್ಷದ ಇಪ್ಪತ್ತೆಂಟು ಸಾವಿರದ ಎಂಟು ನೂರ ತೊಂಭತ್ತೊಂದು ಮಾತ್ರ) ದಿನಾಂಕ : **18.01.2022** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಒಟ್ಟು ಬರಬೇಕಾದ ಬಾಕಿ ಮೊತ್ತ **ರೂ.10,08,22,764/– (ರೂಪಾಯಿ ಹತ್ತು ಕೋಟಿ ಎಂಟು ಲಕ್ಷದ ಇಪ್ಪತ್ತೆರಡು ಸಾವಿರದ ಏಳು ನೂರ ಅರವತ್ತ ನಾಲ್ಕು ಮಾತ್ರ) ದಿನಾಂಕ : 18.01.2022** ರಂದು ಇದ್ದಂತೆ ಮತ್ತು ಖರ್ಚು ವೆಚ್ಚಗಳು.

ಸಾಲಗಾರರ / ಜಾಮೀನುದಾರರಾದ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಉಪ ಕಾಯಿದೆ 8 ಮತ್ತು ಕಾಯಿದೆಯ ಸೆಕ್ಷನ್ 13ರ ಅನ್ವಯ ಇರುತ್ತದೆ.

**ಸಾಲಕ್ಕೆ ಅಡಮಾನ ಮಾಡಿರುವ ಆಸ್ತಿಗಳ ವಿವರ**

**ಸ್ಥಿರಾಸ್ತಿ ಷೆಡ್ಯೂಲ್–I :** ಆಸ್ತಿಯ ಪ್ಲಾಟ್ ನಂ. 07, (ಹಳೆ ನಿವೇಶನ ನಂ.ಗಳು. 7 & 8), ಮುನಿಸಪಲ್ ನಂ. 98, (ಹಿಂದಿನ ಸಿಎಂಸಿ ಖಾತಾ ನಂ.98), ಬಿಬಿಎಂಪಿ ವಾರ್ಡ್ ನಂ. 41 (ಪೀಣ್ಯ ಕೈಗಾರಿಕಾ ಪ್ರದೇಶ), 9ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಗಣಪತಿನಗರ, ಲಗ್ಗೆರೆ, ಬೆಂಗಳೂರು ಮತ್ತು ಪೂರ್ವದಿಂದ ಪಶ್ಚಿಮಕ್ಕೆ : 101–0 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 60–0 ಅಡಿ, ಒಟ್ಟು ವಿಸ್ತೀರ್ಣ 6060 ಚದರ ಅಡಿ., ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ಆಸ್ತಿ ನಂ. 34 & 35, ಪಶ್ಚಿಮಕ್ಕೆ : ಶ್ರೀಮತಿ ರೂಪ ಕೃಷ್ಣರವರಿಗೆ ಸೇರಿದ ಆಸ್ತಿ, ಉತ್ತರಕ್ಕೆ : ಖಾಸಗಿ ಆಸ್ತಿ, ದಕ್ಷಿಣಕ್ಕೆ : ರಸ್ತೆ ಮತ್ತು ಆಸ್ತಿ ನಂ. 6 & 9.

**ಸ್ಥಿರಾಸ್ತಿ ಷೆಡ್ಯೂಲ್–II :** ಇಂಡಸ್ಟ್ರೀಯಲ್ ಪ್ಲಾಟ್ ನಂ. 11, ವಿಸ್ತೀರ್ಣ 4000 ಚದರ ಮೀಟರ್ಸ್, ಸರ್ವೆ ನಂ. 109ರ ಭಾಗ, ದಾಬಸ್‌ಪೇಟೆ ಕೈಗಾರಿಕಾ ಪ್ರದೇಶ, ಯಡೇಹಳ್ಳಿ ಗ್ರಾಮ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು. ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ಪ್ಲಾಟ್ ನಂ.10, ಪಶ್ಚಿಮಕ್ಕೆ : KIADB 40 ಅಡಿ ರಸ್ತೆ, ಉತ್ತರಕ್ಕೆ : KIADB 60 ಅಡಿ ರಸ್ತೆ, ದಕ್ಷಿಣಕ್ಕೆ : ಪ್ಲಾಟ್ ನಂ.4-L.

ದಿನಾಂಕ : 18.01.2022
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,



**ಆರ್‍ಯೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ರಿ)**

**ಸಾರ್ವಜನಿಕ ಪ್ರಕಟಣೆ**

ದಿನಾಂಕ : 09.01.2022 ರಂದು ವಿಜಯವಾಣಿ, ಬೆಂಗಳೂರು ವ್ಯಾಪ್ತಿಗೆ ಬರುವ ಪತ್ರಿಕೆಯಲ್ಲಿ ನಮ್ಮ ಸಂಘದ ವಿರುದ್ಧ ಬಂದಿರವ ಪತ್ರಿಕಾ ಹೇಳಿಕೆಯ ವಿರುದ್ಧ ನಮ್ಮ ಸಂಘದ ಪರವಾಗಿ ನೀಡುತ್ತಿರುವ ಸ್ಪಷ್ಟೀಕರಣ ಏನೆಂದರೆ:

ದಿನಾಂಕ : 09.01.2022 ರಂದು ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಚಾರಗಳು ಸತ್ಯಕ್ಕೆ ದೂರವಾದ ಸಂಗತಿಗಳಾಗಿರುತ್ತದೆ. ನಮ್ಮ ಸಹಕಾರ ಸಂಘವು ಕಾನೂನಿನ ಪ್ರಕಾರವಾಗಿ, ನಮ್ಮ ಸದಸ್ಯರಿಗೆ ಅನುಕೂಲವಾಗುವ ರೀತಿಯೇ ಕಾರ್ಯನಿರ್ವಹಿಸುತ್ತಿದ್ದೇವೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನೌಕರರ ಗೃಹ ಸಹಕಾರ ಸಂಘವು 1987ರಲ್ಲಿ ಮೈಸೂರಿನಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಅಡಿಯಲ್ಲಿ ನೊಂದಾಯಿಸಲ್ಪಟ್ಟಿದೆ.

ನಮ್ಮ ಸಂಘದ ಕುರಿತು ಮಾಧ್ಯಮಗಳಲ್ಲಿ ವದಂತಿಗಳನ್ನು ಹರಡುತ್ತಿದ್ದು ಅವುಗಳು ಸತ್ಯಕ್ಕೆ ದೂರವಾಗಿದ್ದು ಅವುಗಳ ಕುರಿತು ಈ ಕೆಳಗಿನಂತೆ ಸ್ಪಷ್ಟೀಕರಣವನ್ನು ನೀಡುತ್ತಿದ್ದೇನೆ.

1. ನಮ್ಮ ಸಂಘವು ಮೈಸೂರಿನ ದೇವನೂರಿನಲ್ಲಿ ಹಲವು ವರ್ಷಗಳ ಹಿಂದೆ ಆರೋಗ್ಯಧಾಮ ಬಡಾವಣೆಯನ್ನು ನಿರ್ಮಿಸಿದ್ದು ನಿವೇಶನಗಳನ್ನು ಹಂಚಿಕೆ ಮಾಡಿ ಸದಸ್ಯರ ಹೆಸರಿಗೆ ನೊಂದಾಯಿಸಲಾಗಿದೆ.
2. ಆರೋಗ್ಯಧಾಮ ಎರಡನೆಯ ಹಂತದ ಯೋಜನೆಯನ್ನು ಇಲವಾಲ ಹೋಬಳಿ ನಾಗವಾಲ ಗ್ರಾಮದಲ್ಲಿ ಕೈಗೊಳ್ಳಲಾಗಿದ್ದು ವಸತಿ ಬಡಾವಣೆಯ ನಕ್ಷೆ ಮಂಜೂರಾತಿಯನ್ನು ಈಗಾಗಲೇ ಪಡೆಯಲಾಗಿದೆ. ಯೋಜನೆಯ ಒಟ್ಟು ಮೊತ್ತ ರೂ.41,40,00,000/ಗಳಾಗಿದ್ದು ಸದಸ್ಯರು ಇದುವರವಿಗೆ ರೂ. 2,50,00,000/ ಗಳನನ್ನು ಮಾತ್ರ ಪಾವತಿಸಿದ್ದು. ಹಲವಾರು ಭಾರಿ ನೋಟಿಸನ್ನು ನೀಡಿದ್ದರೂ ಸದಸ್ಯರು ಭಾಕಿ ಹಣವನ್ನು ಪಾವತಿಸದಿರುವುದರಿಂದ ನಿವೇಶನ ಹಂಚಿಕೆ ಸಾಧ್ಯವಾಗುತ್ತಿಲ್ಲ.
3. ಬೆಂಗಳೂರು ನಗರದ ಹೊರವಲಯದ ದೊಡ್ಡಬಳ್ಳಾಪುರ ರಸ್ತೆ ದೊಡ್ಡತುಮಕೂರು ಗ್ರಾಮದಲ್ಲಿ ನಿವೇಶವನ್ನು ಅಭಿವೃದ್ಧಿ ಪಡಿಸುತ್ತಿದ್ದು ಒಂದು ಹಂತದ ಬಡಾವಣೆಯ ನಕ್ಷೆಯ ಅನುಮೋದನೆ ಪಡೆಯಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. ಸರ್ಕಾರವು ಜೇಷ್ಠತಾ ಪಟ್ಟಿಗೆ ಅನುಮೋದನೆ ನೀಡಿದ ತಕ್ಷಣ ನಿವೇಶನಗಳ ನೊಂದಾವಣೆ ಪ್ರಾರಂಭಿಸಲಾಗುವುದು.
4. ದೇವನಹಳ್ಳಿ ತಾಲ್ಲೂಕು ಕುಂದಾಣ ಹೋಬಳಿ ಐವಿಸಿ ರಸ್ತೆಯ ತಿಂಡ್ಲು, ಗ್ರಾಮದಲ್ಲಿ ಬಡಾವಣೆ ನಿರ್ಮಿಸಲು ಒಪ್ಪಂದ ಮಾಡಿಕೊಂಡಿದ್ದು ಆದರಂತೆ ನಿವೇಶನಕ್ಕಾಗಿ ಅಗತ್ಯವಿರುವ ಜಮೀನನ್ನು ಖರೀದಿಸಲಾಗಿದೆ. ಈ ಎಲ್ಲಾ ಬಡಾವಣೆಗಳಲ್ಲಿಯೂ ಸದಸ್ಯರು ನಿವೇಶನಕ್ಕಾಗಿ ಬುಕಿಂಗ್ ಮಾಡಿದ ನಂತರ ಮೂರು ವರ್ಷಗಳ ಒಳಗಾಗಿ ತಮ್ಮ ಕಂತುಗಳನ್ನು ಪಾವತಿಸಬೇಕಾಗಿದ್ದು ಐವಿಸಿ ರಸ್ತೆಯ 1516 ಜನರ ಪೈಕಿ ಕೇವಲ 200 ಜನರಷ್ಟೆ ಎಲ್ಲಾ ಕಂತುಗಳನ್ನು ಪಾವತಿಸಿದ್ದಾರೆ. ಕಂತುಗಳನ್ನು ಪಾವತಿಸುವಂತೆ ಸಂಘವು ಅನೇಕ ಭಾರಿ ನೋಟೀಸನ್ನು ನೀಡಿದ್ದರೂ ಸಹ ಹಣ ಪಾವತಿಸಿರುವುದಿಲ್ಲ.
5. ಸಂಘವು ಬಡಾವಣೆಗಳ ನಿರ್ಮಾಣಕ್ಕಾಗಿ ಸದಸ್ಯರು ಕಂತಿನ ಹಣವನ್ನು ಅವಲಂಭಿಸಿದ್ದು., ಇಲ್ಲಿಯವರೆಗೆ ಒಟ್ಟಾರೆ ಹಣ (254ಕೋಟಿ)ದ ಶೇ37.5% ರಷ್ಟು ಹಣವನ್ನು ಮಾತ್ರ ಅಂದರೆ 96ಕೋಟಿ ಮಾತ್ರ ಪಾವತಿಸಿದ್ದು ಉಳಿಕೆ ಮೊತ್ತ 158 ಕೋಟಿ ಹಣವನ್ನು ನೀವೇಶನದಾರರು ಪಾವತಿಸಬೇಕಾಗಿದೆ. ಸದಸ್ಯರು ಹಣ ಪಾವತಿಯನ್ನು ಬಾಕಿ ಉಳಿಸಿಕೊಂಡು ಸಂಘವನ್ನು ದೂರುವುದರಲ್ಲಿ ಅರ್ಥವಿಲ್ಲ.
6. ಎಲ್ಲಾ ಯೋಜನೆಗಳಲ್ಲೂ ಜಮೀನುಗಳನ್ನು ಖರೀದಿಸಿದ್ದು ಒಡಾವಣೆ ನಿರ್ಮಾಣ ಕಾರ್ಯ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ ನಿವೇಶನ ಹಂಚಿಕೆಗೆ ಸದಸ್ಯರ ಸಹಕಾರವು ಅಗತ್ಯವಾಗಿದ್ದು, ಸದಸ್ಯರು ತಮ್ಮ ಪಾಲಿನ ಕಂತುಗಳನ್ನು ತಕ್ಷಣ ತುಂಬಬೇಕಾಗಿದೆ.
7. ಸಹಕಾರ ಸಂಘವು ಪರಸ್ಪರ ಸಹಕಾರ ತತ್ವಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಸದಸ್ಯರ ಸಹಕಾರವೇ ಸಂಘದ ಅಡಿಪಾಯ ಸದಸ್ಯರು ಸಮಯಕ್ಕೆ ಸರಿಯಾಗಿ ಕಂತುಗಳನ್ನು ಪಾವತಿಸದಿದ್ದಲ್ಲಿ ಯಾವುದೇ ಯೋಜನೆಯ ಅನುಷ್ಠಾನ ಅಸಾಧ್ಯ ಸದಸ್ಯರು ತಮ್ಮ ಕಂತನ್ನು ಪಾವತಿಸುವ ಮುಖಾಂತರ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಯೋಜನೆ ಪೂರ್ಣಗೊಳಿಸಲು ಸಹಕರಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.
8. ನಮ್ಮ ಸಹಕಾರ ಸಂಘವು ನಮ್ಮ ಸಂಘದ ಸದಸ್ಯರಿಗೆ ಅನುಕೂಲವಾಗುವಂತಹ ಕೆಲಸ ಕಾರ್ಯಗಳನ್ನು ಮಾಡಲು ಸದಾ ಸಿದ್ದರಿರುತ್ತೇವೆ.

ಶಂಕರ್ ನಾಯಕ್
(ಅಧ್ಯಕ್ಷರು)

# ತುಮಕೂರು ರಸ್ತೆ ಮೇಲ್ಸೇತುವೆ ಐಐಎಸ್ಸಿ ತಂಡ ಪರಿಶೀಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅತ್ಯಂತ ವಾಹನ ದಟ್ಟಣೆ ಇರುವ ತುಮಕೂರು ರಸ್ತೆಯ ಎಲಿವೇಟೆಡ್ ಕಾರಿಡಾರ್ ಅನ್ನು (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ತಜ್ಞರ ತಂಡ ಪರಿಶೀಲಿಸಿದೆ.

ಈ ಮೇಲ್ಸೇತುವೆಯ ಎರಡು ಪಿಲ್ಲರ್‌ಗಳನ್ನು ಸಂಪರ್ಕಿಸುವ ಕೇಬಲ್‌ನಲ್ಲಿ ದೋಷ ಕಂಡು ಬಂದಿದ್ದರಿಂದ ಡಿಸೆಂಬರ್ 25ರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ವಾಹನ ಸಂಚಾರ ನಿರ್ಬಂಧಿಸಿ ದುರಸ್ತಿ ಕಾಮಗಾರಿ ಕೈಗೊಂಡಿತ್ತು.

ಕಾಮಗಾರಿ ನಡೆಯುತ್ತಿರುವ ಎಂಜಿನಿಯರ್ ತಂಡದೊಂದಿಗೆ ಐಐಎಸ್ಸಿ ತಜ್ಞರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಶೀಘ್ರವೇ ವರದಿ ನೀಡುವ ಸಾಧ್ಯತೆ ಇದೆ.

ದುರಸ್ತಿ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ತಜ್ಞರು ನೀಡುವ ಅಭಿಪ್ರಾಯದ ಅನ್ವಯ ರಸ್ತೆಯನ್ನು ಸಾರ್ವಜನಿಕರ ವಾಹನ ಸಂಚಾರಕ್ಕೆ ಮುಕ್ತಗೊಳಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು. ಬಹುತೇಕ ಒಂದು ವಾರದ ಒಳಗೆ ಈ ಬಗ್ಗೆ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಮೇಲ್ಸೇತುವೆಯ ಎರಡು ಪಥಗಳಲ್ಲಿ ಪ್ರತಿ ದಿನ 50 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತಿದ್ದವು. ಸಂಚಾರಕ್ಕೆ ನಿರ್ಬಂಧ ವಿಧಿಸಿದ ಬಳಿಕ ಸರ್ವಿಸ್ ರಸ್ತೆಯಲ್ಲಿ ಪ್ರತಿ ನಿತ್ಯ ದಟ್ಟಣೆಯಾಗಿ ವಾಹನ ಚಾಲಕರು ಪರದಾಡುವಂತಾಗಿದೆ.

# ಇಡಬ್ಲ್ಯುಎಸ್‌ಗೆ ಮೀಸಲಾತಿ: 'ಸುಪ್ರೀಂ' ಅನುಮತಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** 2021-22ನೇ ಶೈಕ್ಷಣಿಕ ವರ್ಷದ ನೀಟ್ (ಪದವಿ ಮತ್ತು ಪಿಜಿ) ಪ್ರವೇಶಕ್ಕೆ ಸಂಬಂಧಿಸಿ ಅಖಿಲ ಭಾರತ ಕೋಟಾದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದ (ಇಡಬ್ಲ್ಯುಎಸ್) ಅಭ್ಯರ್ಥಿಗಳಿಗೆ ಶೇ 10ರಷ್ಟು ಮೀಸಲಾತಿಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಗುರುವಾರ ಅನುಮತಿ ನೀಡಿತು.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎ.ಎಸ್. ಬೋಪಣ್ಣ ಅವರಿದ್ದ ನ್ಯಾಯಪೀಠ ಈ ಕುರಿತ ಅರ್ಜಿಯ ವಿಚಾರಣೆ ನಡೆಸಿತು.

ಇಡಬ್ಲ್ಯುಎಸ್ ಅಭ್ಯರ್ಥಿಗಳಿಗೆ ಮೀಸಲಾತಿ ನೀಡಲು ನಿಗದಿಪಡಿಸಿರುವ ವಾರ್ಷಿಕ ₹ 8 ಲಕ್ಷ ಆದಾಯ ಮಿತಿ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ಅಂತಿಮ ವಿಚಾರಣೆಯನ್ನು ಮಾರ್ಚ್ ಮೂರನೇ ವಾರ ನಿಗದಿಪಡಿಸುವುದಾಗಿಯೂ ನ್ಯಾಯಪೀಠ ಹೇಳಿತು.

'ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಿಗದಿ ಮಾಡಿರುವ ಅರ್ಹತೆಯಲ್ಲಿ ಮಾಡುವ ಯಾವುದೇ ಬದಲಾವಣೆ ಗೊಂದಲ ಸೃಷ್ಟಿಸುತ್ತದೆ. ಅಲ್ಲದೇ, ಕೋವಿಡ್-19 ಪಿಡುಗಿನ ಈ ಸಂದರ್ಭದಲ್ಲಿ ಪ್ರವೇಶ ಪ್ರಕ್ರಿಯೆ ಮತ್ತಷ್ಟೂ ವಿಳಂಬವಾಗುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಈ ವರ್ಗದ ಅಭ್ಯರ್ಥಿಗಳ ಪ್ರವೇಶಕ್ಕೆ ಮಾನದಂಡ ನಿಗದಿ ಮಾಡುವಾಗ ಸರಿಯಾದ ಕ್ರಮಗಳನ್ನು ಅನುಸರಿಸಿಲ್ಲ ಎಂಬ ಆರೋಪಗಳಿವೆ. ಹೀಗಾಗಿ, ಸಂಬಂಧಪಟ್ಟ ಎಲ್ಲ ಕಕ್ಷಿದಾರರ ವಾದಗಳನ್ನು ಆಲಿಸದೇ ಈ ಆರೋಪಗಳ ಕುರಿತು ಮೇಲ್ನೋಟಕ್ಕೆ ಅಭಿಪ್ರಾಯ ತಳೆಯಲಾಗದು' ಎಂದೂ ನ್ಯಾಯಪೀಠ ಹೇಳಿತು.

# ಗಣರಾಜ್ಯೋತ್ಸವ ಕಾರ್ಯಕ್ರಮ ರದ್ದು: ಆಕ್ಷೇಪ

**ಬೆಂಗಳೂರು:** ಗಣರಾಜ್ಯೋತ್ಸವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸರ್ಕಾರ ರದ್ದುಪಡಿಸಿರುವುದಕ್ಕೆ ಕರ್ನಾಟಕ ರಾಜ್ಯ ಸಾಹಿತಿ, ಕಲಾವಿದರ, ಸಾಂಸ್ಕೃತಿಕ ಚಿಂತಕರ ಸಂಘ ಸಂಸ್ಥೆಗಳ ಒಕ್ಕೂಟ ಆಕ್ಷೇಪ ವ್ಯಕ್ತಪಡಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಲಾವಿದ ಜೋಗಿಲ ಸಿದ್ದರಾಜು, 'ಕೋವಿಡ್‌ನಿಂದಾಗಿ ಎರಡು ವರ್ಷಗಳು ಸಾಂಸ್ಕೃತಿಕ ಚಟುವಟಿಕೆಗಳು ನಡೆದಿಲ್ಲ. ಇದರಿಂದ ಕಲಾವಿದರ ಕುಟುಂಬ ಸಂಕಷ್ಟಕ್ಕೆ ಸಿಲುಕಿದೆ. ಸರ್ಕಾರವು ಕೋವಿಡ್ ಕಾರಣ ನೀಡಿ ಈ ಬಾರಿಯ ಗಣರಾಜ್ಯೋತ್ಸವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರದ್ದುಮಾಡಿದೆ. ಇದರಿಂದ 1,500 ಕಲಾವಿದರು ಅವಕಾಶ ವಂಚಿತರಾಗಲಿದ್ದಾರೆ. ಹೀಗಾಗಿ, ಶೇ 50 ರಷ್ಟು ಆಸನಗಳ ಭರ್ತಿಗೆ ಅವಕಾಶ ನೀಡಿ, ಕಾರ್ಯಕ್ರಮಗಳಿಗೆ ಅನುವು ಮಾಡಿಕೊಡಬೇಕು' ಎಂದು ಆಗ್ರಹಿಸಿದರು.

ಭಾರತ್ ಎಲೆಕ್ಟ್ರಾನಿಕ್ಸ್ BHARAT ELECTRONICS
QUALITY, TECHNOLOGY, INNOVATION

**ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್**
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಗೆ ಬೆಂಗಳೂರು ಸಂಕೀರ್ಣದ ವಿವಿಧ ಕಾರ್ಯನೀತಿ ವ್ಯವಹಾರ ಘಟಕಗಳಿಗೆ ಯೋಜನಾ ಇಂಜಿನಿಯರ್-1, ಶಿಕ್ಷಣಾರ್ಥಿ ಇಂಜಿನಿಯರ್-1 ಮತ್ತು ಶಿಕ್ಷಣಾರ್ಥಿ ಅಧಿಕಾರಿ (ಹಣಕಾಸು)-1ರ ಹುದ್ದೆಗೆ ಈ ಕೆಳಕಂಡ ಆವಶ್ಯಕತೆಗಳೊಂದಿಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ.

| ಹುದ್ದೆ | ವಿಷಯ / ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ಅನುಭವ |
|---|---|---|---|
| ಯೋಜನಾ ಇಂಜಿನಿಯರ್ -1 | ಎಲೆಕ್ಟ್ರಾನಿಕ್ಸ್-40, ಮೆಕ್ಯಾನಿಕಲ್-14, ಕಂಪ್ಯೂಟರ್, ಸೈನ್ಸ್-09, ಎಲೆಕ್ಟ್ರಿಕಲ್-02, ಸಿವಿಲ್-02 | ಮಾನ್ಯತೆ ಪಡೆದ ವಿಶ್ವವಿದ್ಯಾಲಯ / ಸಂಸ್ಥೆ / ಕಾಲೇಜಿನಿಂದ ಸಾಮಾನ್ಯ / ಇ.ಡಬ್ಲ್ಯೂ ಎಸ್ / ಇ.ಹಿ.ವ ದವರಿಗೆ 55% ಮತ್ತು ಅಧಿಕ ಹಾಗೂ ಪ.ಜಾ / ಪ.ಪಂ./ ಪಿ.ಡಬ್ಲ್ಯೂ.ಬಿ.ಡಿ. ಅಭ್ಯರ್ಥಿಗಳಿಗೆ ಉತ್ತೀರ್ಣ ಶ್ರೇಣಿ ಯೊಂದಿಗೆ ಸಂಗತ ವಿಷಯದಲ್ಲಿ ಬಿ.ಇ. / ಬಿ.ಟೆಕ್ / ಬಿ.ಎಸ್.ಸಿ ಇಂಜಿನಿಯರಿಂಗ್ ಪದವಿ | 02 ವರ್ಷಗಳ ಸಂಗತ ಔದ್ಯೋಗಿಕ ಅರ್ಹತೋತ್ತರ ಅನುಭವ |
| ಶಿಕ್ಷಣಾರ್ಥಿ ಇಂಜಿನಿಯರ್ -1 | ಎಲೆಕ್ಟ್ರಾನಿಕ್ಸ್-103, ಮೆಕ್ಯಾನಿಕಲ್-50, ಕಂಪ್ಯೂಟರ್, ಸೈನ್ಸ್-08, ಎಲೆಕ್ಟ್ರಿಕಲ್-07, ವಾಸ್ತುಶಾಸ್ತ್ರ-01 | ಮಾನ್ಯತೆ ಪಡೆದ ವಿಶ್ವವಿದ್ಯಾಲಯ / ಸಂಸ್ಥೆ /ಕಾಲೇಜಿನಿಂದ ಸಾಮಾನ್ಯ / ಇ.ಡಬ್ಲ್ಯೂ.ಎಸ್ / ಇ.ಹಿ.ವ ದವರಿಗೆ 55% ಮತ್ತು ಅಧಿಕ ಹಾಗೂ ಪ.ಜಾ/ ಪ.ಪಂ./ಪಿ.ಡಬ್ಲ್ಯೂ.ಬಿ.ಡಿ. ಅಭ್ಯರ್ಥಿಗಳಿಗೆ ಉತ್ತೀರ್ಣ ಶ್ರೇಣಿಯೊಂದಿಗೆ ಸಂಗತ ವಿಷಯದಲ್ಲಿ ಬಿ.ಇ./ಬಿ.ಟೆಕ್/ ಬಿ.ಎಸ್.ಸಿ / ಬಿ.ಆರ್ಕ್ ಇಂಜಿನಿಯರಿಂಗ್ ಪದವಿ | 06 ತಿಂಗಳ ಸಂಗತ ಔದ್ಯೋಗಿಕ ಅರ್ಹತೋತ್ತರ ಅನುಭವ |
| ಶಿಕ್ಷಣಾರ್ಥಿ ಅಧಿಕಾರಿ (ಹಣಕಾಸು) -01 | ಹಣಕಾಸು-11 | ಮಾನ್ಯತೆ ಪಡೆದ ವಿಶ್ವವಿದ್ಯಾಲಯ / ಸಂಸ್ಥೆ ಕಾಲೇಜಿನಿಂದ ಸಾಮಾನ್ಯ / ಇ.ಡಬ್ಲ್ಯೂ.ಎಸ್ / ಇ.ಹಿ.ವ ದವರಿಗೆ 55% ಮತ್ತು ಅಧಿಕ ಹಾಗೂ ಪ.ಜಾ/ಪ.ಪಂ./ಪಿ.ಡಬ್ಲ್ಯೂ.ಬಿ.ಡಿ. ಅಭ್ಯರ್ಥಿಗಳಿಗೆ ಉತ್ತೀರ್ಣ ಶ್ರೇಣಿಯೊಂದಿಗೆ ಹಣಕಾಸಿನಲ್ಲಿ ಎರಡು ವರ್ಷಗಳ ಎಂ.ಬಿ.ಎ. | 06 ತಿಂಗಳ ಸಂಗತ ಅರ್ಹತೋತ್ತರ ಅನುಭವ |

ಸಂಗತ ಅರ್ಹತೋತ್ತರ ಅನುಭವ ಹೊಂದಿದ ಅಭ್ಯರ್ಥಿಗಳು ಹುದ್ದೆಗೆ ಅರ್ಜಿ ಸಲ್ಲಿಸಬಹುದಾಗಿದೆ. ವಿವರಣಾತ್ಮಕ ಜಾಹೀರಾತಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್ **www.bel-india.in** ಅನ್ನು ವೀಕ್ಷಿಸಿ.

'ಹರ್ ಎಕ್ ಕಾಮ್ ದೇಶ್ ಕೆ ನಾಮ್'

ನಮಗೆ ಒಂದು ಮಿಸ್ಡ್ ಕಾಲ್ ನೀಡಿ 09289 120 120

ನಿರಾಕರಣೆ : *# ಎಲ್ಲ ಸಾಲಗಳು ಕೇವಲ ಎಚ್‌ಡಿಎಫ್‌ಸಿ ಲಿಮಿಟೆಡ್‌ನ ವಿವೇಚನೆಗೆ ಒಳಪಟ್ಟಿವೆ. ಷರತ್ತು ಮತು ನಿಬಂಧನೆಗಳ ವಿವರಗಳಿಗಾಗಿ ಭೇಟಿ ನೀಡಿ : www.hdfc.com
CIN: L70100MH1977PLC019916.
NETWORK HDFC3593-21 Kan



**ಸಿಟಿ ಮ್ಯಾನೇಜರ್ಸ್ ಅಸೋಸಿಯೇಷನ್ ಕರ್ನಾಟಕ (ಸಿಮ್ಯಾಕ್)**
(ಪೌರಾಡಳಿತ ನಿರ್ದೇಶನಾಲಯದ ಸಂಯೋಜಿತ ಸಂಸ್ಥೆ)
ನಂ. 42, "ಸಂಜೀವಿನಿ", 1ನೇ ಮಹಡಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003
ದೂರವಾಣಿ: 080–23464332 / 35 URL: https://www.cmak.municipaladmn.gov.in

ಸಂ. ಸಿಮ್ಯಾಕ್/ನೇಮಕಾತಿ/2021–22 **ಪ್ರಕಟಣೆ** ದಿನಾಂಕ : 21–01–2022

ಪ್ರಧಾನ ಕಾರ್ಯದರ್ಶಿ (ಜನರಲ್ ಸೆಕ್ರೆಟರಿ), ಸಿಮ್ಯಾಕ್, ಬೆಂಗಳೂರು ಸಂಸ್ಥೆಯಿಂದ ಕೆಳಕಂಡ ಹುದ್ದೆಗಾಗಿ ಆಸಕ್ತ ಅರ್ಹ ಅಭ್ಯರ್ಥಿಗಳಿಂದ ವಾರ್ಷಿಕ ನವೀಕರಿಸಬಹುದಾದ ಗುತ್ತಿಗೆ ಆಧಾರದ ಮೇಲೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಹುದ್ದೆಯ ಹೆಸರು | ಹುದ್ದೆ ಸಂಖ್ಯೆ | ವಿದ್ಯಾರ್ಹತೆ | ವಯೋಮಿತಿ (ಡಿಸೆಂಬರ್ 2021ಕ್ಕೆ ಮೀರದಂತೆ) | ಮಾಹೆಯಾನ |
|---|---|---|---|---|
| ಸಮನ್ವಯಾಧಿಕಾರಿ | 1 | 8 ರಿಂದ 10 ವರ್ಷಗಳ ಅನುಭವದೊಂದಿಗೆ ಸ್ನಾತಕೋತ್ತರ ಪದವಿ/ ಪರಿಸರ ವಿಜ್ಞಾನದಲ್ಲಿ ಎಂ.ಎಸ್.ಸಿ/ಎಂಫಿಲ್/ಪಿಹೆಚ್‌ಡಿ/ ಅಥವಾ ನಗರಯೋಜನೆಯಲ್ಲಿ ಸ್ನಾತಕೋತ್ತರ ಪದವಿ ಸುಸ್ಥಿರ ಅಭಿವೃದ್ಧಿ, ಪರಿಸರ, ನೀರು ಮತ್ತು ನೈರ್ಮಲ್ಯ ಹಾಗೂ ನಗರಾಭಿವೃದ್ಧಿ ಸಂಬಂಧಿತ ಕ್ಷೇತ್ರಗಳಲ್ಲಿ ಅನುಭವವಿರಬೇಕು. | 50 ವರ್ಷಗಳು | ರೂ. 60,000/– ವೇತನ ಪ್ರತಿ ತಿಂಗಳು |
| ಸಂಶೋಧನಾ ಸಹಾಯಕರು (ಎನರ್ಜಿ) | 1 | ತತ್ಸಮಾನ ಕ್ಷೇತ್ರದಲ್ಲಿ 3 ರಿಂದ 5 ವರ್ಷಗಳ ಅನುಭವದೊಂದಿಗೆ ಎಂ.ಟೆಕ್/ಬಿ.ಇ–ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ – ರಿನಿವೆಬಲ್ ಎನರ್ಜಿ, ಪರ್ಯಾಯ ತಂತ್ರಜ್ಞಾನದ ಕುರಿತು ಜ್ಞಾನ ಹೊಂದಿರಬೇಕು, ಎನರ್ಜಿ ಮ್ಯಾನೇಜರ್ ಅಥವಾ ಎನರ್ಜಿ ಆಡಿಟರ್‌ಗೆ ನೀಡುವ ಬಿಇಇ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ, ಸಂಶೋಧನಾ ಕ್ಷೇತ್ರದಲ್ಲಿ ಅನುಭವವಿರಬೇಕು. | 40 ವರ್ಷಗಳು | ರೂ.31,850/– + ತುಟ್ಟಿ ಭತ್ಯೆ |

ಇತರ ಷರತ್ತುಗಳು: (1) ಅಭ್ಯರ್ಥಿಗಳು ಭಾರತದೊಳಗೆ ಪ್ರಯಾಣಿಸಲು ಆಸಕ್ತಿ ಹೊಂದಿರಬೇಕು. ಕಂಪ್ಯೂಟರ್‌ನ ಎಂ.ಎಸ್. ಆಫೀಸ್ ಜ್ಞಾನ ಹೊಂದಿರಬೇಕು. ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಪ್ರಾವೀಣ್ಯತೆ ಹೊಂದಿರಬೇಕು. ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವವಿವರಗಳನ್ನು ಸಿಮ್ಯಾಕ್ ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಅರ್ಜಿ ನಮೂನೆಯಲ್ಲಿ ಹುದ್ದೆಯ ಹೆಸರಿನೊಂದಿಗೆ, ಶೈಕ್ಷಣಿಕ ಅರ್ಹತೆಯ ಅಂತಿಮ ವರ್ಷದ ಪದವಿಯಲ್ಲಿ/ಸ್ನಾತಕೋತ್ತರ ಪದವಿಯಲ್ಲಿ ಪಡೆದ ಅಂಕಗಳು, ಅಂಕಪಟ್ಟಿಗಳ ಪ್ರತಿಗಳು, ವಯಸ್ಸಿನ ಪುರಾವೆಗಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಪ್ರತಿ ಮತ್ತು ಸಂಬಂಧಿತ ಕ್ಷೇತ್ರದಲ್ಲಿ ಪಡೆದಿರುವ ಅನುಭವದ ಪ್ರಮಾಣ ಪತ್ರದ ಪ್ರತಿಗಳೊಂದಿಗೆ **ಪ್ರಧಾನ ಕಾರ್ಯದರ್ಶಿಗಳು, ಸಿಟಿ ಮ್ಯಾನೇಜರ್ ಅಸೋಸಿಯೇಶನ್ ಕರ್ನಾಟಕ, ನಂ.42, ಸಂಜೀವಿನಿ, 1ನೇ ಮಹಡಿ, 4ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003** ಇವರಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ **ದಿನಾಂಕ: 11.02.2022ರ ಸಂಜೆ 5.00 ಗಂಟೆಯ ಒಳಗಾಗಿ** ಕಳುಹಿಸಿಕೊಡತಕ್ಕದ್ದು. ಹೆಚ್ಚಿನ ವಿವರ ಹಾಗೂ ಅರ್ಜಿ ನಮೂನೆ **www.cmak.municipaladmn.gov.in** ನಲ್ಲಿ ಲಭ್ಯವಿರುತ್ತದೆ. (2) ಪ್ರಧಾನ ಕಾರ್ಯದರ್ಶಿ ಸಿಮ್ಯಾಕ್, ಇವರು ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.

DIPR/DDU/YC/2922/2021-22

ಸಹಿ/– ಪ್ರಧಾನ ಕಾರ್ಯದರ್ಶಿ, ಸಿಮ್ಯಾಕ್
ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

"ಶ್ರೀ ಶ್ರೀ ಶ್ರೀ ಡಾ: ಶಿವಕುಮಾರ ಸ್ವಾಮೀಜಿಯವರ ಭೌತಿಕ ಅನುಪಸ್ಥಿತಿಯನ್ನು ನಾವೆಲ್ಲರೂ ಅನುಭವಿಸುತ್ತೇವೆ. ಶ್ರೀಗಳವರ ದರ್ಶನ ಮಾತ್ರವೇ ಅತ್ಯಂತ ಶ್ರೀಮಂತ ಮತ್ತು ಸ್ಫೂರ್ತಿದಾಯಕವಾದದ್ದು ಎಂಬುದನ್ನು ನಾನು ವೈಯಕ್ತಿಕವಾಗಿ ಅನುಭವಿಸಿದ್ದೇನೆ. ಶ್ರೀಗಳವರ ಸ್ಫೂರ್ತಿದಾಯಕ ವ್ಯಕ್ತಿತ್ವದಿಂದ ಸಿದ್ಧಗಂಗಾ ಕ್ಷೇತ್ರವು ದಶಕಗಳಿಂದ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಾ ಬಂದಿದೆ."

**ನರೇಂದ್ರ ಮೋದಿ**
ಪ್ರಧಾನಮಂತ್ರಿಗಳು



# "ದಾಸೋಹ ದಿನ"

"ಕತ್ತಲೆಯಲ್ಲಿ ಇದ್ದವರನ್ನು ಬೆಳಕಿಗೆ ತರುವುದು ಧರ್ಮ; ಅನ್ನವಿಕ್ಕುವುದು ಧರ್ಮ;
ಬಾಯಾರಿದವನಿಗೆ ನೀರುಣಿಸುವುದು ಧರ್ಮ;
ಮತ್ತೊಬ್ಬರ ಕಷ್ಟಕ್ಕೆ ನೆರವಾಗುವುದು ಧರ್ಮವೇ ಪರಂತು – ಅದು ಗುಡಿ ಗುಂಡಾರಗಳಲ್ಲಿಲ್ಲ."

**ಶ್ರೀ ಶ್ರೀ ಶ್ರೀ ಡಾ: ಶಿವಕುಮಾರ ಸ್ವಾಮೀಜಿ**



"ಶ್ರೀ ಶ್ರೀ ಶ್ರೀ ಡಾ: ಶಿವಕುಮಾರ ಸ್ವಾಮೀಜಿ ಅವರು ಲಿಂಗೈಕ್ಯರಾದ ದಿನವಾದ ಜನವರಿ 21 ರಂದು "ದಾಸೋಹ ದಿನ" ಆಚರಿಸುವ ಮೂಲಕ ಕರ್ನಾಟಕ ಸರ್ಕಾರ ಶ್ರೀಗಳವರ ಸಾಧನೆಯೇ ಪ್ರೇರಣೆ ಎಂದು ಪರಿಗಣಿಸಿ ಮುಂದೆ ಹೆಜ್ಜೆ ಇಡುತ್ತಿದೆ."

**ಬಸವರಾಜ ಎಸ್. ಬೊಮ್ಮಾಯಿ**
ಮುಖ್ಯಮಂತ್ರಿಗಳು

## ತ್ರಿವಿಧ ದಾಸೋಹ

ತ್ರಿವಿಧ ದಾಸೋಹ ಎಂದರೆ **ವಿದ್ಯೆ, ಆಶ್ರಯ ಮತ್ತು ಅನ್ನ ದಾಸೋಹ**. ಈ ತ್ರಿವಿಧ ದಾಸೋಹವನ್ನು ನೀಡುವ ಪರಂಪರೆಗೆ ಹೊಸ ಅರ್ಥ ತುಂಬಿದ್ದ ತ್ರಿವಿಧ ದಾಸೋಹಿ, ನಡೆದಾಡುವ ದೇವರು ಸಿದ್ಧಗಂಗಾ ಮಠದ ಲಿಂಗೈಕ್ಯರಾದ **ಶ್ರೀ ಶ್ರೀ ಶ್ರೀ ಡಾ: ಶಿವಕುಮಾರ ಸ್ವಾಮೀಜಿ** ಅವರು ಶಿಕ್ಷಣ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ ನೀಡುವ ಮೂಲಕ ಲಕ್ಷಾಂತರ ಬಡ ಮಕ್ಕಳಲ್ಲಿ ಜ್ಞಾನ ಜ್ಯೋತಿ ಬೆಳಗಿಸಿ, ಅವರ ಕುಟುಂಬಗಳು, ಸಮಾಜ ಹಾಗೂ ದೇಶದ ಬೆಳವಣಿಗೆಗೆ ಭದ್ರ ಬುನಾದಿ ಹಾಕಿದ್ದಾರೆ.

ಹನ್ನೆರಡು ಶತಮಾನಗಳ ಹಿಂದೆ ಮಹಾಮನೆಯಲ್ಲಿ ಹತ್ತಿಸಿರುವ ಒಲೆಯು ಇಂದಿಗೂ ಉರಿಯುತ್ತಿದ್ದು, ಪ್ರಸ್ತುತ ಸಿದ್ಧಗಂಗಾ ಮಠದಲ್ಲಿ ದಿನಂಪ್ರತಿ 10 ಸಾವಿರ ವಿದ್ಯಾರ್ಥಿಗಳಿಗೆ ಮತ್ತು 3 ರಿಂದ 5 ಸಾವಿರ ಭಕ್ತರಿಗೆ ಅನ್ನದಾಸೋಹ ನಡೆಯುತ್ತಿದೆ.

**ಸ್ಥಾವರಕ್ಕಳಿವುಂಟು... ಜಂಗಮಕ್ಕಳಿವಿಲ್ಲ** ಎಂದು ಬಸವಣ್ಣನವರು ಹೇಳಿದಂತೆ, ಸಿದ್ಧಗಂಗಾ ಶ್ರೀಗಳು ಅಸಂಖ್ಯಾತ ಮಕ್ಕಳ ಮನಸ್ಸನ್ನು ಕಟ್ಟಿದರು. ಅವರಲ್ಲಿ ಉತ್ತಮ ಸಂಸ್ಕಾರ ರೂಪಿಸಿದರು. ಮಕ್ಕಳಿಗಾಗಿ ತನ್ನ ಪರಿಸರದ ಲೋಕ ಸುತ್ತಿ ಧಾನ್ಯ ಸಂಗ್ರಹಿಸಿ ತಂದು ಅವರನ್ನು ಉದ್ಧರಿಸಿದರು.

## ಶ್ರೀಗಳವರ ತ್ರಿವಿಧ ದಾಸೋಹದ ಆದರ್ಶದಂತೆ ಸರ್ಕಾರವು ಅನ್ನ, ಆಶ್ರಯ ಮತ್ತು ವಿದ್ಯಾ ದಾಸೋಹಕ್ಕೆ ಆದ್ಯತೆ ನೀಡುವ ಮೂಲಕ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ.

- ಸರ್ಕಾರವು ಬಡವರ ಹಸಿವನ್ನು ನೀಗಿಸಲು **ಶ್ರೀ ಶ್ರೀ ಶ್ರೀ ಡಾ: ಶಿವಕುಮಾರ ಸ್ವಾಮೀಜಿಗಳ** ಅನ್ನ ದಾಸೋಹದಿಂದ ಪ್ರೇರಣೆ ಪಡೆದು ಪಡಿತರ ವ್ಯವಸ್ಥೆ ಅಡಿ **4.75 ಲಕ್ಷ ಬಿಪಿಎಲ್ ಪಡಿತರ ಫಲಾನುಭವಿಗಳಿಗೆ** ಹೊಸದಾಗಿ ಪಡಿತರ ಚೀಟಿಯನ್ನು ವಿತರಿಸಲಾಗಿದೆ. ಈ ಹಿಂದೆ ನೀಡಲಾಗುತ್ತಿದ್ದ 4 ಕೆ.ಜಿ. ಅಕ್ಕಿಯನ್ನು 5 ಕೆ.ಜಿಗೆ ಹೆಚ್ಚಿಸಿದೆ ಆಯಾ ಜಿಲ್ಲೆಗಳ ಆಹಾರ ಪದ್ಧತಿಗೆ ಅನುಗುಣವಾಗಿ ರಾಗಿ, ಜೋಳ ಹಾಗೂ ಇತರೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ.

  2020–21ನೇ ಸಾಲಿನಲ್ಲಿ **2.06 ಲಕ್ಷ ಮೆ.ಟನ್ ಭತ್ತ, 4.75 ಲಕ್ಷ ಮೆ.ಟನ್ ರಾಗಿ** ಹಾಗೂ **87,722 ಮೆ.ಟನ್ ಬಿಳಿ ಜೋಳ**ವನ್ನು ಕನಿಷ್ಟ ಬೆಂಬಲ ಯೋಜನೆಯಡಿ ಖರೀದಿಸಿ ಸದರಿ ಆಹಾರ ಧಾನ್ಯಗಳನ್ನು ಪಡಿತರ ಫಲಾನುಭವಿಗಳಿಗೆ ಸಾರ್ವಜನಿಕರ ವಿತರಣಾ ಪದ್ಧತಿಯಡಿ ವಿತರಿಸಲಾಗಿದೆ.

  ಸರ್ಕಾರವು ರಾಜ್ಯದಲ್ಲಿರುವ **ಒಟ್ಟು 261 ಮಠ** ಹಾಗೂ ದಾಸೋಹ ಕೇಂದ್ರಗಳಿಗೆ ಪ್ರತಿ ಮಾಹೆ 237.740 ಮೆ.ಟನ್ ಅಕ್ಕಿ ಹಾಗೂ 118.870 ಮೆ.ಟನ್ ಗೋಧಿ ನೀಡಲಾಗುತಿದ್ದು **ಅಂದಾಜು 356.610 ಮೆ.ಟನ್ ಆಹಾರ ಧಾನ್ಯಗಳನ್ನು** ನೀಡುತ್ತಿದೆ.

- ಪ್ರತಿಯೊಬ್ಬರಿಗೂ ಸೂರು ದೊರಕಿಸಬೇಕೆಂಬ ಉದ್ದೇಶದಿಂದ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಒಟ್ಟು **5 ಲಕ್ಷ ಮನೆಗಳ** ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದ್ದು ಮನೆಗಳ ನಿರ್ಮಾಣ ಕಾರ್ಯವು ಶೀಘ್ರಗತಿಯಲ್ಲಿ ನಡೆಯುತ್ತಿದೆ.
- **ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ** ಯೋಜನೆಯಡಿ ಎಸ್ ಎಸ್ ಎಲ್ ಸಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದ ರೈತ ಮಕ್ಕಳ ಮುಂದಿನ ವಿದ್ಯಾರ್ಜನೆಯು ಸರಾಗವಾಗಿ ಮುಂದುವರೆಸಲು ಪ್ರತಿ ವರ್ಷ ಶಿಷ್ಯವೇತನ ಒದಗಿಸಲಾಗುತ್ತಿದೆ. ಇಲ್ಲಿಯವರೆಗೆ 8, 9 ಮತ್ತು 10ನೇ ತರಗತಿಯ **1,82,302 ಬಾಲಕಿಯರು** ಮತ್ತು ಮೆಟ್ರಿಕ್ ನಂತರದ **2,78,084 ವಿದ್ಯಾರ್ಥಿಗಳಿಗೆ ರೂ.111.35 ಕೋಟಿಗಳನ್ನು** ಶಿಷ್ಯವೇತನಕ್ಕಾಗಿ ನೀಡಲಾಗಿದೆ.

  ರೈತರ ಮಕ್ಕಳು ಉನ್ನತ ಸ್ಥಾನಗಳಿಗೆ ಏರಬೇಕು, ಹಣಕಾಸಿನ ಕೊರತೆಯಿಂದ ಇನ್ನು ಮುಂದೆ ಓದನ್ನು ಅರ್ಧಕ್ಕೆ ನಿಲ್ಲಿಸಬಾರದು ಎಂಬ ಸದುದ್ದೇಶದಿಂದ ವಿದ್ಯಾನಿಧಿ ಯೋಜನೆಯನ್ನು ಜಾರಿಗೆ ತರಲಾಗಿದೆ.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" –ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

**ಕರ್ನಾಟಕ ವಾರ್ತೆ**
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಆಸ್ಪತ್ರೆಗಳಲ್ಲಿ ಶೇ 90ಕ್ಕೂ ಅಧಿಕ ಹಾಸಿಗೆಗಳು ಖಾಲಿ • ಹೋಟೆಲ್‌ಗಳಲ್ಲಿ ಆರೈಕೆಗೆ ಅವಕಾಶ ನೀಡಿದ್ದ ಸರ್ಕಾರ

# ಆತಿಥ್ಯ ಕೇಂದ್ರದಲ್ಲಿ ಆರೈಕೆಗೆ ನಿರಾಸಕ್ತಿ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾದರೂ ಆಸ್ಪತ್ರೆ ದಾಖಲಾತಿ ಕಡಿಮೆಯಿದೆ. ಹೀಗಾಗಿ, ಖಾಸಗಿ ಆಸ್ಪತ್ರೆಗಳು ಹೋಟೆಲ್‌ಗಳನ್ನು ಆರೈಕೆ ಕೇಂದ್ರಗಳನ್ನಾಗಿ ಪರಿವರ್ತಿಸಲು ಈ ಬಾರಿ ನಿರಾಸಕ್ತಿ ತಾಳಿವೆ.

ಕೋವಿಡ್ ಚಿಕಿತ್ಸೆಗೆ ನಗರದ ಆಸ್ಪತ್ರೆಗಳಲ್ಲಿ ಗುರುತಿಸಲಾದ ಹಾಸಿಗೆಗಳಲ್ಲಿ ಶೇ 90.30ರಷ್ಟು ಹಾಸಿಗೆಗಳು ಖಾಲಿ ಉಳಿದಿವೆ. ಸೋಂಕಿನ ತೀವ್ರತೆ ಕಡಿಮೆಯಿರುವುದರಿಂದ ಶೇ 7 ರಷ್ಟು ಮಂದಿ ಮಾತ್ರ ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಸಾವಿರಕ್ಕೂ ಅಧಿಕ ಹಾಸಿಗೆಗಳು ಸದ್ಯ ಲಭ್ಯವಿವೆ. ಹೀಗಾಗಿ, ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಆಧಾರದಲ್ಲಿ ಹಾಗೂ ನೇರವಾಗಿ ದಾಖಲಾಗುವವರ ಸಂಖ್ಯೆ ಬೆರಳಣಿಕೆಯಷ್ಟು ಇದೆ. ಆದ್ದರಿಂದ ಖಾಸಗಿ ಆಸ್ಪತ್ರೆಗಳು ಹೋಟೆಲ್ ಆರೈಕೆ ಕೇಂದ್ರಗಳನ್ನ ಪ್ರಾರಂಭಿಸಲು ಹಿಂದೇಟು ಹಾಕಿವೆ.

ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಸರ್ಕಾರವು ಕೆಪಿಎಂಇ ಕಾಯ್ದೆಯಡಿ ಆರೈಕೆ ಕೇಂದ್ರಗಳನ್ನು ನಡೆಸಲು ಖಾಸಗಿ ಆಸ್ಪತ್ರೆಗಳಿಗೆ ಅವಕಾಶ ನೀಡಿದೆ. ಸಾಮಾನ್ಯ ಹೋಟೆಲ್‌ಗೆ ದಿನವೊಂದಕ್ಕೆ ಗರಿಷ್ಠ ₹ 4 ಸಾವಿರ, ಮೂರು ಸ್ಟಾರ್ ಹೋಟೆಲ್‌ಗೆ ಗರಿಷ್ಠ ₹ 8 ಸಾವಿರ ಹಾಗೂ ಪಂಚ ತಾರಾ ಹೋಟೆಲ್‌ಗೆ ಗರಿಷ್ಠ ₹ 10 ಸಾವಿರ ನಿಗದಿಪಡಿಸಲಾಗಿದೆ. ತಾರಾ ಹೋಟೆಲ್‌ಗಳು ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಲು ಆಸಕ್ತಿ ತೋರಿದ್ದವು. ಆಸ್ಪತ್ರೆಗಳಲ್ಲಿ ಶೇ 50 ರಷ್ಟು ಹಾಸಿಗೆಗಳು ಭರ್ತಿಯಾದಲ್ಲಿ ಹೋಟೆಲ್ ಆರೈಕೆ ಪ್ರಾರಂಭಿಸಲು ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರು ನಿರ್ಧರಿಸಿದ್ದಾರೆ.

**ಮೊದಲೆರಡು ಅಲೆಯಲ್ಲಿ ಆರೈಕೆ:** 2021ರ ಮಾರ್ಚ್ ಮೂರನೇ ವಾರದ ಬಳಿಕ ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಿತ್ತು. ಸೋಂಕಿತರ ಸಂಖ್ಯೆ ಏರುಗತಿ ಪಡೆದು, ಮೇ ತಿಂಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ನಗರದಲ್ಲಿ 4 ಲಕ್ಷದ ಆಸುಪಾಸಿಗೆ ಏರಿಕೆಯಾಗಿತ್ತು. ಆ ವೇಳೆ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿತ್ತು. ಹೀಗಾಗಿ, ಹೋಟೆಲ್‌ಗಳಲ್ಲಿ ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣಗಳು ಇರುವವರಿಗೆ ಚಿಕಿತ್ಸೆ ಒದಗಿಸಲು ಅವಕಾಶ ನೀಡಲಾಗಿತ್ತು. ಮೊದಲ ಅಲೆಯಲ್ಲಿಯೂ ಹೋಟೆಲ್ ಆರೈಕೆ ಒದಗಿಸಲಾಗಿತ್ತು.

ಸುಗುಣ, ಮಣಿಪಾಲ್, ಪೀಪಲ್ ಟ್ರೀ, ಅಪೋಲೊ, ಕೊಲಂಬಿಯಾ ಏಷ್ಯಾ, ಮಲ್ಲಿಗೆ ಸೇರಿದಂತೆ ನಗರದ ಪ್ರಮುಖ 17 ಆಸ್ಪತ್ರೆಗಳು 32 ಹೋಟೆಲ್‌ಗಳನ್ನು ಗುರುತಿಸಿ, 1,281 ಹಾಸಿಗೆಗಳನ್ನು ಸಜ್ಜುಗೊಳಿಸಿದ್ದವು. ಈ ಸೇವೆಯು ಮನೆ ಆರೈಕೆಗೆ ವ್ಯವಸ್ಥೆ ಇಲ್ಲದವರಿಗೆ, ಅನ್ಯ ರಾಜ್ಯಗಳಿಂದ ಬಂದು ಸೋಂಕಿತರಾದವರಿಗೆ, ಆಸ್ಪತ್ರೆ ಚಿಕಿತ್ಸೆ ಅಗತ್ಯ ಇಲ್ಲದವರಿಗೆ ಸಹಕಾರಿಯಾಗಿದ್ದವು. ಸಾವಿರಕ್ಕೂ ಅಧಿಕ ಮಂದಿಗೆ ಅಲ್ಪಾವಧಿಯಲ್ಲಿ ಸೇವೆ ನೀಡಲಾಗಿತ್ತು.

'ಹೋಟೆಲ್‌ಗಳಲ್ಲಿ ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಅವಕಾಶ ನೀಡಿದೆ. ಆದರೆ, ಸದ್ಯ ಸೋಂಕಿತರಲ್ಲಿ ಶೇ 90ಕ್ಕೂ ಅಧಿಕ ಮಂದಿ ಮನೆ ಆರೈಕೆಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ಖಾಸಗಿ ಆಸ್ಪತ್ರೆಗಳು ಹೋಟೆಲ್‌ಗಳಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಿಲ್ಲ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

### 'ಆರೈಕೆ ಕೇಂದ್ರವಾಗಿ ಪರಿವರ್ತಿಸಿದರೆ ಅವಕಾಶ'

'ಮೊದಲೆರಡು ಅಲೆಗಳಲ್ಲಿ ಖಾಸಗಿ ಆಸ್ಪತ್ರೆಗಳ ಜತೆಗೆ ಒಪ್ಪಂದ ಮಾಡಿಕೊಂಡು, ಚಿಕಿತ್ಸೆ ಒದಗಿಸಲು ಕೆಲ ತಾರಾ ಹೋಟೆಲ್‌ಗಳನ್ನು ನೀಡಲಾಗಿತ್ತು. ಈಗ ಆಸ್ಪತ್ರೆಗಳಲ್ಲಿಯೇ ಬಹಳಷ್ಟು ಹಾಸಿಗೆಗಳು ಖಾಲಿ ಉಳಿದಿವೆ. ಕೋವಿಡ್ ಪೀಡಿತರ ಆರೈಕೆಗೆ ಹೋಟೆಲ್‌ಗಳನ್ನು ಒದಗಿಸಲು ಸಿದ್ಧವಿದ್ದೇವೆ. ಆದರೆ, ಹೋಟೆಲ್‌ಗಳಲ್ಲಿ ಒಂದೆರಡು ಕೊಠಡಿಗಳನ್ನು ನೀಡಲು ಸಾಧ್ಯವಿಲ್ಲ. ಇದರಿಂದ ಉಳಿದವರ ಆತಿಥ್ಯಕ್ಕೆ ಸಮಸ್ಯೆಯಾಗಲಿದೆ. ಪೂರ್ಣ ಪ್ರಮಾಣದಲ್ಲಿ ಆರೈಕೆ ಕೇಂದ್ರಗಳನ್ನಾಗಿ ಪರಿವರ್ತಿಸುವುದಾದರೆ ಹೋಟೆಲ್‌ಗಳನ್ನು ನೀಡಲಾಗುವುದು' ಎಂದು ಬೃಹತ್ ಬೆಂಗಳೂರು ಹೋಟೆಲ್ ಸಂಘಟನೆಯ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದರು.

**ಆಸ್ಪತ್ರೆಗಳಲ್ಲಿಯೇ ಹಾಸಿಗೆಗಳು ಖಾಲಿ ಉಳಿದಿವೆ. ಮುಂದಿನ ದಿನಗಳಲ್ಲಿ ದಾಖಲಾತಿ ಹೆಚ್ಚಾದರೆ ಹೋಟೆಲ್‌ಗಳನ್ನು ಆರೈಕೆ ಕೇಂದ್ರಗಳಾಗಿ ಪರಿವರ್ತಿಸಲಾಗುವುದು.**

**ಡಾ. ಪ್ರಸನ್ನ ಎಚ್.ಎಂ.,** ಫನಾ ಅಧ್ಯಕ್ಷ

### ಸರ್ಕಾರಿ ಕೋಟಾ: ಹಾಸಿಗೆ ಲಭ್ಯತೆ ವಿವರ (ಜ.20)

| 6,953 | 651 | 11 | 6,291 |
|---|---|---|---|
| ವಿವಿಧ ಮಾದರಿ ಒಟ್ಟು ಹಾಸಿಗೆಗಳು | ದಾಖಲಾದವರು | ಬ್ಲಾಕ್ ಮಾಡಲಾಗಿರುವ ಹಾಸಿಗೆಗಳು | ಲಭ್ಯವಿರುವ ವಿವಿಧ ಮಾದರಿ ಒಟ್ಟು ಹಾಸಿಗೆಗಳು |

| ಸಾಮಾನ್ಯ ಹಾಸಿಗೆ ವಿವರ | |
|---|---|
| ಒಟ್ಟು ಸಾಮಾನ್ಯ ಹಾಸಿಗೆಗಳು | 3,231 |
| ದಾಖಲಾದವರು | 345 |
| ಬ್ಲಾಕ್ ಮಾಡಿರುವ ಹಾಸಿಗೆಗಳು | 06 |
| ಲಭ್ಯವಿರುವ ಹಾಸಿಗೆಗಳು | 2,880 |

| ಎಚ್‌ಡಿಯು ಹಾಸಿಗೆ ವಿವರ | |
|---|---|
| ಒಟ್ಟು ಎಚ್‌ಡಿಯು ಹಾಸಿಗೆ | 2,801 |
| ದಾಖಲಾದವರು | 194 |
| ಬ್ಲಾಕ್ ಮಾಡಿರುವ ಹಾಸಿಗೆ | 03 |
| ಲಭ್ಯವಿರುವ ಹಾಸಿಗೆಗಳು | 2,604 |

| ಐಸಿಯು ಹಾಸಿಗೆ ವಿವರ | |
|---|---|
| ಒಟ್ಟು ಐಸಿಯು ಹಾಸಿಗೆಗಳು | 446 |
| ದಾಖಲಾದವರು | 70 |
| ಬ್ಲಾಕ್ ಮಾಡಿರುವ ಹಾಸಿಗೆ | 01 |
| ಲಭ್ಯವಿರುವ ಒಟ್ಟು ಹಾಸಿಗೆ | 395 |

| ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ ವಿವರ | |
|---|---|
| ಒಟ್ಟು ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ | 445 |
| ದಾಖಲಾದವರು | 42 |
| ಬ್ಲಾಕ್ ಮಾಡಿರುವ ಹಾಸಿಗೆ | 01 |
| ಲಭ್ಯವಿರುವ ಹಾಸಿಗೆ | 412 |

*ಆಧಾರ ಬಿಬಿಎಂಪಿ ಹಾಸಿಗೆ ಹಂಚಿಕೆ ಪೋರ್ಟಲ್

### ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

15,13,024 ಒಟ್ಟು ಸೋಂಕಿತರು (14,82,484 ನಿನ್ನೆಯ ವಿವರ)

| 2,01,714 | 12,94,831 | 16,478 |
|---|---|---|
| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |

ದಿನದ ಏರಿಕೆ

| | |
|---|---|
| ಹೊಸ ಪ್ರಕರಣ | 30,540 |
| ಗುಣಮುಖ | 13,195 |
| ಸಾವು | 08 |

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

## ಸುದ್ದಿ 2 ನಿಮಿಷ

### ಸರ್ಕಾರದ ನಡೆ ಅವೈಜ್ಞಾನಿಕ; ಎಚ್‌.ಸಿ. ಮಹದೇವಪ್ಪ ಟೀಕೆ

**ಬೆಂಗಳೂರು:** 'ಕೋವಿಡ್ ಲಾಕ್‌ಡೌನ್ ಮತ್ತು ರಾತ್ರಿ ಕರ್ಫ್ಯೂ ವಿಚಾರದಲ್ಲಿ ಬಿಜೆಪಿಯಲ್ಲಿ ಗೊಂದಲಗಳಿದ್ದು, ಲಾಕ್‌ಡೌನ್ ಮಾಡಬೇಕೇ ಬೇಡವೇ ಎಂಬುದರ ಬಗ್ಗೆ ಸರ್ಕಾರ ಜನಾಭಿಪ್ರಾಯ ಕೇಳುತ್ತಿರುವುದು ಅವೈಜ್ಞಾನಿಕ' ಎಂದು ಕಾಂಗ್ರೆಸ್ ಮುಖಂಡ ಎಚ್‌.ಸಿ. ಮಹದೇವಪ್ಪ ಟೀಕಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ವೈದ್ಯಕೀಯ ಅಭಿಪ್ರಾಯ ಮತ್ತು ಜನಸಾಮಾನ್ಯರ ದೃಷ್ಟಿಯಿಂದ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಿರುವುದು ಸರ್ಕಾರದ ಜವಾಬ್ದಾರಿ. ಆದರೆ, ಈ ಸರ್ಕಾರ ಎಲ್ಲ ರೀತಿಯ ಆಡಳಿತಾತ್ಮಕ ವೈಫಲ್ಯಗಳ ಜೊತೆಗೆ ಇದೀಗ ಲಾಕ್‌ಡೌನ್ ವಿಚಾರವಾಗಿ ಜನರ ಅಭಿಪ್ರಾಯಗಳನ್ನು ಕೇಳುತ್ತಿರುವುದು ದೌರ್ಬಲ್ಯದ ಸಂಕೇತ' ಎಂದಿದ್ದಾರೆ.

'ತಜ್ಞರು ಹೇಳುವಂತೆ ಫೆಬ್ರವರಿ ವೇಳೆಗೆ ಕೋವಿಡ್ ಉತ್ತುಂಗಕ್ಕೆ ತಲುಪಿ ಶೀಘ್ರ ಇಳಿಮುಖವಾಗಲಿದೆ. ಈ ಹಂತದಲ್ಲಿ ನೆಗಡಿ, ಕೆಮ್ಮು, ಜ್ವರ, ಗಂಟಲು ನೋವಿನ ಲಕ್ಷಣ ಇರುವವರ ಸಂಖ್ಯೆ ಹೆಚ್ಚಾಗಲಿದೆ ಎಂದು ಅಂದಾಜಿಸಿದ್ದಾರೆ. ಹೀಗಾಗಿ ಜನರ ಚಲನಶೀಲ ಬದುಕಿನಲ್ಲಿ ಸೋಂಕು ಯಾವ ರೀತಿ ಇರಬಹುದು ಎಂಬುದನ್ನು ತಿಳಿದುಕೊಂಡು ಸರ್ಕಾರ ಜಾಗೃತಿ ಮೂಡಿಸಬೇಕು' ಎಂದೂ ಸಲಹೆ ನೀಡಿದ್ದಾರೆ.

'ಸೋಂಕಿತರೆಲ್ಲರೂ ಮನೆಯಲ್ಲೇ ಇರಲಿ ಎಂದು ನಿರ್ಬಂಧ ವಿಧಿಸಿದರೆ, ಅವರ ದೈನಂದಿನ ಬದುಕಿಗೆ ನೆರವಾಗಲು ಯಾವ ರೀತಿಯ ಸಿದ್ಧತೆ ನಡೆಸಲಾಗಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು' ಎಂದೂ ಆಗ್ರಹಿಸಿದ್ದಾರೆ.

### 'ಕೋವಿಡ್: ಹೋಟೆಲ್ ಕಾರ್ಮಿಕರಿಗೆ ಪರಿಹಾರ ಒದಗಿಸಿ'

**ಬೆಂಗಳೂರು:** 'ಕೋವಿಡ್ ನಿರ್ಬಂಧದಿಂದ ಹೋಟೆಲ್ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರಿಗೆ ಸರ್ಕಾರವು ಸೂಕ್ತ ಪರಿಹಾರ ಒದಗಿಸಬೇಕು' ಎಂದು ಕರ್ನಾಟಕ ಹೋಟೆಲ್ ಕಾರ್ಮಿಕರ ಸಂಘದ ಅಧ್ಯಕ್ಷ ಮಂಜುನಾಥ ಶೆಟ್ಟಿ ಅವರು ಸರ್ಕಾರಕ್ಕೆ ಆಗ್ರಹಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್‌ನಿಂದಾಗಿ ಹೋಟೆಲ್‌ಗಳಿಗೆ ಅಷ್ಟಾಗಿ ಗ್ರಾಹಕರು ಬರುತ್ತಿಲ್ಲ. ಮೊದಲೆರಡು ಅಲೆಯಲ್ಲಿ ಹಲವು ಹೋಟೆಲ್‌ಗಳು ನಿರ್ವಹಣೆ ಸಾಧ್ಯವಾಗದೆ ಮುಚ್ಚಿವೆ. ಇದರಿಂದ ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಅವರಿಗೆ ಸರ್ಕಾರದಿಂದ ಯಾವುದೇ ಪರಿಹಾರ ಬಂದಿಲ್ಲ. ಈಗ ಮತ್ತೆ ನಿರ್ಬಂಧಗಳನ್ನು ವಿಧಿಸಿರುವುದರಿಂದ ಹಲವರು ಉದ್ಯೋಗ ವಂಚಿತರಾಗುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

## 318 'ಟ್ರಯಾಜಿಂಗ್' ತಂಡ

**ಬೆಂಗಳೂರು:** 'ಕೋವಿಡ್ ತಪಾಸಣೆಗಾಗಿ 318 'ಟ್ರಯಾಜಿಂಗ್' ತಂಡಗಳನ್ನು ರಚಿಸಲಾಗಿದೆ. ಈ ತಂಡದಲ್ಲಿ 3000ಕ್ಕೂ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ತಿಳಿಸಿದರು.

'ಜತೆಗೆ, ಸೋಂಕು ಪರೀಕ್ಷೆ ನಡೆಸಿದ 24 ಗಂಟೆಯ ಒಳಗೆ ವರದಿ ನೀಡುವ ವ್ಯವಸ್ಥೆಯನ್ನು ಸಹ ಜಾರಿಗೊಳಿಸಲಾಗಿದೆ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ನಗರದಲ್ಲಿ ದಿನೇ ದಿನೇ ಸೋಂಕು ಉಲ್ಬಣಗೊಳ್ಳುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಗಳಿವೆ. ಹೀಗಾಗಿ, ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದೇವೆ' ಎಂದರು.

'ಅಗತ್ಯವಿರುವವರಿಗೆ ನಾವೇ ಹಾಸಿಗೆ ವ್ಯವಸ್ಥೆ ಮಾಡುತ್ತೇವೆ. ಹೀಗಾಗಿ ಹಾಸಿಗೆ ಅವಶ್ಯಕತೆ ಇರುವವರಿಗೆ ಈ ಬಾರಿ ಯಾವುದೇ ರೀತಿಯ ತೊಂದರೆ ಎದುರಾಗುವುದಿಲ್ಲ' ಎಂದು ಭರವಸೆ ನೀಡಿದರು.

# ಕೋವಿಡ್: 50 ಸಾವಿರದತ್ತ ಪ್ರಕರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಗುರುವಾರ ಸೋಂಕು ದೃಢಪಟ್ಟವರ ಸಂಖ್ಯೆ 50 ಸಾವಿರದ ಗಡಿ (47,754) ಸಮೀಪಿಸಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 2.93 ಲಕ್ಷಕ್ಕೆ ಏರಿಕೆಯಾಗಿದೆ.

ಕೋವಿಡ್ ಎರಡನೇ ಅಲೆಯಲ್ಲಿ 2021ರ ಮೇ 5ರಂದು ರಾಜ್ಯದಲ್ಲಿ ಹೊಸ ಪ್ರಕರಣಗಳು 50 ಸಾವಿರದ ಗಡಿ ದಾಟಿತ್ತು. ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿತ್ತು. ಈಗ ಮತ್ತೆ ಏರುಗತಿ ಪಡೆದುಕೊಂಡಿದೆ. ಒಂದು ದಿನದ ಅವಧಿಯಲ್ಲಿ 2.58 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಈವರೆಗೆ ಒಂದು ದಿನದಲ್ಲಿ ನಡೆಸಲಾದ ಗರಿಷ್ಠ ಪರೀಕ್ಷೆಗಳು ಇವಾಗಿವೆ. ಸೋಂಕು ದೃಢ ಪ್ರಮಾಣ ಶೇ 18.48 ರಷ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 33.76 ಲಕ್ಷಕ್ಕೆ ಏರಿಕೆಯಾಗಿದೆ.

ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 22 ಜಿಲ್ಲೆಗಳಲ್ಲಿ ಮೂರು ಅಂಕಿಯಲ್ಲಿದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ 30 ಸಾವಿರದ ಗಡಿ ದಾಟಿದೆ. ಹಾಸನದಲ್ಲಿ 1,840, ತುಮಕೂರಿನಲ್ಲಿ 1,622, ಮಂಡ್ಯದಲ್ಲಿ 1,512 ಹಾಗೂ ಮೈಸೂರಿನಲ್ಲಿ 1,352 ಮಂದಿ ಹೊಸದಾಗಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಸಾವಿರಕ್ಕಿಂತ ಕಡಿಮೆ ಇವೆ.



ಸೋಂಕಿತರಲ್ಲಿ 22,143 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 30.45 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳಲ್ಲಿ ಬೆಂಗಳೂರಿನಲ್ಲಿಯೇ 2.01 ಲಕ್ಷ ಮಂದಿ ಸೋಂಕಿತರಿದ್ದಾರೆ.

ಕೋವಿಡ್ ಮರಣ ಪ್ರಕರಣಗಳ ಸಂಖ್ಯೆಯೂ ಏರಿಕೆ ಕಂಡಿದ್ದು, ಸೋಂಕಿತರಲ್ಲಿ 29 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಎಂಟು ಮಂದಿ, ಮೈಸೂರು ಹಾಗೂ ಕಲಬುರಗಿಯಲ್ಲಿ ತಲಾ ಐವರು, ತುಮಕೂರು ಹಾಗೂ ಬೀದರ್‌ನಲ್ಲಿ ತಲಾ ಇಬ್ಬರು, ಬಾಗಲಕೋಟೆ, ದಕ್ಷಿಣ ಕನ್ನಡ, ಗದಗ, ಹಾಸನ, ಮಂಡ್ಯ, ರಾಯಚೂರು ಹಾಗೂ ಉತ್ತರ ಕನ್ನಡದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.06 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,515ಕ್ಕೆ ಏರಿಕೆಯಾಗಿದೆ.

### ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 34.05 ಕೋಟಿ | 3.82 ಕೋಟಿ |
| ಸಕ್ರಿಯ ಪ್ರಕರಣ | 6.12 ಕೋಟಿ | 19.24 ಲಕ್ಷ |
| ಗುಣಮುಖ | 27.37 ಕೋಟಿ | 3.58 ಕೋಟಿ |
| ಸಾವು | 55.86 ಲಕ್ಷ | 4.87 ಲಕ್ಷ |

ದಿನದ ಮಾಹಿತಿ

| | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 35.78 ಲಕ್ಷ | 3.17 ಲಕ್ಷ |
| ಗುಣಮುಖ | 18.71 ಲಕ್ಷ | 2.23 ಲಕ್ಷ |
| ಸಾವು | 8,972 | 491 |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 7.10 ಲಕ್ಷ ಅಮೆರಿಕ; 4.36 ಲಕ್ಷ ಫ್ರಾನ್ಸ್; 2.05 ಲಕ್ಷ ಬ್ರೆಜಿಲ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 2.50 ಕೋಟಿ ಅಮೆರಿಕ; 54.34 ಲಕ್ಷ ಫ್ರಾನ್ಸ್; 36.15 ಲಕ್ಷ ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು): 1.41 ಲಕ್ಷ ಮಹಾರಾಷ್ಟ್ರ; 51,160 ಕೇರಳ; 37,073 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 73.25 ಮಹಾರಾಷ್ಟ್ರ; 54.64 ಕೇರಳ; 30.14 ತಮಿಳುನಾಡು

ಭಾರತದ ಕೋವಿಡ್ ಸಂಖ್ಯೆ ವಿವರ: ಗುರುವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

### ಎನ್‌.ಆರ್‌.ರಮೇಶ್ ವಿರುದ್ಧ ಪ್ರಕರಣ

**ಬೆಂಗಳೂರು:** ಕೋವಿಡ್ ನಿಯಮಗಳನ್ನು ಉಲ್ಲಂಘಿಸಿ ಜನ್ಮದಿನ ಆಚರಿಸಿಕೊಂಡಿದ್ದ ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್‌.ಆರ್‌.ರಮೇಶ್ ವಿರುದ್ಧ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರಮೇಶ್ ಅವರು ಇದೇ 14ರಂದು ಠಾಣೆ ವ್ಯಾಪ್ತಿಯ ಎನ್‌.ಆರ್‌.ರೆಸಿಡೆನ್ಸಿಯಲ್ಲಿ ಜನ್ಮದಿನ ಆಚರಿಸಿಕೊಂಡಿದ್ದರು. ವೇದಿಕೆ ಕಾರ್ಯಕ್ರಮವನ್ನೂ ಆಯೋಜಿಸಿದ್ದರು. ಮನೆಯ ಎದುರು ಪೆಂಡಾಲ್ ಹಾಕಿ ಜನರನ್ನು ಸೇರಿಸಿದ್ದರು. ಕಾರ್ಯಕ್ರಮಕ್ಕೆ ಬಂದವರ ಪೈಕಿ ಬಹುತೇಕರು ಮುಖಗವಸು ಧರಿಸಿರಲಿಲ್ಲ. ದೈಹಿಕ ಅಂತರ ನಿಯಮವನ್ನೂ ಪಾಲಿಸಿರಲಿಲ್ಲ. ಸ್ಥಳಕ್ಕೆ ಹೋಗಿದ್ದ ಠಾಣೆಯ ಪಿಎಸ್‌ಐ ಈ ಸಂಬಂಧ ದೂರು ನೀಡಿದ್ದು, ಅದರ ಆಧಾರದಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ರಮೇಶ್ ಅವರು ಪ್ರಕರಣದ ಮುಖ್ಯ ಆರೋಪಿಯಾಗಿದ್ದಾರೆ. ಅವರ ಬೆಂಬಲಿಗರನ್ನು ಎರಡನೇ ಆರೋಪಿಗಳನ್ನಾಗಿ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

ಕೆ.ಆರ್‌ಪುರದಲ್ಲಿನ ಲಕ್ಷ್ಮೀ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನ್ಯೂರೋ ಮತ್ತು ಕಾರ್ಡಿಯಾಕ್ ಕೇಂದ್ರವನ್ನು ಸಚಿವ ಬೈರತಿ ಬಸವರಾಜ್ ಉದ್ಘಾಟಿಸಿದರು. ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಸಾಂಬಶಿವ ಇದ್ದರು

### 'ನ್ಯೂರೋ, ಕಾರ್ಡಿಯಾಕ್' ಕೇಂದ್ರ ಆರಂಭ

**ಬೆಂಗಳೂರು:** ಕೆ.ಆರ್‌.ಪುರದಲ್ಲಿನ ಲಕ್ಷ್ಮೀ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನ್ಯೂರೋ ಮತ್ತು ಕಾರ್ಡಿಯಾಕ್ ಕೇಂದ್ರವನ್ನು ಆರಂಭಿಸಲಾಗಿದೆ.

ಅತ್ಯಾಧುನಿಕ ಮತ್ತು ಪರಿಣಾಮಕಾರಿ ಚಿಕಿತ್ಸಾ ಸೌಲಭ್ಯ ಹೊಂದಿರುವ ಲಕ್ಷ್ಮೀ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು 2008ರಲ್ಲಿ ಕಗ್ಗದಾಸನಪುರದಲ್ಲಿ ತನ್ನ ಮೊದಲ ಶಾಖೆಯನ್ನು ಮತ್ತು 2011 ರಲ್ಲಿ ಕೆ.ಆರ್‌.ಪುರದಲ್ಲಿ ಎರಡನೆ ಶಾಖೆಯನ್ನು ಆರಂಭಿಸಿತು.

ಕಡಿಮೆ ಬೆಲೆಯಲ್ಲಿ ಜನಸಾಮಾನ್ಯರಿಗೂ ವೈದ್ಯಕೀಯ ಸೇವೆ ದೊರೆಯುವಂತೆ ಕಳೆದ ಒಂದೂವರೆ ದಶಕದಿಂದ ಕಾಯ್ದುಕೊಂಡು ಬಂದಿದ್ದು, ಇದೀಗ ತನ್ನ ಸೇವೆಯನ್ನು ಇನ್ನಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಸಾಗಿದೆ. ಇದೀಗ ಆರಂಭಿಸುತ್ತಿರುವ ನ್ಯೂರೋ ಮ್ತು ಕಾರ್ಡಿಯಾಕ್ ಕೇಂದ್ರಗಳನ್ನು ಇದೇ ಮಾದರಿಯಲ್ಲಿ ಆರಂಭಿಸಲಾಗಿದೆ.

50 ಹಾಸಿಗೆಗಳನ್ನು ಹೊಂದಿರುವ ಲಕ್ಷ್ಮೀ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ ಎಂದು ಆಸ್ಪತ್ರೆಯ ಅಧ್ಯಕ್ಷ ಹಾಗೂ ವೈದ್ಯಕೀಯ ನಿರ್ದೇಶಕ ಡಾ. ಸಾಂಬಶಿವ ತಿಳಿಸಿದ್ದಾರೆ.

### '11 ವರ್ಷದವರೆಗೆ ಮಾಸ್ಕ್ ಕಡ್ಡಾಯವಲ್ಲ'

**ನವದೆಹಲಿ (ಪಿಟಿಐ):** ಕೋವಿಡ್ ಸೋಂಕಿನ ತೀವ್ರತೆ ಎಷ್ಟೇ ಇದ್ದರೂ 18 ವರ್ಷದೊಳಗಿನ ಮಕ್ಕಳಿಗೆ, ಪ್ರತಿಕಾಯ ಸೃಷ್ಟಿಗೆ ಪೂರಕವಾದ ಆ್ಯಂಟಿಬಾಡಿ ಔಷಧಗಳನ್ನು ಬಳಬಾರದು ಎಂದು ಕೇಂದ್ರ ಸರ್ಕಾರ ಹೇಳಿದೆ.

ಸ್ಟಿರಾಯ್ಡ್ ಅನ್ನು ಬಳಸುವುದಾದರೂ ಅದು 10 ರಿಂದ 14 ದಿನಕ್ಕೆ ಸೀಮಿತವಾಗಿರಬೇಕು ಎಂದು ಸರ್ಕಾರ ತಿಳಿಸಿದೆ. ಮಕ್ಕಳು ಮತ್ತು ಅಪ್ರಾಪ್ತರಿಗೆ ಸಂಬಂಧಿಸಿದಂತೆ ಕೋವಿಡ್ ನಿರ್ವಹಣೆ ಕುರಿತ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ.

ಐದು ವರ್ಷ ಮತ್ತು ಅದಕ್ಕೂ ಕೆಳಗಿನ ವಯಸ್ಸಿನ ಮಕ್ಕಳಿಗೆ ಮಾಸ್ಕ್ ಧರಿಸುವುದನ್ನು ಕಡ್ಡಾಯಪಡಿಸಿಲ್ಲ. 6-11 ವರ್ಷದ ಮಕ್ಕಳು ಮಾಸ್ಕ್ ಬಳಸುವ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ, ಪೋಷಕರ ಮೇಲ್ವಿಚಾರಣೆಯಲ್ಲಿ ಬಳಸಬಹುದು. 12 ವರ್ಷ ಮೀರಿದವರು ಕಡ್ಡಾಯವಾಗಿ ವಯಸ್ಕರು ಧರಿಸುವಂತೆಯೇ ಮಾಸ್ಕ್ ಧರಿಸಬೇಕು ಎಂದು ಹೇಳಿದೆ.

ಓಮೈಕ್ರಾನ್ ರೂಪಾಂತರ ತಳಿಯ ಕೋವಿಡ್ ಸೋಂಕು ಪ್ರಕರಣ ಏರಿಕೆಯ ಹಿನ್ನೆಲೆಯಲ್ಲಿ ತಜ್ಞರ ಸಮಿತಿಯು ಗುರುವಾರ ಕೋವಿಡ್ ಮಾರ್ಗಸೂಚಿಗಳನ್ನು ಪರಿಷ್ಕರಿಸಿತು.

### ಸರ್ವ ಭಾಷಾ ಕವಿ ಸಮ್ಮೇಳನ; ಮಹಾದೇವ ಶಂಕನಪುರ ಆಯ್ಕೆ

**ಚಾಮರಾಜನಗರ:** 73ನೇ ಗಣರಾಜ್ಯೋತ್ಸವ ಅಂಗವಾಗಿ ಆಕಾಶವಾಣಿ–ಪ್ರಸಾರ ಭಾರತಿ ಹಮ್ಮಿಕೊಂಡಿರುವ 22 ಭಾಷೆಗಳ ಅಖಿಲ ಭಾರತ ಸರ್ವ ಭಾಷಾ ಕವಿ ಸಮ್ಮೇಳನ–2022ರಲ್ಲಿ ಭಾಗವಹಿಸಲು ರಾಜ್ಯದಿಂದ ಕೊಳ್ಳೇಗಾಲದ ಮಹಾದೇವ ಶಂಕನಪುರ ಆಯ್ಕೆಯಾಗಿದ್ದಾರೆ.

'ಉರಿಗದ್ದಿಗೆಯ ಮೇಲೆ ಬೋಳು ಜಂಗಮನ ತಂಬೂರಿ ಪದ' ಕವಿತೆಯನ್ನು ಅವರು ಸಮ್ಮೇಳನದಲ್ಲಿ ವಾಚಿಸಲಿದ್ದಾರೆ. 2009ರಲ್ಲಿ 'ಪ್ರಜಾವಾಣಿ'ಯ ದೀಪಾವಳಿ ಕಾವ್ಯ ಸ್ಪರ್ಧೆಯಲ್ಲಿ ಈ ಕವಿತೆಗೆ ಪ್ರಥಮ ಬಹುಮಾನ ಬಂದಿತ್ತು. ಗಣರಾಜ್ಯೋತ್ಸವದ ಹಿಂದಿನ ದಿನ ಅಂದರೆ 25ರ ರಾತ್ರಿ ರಾಷ್ಟ್ರಪತಿ ಭಾಷಣದ ಬಳಿಕ ರಾತ್ರಿ 10 ಗಂಟೆಯಿಂದ 11.45ರ ಅವಧಿಯಲ್ಲಿ ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಕವಿ ಸಮ್ಮೇಳನ ಪ್ರಸಾರವಾಗಲಿದೆ.

ಮಹಾದೇವ ಶಂಕನಪುರ


ಪ್ರಜಾವಾಣಿ

## ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

**RENTAL PROPERTIES**

**Accommodation Wanted**

**Flat**

**NEED 1** BHK ground floor lease/ rent around MM layout/ Kavalbysandra/ LR Bhande/ Sultha Palya Contact 9113007837

**REAL ESTATE SELLING**

**Agricultural Land Converted**

**Whitefield**

**SALE ONLY** : 1.70 LAKH SQ. FT. CORNER, RECTANGULAR PLOT ; SINGLE OWNER. BOUNDARIES NH & MDR ; BROKERS EXCUSE. FINANCIALLY STRONG BUYERS INVITED. EMAIL LANDSELLER2022@GMAIL.COM

**Commercial Building**

**Nandini Layout**

**SALE/ LEASE** Commercial Building with locking Rent: 1.50 lac. PM 5% + PABDA, 30×40, G + 4 Floor. N/E Corner. Owner-7483498845.

**Flat**

**Bommasandra**

**LOOKING FOR** BUILDERS/ INVESTORS For Bulk Booking in Eletronic City Bommsandra, 80% Project Completed in Prime Location Surrounded in 600 Companies & Metro Station with RERA & BMRDA Approved, A Katha with 1/ 2/ 3 BHK Apartment with Assured Profit. Contact: 9108910278/ 9741832215

**Basavanagudi**

**DUPLEX FLAT** For Sale In Tata Silk Farm, Thyagarajanagara, Bengaluru.Contact : 8971660799.

**Vasanth Nagar**

**2 BHK** flat for sale at palace cross Road, Vasanthnagar, East facing, 1 Covered car park. Gated community, 1262 sqft. 9845493251/ 9449009325

**House**

**Banashankari**

**30X50- SITE** with HOUSE 'A'Katha For Sale at Hosakerehalli, BSK 3rd Stage. Contact: 9845805183

**HAL And Around**

**GEETHANJALI LAYOUT** HAL 3rd Stage Near Mother Mary School 829, 2nd Main Contact: 9886094370

**J P Nagar**

**SALE: J.P.NAGAR** 5th Phase, FOREST Road, Ground+ 2 Floors on 20x30 N/F. Rs. 85 Lakhs. Contact: LEO. 93437-28200

**Sites**

**Vishweshwariah Layout**

**AVAILABLE/ WANTED,** BDA Sites in Vishweshwaraiah Layout, Kempegowda Layout, 20x30, 30x40, 40x60, 50x80 Contact: Genuine Buyers/ Sellers For Immediate Settlement: 8892901567/ 9341733480.

**AVAILABLE BDA** Vishveswaraya Layout 2nd Block 30x40. North Facing 6th Block 20x30 South Facing Full Development Place: 9481703468

**JOB OPPORTUNITIES**

**Accounts & Finance**

**WANTED FEMALE** Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

**General**

**"WANTED FEMALE** Live-in Partner within 30 years without dependent for a Senior Citizen. Contact: 8088174438"

**OPPORTUNITY WORK** from Home, Banking, Kalyani Motors, Accounts, Salary 16000/-, 24000/- SSLC, PUC, Degree. 7022920578.

**WANTED SPARE** Parts Assistant for Two Wheeler Showroom in Koramangala. Salary: 15K-20K. Contact : 9945083900.

**Multiple Vacancy**

**REQUIRED IMMEDIATELY:** 1) Accounts Officer : B.Com with experience in Construction Industry. 2) HR Officer : Graduate with knowledge of Compensation Administration and HRM Software. Minimum 3 to 6 years experience. Contact: 98458 75796 / 99860 41188.

**REQUIRED IMMEDIATELY:** 1) BE/Diploma Civil Site Engineer. 2) Plumber and 3) Electrician with experience in Building Works. Minimum 3 to 6 years experience. Contact: 98458 75796 / 99860 41188.

**Part-Time Jobs**

**REPUTED MNC** Company Provide Work From Home to 30 to 35K at Malleswaram: 7019215243/ 9886641282

**Wanted**

**WANTED HOT** Chamber Pressure Die-Casting Operators for a Company in Electronic City 2nd Phase 9448481947/ 9448376584 : magraa@magraa.in

**WANTED ITI** Holders for Assembly, Fitting & Operator Job for a Private Limited Company in Prakash Nagar, Bangalore: 9448481947/ 9448376584: magraa@magraa.in

**BUSINESS**

**Business Offers**

**Finance**

**FINANCE AGAINST** Land & Building Properties Industries Schools Hospitals Projects & NRIFunds 7358729820

**PUBLIC NOTICE**

ಮಿತ್ಸುಬಿಶಿ ಇಲೆವೇಟರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
ನಂ.5, ರಾಜಭವನ ರಸ್ತೆ, 7ನೇ ಮಹಡಿ, ಪ್ರೆಸ್ಟೀಜ್ ಖೋಡೆ ಟವರ್, ಬೆಂಗಳೂರು–560001

ಸಾರ್ವಜನಿಕ ಪ್ರಕಟಣೆ

ದಿನಾಂಕ 25 ನವಂಬರ್ 2019 ರಿಂದ ಮೈಂಟೇನನ್ಸ್ ಸೆಕ್ಷನ್‌ನಲ್ಲಿ ಎಸ್‌ಇ–ಎ ಟೆಕ್ನಿಷಿಯನ್ ಎಂದು ಕಾರ್ಯನಿರ್ವಹಿಸುತ್ತಿದ್ದ ಶ್ರೀ. ಬಾಲಸುಬ್ರಮಣಿಯನ್ ಕೆ. (TB3447) ರವರು 23 ಅಕ್ಟೋಬರ್ 2021 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಕಂಪನಿಯು ತನ್ನ ದಾಖಲೆಗಳಲ್ಲಿ ಲಭ್ಯವಿರುವ ಇವರ ವಿಳಾಸಕ್ಕೆ ಹಲವಾರು ಶೋಕಾಸ್ ನೋಟಿಸ್‌ಗಳನ್ನು ಹೊರಡಿ ಸಲಾಗಿದ್ದು, ಸದರಿ ಉದ್ಯೋಗಿಯು ಅವುಗಳನ್ನು ಸ್ವೀಕರಿಸಿದ್ದರೂ ಕೂಡ, ತಹಲ್ ದಿನಾಂಕದವರೆಗೆ ಯಾವುದೇ ರೀತಿಯ ಲಿಖಿತ ಅಥವಾ ಮೌಖಿಕ ರೂಪದಲ್ಲಿ ಪ್ರತಿಕ್ರಿಯೆ ನೀಡಿರುವುದಿಲ್ಲ. ಆದ್ದರಿಂದ, ಇದೀಗ ಸದರಿ ಪ್ರಕಟಣೆಯ ಮೂಲಕ ಮೇಲ್ಕಂಡ ಉದ್ಯೋಗಿಗೆ ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 3 ದಿನಗಳೊಳಗೆ ಕರ್ತವ್ಯಕ್ಕೆ ಹಾಜರಾಗಬೇಕು ಮತ್ತು ನಿಮ್ಮ ನಡವಳಿಕೆಯ ಕುರಿತು ವಿವರಣೆ ನೀಡಬೇಕೆಂದು ಸೂಚಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ಸದರಿ ಉದ್ಯೋಗಿಯು ತಮ್ಮ ಸ್ವಇಚ್ಛೆಯಿಂದ ಕಂಪನಿ ಸೇವೆಯನ್ನು ತ್ಯಜಿಸಿದ್ದಾರೆ ಎಂದು ಪರಿಗಣಿಸಲಾಗುತ್ತದೆ ಹಾಗೂ ಅದೇ ಪ್ರಕರವಾಗಿ ಆದೇಶ ಹೊರಡಿಸಲಾಗುತ್ತದೆ.
ಸ್ಥಳ: ಬೆಂಗಳೂರು
ದಿನಾಂಕ: 21.01.2022

**PUBLIC NOTICE**

Notice is hereby given that counterfoils of 3 (three) F Forms bearing serial numbers **0142713, 0142714 and 0142715** dated June 10, 2019 issued by **Uttar Pradesh Sales Tax Department to General Motors Technical Centre India Private Limited** have been misplaced or lost. Notice is hereby given to the public that in the event any person finds the aforesaid counterfoils then the finder may please contact **Mr. P R Subramanyam C/o. General Motors Technical Centre India Private Limited,** ITPL, 5th Floor, Creator Building, Whitefield Road, Bangalore-560066, **Mobile: +91 90089 33885.**

**EDUCATIONAL**

**Admission**

**ONE SITTING:** LL.B, B.TECH, M.TECH, DIPLOMA, MBA, MCA, M.Sc, BBA, BCA, B.Sc, B.Com, B.PHARM, GNM, MLT, PU, SSLC. Asha Institute, Bangalore. Ph: 9448460103/ 7093438248.

**MATRIMONIAL**

**Brides Wanted**

**English**

**HANDSOME PUNJABI** 33yr 6' 40L+ seeks alliance from tall educated girl of reputed families: bride480@gmail.com

**PERSONAL**

**Change of Name**

**I, NO.** 6920064N Rank: EX-NK, Name: Chinnaraji. M residing at No. 7, 3rd Cross, 1st Stage, Gowthampuram, Halasuru, Bangalore-560008 have changed my daughter name from C. MARINA LISA to C. MERINA LISA vide affidavit dated 18.01.2022 at Bangalore before A.R. Muneer Ahmed, Advocate/ Notary Public.

**I, TEJASHRI** NAGAPPA VIJAPURE (DOB: 10.09.1995) D/o. Nagappa, R/a #23, Sri Ganesha Nilaya, SNS Arcade Road, Konena Agrahara, Bangalore- 560017 After Marriage Have Changed My Name to TEJASHRI SIDHARAM GANGADE vide Affidavit Dated: 05.01.2022 before Notary Sreedharan Nair P.N. Bangalore.

**I, DRISHYA** SANGEETHA PANICKKAR, Residing #H403, Nandi Citadel Akshyavana, Akshayanagar, Near Vibgyor School, Chandrashekarapura, Bangalore-76, have changed my name to DRISHYA. S. PANIKKAR, vide affidavit dated 19.01.2022, before H.G. Venkataramu, Notary, Bangalore.

**I, NIRAJKUMAR** BAJAJ residing at C403, August Park Apartment, 1st A cross, Kaggadasapura main road, C.V.Ramannagar, Bangalore-93, have changed my name to NIRAJ BAJAJ vide affidavit dated 20-01-2022, before notary L.Gopalakrishna, Bangalore.

**I, RESHMA** A have changed my name to RESHMA vide affidavit dated: 18/1/2022 Before Notary Manohar Jeerige Bangalore

**I, SURESH** have changed my name to SURESH CR vide affidavit dated: 18/1/2022 Before Notary Manohar Jeerige Bangalore

**I, MOHAMMED** HAYATH SHARIEF R/at No. 318/26 GMRA Layout Next To Narayana Iyengar Layout Anekal Bengalore -562106 hereby declare that my names MOHAMMED HAYATH SHARIEF @ FAYAZ PASHA both the names belong me only Vide affidavit dated: 30/09/2020 before notary K.Parthiban Tamilnadu

**CAUTION NOTICE**

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

DH DECCAN HERALD ಪ್ರಜಾವಾಣಿ

**BOOK YOUR REAL ESTATE**

Classified Advertisement In Deccan Herald & Prajavani

**SATURDAY & SUNDAY COMBO OFFER**

| Ordinary Per word | Bold Per word | Ordinary Semi Display Per word | Bold Semi Display Per word | Single Col CD Per sqcm |
|---|---|---|---|---|
| 80 | 125 | 95 | 155 | 570 |

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

condition apply*

### ಮೇಕೆದಾಟು ಅಣೆಕಟ್ಟು ನಿರ್ಮಾಣದಿಂದ ವನ್ಯಸಂಪತ್ತು ವೃದ್ಧಿ: ಡಿ.ಕೆ. ಸುರೇಶ್

# ‘ಯೋಜನೆಗೆ ಅನುಮೋದನೆ ಸಿಕ್ಕರೆ ಪಾದಯಾತ್ರೆ ಸ್ಥಗಿತ’

• ಗುರು ಪಿ.ಎಸ್.

**ಬೆಂಗಳೂರು:** ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆಗೆ ಕೇಂದ್ರ ಸರ್ಕಾರವು ಕೋವಿಡ್ ಬಿಕ್ಕಟ್ಟು ಮುಗಿಯು-ವುದರೊಳಗೇ ಅನುಮೋದನೆ ನೀಡಿದರೆ ಪಾದ-ಯಾತ್ರೆಯನ್ನು ಮುಂದುವರಿಸುವು-ದಿಲ್ಲ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಹೇಳಿದರು.

ಡಿ.ಕೆ. ಸುರೇಶ್

‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ಪಾದಯಾತ್ರೆಯೇ ನಮ್ಮ ಉದ್ದೇಶವಲ್ಲ. ಸರ್ಕಾರದ ಗಮನ ಸೆಳೆಯಬೇಕಾಗಿತ್ತು. ಅದರಲ್ಲಿ ಯಶಸ್ವಿಯಾಗಿದ್ದೇವೆ. ಯೋಜನೆಗೆ ಅನುಮೋದನೆ ನೀಡಿದರೆ ಕೇಂದ್ರಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇವೆ’ ಎಂದರು.

**ಸಂದರ್ಶನದ ಸಂಕ್ಷಿಪ್ತ ಭಾಗ ಇಲ್ಲಿದೆ:**

• **ಈ ಯೋಜನೆಯಿಂದ ಗುತ್ತಿಗೆದಾರರಿಗೆ, ರಾಜಕಾರಣಿಗಳಿಗೆ ಮಾತ್ರ ಲಾಭ, ಪರಿಸರಕ್ಕೆ ಹಾನಿ ಎಂಬುದು ಪರಿಸರವಾದಿಗಳ ಆಕ್ಷೇಪ.**

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ

ಪರಿಸರವಾದಿಗಳಿಗೆ ಕೆಲವು ಸಮಸ್ಯೆಗಳಿವೆ. ಜನರಿಗೆ ಹಲವು ಸಮಸ್ಯೆಗಳಿವೆ. ಬೆಂಗಳೂರು ಬೆಳೆಯುವುದನ್ನು ನಿಯಂತ್ರಿಸಲು ಯಾರಿಂದಲೂ ಸಾಧ್ಯವಿಲ್ಲ. ಕೆಂಪೇಗೌಡರ ಕಾಲದಲ್ಲಿ ಬೆಂಗಳೂರಿನಲ್ಲಿ 15 ಲಕ್ಷದಿಂದ 20 ಲಕ್ಷ ಜನರಿದ್ದರು. ಆಗಿನ ಕೆರೆ–ಕಟ್ಟೆಗಳ ನೀರು ಎಲ್ಲರಿಗೂ ಸಾಕಾಗುತ್ತಿತ್ತು. ಈಗ 1.40 ಕೋಟಿ ಜನರಿದ್ದಾರೆ. ಅವರೆಲ್ಲರಿಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕು ಎಂದರೆ ಈ ಯೋಜನೆ ಅಗತ್ಯ. ಅಣೆಕಟ್ಟು ನಿರ್ಮಾಣದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ವನ್ಯಸಂಪತ್ತು ವೃದ್ಧಿಯಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ನಿರ್ಮಾಣವಾದ ಕಬಿನಿ ಜಲಾಶಯದ ಸುತ್ತ–ಮುತ್ತ ಆಗಿರುವ ಬದಲಾವಣೆ ನೋಡಿದರೆ, ಮೇಕೆದಾಟು ಅಣೆಕಟ್ಟು ಎಷ್ಟು ಅವಶ್ಯಕ ಎಂಬುದು ತಿಳಿಯುತ್ತದೆ.

• **ತಮಿಳುನಾಡಿನಲ್ಲಿ ನಿಮ್ಮದೇ ಮಿತ್ರಪಕ್ಷ ಡಿಎಂಕೆ ಅಧಿಕಾರದಲ್ಲಿದೆ. ಆ ಸರ್ಕಾರದ ಮನವೊಲಿಸಿದ್ದರೆ ಪಾದಯಾತ್ರೆಯ ಅವಶ್ಯಕತೆಯೇ ಇರಲಿಲ್ಲವಲ್ಲ**

ಮೇಕೆದಾಟು ಯೋಜನೆ ಅನುಷ್ಠಾನಗೊಳಿಸಬೇಕಾಗಿರುವುದು ಕರ್ನಾಟಕದಲ್ಲಿ. ನಮ್ಮ ನೀರನ್ನು ಬಳಸುವುದಕ್ಕೆ ಆ ರಾಜ್ಯದ ಅನುಮತಿಯ ಅಗತ್ಯವೇ ಇಲ್ಲ. ಅವರ ಕಾವೇರಿ ನೀರಿನ ಪಾಲನ್ನು ಕೊಡುತ್ತೇವೆ ಎಂದು ನಾವು ಸುಪ್ರೀಂ ಕೋರ್ಟ್‌ಗೆ ಹೇಳಿದ್ದೇವೆ. ವ್ಯರ್ಥವಾಗಿ ಸಮುದ್ರಕ್ಕೆ ಹರಿದು ಹೋಗುವ ನೀರನ್ನು ಮೇಕೆದಾಟು ಅಣೆಕಟ್ಟೆ ಮೂಲಕ ಬಳಸಿಕೊಳ್ಳುತ್ತೇವೆ. ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಅಗತ್ಯವಿದೆಯೇ ವಿನಾ ತಮಿಳುನಾಡು ಸರ್ಕಾರದ್ದಲ್ಲ.

• **ಉತ್ತರ ಕರ್ನಾಟಕದ ಕುಡಿಯುವ ನೀರಿನ ಯೋಜನೆಗಳಿಗೂ ಕಾಂಗ್ರೆಸ್ ಇಷ್ಟೇ ಆಸಕ್ತಿಯಿಂದ ಹೋರಾಟ ಮಾಡಲಿದೆಯೇ ?**

ಪಕ್ಷದ ವೇದಿಕೆಯಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ಕೇಂದ್ರಸರ್ಕಾರವು ಗಡುವಿನೊಳಗೆ ಈ ಯೋಜನೆಗಳನ್ನು ಅನುಷ್ಠಾನಗೊಳಿಸದಿದ್ದರೆ ಕಾಂಗ್ರೆಸ್‌ನಿಂದ ಹೋರಾಟ ಹಮ್ಮಿಕೊಳ್ಳುತ್ತೇವೆ

• **ಅಭಿವೃದ್ಧಿ ವಿಚಾರಗಳ ಬದಲಿಗೆ, ‘ಗಂಡಸುತನ’ ಎಂಬ ಪದ ಪ್ರಯೋಗಗಳ ಮೂಲಕ ನಾಯಕರು ಬೀದಿ ಜಗಳವಾಡುವುದು ಎಷ್ಟು ಸರಿ ?**

ಗಂಡಸುತನಕ್ಕೆ ಸವಾಲು ಹಾಕಿದರೂ ಸುಮ್ಮನಿರಬೇಕೇ ? ಅಭಿವೃದ್ಧಿ ವಿಚಾರದ ಬಗ್ಗೆ ಮಾತನಾಡುವ ಅಶ್ವತ್ಥನಾರಾಯಣ ಅವರು ರಾಮನಗರಕ್ಕೆ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಬರುವುದನ್ನು ತಡೆಯುತ್ತಿದ್ದಾರೆ. ಮುಂದೆ ಜನರೇ ಅವರಿಗೆ ತಕ್ಕ ಉತ್ತರ ನೀಡಲಿದ್ದಾರೆ

• **ಮುಂದೆ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆಯೇ?**

ಜನರ ಅಭಿಪ್ರಾಯ ಆ ರೀತಿ ಇದೆ. ಆದರೆ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಡಾ.ಜಿ. ಪರಮೇಶ್ವರ್, ಆರ್.ವಿ. ದೇಶಪಾಂಡೆ, ಎಂ.ಬಿ. ಪಾಟೀಲರಂತಹ ಹಿರಿಯ ನಾಯಕರೂ ಪಕ್ಷದಲ್ಲಿದ್ದಾರೆ. ಈ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ.

## ಲಾರಿ ಡಿಕ್ಕಿ: ಪಾದಚಾರಿ ಸಾವು

**ಬೆಂಗಳೂರು:** ಕಾಂಕ್ರೀಟ್ ಮಿಶ್ರಣ ಮಾಡುವ ಲಾರಿ ಡಿಕ್ಕಿಯಾಗಿ ಪಾದಚಾರಿಯೊಬ್ಬರು ಮೃತಪಟ್ಟಿದ್ದಾರೆ. ಈ ಸಂಬಂಧ ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮೃತ ವ್ಯಕ್ತಿಯು ಉತ್ತರ ಪ್ರದೇಶ ಮೂಲದವರು ಎಂದು ಹೇಳಲಾಗಿದೆ. ಅವರ ಹೆಸರು ಹಾಗೂ ವಿಳಾಸ ಗೊತ್ತಾಗಿಲ್ಲ. ಲಾರಿ ಚಾಲಕನನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದೇವೆ’ ಎಂದು ಪೊಲೀಸರು ಹೇಳಿದ್ದಾರೆ.

‘ರಘುವನಹಳ್ಳಿ ಬಳಿ ಓಡಾಡುತ್ತಿದ್ದ ವ್ಯಕ್ತಿಯನ್ನು ಗುರುವಾರ ‘ಸ್ವಿಗ್ಗಿ’ ಡೆಲಿವರಿ ಬಾಯ್ ನೋಡಿ ವಿಚಾರಿಸಿದ್ದಾರೆ. ಆಹಾರ ನೀಡಿ ಉಪಚರಿಸಿ ಹೋಗಿದ್ದಾರೆ. ಮಧ್ಯಾಹ್ನ 1 ಗಂಟೆ ಸುಮಾರಿಗೆ ಮೃತ ವ್ಯಕ್ತಿಯು ರಘುವನಹಳ್ಳಿಯ 80 ಅಡಿ ರಸ್ತೆ ಸಮೀಪದ ಹಳ್ಳಿ ತೋಟ ಬಳಿ ರಸ್ತೆ ದಾಟುತ್ತಿದ್ದಾಗ ಲಾರಿ ಡಿಕ್ಕಿಯಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

## ರಾಜ್ಯದಲ್ಲಿ ಇನ್ನೊಂದು ವರ್ಷದಲ್ಲಿ ಎವಿಜಿಸಿ ನೀತಿ: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ಡಿಜಿಟಲ್ ಮನೋರಂಜನಾ ಕ್ಷೇತ್ರವು ಅಗಾಧವಾಗಿ ಬೆಳೆಯುತ್ತಿದ್ದು, ಒಂದು ವರ್ಷದಲ್ಲಿ ನೂತನ ‘ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ ನೀತಿ’ (ಎವಿಜಿಸಿ ಪಾಲಿಸಿ)ಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗುವುದು ಎಂದು ಐಟಿ– ಬಿಟಿ ಮತ್ತು ಕೌಶಲ ಅಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಕೆ.ಆರ್.ಪುರ ಸಮೀಪದ ಗರುಡಚಾರಪಾಳ್ಯದಲ್ಲಿ ದೇಶದ ಪ್ರಪ್ರಥಮ ಮತ್ತು ಏಷ್ಯಾದ ಅತಿದೊಡ್ಡ ’ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ ಉತ್ಕೃಷ್ಟತಾ ಕೇಂದ್ರ’ಕ್ಕೆ (ಎವಿಜಿಸಿ ಸೆಂಟರ್ ಆಫ್ ಎಕ್ಸಲೆನ್ಸ್) ಗುರುವಾರ ಚಾಲನೆ ನೀಡಿ ಮಾತನಾಡಿದರು.

’ಡಿಜಿಟಲ್ ಮಾಧ್ಯಮ ಮನೋರಂಜನಾ ಪ್ರದೇಶ’ವನ್ನು ಕೂಡ ಇನ್ನು ಒಂದು ವರ್ಷದಲ್ಲಿ ಮಹದೇವಪುರದ ಸಮೀಪ ಸ್ಥಾಪಿಸಲಾಗುವುದು. ಇದಕ್ಕೆ ಅಗತ್ಯ ಭೂಮಿ ಗುರುತಿಸುವಂತೆ ಕೈಗಾರಿಕಾ ಇಲಾಖೆಗೆ ಹೇಳಲಾಗುವುದು ಎಂದರು.

ಕೇಂದ್ರವನ್ನು ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಉದ್ಘಾಟಿಸಿದರು. ಶಾಸಕ ಅರವಿಂದ ಲಿಂಬಾವಳಿ, ಬಿರೇನ್ ಘೋಷ್, ಬಿಜೆಪಿ ಮುಖಂಡರಾದ ಅನಂತರಾಮಯ್ಯ, ಮನೋಹರರೆಡ್ಡಿ, ಹೂಡಿ ಪಿಳ್ಳಪ್ಪ ಇದ್ದರು

ಶಾಸಕ ಅರವಿಂದ ಲಿಂಬಾವಳಿ, ’ಎವಿಜಿಸಿ ಕೇಂದ್ರವು ಏಷ್ಯಾದ ಅತ್ಯಂತ ವಿಸ್ತೃತ ಮತ್ತು ಆಧುನಿಕ ಪ್ರಯೋಗಾಲಯ ಮತ್ತು ತರಬೇತಿ ಕೇಂದ್ರವಾಗಿದ್ದು, ಇಲ್ಲಿ ಆಡಿಯೋ ವೀಡಿಯೋ ತಂತ್ರಜ್ಞಾನ, ಮೋಷನ್ ಕ್ಯಾಪ್ಚರ್ ತಂತ್ರಜ್ಞಾನ, 3ಡಿ ಸ್ಕ್ಯಾನ್ ಗಳಂತಹ ಅತ್ಯಾಧುನಿಕ ತಂತ್ರಜ್ಞಾನಗಳು ಲಭ್ಯವಿದೆ‘ ಎಂದರು.

### ರಾಜಕೀಯ ಶಿಸ್ತು ಉಲ್ಲಂಘಿಸಿದರೆ ನಿರ್ದಾಕ್ಷಿಣ್ಯ ಕ್ರಮ– ಡಿ.ಕೆ.ಶಿವಕುಮಾರ್

## ನಲಪಾಡ್ ಹಲ್ಲೆ: ಆರೋಪ ಸುಳ್ಳು– ಸಿದ್ದು ಹಳ್ಳೇಗೌಡ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಳ್ಳಾರಿ ಗ್ರಾಮೀಣ ಯುವ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಹಳ್ಳೇಗೌಡ ಮೇಲೆ ಶಾಸಕ ಎನ್.ಎ. ಹ್ಯಾರಿಸ್ ಪುತ್ರ ಮೊಹಮ್ಮದ್ ನಲಪಾಡ್ ಹಲ್ಲೆ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಆದರೆ, ಹಲ್ಲೆ ನಡೆದಿಲ್ಲ ಎಂದು ಸ್ಪಷ್ಟನೆ ನೀಡಿರುವ ಸಿದ್ದು ಹಳ್ಳೇಗೌಡ, ‘ಹಲ್ಲೆ ನಡೆದಿದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಇದು ಬಿಜೆಪಿಯವರ ಷಡ್ಯಂತ್ರ. ಯುವ ಕಾಂಗ್ರೆಸ್‌ನಲ್ಲಿ ನಾವೆಲ್ಲರೂ ಒಂದೇ ಕುಟುಂಬದಂತೆ ಇದ್ದೇವೆ’ ಎಂದಿದ್ದಾರೆ.

ನಗರದ ಜೆ. ಡಬ್ಲ್ಯು ಮ್ಯಾರಿಯೆಟ್ ಹೋಟೆಲ್‌ನಲ್ಲಿ ಬುಧವಾರ ಮಧ್ಯಾಹ್ನ ಯುವ ಕಾಂಗ್ರೆಸ್ ಜಿಲ್ಲಾ ಘಟಕಗಳ ಅಧ್ಯಕ್ಷರ ಜೊತೆ ನಲಪಾಡ್ ಸಭೆ ನಡೆಸಿದ್ದರು. ಆ ವೇಳೆ, ಮುಂದಿನ ಅಧ್ಯಕ್ಷರಾಗಿ ಫೆಬ್ರುವರಿ 1ರಂದು ಪ್ರಮಾಣವಚನ ತೆಗೆದುಕೊಳ್ಳುವ ಬಗ್ಗೆ ಅವರು ಪ್ರಸ್ತಾಪಿಸಿದ್ದರು. ಯಲಹಂಕದ ಕ್ಲಬ್ ಒಂದರಲ್ಲಿ ರಾತ್ರಿಯ ಭೋಜನಕ್ಕೆ ಎಲ್ಲರೂ ಮತ್ತೆ ಸೇರಿದ್ದರು. ಈ ವೇಳೆ ಹಲ್ಲೆ ನಡೆದಿದೆ ಎನ್ನಲಾಗಿದೆ.

‘ಹಲ್ಲೆ ವಿಚಾರವಾಗಿ ನನ್ನ ಪಾತ್ರ ಏನೂ ಇಲ್ಲ. ಹುಡುಗರು ಏನೋ ಗಲಾಟೆ ಮಾಡಿಕೊಂಡಿರಬೇಕು. ಗುರುವಾರ ಬೆಳಿಗ್ಗೆ ಈ ವಿಷಯ ನನಗೆ ಗೊತ್ತಾಗಿದೆ. ನಲಪಾಡ್‌ದು ಏನೂ ತಪ್ಪು ಇಲ್ಲ ಎಂದು ಅವರೇ (ಸಿದ್ದು ಹಳ್ಳೇಗೌಡ) ಸ್ಪಷ್ಟಪಡಿಸಿದ್ದಾರೆ’ ಎಂದು ನಲಪಾಡ್ ತಿಳಿಸಿದ್ದಾರೆ.

ಯುವ ಕಾಂಗ್ರೆಸ್‌ನಲ್ಲಿ ಗಲಾಟೆ ನಡೆದಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ರಾಜ್ಯ ಯುವ ಕಾಂಗ್ರೆಸ್ ಘಟಕದಲ್ಲಿ ಯಾವುದೇ ಗಲಾಟೆ ಆಗಿಲ್ಲ. ನಾನು ಆ ಹುಡುಗನ ಬಳಿ ಮಾತನಾಡಿದ್ದೇನೆ. ಯಾರಾದರೂ ಕೆಲಸ ಮಾಡುತ್ತಿದ್ದಾರೆ ಎಂದರೆ ಅಂಥವರ ವಿರುದ್ಧ ಈ ರೀತಿ ಆರೋಪಗಳನ್ನು ಮಾಡುತ್ತಲೇ ಇರುತ್ತಾರೆ. ಈ ಘಟನೆ ಹಿಂದೆ ನಲಪಾಡ್ ಇಲ್ಲ, ಬೇರೆ ಯಾರೂ ಇಲ್ಲ. ರಾಜಕೀಯವಾಗಿ ಯಾರಾದರೂ ಶಿಸ್ತು ಉಲ್ಲಂಘಿಸಿದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ. ಆದರೆ, ಅವರ ವೈಯಕ್ತಿಕ ವಿಚಾರದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ’ ಎಂದರು.

## ಮಹಿಳೆಗೆ ಬ್ಲ್ಯಾಕ್‌ಮೇಲ್: ‘ಆನ್‌ಲೈನ್ ವರ’ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವೈವಾಹಿಕ ಜಾಲತಾಣದ ಮೂಲಕ ಪರಿಚಯವಾಗಿದ್ದ ಮಹಿಳೆಯೊಬ್ಬರನ್ನು ಮದುವೆಯಾಗುವುದಾಗಿ ನಂಬಿಸಿ, ಆಕೆಯೊಂದಿಗಿನ ಖಾಸಗಿ ಕ್ಷಣಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದು ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಿದ್ದ ಆರೋಪಿಯನ್ನು ಈಶಾನ್ಯ ವಿಭಾಗದ ಸೆನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಾಜಿನಗರ ವ್ಯಾಪ್ತಿಯ ಶಿವನಗರ ನಿವಾಸಿ ಎಸ್.ವಿಜಯಕುಮಾರ್ ಯಾನೆ ವಿಜಿ (40) ಬಂಧಿತ.

‘ದೂರುದಾರ ಮಹಿಳೆಯು ಕನ್ನಡ ಮ್ಯಾಟ್ರಿಮೋನಿ ಡಾಟ್ ಕಾಂ ಜಾಲತಾಣದಲ್ಲಿ ಪ್ರೊಫೈಲ್ ಸೃಷ್ಟಿಸಿದ್ದರು. ಆರೋಪಿ ಕೂಡ ಈ ಜಾಲತಾಣದಲ್ಲಿ ಪ್ರೊಫೈಲ್ ಹೊಂದಿದ್ದ. ಅಲ್ಲಿ ಮಹಿಳೆಯನ್ನು ಪರಿಚಯ ಮಾಡಿಕೊಂಡಿದ್ದ ಆತ ಮದುವೆಯಾಗುವುದಾಗಿ ನಂಬಿಸಿದ್ದ. ಬಳಿಕ ಇಬ್ಬರೂ ಆಗಾಗ ಭೇಟಿ ಮಾಡುತ್ತಿದ್ದರು. ಈ ವೇಳೆ ಮಹಿಳೆಯೊಂದಿಗೆ ಸಲುಗೆಯಿಂದ ವರ್ತಿಸಿದ್ದ ಆತ ಆಪ್ತ ಕ್ಷಣಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದ’ ಎಂದು ಪೊಲೀಸರು ಹೇಳಿದ್ದಾರೆ.

### ಇನ್‌ಸ್ಪೆಕ್ಟರ್‌ರಿಂದ ಮಹಿಳೆಗೆ ಲೈಂಗಿಕ ಕಿರುಕುಳ ಆರೋಪ: ತನಿಖೆಗೆ ಆದೇಶ

**ಬೆಂಗಳೂರು:** ದೂರು ನೀಡಲು ಹೋದಾಗ ಹೆಣ್ಣೂರು ಠಾಣೆಯ ಇನ್‌ಸ್ಪೆಕ್ಟರ್ ವಸಂತ್‌ಕುಮಾರ್ ತನಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಮಹಿಳೆಯೊಬ್ಬರು ಆರೋಪಿಸಿದ್ದು, ಈ ಕುರಿತು ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಆದೇಶಿಸಿದ್ದಾರೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುವಂತೆ ಸೂಚಿಸಿರುವ ಕಮಲ್ ಪಂತ್, ತನಿಖೆಯ ಹೊಣೆಯನ್ನು ಪೂರ್ವ ವಿಭಾಗದ ಡಿಸಿಪಿ ಎಸ್.ಡಿ.ಶರಣಪ್ಪ ಅವರಿಗೆ ವಹಿಸಿದ್ದಾರೆ.

‘ಮನೆಯಲ್ಲಿ ಭೋಗ್ಯಕ್ಕೆ ಇದ್ದವರು ಹಲ್ಲೆ ನಡೆಸಿದ್ದರ ಕುರಿತು ದೂರು ನೀಡಲು ಹೋದಾಗ ಇನ್‌ಸ್ಪೆಕ್ಟರ್ ಅಸಭ್ಯವಾಗಿ ವರ್ತಿಸಿದ್ದರು. ಪ್ರತಿವಾದಿಗಳಿಗೆ ಕುಮ್ಮಕ್ಕು ನೀಡಿ ನನ್ನ ಮೇಲೆ ಪ್ರತಿದೂರು ದಾಖಲಿಸುವಂತೆ ಮಾಡಿದ್ದರು. ದೌರ್ಜನ್ಯ ಪ್ರಕರಣವನ್ನೂ ದಾಖಲಿಸಿದ್ದರು. ಜಾಮೀನು ಪಡೆದಿದ್ದರೂ ಪದೇ ಪದೇ ಠಾಣೆಗೆ ಕರೆಯುತ್ತಿದ್ದರು. ಕೊಠಡಿಗೆ ಕರೆದು ಕೈ ಹಿಡಿದು ಎಳೆದಾಡಿದ್ದರು. ನೀನು ನನಗೆ ಬೇಕೇ ಬೇಕು. ಕರೆದಲ್ಲೆಲ್ಲಾ ಬರಬೇಕು ಎಂದು ಪೀಡಿಸುತ್ತಿದ್ದಾರೆ’ ಎಂದು ಸಂತ್ರಸ್ತ ಮಹಿಳೆಯು ಪೊಲೀಸ್ ಕಮಿಷನರ್‌ಗೆ ಬರೆದ ಪತ್ರದಲ್ಲಿ ಅಳಲು ತೋಡಿಕೊಂಡಿದ್ದರು.

‘ಕೆಲ ದಿನಗಳ ನಂತರ ಆರೋಪಿಯು ₹50 ಸಾವಿರ ಮೊತ್ತಕ್ಕೆ ಬೇಡಿಕೆ ಇಟ್ಟಿದ್ದ. ಹಣ ಕೊಡದಿದ್ದರೆ ತಮ್ಮಿಬ್ಬರ ಖಾಸಗಿ ಕ್ಷಣಗಳ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕುವುದಾಗಿ ಬೆದರಿಸಿದ್ದ. ಹಣ ನೀಡಲು ಮಹಿಳೆ ನಿರಾಕರಿಸಿದ್ದರು. ಇದರಿಂದ ಸಿಟ್ಟಿಗೆದ್ದಿದ್ದ ಆತ ಮಹಿಳೆಯ ಹೆಸರಿನಲ್ಲೇ ಇನ್‌ಸ್ಟಾಗ್ರಾಮ್‌ನಲ್ಲಿ ಮೂರು ನಕಲಿ ಖಾತೆಗಳನ್ನು ಸೃಷ್ಟಿಸಿದ್ದ. ತಮ್ಮಿಬ್ಬರ ಚಿತ್ರಗಳನ್ನು ಪ್ರೊಫೈಲ್‌ಗೆ ಹಾಕಿದ್ದ. ಆ ಖಾತೆಗಳ ಮೂಲಕ ಮಹಿಳೆಯ ಸ್ನೇಹಿತರು ಹಾಗೂ ಸಂಬಂಧಿಕರಿಗೆ ‘ಫ್ರೆಂಡ್ ರಿಕ್ವೆಸ್ಟ್’ ಕಳುಹಿಸಿದ್ದ’ ಎಂದು ಮಾಹಿತಿ ನೀಡಿದ್ದಾರೆ.

‘ಆತನ ವರ್ತನೆಯಿಂದ ಹೆದರಿದ್ದ ಮಹಿಳೆ ‘ಫೋನ್ ಪೇ’ ಮೂಲಕ ಆರೋಪಿಯ ಖಾತೆಗೆ ₹50 ಸಾವಿರ ಹಣ ವರ್ಗಾವಣೆ ಮಾಡಿದ್ದರು. ತನ್ನ ಹೆಸರಿನಲ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ಸೃಷ್ಟಿಸಿರುವ ನಕಲಿ ಖಾತೆಗಳನ್ನೆಲ್ಲಾ ‘ಡಿಲೀಟ್’ ಮಾಡುವಂತೆ ಸೂಚಿಸಿದ್ದರು. ಹೀಗಿದ್ದರೂ ಆತ ಹಣಕ್ಕಾಗಿ ಪೀಡಿಸುವುದನ್ನು ಮುಂದುವರಿಸಿದ್ದ. ಇನ್‌ಸ್ಟಾಗ್ರಾಮ್ ಖಾತೆಗಳಿಗೆ ಇನ್ನಷ್ಟು ಚಿತ್ರಗಳನ್ನು ಹಾಕುವುದಾಗಿಯೂ ಹೆದರಿಸಿದ್ದ. ಇದರಿಂದ ನೊಂದಿದ್ದ ಮಹಿಳೆ ಠಾಣೆಗೆ ಬಂದು ದೂರು ನೀಡಿದ್ದರು’ ಎಂದು ವಿವರಿಸಿದ್ದಾರೆ.

‘ಆರೋಪಿಯು ನಗರದ ವಿದ್ಯಾರಣ್ಯಪುರದಲ್ಲಿ ಇರುವ ಮಾಹಿತಿ ಲಭಿಸಿತ್ತು. ಅದರ ಆಧಾರದಲ್ಲಿ ಇದೇ 18ರಂದು ಆತನನ್ನು ಬಂಧಿಸಲಾಯಿತು. ಆತನಿಂದ ಎರಡು ಮೊಬೈಲ್ ಹಾಗೂ ಒಂದು ಡಾಂಗಲ್ ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದ್ದಾರೆ.

## ಹಣ ಅಕ್ರಮ ವರ್ಗಾವಣೆ: ಪ್ರತ್ಯೇಕ ಪ್ರಕರಣ ದಾಖಲಿಸಿದ ಇ.ಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪುಟ್ಟೇನಹಳ್ಳಿ ಠಾಣೆಯಲ್ಲಿ ದಾಖಲಾಗಿದ್ದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಪ್ರತ್ಯೇಕ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದೆ.

‘₹1 ಲಕ್ಷ ಹಣ ಇಟ್ಟುಕೊಂಡು ಎಟಿಎಂ ಒಂದರ ಬಳಿ ನಿಂತಿದ್ದ ವ್ಯಕ್ತಿಯನ್ನು ಕೆಲ ದಿನಗಳ ಹಿಂದೆ ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದರು. ಆತನ ವಿಚಾರಣೆಯಿಂದ ಕೋಟ್ಯಂತರ ರೂಪಾಯಿ ಹಣ ಅಕ್ರಮವಾಗಿ ವರ್ಗಾವಣೆ ಮಾಡಿದ್ದ ವಿಷಯ ಬಯಲಾಗಿತ್ತು. ಆತ ನೀಡಿದ ಮಾಹಿತಿ ಆಧಾರದಲ್ಲಿ ಫೈಜಲ್, ಫಜಲ್, ಅಬ್ದುಲ್ ಮುನಾಫ್ ಹಾಗೂ ಮೊಹಮ್ಮದ್ ಸಾಲಿ ಎಂಬುವರನ್ನು ಪೊಲೀಸರು ಬಂಧಿಸಿದ್ದರು. ಆರೋಪಿಗಳು ಒಟ್ಟು 2,886 ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಿದ್ದು ವಿಚಾರಣೆಯಿಂದ ಬಯಲಾಗಿತ್ತು. ಹೀಗಾಗಿ ಜಾರಿ ನಿರ್ದೇಶನಾಲಯ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಈ ಜಾಲವು ದೇಶದಾದ್ಯಂತ ವ್ಯಾಪಿಸಿರುವ ಶಂಕೆ ಇದೆ. ಬ್ಯಾಂಕ್ ಖಾತೆದಾರರ ಮಾಹಿತಿ ಪಡೆದು ವಿಚಾರಣೆ ನಡೆಸಲಾಗಿದೆ. ಕೆಲವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಕೂಡ ನೀಡಲಾಗಿದೆ. ಕೋವಿಡ್ ನೆಪ ಮುಂದಿಟ್ಟು ಅವರು ವಿಚಾರಣೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ’ ಹೇಳಿದ್ದಾರೆ.

ಫಿಪ್ರೋಲ®
ದಿ ಮೀಟ್ ಸೂಪರ್‌ಸ್ಟೋರ್

ಬೆಂಗಳೂರು, ತಾಜಾ, ವಾಸನೆ-ಮುಕ್ತ, ಅತ್ಯಂತ ಅನುಕೂಲಕರವಾಗಿ ಮಾಂಸವನ್ನು ಖರೀದಿ ಮಾಡುವಂತಹ ಅನುಭವಕ್ಕೆ ನಿಮಗೆ ಸ್ವಾಗತ! ಮಾಂಸವನ್ನು ರಿಟೈಲ್ ರೂಪದಲ್ಲಿ ಮಾರಾಟ ಮಾಡುವ ರೀತಿಯಲ್ಲಿ ಫಿಪೋಲ ಹೊಸ ಬದಲಾವಣೆಗಳನ್ನು ಮಾಡುತ್ತಿದೆ ಮತ್ತು ಅದು ಹೇಗೆ:

ನೀವು ಮಾಂಸ ಖರೀದಿ ಮಾಡುವ ಅನುಭವಕ್ಕೆ ಒಂದು ಅರ್ಹವಾದ ನವೀಕರಣವನ್ನು ನೀಡಿ

ಒಂದೇ ಸೂರಿನಡಿ ಸೀಫುಡ್ ಚಿಕನ್ ಮತ್ತು ಮಟನ್ ವ್ಯಾಪಕ ಆಯ್ಕೆ!
ಸಮಂಜಸವಾದ ಬೆಲೆ
ಆಂತರಿಕ ಮಾನ್ಯತೆಯನ್ನು ಪಡೆದ ಲ್ಯಾಬ್, ಉತ್ಪನ್ನಗಳು ಆಂಟಿಬಯೋಟಿಕ್ಸ್, ಸಂರಕ್ಷಕಗಳು ಮತ್ತು ಫಾರ್ಮಾಲಿನ್‌ನಿಂದ ಮುಕ್ತವಾಗಿದೆ ಎಂದು ಖಚಿತಪಡಿಸುತ್ತದೆ
ಬೆಂಗಳೂರಿನಾದ್ಯಂತ 90 ನಿಮಿಷಗಳಲ್ಲಿ ಡೋರ್-ಟು-ಡೋರ್ ಡೆಲಿವರಿ
ಹವಾ-ನಿಯಂತ್ರಿತ ಮತ್ತು ವಾಸನೆ ಮುಕ್ತ ಅಂಗಡಿಗಳು

ತಾಜಾ. ಫ್ರೋಜನ್ ಅಲ್ಲ
ನೀವು ಆರ್ಡರ್ ಮಾಡಿದ ನಂತರ ಆಗಷ್ಟೇ ಕತ್ತರಿಸಲಾಗುವುದು
ಆ್ಯಂಟಿಬಯೋಟಿಕ್ ಮತ್ತು ಪ್ರಿಸರ್ವೇಟಿವ್ ಮುಕ್ತ ಮಾಂಸ
ಬೆಂಗಳೂರಿನಾದ್ಯಂತ 90 ನಿಮಿಷಗಳಲ್ಲಿ ಡೆಲಿವರಿ

ಆರಂಭಿಕ ಕೊಡುಗೆಗಳು*

ಸೀಫುಡ್ ಫ್ಲಾಟ್ 20% ಆಫ್
ಚಿಕನ್ ~~₹199/-~~ ₹169/- ಪ್ರತಿ ಕೆಜಿ
ಮಟನ್ ~~₹789/-~~ ₹699/- ಪ್ರತಿ ಕೆಜಿ
ಮ್ಯಾರಿನೇಡ್ ಮಾಂಸಗಳು ಫ್ಲಾಟ್ 50% ಆಫ್

90 ನಿಮಿಷಗಳು ಡೆಲಿವರಿ | Halal | 26 ಅಂಗಡಿಗಳು ಬೆಂಗಳೂರಿನಾದ್ಯಂತ! | ಡೆಲಿವರಿ ಶುಲ್ಕಗಳಿಲ್ಲ

* ನಿಯಮಗಳು & ಷರತ್ತುಗಳು ಅನ್ವಯಿಸುತ್ತವೆ.

ಚಿಕನ್, ಮಟನ್, ಸೀಫುಡ್, ಮ್ಯಾರಿನೇಟೆಡ್ ಮಾಂಸಗಳು, ರೆಡಿ-ಟು-ಫ್ರೈ, ಪರ್ಯಾಯ ಮಾಂಸಗಳು.

ಫಿಪೋಲಾ ಅಂಗಡಿಗಳು: ಎಇಸಿಎಸ್ ಲೇಔಟ್ | ಬನಶಂಕರಿ | ಬಿಟಿಎಂ ಲೇಔಟ್ | ಎಲೆಕ್ಟ್ರಾನಿಕ್ ನಗರ | ಹೆಚ್‌ಎಸ್‌ಆರ್ ಲೈಔಟ್ | ಇಂದಿರಾ ನಗರ್ | ಕೆ.ಆರ್ ಪುರಂ | ವರ್ತೂರ್ ರೋಡ್ | ಯಲಹಂಕ/ ಯಶವಂತಪುರ | ಫ್ರೇಜರ್ ಟೌನ್ | ಕಮ್ಮನಹಳ್ಳಿ
ಶೀಘ್ರದಲ್ಲೇ ತೆರೆಯಲಿರುವುದು: ಬನ್ನೇರಘಟ್ಟ ರೋಡ್ | ಬೇಗೂರ್ ಮುಖ್ಯ ರಸ್ತೆ | ಚಂದ್ರ ಲೇಔಟ್ | ಹೆಣ್ಣೂರು ಮುಖ್ಯ ರಸ್ತೆ | ಜಯನಗರ್ | ಜೆ.ಪಿ.ನಗರ್ | ಕಗ್ಗದಾಸಪುರ | ನಾಗರಬಾವಿ | ರಾಮಮೂರ್ತಿ ನಗರ | ಆರ್‌ಟಿ ನಗರ | ಶಿವಾಜಿ ನಗರ್ | ಸರ್ಜಾಪುರ್ ರೋಡ್ | ವೈಟ್‌ಫೀಲ್ಡ್

ಫಿಪೋಲ ಎಕ್ಸ್‌ಕ್ಲೂಸೀವ್ ಸ್ಟೋರ್: ಕೋರಮಂಗಲದಲ್ಲಿ ಶೀಘ್ರದಲ್ಲೇ ತೆರೆಯಲಾಗುತ್ತದೆ

ಚೆನ್ನೈ | ಕೊಯಂಬತ್ತೂರು | ಪುದುಚೇರಿ | ವೆಲ್ಲೂರು | ತಿರುಪುರ್ | ಹೈದರಾಬಾದ್
ಕೊಚಿನ್, ತಿರುವನಂತಪುರಂ ಮತ್ತು ಪುಣೆಯಲ್ಲಿ ಶೀಘ್ರದಲ್ಲೇ ತೆರೆಯಲಾಗುತ್ತದೆ

ನಮ್ಮ ಆಪ್ ಡೌನ್‌ಲೋಡ್ ಮಾಡಿ ಕೊಳ್ಳಿ
WWW.FIPOLA.IN
ಈ ವಿಳಾಸಕ್ಕೆ ಆನ್‌ಲೈನ್ ಮೂಲಕ ಆರ್ಡರ್ ಮಾಡಿ
ದಕ್ಷಿಣ ಭಾರತದಾದ್ಯಂತ 60 ಅಂಗಡಿಗಳು
ಈಗಲೇ ಆರ್ಡರ್ ಮಾಡಿ DUNZO SWIGGY ಕರೆ ಮಾಡಿ ಅಥವಾ 76672 76672

ಆಸ್ಪತ್ರೆ ದಾಖಲಾಗುವ ಸಂಖ್ಯೆ ಕಡಿಮೆ • ಆರೋಗ್ಯ ಇಲಾಖೆ ನಿರಾಳ • ಕಲ್ಯಾಣ ಕರ್ನಾಟಕದಲ್ಲಿ ಸಿಬ್ಬಂದಿ ಕೊರತೆ

# ಹೆಚ್ಚುತ್ತಿರುವ ಸೋಂಕು; ಸುಸ್ಥಿತಿಯಲ್ಲಿ ಆಂಬುಲೆನ್ಸ್

ಪ್ರಜಾವಾಣಿ ವಾರ್ತೆ

ಬಾಗಲಕೋಟೆಯ ಜಿಲ್ಲಾ ಆಸ್ಪತ್ರೆಯಲ್ಲಿ ಆಂಬುಲೆನ್ಸ್ ಬಳಕೆ (ಸಂಗ್ರಹ ಚಿತ್ರ)

**ಬೆಂಗಳೂರು:** ಕೋವಿಡ್ ಮೂರನೇ ಅಲೆಯಲ್ಲಿ ಸೋಂಕು ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದರೂ, ಆಸ್ಪತ್ರೆ ದಾಖಲಾಗುವವರ ಸಂಖ್ಯೆ ಕಡಿಮೆ ಇದೆ. ಹೀಗಾಗಿ, ಈವರೆಗೆ 'ಆರೋಗ್ಯ ಕವಚ-108' ಆಂಬುಲೆನ್ಸ್ ಸೇವೆ ಮೇಲೆ ಎಲ್ಲಿಯೂ ಒತ್ತಡ ಉಂಟಾಗಿಲ್ಲ.

ಮೊದಲ ಮತ್ತು ಎರಡನೇ ಅಲೆಯ ದಿನಗಳಲ್ಲಿ ಸೋಂಕಿತರಿಗೆ ಚಿಕಿತ್ಸೆ ನೀಡುವುದರೊಂದಿಗೆ, ತುರ್ತು ಸಂದರ್ಭಗಳಲ್ಲಿ ಆಂಬುಲೆನ್ಸ್ ಸೇವೆ ಒದಗಿಸುವುದು ಸರ್ಕಾರಕ್ಕೆ ದೊಡ್ಡ ಸಮಸ್ಯೆ ಸವಾಲಾಗಿತ್ತು. ಆದರೆ, ಆರೋಗ್ಯ ಇಲಾಖೆ ತೆಗೆದುಕೊಂಡ ಕೆಲವು ಮುನ್ನೆಚ್ಚರಿಕೆ ಕ್ರಮಗಳಿಂದಾಗಿ ಈ ಬಾರಿ ಬಹುತೇಕ ಜಿಲ್ಲೆಗಳಲ್ಲಿರುವ ಆಂಬುಲೆನ್ಸ್‌ಗಳು ಸುಸ್ಥಿತಿಯಲ್ಲಿವೆ. ಗುತ್ತಿಗೆ ಆಧಾರದಲ್ಲಿ ಚಾಲಕರು ಹಾಗೂ ಅಗತ್ಯ ಸಿಬ್ಬಂದಿಯನ್ನೂ ನೇಮಿಸಿಕೊಳ್ಳಲಾಗಿದೆ.

ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿಯಲ್ಲಿ '108' ಆಂಬುಲೆನ್ಸ್ ಹಾಗೂ ರಾಯಚೂರಿನಲ್ಲಿ ಅವುಗಳಿಗೆ ಸಿಬ್ಬಂದಿ ಕೊರತೆ ಇದೆ. ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 18 ಆಂಬುಲೆನ್ಸ್‌ಗಳಿದ್ದು ಓಡಾಡುವ ಸಾಮರ್ಥ್ಯ ಇರುವಂಥವು 11 ಮಾತ್ರ. ಮೂರನೇ ಅಲೆ ಉಲ್ಬಣಗೊಂಡರೆ ಇನ್ನೂ 10 ಆಂಬುಲೆನ್ಸ್‌ಗಳು ಬೇಕಾಗಬಹುದು. ಬೀದರ್, ಕೊಪ್ಪಳದಲ್ಲಿರುವ ಆಂಬುಲೆನ್ಸ್‌ಗಳ ಪೈಕಿ ಕೆಲವು ಕೆಟ್ಟುನಿಂತಿವೆ ಎನ್ನುತ್ತಾರೆ ಇಲಾಖೆಯ ಅಧಿಕಾರಿಗಳು.

ಉತ್ತರ ಕರ್ನಾಟಕ ಭಾಗದ ವಿಜಯಪುರ, ಉತ್ತರ ಕನ್ನಡ, ಬೆಳಗಾವಿ, ಹಾವೇರಿ, ಗದಗ, ವಿಜಯನಗರ, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಬಹುತೇಕ ಆಂಬುಲೆನ್ಸ್‌ಗಳು ಸುಸ್ಥಿತಿಯಲ್ಲಿದ್ದು, ಅಗತ್ಯ ಸಿಬ್ಬಂದಿಯೂ ಇದ್ದಾರೆ. ಬೆಳಗಾವಿ ಜಿಲ್ಲೆಗೆ 2018ರಲ್ಲಿ 32 ಹೊಸ ಆಂಬುಲೆನ್ಸ್‌ಗಳನ್ನು ನೀಡಲಾಗಿತ್ತು. ವಿಜಯಪುರ ಜಿಲ್ಲೆಯಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ 12 ಹೊಸ ಆಂಬುಲೆನ್ಸ್ ಖರೀದಿಸಿ ತಾಲ್ಲೂಕು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೀಡಲಾಗಿದೆ.

ತುಮಕೂರು ಜಿಲ್ಲೆಯಲ್ಲಿರುವ ಎಲ್ಲ 35 ಆಂಬುಲೆನ್ಸ್‌ಗಳು ಸುಸ್ಥಿತಿಯಲ್ಲಿದ್ದು, ಯಾವುದೇ ಸಮಸ್ಯೆ ಎದುರಾಗಿಲ್ಲ. ಕೋಲಾರ ಜಿಲ್ಲೆಯಲ್ಲಿ ಒಂದು ಆಂಬುಲೆನ್ಸ್ ಅಪಘಾತಕ್ಕೀಡಾಗಿ ಮೂಲೆ ಸೇರಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ 15 ಆಂಬುಲೆನ್ಸ್ ಸೇವೆಗೆ ಅಣಿಯಾಗಿವೆ. ರಾಮನಗರ ಜಿಲ್ಲೆಯಲ್ಲಿ ಸದ್ಯ 40ಕ್ಕೂ ಹೆಚ್ಚು ಆಂಬುಲೆನ್ಸ್‌ಗಳಿವೆ.

ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿಯೂ ಆಂಬುಲೆನ್ಸ್ ಸಮಸ್ಯೆ ಇಲ್ಲ. ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನಲ್ಲಿದ್ದ ಆಂಬುಲೆನ್ಸ್ ಆಗಾಗ ಕೆಟ್ಟು ಹೋಗುತ್ತಿದ್ದ ಕಾರಣ ಸದ್ಯ ಸಕಲೇಶಪುರದಿಂದ ತಾತ್ಕಾಲಿಕವಾಗಿ ವ್ಯವಸ್ಥೆ ಮಾಡಲಾಗುತ್ತಿದೆ. ಆದರೆ, ಸುತ್ತಮುತ್ತಲಿನ ನೂರಾರು ಹಳ್ಳಿಗಳ ಗ್ರಾಮಸ್ಥರು ಅವಲಂಬಿಸಿರುವ ಅದೇ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಂಬುಲೆನ್ಸ್ ಇಲ್ಲದೆ ಜನ ತೊಂದರೆ ಅನುಭವಿಸುತ್ತಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ಆಂಬುಲೆನ್ಸ್‌ಗಳಿದ್ದರೂ ಅಗತ್ಯದ ಸಿಬ್ಬಂದಿ ಪೈಕಿ ಅರ್ಧದಷ್ಟು ಕೊರತೆ ಇದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯ ಜತೆಗೆ ಖಾಸಗಿ ಆಸ್ಪತ್ರೆಗಳೂ ಆಂಬುಲೆನ್ಸ್ ಸೇವೆಗಳನ್ನು ಸಮರ್ಪಕವಾಗಿ ನೀಡುತ್ತಿವೆ. ಉಡುಪಿ ಜಿಲ್ಲೆಯಲ್ಲಿ 2 ಆಂಬುಲೆನ್ಸ್‌ಗಳು ದುರಸ್ತಿಯಲ್ಲಿವೆ. ಸಂಘ ಸಂಸ್ಥೆಗಳು, ಮಠ, ದೇವಸ್ಥಾನಗಳು, ಉದ್ಯಮಿಗಳು 12 ಆಂಬುಲೆನ್ಸ್‌ಗಳನ್ನು ದೇಣಿಗೆ ನೀಡಿದ್ದು, ಇವುಗಳಲ್ಲಿ ಹೆಚ್ಚಿನ ಆಂಬುಲೆನ್ಸ್‌ಗಳಿಗೆ ಸಿಬ್ಬಂದಿ ಕೊರತೆ ಎದುರಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ ಸದ್ಯ ಆಂಬುಲೆನ್ಸ್‌ಗಳಿಗೆ ಕೊರತೆ ಇಲ್ಲ.

(ಎಲ್ಲ ಬ್ಯುರೋಗಳಿಂದ ಮಾಹಿತಿ)

### ಆಂಬುಲೆನ್ಸ್ ಇಲ್ಲದೆ ಸಂಕಷ್ಟ

ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ವೇಳೆ ಕೊಡಗು ಜಿಲ್ಲೆಯಲ್ಲಿ ದುರ್ಗಮ ಪ್ರದೇಶಕ್ಕೆ ಆಂಬುಲೆನ್ಸ್‌ಗಳು ತೆರಳದೆ ಸೋಂಕಿತರು ಪರದಾಡಿದ್ದರು. ಈ ಬಾರಿಯೂ ಆರೋಗ್ಯ ಇಲಾಖೆಯು ದುರ್ಗಮ ಪ್ರದೇಶಕ್ಕೆ ಪರ್ಯಾಯ ವ್ಯವಸ್ಥೆ ಕಂಡುಕೊಂಡಿಲ್ಲ. ಮಡಿಕೇರಿ ಕೋವಿಡ್ ಆಸ್ಪತ್ರೆ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು ಒಂಬತ್ತು ಆಂಬುಲೆನ್ಸ್ ಲಭ್ಯ ಇವೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಶರಾವತಿ ಹಿನ್ನೀರಿನ ಭಾಗವಾಗಿರುವ ಸಾಗರ ತಾಲ್ಲೂಕಿನ ತುಮರಿಯಲ್ಲಿ ಬದುಕು ಕಟ್ಟಿಕೊಂಡಿರುವ ಮುಳುಗಡೆ ಸಂತ್ರಸ್ತರು, ಆರೋಗ್ಯ ಸಮಸ್ಯೆ ಕಂಡುಬಂದರೆ ಎರಡು ಕಿ.ಮೀ. ಲಾಂಚ್ ಮೂಲಕ ದಾಟಿ 40 ಕಿ.ಮೀ ಸಾಗರಕ್ಕೆ ಹೋಗಬೇಕು. ಆಂಬುಲೆನ್ಸ್ ಸೇವೆ ಇಲ್ಲದ ಪರಿಣಾಮ ಸಕಾಲದಲ್ಲಿ ಚಿಕಿತ್ಸೆ ಸಿಗದೇ ಈ ಭಾಗದ ಇಬ್ಬರು ರೋಗಿಗಳು ಮೃತಪಟ್ಟಿದ್ದರು. ಸ್ಥಳೀಯರು ಪ್ರತಿಭಟನೆ ನಡೆಸಿದ ಬಳಿಕ ಅಲ್ಲಿಗೆ ಹಳೆ ಆಂಬುಲೆನ್ಸ್ ನೀಡಲಾಗಿದೆ. ಆದರೆ, ವೈದ್ಯಕೀಯ ಸಿಬ್ಬಂದಿ ಕೊರತೆ ಇದೆ.

## ಸುದ್ದಿ 2 ನಿಮಿಷ

### ಕನ್ನಡ ಅಭ್ಯರ್ಥಿಗಳಿಗೆ ಅನ್ಯಾಯ: ಸಿಎಂಗೆ ಶಾಸಕ ರಿಜ್ವಾನ್ ಪತ್ರ

**ಬೆಂಗಳೂರು:** 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) ನೇಮಕಾತಿ ಪರೀಕ್ಷೆಯಲ್ಲಿ ಇಂಗ್ಲಿಷ್ ಭಾಷಾಂತರ ಕಡ್ಡಾಯವಿದ್ದು, ಗ್ರಾಮೀಣ ಭಾಗದ ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ ಅನ್ಯಾಯ ಆಗುತ್ತಿದ್ದು, ಅದನ್ನು ರದ್ದುಪಡಿಸಬೇಕು' ಎಂದು ಆಗ್ರಹಿಸಿ ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ಅವರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದಾರೆ.

'ಪಿಎಸ್ಐ ಪರೀಕ್ಷೆಯ ಪತ್ರಿಕೆ-1ರಲ್ಲಿ ಕನ್ನಡದ ಸಾಲುಗಳನ್ನು ಇಂಗ್ಲಿಷ್ ಮತ್ತು ಇಂಗ್ಲಿಷ್ ಸಾಲುಗಳನ್ನು ಕನ್ನಡಕ್ಕೆ ಅನುವಾದ ಮಾಡಬೇಕಿದೆ. ಕನ್ನಡ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಪ್ರಾಥಮಿಕ ಜ್ಞಾನ ಇರುತ್ತದೆಯೇ ಹೊರತು, ಇಂಗ್ಲಿಷ್‌ಗೆ ಅನುವಾದ ಮಾಡುವುದು ಕಷ್ಟ. ಹೀಗಾಗಿ ಅರ್ಹ ಅಭ್ಯರ್ಥಿಗಳು ಸ್ಪರ್ಧೆಯಿಂದ ಹಿಂದೆ ಬಿದ್ದು, ಸಮಾನ ಅವಕಾಶದಿಂದ ವಂಚಿತರಾಗುವ ಸಾಧ್ಯತೆ ಇದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿಯೂ ಭಾಷೆಗೆ ಸಂಬಂಧಿಸಿದ ಪರೀಕ್ಷೆ ಅಥವಾ ಪ್ರಶ್ನೆಗಳು ಇದ್ದರೂ ಅವುಗಳನ್ನು ಅರ್ಹತಾ ಮಟ್ಟಕ್ಕೆ ಮಾತ್ರ ಪರಿಗಣಿಸಲಾಗುತ್ತದೆ' ಎಂದು ಉಲ್ಲೇಖಿಸಿದ್ದಾರೆ.

### 'ಕಣವಿ ಚಿಕಿತ್ಸಾ ವೆಚ್ಚ ಸರ್ಕಾರ ಭರಿಸಲಿದೆ'

**ಬೆಂಗಳೂರು:** ಅನಾರೋಗ್ಯಕ್ಕೆ ಒಳಗಾಗಿ ಧಾರವಾಡದ ಎಸ್‌ಡಿಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕವಿ ಚನ್ನವೀರ ಕಣವಿ ಅವರ ಆಸ್ಪತ್ರೆ ವೆಚ್ಚವನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಲು ನಿರ್ಧರಿಸಲಾಗಿದೆ.

ಜ್ವರದಿಂದ ಬಳಲುತ್ತಿದ್ದ ಕಣವಿ ಅವರನ್ನು ಜ.14ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಕೋವಿಡ್ ಸೋಂಕು ತಗುಲಿರುವುದು ದೃಢಪಟ್ಟಿದೆ. ಅವರಿಗೆ ನಿರಂತರ ಚಿಕಿತ್ಸೆ ಹಾಗೂ ವೈದ್ಯಕೀಯ ಆಮ್ಲಜನಕ ನೀಡಲಾಗುತ್ತಿದೆ.

'ರಾಜ್ಯ ಕಂಡ ಶ್ರೇಷ್ಠ ಸಾಹಿತಿಗಳಲ್ಲಿ ಕಣವಿ ಕೂಡಾ ಒಬ್ಬರು. ಅವರು ರಾಜ್ಯದ ಬೌದ್ಧಿಕ ಸಂಪತ್ತು. ಅವರು ಚೇತರಿಸಿಕೊಂಡು ಆರೋಗ್ಯ ಪೂರ್ಣ ಜೀವನ ನಡೆಸಬೇಕು ಎಂಬುದು ನಮ್ಮ ಬಯಕೆ. ಹೀಗಾಗಿ ಅವರ ಆಸ್ಪತ್ರೆ ಚಿಕಿತ್ಸಾ ವೆಚ್ಚವನ್ನು ಸರ್ಕಾರದ ವತಿಯಿಂದ ಭರಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

**ಕಣವಿಗೆ ವೆಂಟಿಲೇಟರ್ ಆಸರೆ(ಧಾರವಾಡ ಸುದ್ದಿ):** ಹಿರಿಯ ಕವಿ ಡಾ. ಚೆನ್ನವೀರ ಕಣವಿ ಅವರ ಆರೋಗ್ಯದಲ್ಲಿ ಹೆಚ್ಚಿನ ಸುಧಾರಣೆ ಕಂಡುಬಾರದ ಹಿನ್ನೆಲೆಯಲ್ಲಿ ಅವರಿಗೆ ಗುರುವಾರ ವೆಂಟಿಲೇಟರ್ ಅಳವಡಿಸಲಾಗಿದೆ.

## ಮಲಗಿದ ಸರ್ಕಾರ: ಸಿದ್ದರಾಮಯ್ಯ ಟೀಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿ ಕೋವಿಡ್ ಉಲ್ಬಣಗೊಳ್ಳುತ್ತಿದೆ. ಸೋಂಕಿತರಿಗೆ ಚಿಕಿತ್ಸೆ ನೀಡುವ ಹೊಣೆಯನ್ನು ಖಾಸಗಿ ಆಸ್ಪತ್ರೆಗಳಿಗೆ ವಹಿಸಿ ಬಿಜೆಪಿ ಸರ್ಕಾರ ಬೆಚ್ಚಗೆ ಮಲಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ 'ಪ್ರಜಾವಾಣಿ'ಯಲ್ಲಿ ಗುರುವಾರ 'ಕೋವಿಡ್ ಉಲ್ಬಣಿಸಿದರೆ ಖಾಸಗಿ ಆಸ್ಪತ್ರೆಯೇ ಗತಿ!' ಶೀರ್ಷಿಕೆ ಅಡಿಯಲ್ಲಿ ಪ್ರಕಟವಾದ ವರದಿ ಹಾಗೂ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳನ್ನು ಲಗತ್ತಿಸಿ ಸರಣಿ ಟ್ವೀಟ್ ಮಾಡಿರುವ ಅವರು, 'ಪತ್ರಿಕೆಗಳು ಪ್ರಕಟಿಸುತ್ತಿರುವ ಸತ್ಯ ಸಂಗತಿಗಳ ವರದಿಗಳನ್ನೂ ಓದಿ ಎಚ್ಚೆತ್ತುಕೊಳ್ಳಿ' ಎಂದು ಕಿಡಿಕಾರಿದ್ದಾರೆ.

'ಕೋವಿಡ್ ಚಿಕಿತ್ಸೆಗೆ ನಿಗದಿತ 1.94 ಲಕ್ಷ ಹಾಸಿಗೆಗಳಲ್ಲಿ 51,093 ಹಾಸಿಗೆಗಳು ಮಾತ್ರ ಸರ್ಕಾರಿ. ಉಳಿದೆಲ್ಲವೂ ಖಾಸಗಿ ಆಸ್ಪತ್ರೆಗಳಿಗೆ ಸೇರಿವೆ ಎಂದು ವರದಿಗಳು ಹೇಳುತ್ತಿವೆ. ಈ ವ್ಯವಸ್ಥೆ ಜನಹಿತಕ್ಕಾಗಿಯೇ? ಇಲ್ಲವೆ, ಖಾಸಗಿ ಆಸ್ಪತ್ರೆಗಳ ಹಿತಕ್ಕಾಗಿಯೇ? ಮುಖ್ಯಮಂತ್ರಿ ಅವರು ಸ್ಪಷ್ಟಪಡಿಸಬೇಕು' ಎಂದು ಟ್ವೀಟ್ ಮಾಡಿದ್ದಾರೆ.

'ಸೋಂಕಿನ ಜೊತೆ ಅದೇ ರೀತಿಯ ರೋಗ ಲಕ್ಷಣಗಳ ಶೀತ-ನೆಗಡಿ-ಜ್ವರಗಳ ಬಾಧೆಯೂ ಹೆಚ್ಚುತ್ತಿರುವುದರಿಂದ ಯಾವುದು ಕೊರೊನಾ, ಯಾವುದು ಅಲ್ಲ ಎನ್ನುವುದನ್ನು ತಿಳಿದುಕೊಳ್ಳಲಾಗದೆ ಜನ ಗೊಂದಲದಲ್ಲಿದ್ದಾರೆ. ಸೋಂಕಿತರು ಮನೆಯಲ್ಲಿಯೇ ಇರಿ ಎಂದು ಬಿಜೆಪಿ ಸರ್ಕಾರವೇ ಹೇಳಿ ಆ ಗೊಂದಲವನ್ನು ಇನ್ನಷ್ಟು ಹೆಚ್ಚಿಸುತ್ತಿದೆ' ಎಂದು ಹೇಳಿದ್ದಾರೆ..

'ನೆಗಡಿ, ಕೆಮ್ಮು, ಜ್ವರದಿಂದ ಬಳಲುತ್ತಿರುವವರಲ್ಲಿ ಶೇಕಡ 90-93ರಷ್ಟು ಜನ ಆಸ್ಪತ್ರೆಗೆ ಹೋಗದೆ ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮಾಧ್ಯಮ ವರದಿಗಳು ಹೇಳುತ್ತಿವೆ. ಇವರಲ್ಲಿ ಕೊರೊನಾ ಸೋಂಕಿತರೆಷ್ಟು? ಬೇರೆ ಕಾಯಿಲೆ ಪೀಡಿತರೆಷ್ಟು ಎಂಬ ಮಾಹಿತಿ ಸರ್ಕಾರದಲ್ಲಿಯೂ ಇಲ್ಲ. ಇದು ಅಪಾಯಕಾರಿ ಅಲ್ಲವೇ' ಎಂದು ಪ್ರಶ್ನಿಸಿದ್ದಾರೆ.

'ಕೊರೊನಾ ಸೋಂಕು ಶೀಘ್ರಗತಿಯಲ್ಲಿ ಹಳ್ಳಿಗಳಿಗೆ ಹರಡುತ್ತಿದೆ ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಹಿಂದಿನ ವೈಫಲ್ಯಗಳ ಅನುಭವದ ಹೊರತಾಗಿಯೂ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಮೂಲಸೌಕರ್ಯಗಳನ್ನು ಹೆಚ್ಚಿಸುವ ಕೆಲಸವನ್ನು ಮಾಡದೆ ಕರ್ಫ್ಯೂ-ಲಾಕ್ ಡೌನ್‌ಗಳನ್ನು ನಂಬಿ ಕೂತಿದೆ' ಎಂದು ಟೀಕಿಸಿದ್ದಾರೆ.

## '108'ಕ್ಕೆ ಬೇಕು ತುರ್ತು 'ಚಿಕಿತ್ಸೆ'

ಒಂದನೇ ಪುಟದಿಂದ

ರಾತ್ರಿ ಪಾಳಿಯಲ್ಲಿ ಕೆಲಸ ಮಾಡದೆ, ತುರ್ತು ಚಿಕಿತ್ಸೆ ನೀಡಲಾಗಿದೆ ಎಂದು ನಕಲಿ ರೋಗಿ, ಸುಳ್ಳು ದಾಖಲೆ ಸೃಷ್ಟಿಸಿ ಜಿವಿಕೆ-ಇಎಂಆರ್‌ಐ ಸಂಸ್ಥೆ ಕಾರ್ಯಾಚರಣೆ ವೆಚ್ಚ ಗುಳುಂ ಮಾಡುತ್ತಿರುವುದು ಆರೋಗ್ಯ ಇಲಾಖೆಗೆ ಗೊತ್ತಿದೆ. ತಪ್ಪು ಲೆಕ್ಕ ತೋರಿಸಿರುವುದು, ಟೆಂಡರ್ ಇಲ್ಲದೇ ಟೈರ್, ಔಷಧ ಖರೀದಿ ಮಾಡಿದ್ದ ದೂರುಗಳ ಬಗ್ಗೆ ವಿಚಾರಣೆ ನಡೆಸಿದ್ದ ಆರೋಗ್ಯ ಇಲಾಖೆಯ ಉನ್ನತ ಅಧಿಕಾರಿಯ ನೇತೃತ್ವದ ತಂಡ, ದಾಖಲೆಗಳ ಸಹಿತ ಸರ್ಕಾರಕ್ಕೆ ಈಗಾಗಲೇ ದೂರು ನೀಡಿದೆ. ಸಚಿವ ಸಂಪುಟದ ಅನುಮೋದನೆಯಂತೆ ಆಂಬುಲೆನ್ಸ್ ಸೇವೆ ನೀಡಲು ಹೊಸ ಸಂಸ್ಥೆಯ ಆಯ್ಕೆಗೆ 2017ರಲ್ಲೇ ಆರೋಗ್ಯ ಇಲಾಖೆ ಆದೇಶ ಹೊರಡಿಸಿತ್ತು. ಆದರೆ, ಹಿಂದಿನ ಸರ್ಕಾರ ಟೆಂಡರ್ ಕರೆಯದ ಕಾರಣ, ಅದನ್ನೇ 'ಬಂಡವಾಳ' ಮಾಡಿಕೊಂಡಿರುವ ಜಿವಿಕೆ-ಇಎಂಆರ್‌ಐ, ವಾಮಮಾರ್ಗಗಳ ಮೂಲಕ ಕೋಟಿ ಕೋಟಿ ಮೊತ್ತದ ಕಾರ್ಯಾಚರಣೆ ಬಿಲ್ ಪಡೆಯುತ್ತಲೇ ಇದೆ. ಅಚ್ಚರಿಯೆಂದರೆ, ಈ ಸಂಸ್ಥೆಯ ಜೊತೆಗಿನ ಸೇವಾ ಖಾತರಿ ಒಪ್ಪಂದದಲ್ಲಿ ನಿಯಮ ಉಲ್ಲಂಘಿಸಿದರೆ ದಂಡ ವಿಧಿಸಲು ಅವಕಾಶವೇ ಇಲ್ಲ! ಇದು ಕೂಡ ಸಮಸ್ಯೆಗೆ ಕಾರಣ.

### ₹ 1,698 ಕೋಟಿ ವೆಚ್ಚದಲ್ಲಿ 1,000 ಆಂಬುಲೆನ್ಸ್

ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾರ್ಗಸೂಚಿಯ ಪ್ರಕಾರ ಒಂದು ಲಕ್ಷ ಜನಸಂಖ್ಯೆಗೆ ಒಂದು ಬಿಎಲ್‌ಎಸ್ ಆಂಬುಲೆನ್ಸ್, ಪ್ರತಿ 5 ಲಕ್ಷ ಜನಸಂಖ್ಯೆಗೆ ಒಂದು ಎಎಲ್‌ಎಸ್ ಆಂಬುಲೆನ್ಸ್ ಒದಗಿಸಬೇಕಾಗಿದೆ. ಯಾವುದೇ ಆಂಬುಲೆನ್ಸ್ ಒಂದು ದಿನದಲ್ಲಿ ನಾಲ್ಕಕ್ಕಿಂತ ಹೆಚ್ಚಿನ ತುರ್ತು ಪ್ರಕರಣಗಳನ್ನು ಸಾಗಿಸಿದರೆ ಅಥವಾ 120 ಕಿ.ಮೀಗಿಂತ ಹೆಚ್ಚು ದೂರ ಕ್ರಮಿಸಿದರೆ ಅಂಥ ಸ್ಥಳಗಳಿಗೆ ಮತ್ತೊಂದು ಆಂಬುಲೆನ್ಸ್ ಒದಗಿಸಬೇಕಾಗಿದೆ. ಈಗ ರಾಜ್ಯದ ಜನಸಂಖ್ಯೆ 7 ಕೋಟಿ ಎಂದು ಅಂದಾಜಿಸಲಾಗಿದೆ. ಈ ಮಾರ್ಗಸೂಚಿ ಪ್ರಕಾರ, ರಾಜ್ಯದಲ್ಲಿ ಆಂಬುಲೆನ್ಸ್‌ಗಳನ್ನು 1,000ಕ್ಕೆ ಹೆಚ್ಚಿಸಲು ಮತ್ತು ಈಗಿರುವ 108 ಕರೆ ಕೇಂದ್ರದಲ್ಲಿ ಕರೆ ಸ್ವೀಕರಿಸುವವರ ಸಂಖ್ಯೆಯನ್ನು 54ರಿಂದ 75ಕ್ಕೆ ಹೆಚ್ಚಿಸಿ 5 ವರ್ಷಗಳ ಅವಧಿಗೆ ₹ 1,698.48 ಕೋಟಿ ವೆಚ್ಚದಲ್ಲಿ ಈ ಸೇವೆಯನ್ನು ಅನುಷ್ಠಾನಗೊಳಿಸಲು ಆರೋಗ್ಯ ಇಲಾಖೆ ಉದ್ದೇಶಿಸಿದೆ. ಹೊಸತಾಗಿ 108-ಆರೋಗ್ಯ ಕವಚ ಸೇವೆಗೆ ಟೆಂಡರ್ ಆಹ್ವಾನಿಸಲು ಮತ್ತು ಟೆಂಡರ್ ವಹಿಸಿದ್ದ ಸಂಸ್ಥೆ ತೃಪ್ತಿಕರ ಸೇವೆ ನೀಡಿದರೆ ಮತ್ತೆ ಎರಡು ವರ್ಷಕ್ಕೆ ವಿಸ್ತರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದೆ.

## ಡ್ರಗ್ಸ್ ಪ್ರಕರಣ: ಸಿಸಿಬಿ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರ್.ಟಿ.ನಗರದಲ್ಲಿರುವ ಮನೆಯ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಇಬ್ಬರು ಪೊಲೀಸರು ಡ್ರಗ್ಸ್ ಸಾಗಣೆಯಲ್ಲಿ ಭಾಗಿಯಾಗಿದ್ದ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಗುರುವಾರ ಈ ಸಂಬಂಧ ಆದೇಶ ಹೊರಡಿಸಿದ್ದಾರೆ.

ಕೋರಮಂಗಲ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಸಂತೋಷ್ ಹಾಗೂ ಕಾನ್‌ಸ್ಟೆಬಲ್ ಶಿವಕುಮಾರ್‌ಗೆ ಬುಧವಾರ ಜಾಮೀನು ಮಂಜೂರಾಗಿತ್ತು. ಆರೋಪಿಗಳು ಎಲ್ಲಿಂದ ಮಾದಕ ವಸ್ತುಗಳನ್ನು ತರುತ್ತಿದ್ದರು, ಅದನ್ನು ಹೇಗೆ ಮಾರಾಟ ಮಾಡುತ್ತಿದ್ದರು, ಯಾರೊಂದಿಗೆಲ್ಲ ನಂಟು ಹೊಂದಿದ್ದರು ಎಂಬುದರ ಬಗ್ಗೆ ಪೊಲೀಸರು ಸರಿಯಾಗಿ ಮಾಹಿತಿ ಕಲೆಹಾಕಿರಲಿಲ್ಲ. ಅಗತ್ಯ ಪುರಾವೆಗಳನ್ನೂ ಸಂಗ್ರಹಿಸಿರಲಿಲ್ಲ. ಆರೋಪಿಗಳಿಗೆ ಸುಲಭವಾಗಿ ಜಾಮೀನು ಸಿಗಲು ಅಗತ್ಯವಿರುವ ಎಲ್ಲ ಅನುಕೂಲ ಮಾಡಿಕೊಟ್ಟಿದ್ದರು ಎಂಬ ಆರೋಪದಡಿ ಆರ್.ಟಿ.ನಗರ ಠಾಣೆಯ ಇನ್‌ಸ್ಪೆಕ್ಟರ್ ಹಾಗೂ ಪಿಎಸ್‌ಐ ಅವರನ್ನು ಅಮಾನತು ಮಾಡಲಾಗಿತ್ತು. ಸಿಬ್ಬಂದಿಯ ಪೂರ್ವಾಪರ ಪರಿಶೀಲಿಸದೆ ಅವರನ್ನು ಮುಖ್ಯಮಂತ್ರಿಯವರ ನಿವಾಸಕ್ಕೆ ಭದ್ರತೆಗೆ ನಿಯೋಜಿಸಿದ್ದಕ್ಕಾಗಿ ಇಬ್ಬರು ಡಿಸಿಪಿಗಳಿಗೆ ನೋಟಿಸ್ ನೀಡಲಾಗಿತ್ತು.

'ಆರೋಪಿಗಳಿಗೆ ಜಾಮೀನು ಲಭಿಸಿದ್ದರಿಂದ ಸಾರ್ವಜನಿಕವಾಗಿ ಇಲಾಖೆ ಮುಜುಗರ ಅನುಭವಿಸುವಂತಾಗಿದೆ. ಹೀಗಾಗಿ, ಪಾರದರ್ಶಕ ತನಿಖೆಗಾಗಿ ಕಮಿಷನರ್ ಪ್ರಕರಣವನ್ನು ಸಿಸಿಬಿಗೆ ವಹಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

### 'ಅಪರಾಧ ಕೃತ್ಯಗಳಲ್ಲಿ ಭಾಗಿ: ಪೊಲೀಸರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ'

'ಸಮಾಜ ವಿರೋಧಿ ಶಕ್ತಿಗಳ ಜೊತೆ ಗುರುತಿಸಿಕೊಂಡು ಅಪರಾಧಿ ಕೃತ್ಯಗಳಲ್ಲಿ ಭಾಗವಹಿಸುವ ಪೊಲೀಸ್ ಸಿಬ್ಬಂದಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಎಚ್ಚರಿಸಿದರು.

ಚಾಮರಾಜಪೇಟೆ ವ್ಯಾಪ್ತಿಯಲ್ಲಿ ₹7.40 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವ ಸಂಚಾರ ಪೊಲೀಸ್ ಠಾಣೆಗೆ ಶಂಕುಸ್ಥಾಪನೆ ನೆರವೇರಿಸಿ ಗುರುವಾರ ಮಾತನಾಡಿದರು.

'ಮುಖ್ಯಮಂತ್ರಿ ನಿವಾಸದ ಬಳಿ ಭದ್ರತೆಗೆ ನಿಯೋಜಿತರಾಗಿದ್ದ ಇಬ್ಬರು ಪೊಲೀಸ್ ಸಿಬ್ಬಂದಿ ಗಾಂಜಾ ಮಾರಾಟ ಜಾಲದೊಂದಿಗೆ ಸಂಪರ್ಕ ಹೊಂದಿದ್ದ ಪ್ರಕರಣದ ಸಂಬಂಧ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅಪರಾಧ ಕೃತ್ಯಗಳನ್ನು ನಿಯಂತ್ರಿಸಲು ನೇಮಿಸಿದ್ದ ಸಿಬ್ಬಂದಿಯೇ ಗಾಂಜಾ ಮಾರಾಟಗಾರರ ಜೊತೆ ಶಾಮೀಲಾಗುವುದು ಅಕ್ಷಮ್ಯ ಅಪರಾಧ' ಎಂದರು.

ಯುವ ಕಾಂಗ್ರೆಸ್‌ನ ಕೆಲ ನಾಯಕರು ಕಳೆದ ರಾತ್ರಿ ಹೊಡೆದಾಡಿಕೊಂಡಿದ್ದಾರೆ ಎನ್ನಲಾದ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, 'ಈ ಬಗ್ಗೆ ಯಾವುದೇ ದೂರು ದಾಖಲಾಗಿಲ್ಲ. ದೂರು ಕೊಟ್ಟರೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸಲಿದ್ದಾರೆ' ಎಂದು ತಿಳಿಸಿದರು.

ಲೋಕಸಭಾ ಸದಸ್ಯ ಪಿ.ಸಿ.ಮೋಹನ್, ಶಾಸಕ ಜಮೀರ್ ಅಹ್ಮದ್, ವಿಧಾನ ಪರಿಷತ್ ಸದಸ್ಯರಾದ ಯು.ಬಿ. ವೆಂಕಟೇಶ್, ರಮೇಶ್ ಗೌಡ ಮತ್ತು ಲೆಹರ್ ಸಿಂಗ್ ಇದ್ದರು.

## ಚಂಪಾ ಸಮಗ್ರ ಸಾಹಿತ್ಯ ಸಂಪುಟ: ₹ 1ಕೋಟಿ ಅನುದಾನಕ್ಕೆ ಮನವಿ

ಚಂದ್ರಶೇಖರ ಪಾಟೀಲ

**ಬೆಂಗಳೂರು:** ಸಾಹಿತಿ ಚಂದ್ರಶೇಖರ ಪಾಟೀಲ (ಚಂಪಾ) ಅವರ ಸಮಗ್ರ ಸಾಹಿತ್ಯ ಸಂಪುಟ ಹೊರತರಲು ₹ 1 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರಕ್ಕೆ ಮನವಿ ಮಾಡಿದೆ. ಈ ಬಗ್ಗೆ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದಾರೆ.

'ಚಂಪಾ ಅವರು ಹಾವೇರಿ ಜಿಲ್ಲೆಯವರು. ಅದೇ ಜಿಲ್ಲೆಯಲ್ಲಿ 86ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಅವರ ಸಮಗ್ರ ಸಾಹಿತ್ಯ ಸಂಪುಟವನ್ನು ಸಾಂಕೇತಿಕವಾಗಿ ಸಮ್ಮೇಳನದಲ್ಲಿ ಲೋಕಾರ್ಪಣೆಗೊಳಿಸಲು ಪರಿಷತ್ತು ನಿರ್ಧರಿಸಿದೆ. ಈ ಪ್ರಕಟಣೆ ಕಾರ್ಯಕ್ಕೆ ಅನುದಾನ ಬಿಡುಗಡೆ ಮಾಡಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ.

## ತಕ್ಷಣವೇ ಸಂಪುಟ ಪುನಾರಚಿಸಿ: ಯತ್ನಾಳ-ರೇಣುಕಾಚಾರ್ಯ

ಒಂದನೇ ಪುಟದಿಂದ

**ತಕ್ಷಣವೇ ಮಾಡಲಿ:** ಸುದ್ದಿಗಾರರ ಜತೆ ಮಾತನಾಡಿದ ಯತ್ನಾಳ್, 'ಮಾರ್ಚ್ ಬಳಿಕ ಸಂಪುಟ ಪುನಾರಚನೆ ಮಾಡಿದರೆ ಏನೂ ಉಪಯೋಗವಿಲ್ಲ. ಮಾಡುವುದೇ ಆದಲ್ಲಿ ಈಗಲೇ ಮಾಡಲಿ. ಕನಿಷ್ಠ ಪಕ್ಷ ಒಂದು ವರ್ಷ ಇದ್ದಾಗ ಸಚಿವರಾದರೆ ಪರಿಣಾಮಕಾರಿಯಾಗಿ ಕೆಲಸ ಮಾಡಿ ತೋರಿಸಲು ಸಾಧ್ಯ' ಎಂದರು. ಐದು ರಾಜ್ಯಗಳ ಚುನಾವಣೆ ಮುಗಿದ ಮೇಲೆ ಆಗುತ್ತದೆಯೋ ಅಥವಾ ಮೊದಲೇ ಆಗುತ್ತದೆಯೋ ನೋಡೋಣ. ಆದರೆ ಒಳ್ಳೆಯ ಬೆಳವಣಿಗೆಯೇ ಆಗುತ್ತದೆ. ಗುಜರಾತ್ ಮಾದರಿಯೋ ಅಥವಾ ಕರ್ನಾಟಕಕ್ಕೆ ಬೇರೆ ಮಾದರಿಯೋ ಗೊತ್ತಿಲ್ಲ. ಏನೇ ಆದರೂ 15 ದಿನಗಳಲ್ಲಿ ಆದರೆ ಒಳ್ಳೆಯದು ಎಂದು ಅಭಿಪ್ರಾಯಪಟ್ಟರು.

ಇದಕ್ಕೆ ಧ್ವನಿಗೂಡಿಸಿದ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯೂ ಆಗಿರುವ ರೇಣುಕಾಚಾರ್ಯ, ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರು ಈ ವಿಷಯದಲ್ಲಿ ಒಳ್ಳೆಯ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದರು. 'ಪಾದಯಾತ್ರೆ ಮಾಡಿ ಅಧಿಕಾರಕ್ಕೆ ಬಂದೇ ಬರುತ್ತೇವೆ ಎನ್ನುವ ರೀತಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವರ್ತಿಸುತ್ತಿದ್ದಾರೆ. ಅವರ ವೇಗ ತಡೆಯಲು ಏನು ಮಾಡಬೇಕು ಎಂದು ಚರ್ಚಿಸಿದ್ದೇವೆ. ಪದೇ ಪದೇ ಅಧಿಕಾರ ಹಿಡಿದವರನ್ನು ಹಾಗೂ ಸ್ವಾರ್ಥಿಗಳನ್ನು ಕೈ ಬಿಡಬೇಕು. ನಾವು ಯಾರ ಹೆಸರನ್ನೂ ಹೇಳುವುದಿಲ್ಲ' ಎಂದರು. 'ಈ ವಿಷಯದಲ್ಲಿ ನಮಗೆ ಯಾವ ಸಂಕೋಚವೂ ಇಲ್ಲ. ಸಚಿವರ ಬಗೆಗಿನ ಆಕ್ರೋಶದ ಬಗ್ಗೆ ಪಕ್ಷದ ಎಲ್ಲ ಶಾಸಕರು ತಮ್ಮ ನೋವನ್ನು ಬಹಿರಂಗವಾಗಿ ಹೇಳಲು ಮುಂದಾಗುತ್ತಿಲ್ಲ. ಅನೇಕರು ಇದನ್ನು ನಮ್ಮ ಬಳಿ ಹೇಳಿಕೊಂಡಿದ್ದಾರೆ. ಹೀಗಾಗಿ ಇಬ್ಬರೂ ಸೇರಿ ಚರ್ಚೆ ಮಾಡಿದ್ದೇವೆ' ಎಂದು ರೇಣುಕಾಚಾರ್ಯ ಹೇಳಿದರು.

## 'ವಾರಾಂತ್ಯ ಕರ್ಫ್ಯೂ; ಸಿ.ಎಂ ತೀರ್ಮಾನವಲ್ಲ'

**ಮೈಸೂರು:** 'ತಜ್ಞರು ನೀಡಿದ ಮುನ್ನೆಚ್ಚರಿಕೆ, ಸಂಪುಟದ ಎಲ್ಲ ಸಚಿವರ ಅಭಿಪ್ರಾಯ ಪಡೆದು ಕರ್ಫ್ಯೂ ಜಾರಿ ಮಾಡಲಾಗಿದೆ. ಅದು ಸಿ.ಎಂ ಒಬ್ಬರ ತೀರ್ಮಾನವಲ್ಲ' ಎಂದು ಸಚಿವ ಎಸ್.ಟಿ.ಸೋಮಶೇಖರ್ ಪ್ರತಿಪಾದಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕರ್ಫ್ಯೂ ಜಾರಿಗೊಳಿಸುವುದಾದರೆ ಲಸಿಕೆ ಏಕೆ ಬೇಕಿತ್ತು' ಎಂದು ಸಂಸದ ಪ್ರತಾಪ ಸಿಂಹ ಹೇಳಿಕೆ 'ತಜ್ಞರ ವರದಿ ಆಧರಿಸಿ ಸರ್ಕಾರ ನಿರ್ಧಾರ ಕೈಗೊಂಡಿದೆ' ಎಂದರು.

## 'ಕೃಷಿ ಕಾಯ್ದೆ ವಿರುದ್ಧ ಜನಜಾಗೃತಿ ಜಾಥಾ'

**ಹುಬ್ಬಳ್ಳಿ:** 'ರಾಜ್ಯ ಸರ್ಕಾರ ಕಳೆದ ವರ್ಷ ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಲು ಆಗ್ರಹಿಸಿ, ಬಜೆಟ್ ಅಧಿವೇಶನ ಆರಂಭಕ್ಕೂ ಒಂದು ವಾರ ಮುಂಚೆ ಸಮಾನ ಮನಸ್ಕ ಸಂಘಟನೆಗಳೊಂದಿಗೆ ಜಾಗೃತಿ ಜಾಥಾ ನಡೆಸಲಾಗುವುದು' ಎಂದು ಜನಾಂದೋಲನಗಳ ಮಹಾಮೈತ್ರಿಯ (ಜೆಎಂಎಂ) ಎಸ್.ಆರ್.ಹಿರೇಮಠ ಹೇಳಿದರು.

'ಎಪಿಎಂಸಿ ತಿದ್ದುಪಡಿ ಕಾಯ್ದೆ, ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ಹಾಗೂ ಜಾನುವಾರು ಹತ್ಯೆ ನಿಷೇಧ ಮತ್ತು ಜಾನುವಾರು ಸಂರಕ್ಷಣಾ ಕಾಯ್ದೆಗಳು ರೈತರ ಪಾಲಿಗೆ ಕರಾಳವಾಗಿವೆ. ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಡುವ ಈ ಕಾಯ್ದೆಗಳನ್ನು ರದ್ದುಗೊಳಿಸಬೇಕು. ಅಧಿವೇಶನ ದಿನಾಂಕ ಪ್ರಕಟವಾದ ಬಳಿಕ ಜಾಥಾ ದಿನವನ್ನು ನಿಗದಿಪಡಿಸಲಾಗುವುದು' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 'ಬೀದರ್ ಜಿಲ್ಲೆ ಬಸವಕಲ್ಯಾಣ ಹಾಗೂ ಮಹದೇಶ್ವರ ಬೆಟ್ಟದಿಂದ ಏಕಕಾಲದಲ್ಲಿ ಆರಂಭಗೊಳ್ಳಲಿದೆ. ಸಮಾಜ ಸುಧಾರಕರ ಸ್ತಬ್ಧಚಿತ್ರಗಳನ್ನೊಳಗೊಂಡ ವಾಹನದಲ್ಲಿ ಜಾಥಾ ನಡೆಯಲಿದೆ. ಬೇಡಿಕೆಗೆ ಸರ್ಕಾರ ಸ್ಪಂದಿಸದಿದ್ದರೆ, ಮುಖ್ಯಮಂತ್ರಿ ನಿವಾಸದ ಎದುರು ಮೌನ ಪ್ರತಿಭಟನೆ ನಡೆಸಲಾಗುವುದು' ಎಂದರು.

## ಬುರ್ಖಾ ಧರಿಸಿದ ವಿದ್ಯಾರ್ಥಿನಿಯರು

**ತೀರ್ಥಹಳ್ಳಿ:** ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಈಚೆಗೆ ವಿದ್ಯಾರ್ಥಿಯೊಬ್ಬ ಕೇಸರಿ ಶಾಲು ಹಾಕಿಕೊಂಡು ಬಂದಿರುವುದಕ್ಕೆ ಪ್ರತಿಯಾಗಿ ಗುರುವಾರ 25 ವಿದ್ಯಾರ್ಥಿನಿಯರು ಬುರ್ಖಾ-ಹಿಜಾಬ್ ಹಾಕಿಕೊಂಡು ಬಂದಿದ್ದಾರೆ.

ಈ ಬೆಳವಣಿಗೆಯ ಬೆನ್ನಲ್ಲೇ ವಿದ್ಯಾರ್ಥಿನಿಯರಿಗೆ ಬುರ್ಖಾ ಧರಿಸಲು ಅವಕಾಶ ನೀಡಬೇಕು ಎಂದು ಪಟ್ಟಣ ಪಂಚಾಯಿತಿ ಸದಸ್ಯರು ಕಾಲೇಜು ಮಂಡಳಿ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂಬ ದೂರುಗಳು ಕೇಳಿಬಂದಿವೆ.

**ಏನಿದು ವಿವಾದ?:** 'ಕಾಲೇಜಿಗೆ ಬುರ್ಖಾ ಹಾಕಿಕೊಂಡು ಬರುವುದಾದರೆ ನಮಗೆ ಕೇಸರಿ ಶಾಲು ಹಾಕಲು ಅವಕಾಶ ನೀಡಬೇಕು' ಎಂದು ಕೆಲ ತಿಂಗಳ ಹಿಂದೆ ವಿದ್ಯಾರ್ಥಿಗಳು ಒತ್ತಾಯಿಸಿದ್ದರು. ಸಭೆ ನಡೆಸಿದ್ದ ಕಾಲೇಜು ಆಡಳಿತ ಮಂಡಳಿ, 'ಕಾಲೇಜಿನ ಆವರಣ ಹೊರತುಪಡಿಸಿ ತರಗತಿಯೊಳಗೆ ಯಾವುದೇ ವಿದ್ಯಾರ್ಥಿಗಳು ಬುರ್ಖಾ, ಹಿಜಾಬ್, ಕೇಸರಿ ಶಾಲು ಹಾಕಿಕೊಂಡು ಬರಲು ಅವಕಾಶ ಇಲ್ಲ. ವಸ್ತ್ರಸಂಹಿತೆಯನ್ನು ಪಾಲಿಸಬೇಕು' ಎಂದು ತೀರ್ಮಾನ ಕೈಗೊಂಡಿತ್ತು. ಬಳಿಕ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಸ್ತ್ರಸಂಹಿತೆ ಪಾಲಿಸುತ್ತಿದ್ದರು. ಆದರೆ, ಈಚೆಗೆ ವಿದ್ಯಾರ್ಥಿಯೊಬ್ಬ ಕೇಸರಿ ಶಾಲು ಹಾಕಿಕೊಂಡು ಬಂದ ಕಾರಣ ವಿವಾದ ಮತ್ತೆ ಶುರುವಾಗಿದೆ.

'ಕೆಲ ವಿದ್ಯಾರ್ಥಿಗಳು ನಿಯಮ ಉಲ್ಲಂಘಿಸುತ್ತಿದ್ದಾರೆ. ಈ ಸಂಬಂಧ ಆಡಳಿತ ಮಂಡಳಿ ಜತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಪ್ರಾಚಾರ್ಯರಾದ ವೈ.ಎಂ. ಸುಧಾ ಪ್ರತಿಕ್ರಿಯಿಸಿದರು.

'ಸಭೆ ನಡೆಸಿ ಕಠಿಣ ವಸ್ತ್ರಸಂಹಿತೆ ಜಾರಿಗೊಳಿಸಲಾಗಿದೆ. ನಿಯಮ ಉಲ್ಲಂಘಿಸುವುದು ಸರಿಯಲ್ಲ' ಎಂದು ಕಾಲೇಜು ಅಭಿವೃದ್ಧಿ ಮಂಡಳಿ ಅಧ್ಯಕ್ಷ ನಾಗರಾಜ್ ಶೆಟ್ಟಿ ತಿಳಿಸಿದರು.

## ಕೋವಿಡ್: ನಿರ್ದೇಶಕ ಪ್ರದೀಪ್‌ರಾಜ್ ಸಾವು

**ಬೆಂಗಳೂರು:** ಕನ್ನಡ ಚಲನಚಿತ್ರ ನಿರ್ದೇಶಕ ಪ್ರದೀಪ್‌ರಾಜ್ (46) ಅವರು ಗುರುವಾರ ನಸುಕಿನಲ್ಲಿ ಕೊರೊನಾ ಸೋಂಕಿನಿಂದ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ.

ಮಧುಮೇಹ, ಯಕೃತ್ತು ಸೇರಿದಂತೆ ಬಹು ಅಂಗಾಂಗ ಸಮಸ್ಯೆಗಳಿಂದ ಬಳಲುತ್ತಿದ್ದ ಅವರು, ಇತ್ತೀಚೆಗೆ ತೀವ್ರ ಅಸ್ವಸ್ಥರಾಗಿ ಪುದುಚೆರಿಯ ಆಸ್ಪತ್ರೆ ದಾಖಲಾಗಿದ್ದರು. ಯಕೃತ್ತನ್ನು ಕಸಿ ಮಾಡುವ ಪ್ರಯತ್ನವೂ ನಡೆದಿತ್ತು. ಆದರೆ ಆಸ್ಪತ್ರೆಯಲ್ಲೇ ನಿಧನರಾದರು ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ಪ್ರದೀಪ್‌ರಾಜ್ ಅವರು ಕಿರಾತಕ, ಅಂಜದಗಂಡು, ಬೆಂಗಳೂರು-23, ಮಿಸ್ಟರ್ 420, ರಜನಿಕಾಂತ ಚಿತ್ರಗಳನ್ನು ನಿರ್ದೇಶಿಸಿದ್ದರು. ಕಿರಾತಕ-2 ಬಿಡುಗಡೆಗೆ ಸಿದ್ಧವಾಗಿದೆ.

ಹಿಜಾಬ್ ನಮ್ಮ ಧಾರ್ಮಿಕ ಹಕ್ಕು ಎಂದು ಪ್ರತಿಪಾದನೆ

## ಹಿಜಾಬ್‌ಗೆ ಅನುಮತಿ ಕೋರಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹಿಜಾಬ್ ಧರಿಸಿ ಪಾಠ ಕೇಳಲು ಅನುಮತಿ ನೀಡುವಂತೆ ಒತ್ತಾಯಿಸಿ ನಗರದ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜಿನಲ್ಲಿ ವಿದ್ಯಾರ್ಥಿನಿಯರು ಗುರುವಾರ ಪ್ರತಿಭಟನೆ ನಡೆಸಿದರು.

**ಉಡುಪಿ:** ಹಿಜಾಬ್ ಧರಿಸಿ ಪಾಠ ಕೇಳಲು ಅನುಮತಿ ನೀಡುವಂತೆ ಒತ್ತಾಯಿಸಿ ನಗರದ ಸರ್ಕಾರಿ ಪದವಿಪೂರ್ವ ಮಹಿಳಾ ಕಾಲೇಜಿನಲ್ಲಿ ವಿದ್ಯಾರ್ಥಿನಿಯರು ನಡೆಸುತ್ತಿರುವ ಪ್ರತಿಭಟನೆ ಗುರುವಾರವೂ ಮುಂದುವರಿಯಿತು.

'ಹಿಜಾಬ್ ನಮ್ಮ ಹಕ್ಕು ಅದನ್ನು ಪಡೆದೇ ತೀರುತ್ತೇವೆ', 'ಹಿಜಾಬ್ ಮೂಲಭೂತ ಹಕ್ಕು, ನಮಗೆ ನ್ಯಾಯಬೇಕು' ಎಂಬ ಬರಹಗಳನ್ನು ಕಾಲೇಜು ಅಂಗಳದಲ್ಲಿ ಪ್ರದರ್ಶಿಸಿ ವಿದ್ಯಾರ್ಥಿನಿಯರು ಮೌನ ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ವಿದ್ಯಾರ್ಥಿನಿಯರು 'ಹಿಜಾಬ್ ಧರಿಸುವುದು ನಮ್ಮ ಧಾರ್ಮಿಕ ಹಕ್ಕಾಗಿದೆ. ಮೊಟಕುಗೊಳಿಸಲು ಬಿಡುವುದಿಲ್ಲ. ಹಿಜಾಬ್ ಧರಿಸಿಯೇ ಪಾಠ ಕೇಳಲು ಅವಕಾಶ ನೀಡಬೇಕು' ಎಂದು ಒತ್ತಾಯಿಸಿದರು.

'ಹಿಜಾಬ್ ಹಾಕಿದ ಕಾರಣಕ್ಕೆ 15 ದಿನಗಳಿಂದ ತರಗತಿಗೆ ಪ್ರವೇಶ ನೀಡುತ್ತಿಲ್ಲ. ಪ್ರತಿದಿನ ಕಾಲೇಜು ಮೆಟ್ಟಿಲು ಮೇಲೆ, ಗ್ರಂಥಾಲಯದೊಳಗೆ ಕುಳಿತು ಮನೆಗೆ ಹೋಗಬೇಕಾಗಿದೆ. ತರಗತಿ ಪಾಠಗಳಿಂದ ವಂಚಿತರಾಗಬೇಕಾಗಿದೆ, ನಮ್ಮ ಭವಿಷ್ಯವನ್ನು ಕತ್ತಲಿಗೆ ದೂಡಲಾಗುತ್ತಿದೆ' ಎಂದು ಅಳಲು ತೋಡಿಕೊಂಡರು.

'ಕಾಲೇಜಿನಲ್ಲಿ ಮಹಿಳಾ ಉಪನ್ಯಾಸಕರು ಮಾತ್ರ ಇದ್ದರೆ ಹಿಜಾಬ್ ಧರಿಸಲು ಒತ್ತಾಯಿಸುತ್ತಿರಲಿಲ್ಲ. ಆದರೆ, ಪುರುಷ ಉಪನ್ಯಾಸಕರು ಕೂಡ ಪಾಠ ಮಾಡುವುದರಿಂದ ಹಿಜಾಬ್ ಧರಿಸುತ್ತಿದ್ದೇವೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

'ಅಧಿಕಾರಿಗಳೂ ನಮ್ಮ ಅಹವಾಲು ಆಲಿಸುತ್ತಿಲ್ಲ, ಪ್ರಾಂಶುಪಾಲರ ಅಭಿಪ್ರಾಯಕ್ಕೆ ಮಾತ್ರ ಮನ್ನಣೆ ನೀಡುತ್ತಿದ್ದಾರೆ. ಕಾಲೇಜಿನ ಇತರ ವಿದ್ಯಾರ್ಥಿನಿಯರಿಗೂ ನೋಟ್ಸ್ ನೀಡದಂತೆ ಮೌಖಿಕವಾಗಿ ಎಚ್ಚರಿಕೆ ನೀಡಲಾಗಿದೆ. ಸಹಪಾಠಿಗಳ ಜತೆ ಮಾತನಾಡಲೂ ಬಿಡುತ್ತಿಲ್ಲ' ಎಂದು ಅಳಲು ತೋಡಿಕೊಂಡರು.

### ಕಾಲೇಜು ಹಂತದಲ್ಲಿ ಶೀಘ್ರ ಇತ್ಯರ್ಥ: ಜಿಲ್ಲಾಧಿಕಾರಿ

ಹಿಜಾಬ್ ವಿವಾದವನ್ನು ಕಾಲೇಜು ಹಂತದಲ್ಲೇ ಬಗೆಹರಿಸಬೇಕು ಎಂಬ ಉದ್ದೇಶದಿಂದ ಪರಿಸ್ಥಿತಿ ಅವಲೋಕಿಸುವಂತೆ ಕುಂದಾಪುರ ಉಪ ವಿಭಾಗಾಧಿಕಾರಿಗೆ ನಿರ್ದೇಶನ ನೀಡಲಾಗಿದೆ. ಕಾಲೇಜು ಅಭಿವೃದ್ಧಿ ಸಮಿತಿ, ಪ್ರಾಂಶುಪಾಲರು, ವಿದ್ಯಾರ್ಥಿನಿಯರು ಹಾಗೂ ಪೋಷಕರ ಸಭೆ ಕರೆದು ಚರ್ಚಿಸಿ ಶೀಘ್ರ ವಿವಾದ ಬಗೆಹರಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಕೂರ್ಮಾರಾವ್ ಹೇಳಿದರು.

### 'ಸರ್ಕಾರಕ್ಕೆ ಪತ್ರ; ಉತ್ತರ ಆಧರಿಸಿ ಕ್ರಮ'

ಕಾಲೇಜಿನಲ್ಲಿ ಯೂನಿಫಾರಂ ಧರಿಸಬೇಕೆ ಬೇಡವೇ ಎಂದು ನಿರ್ಧರಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಉತ್ತರ ಬಂದಿಲ್ಲ. ಪ್ರತಿಭಟನಾ ನಿರತ ವಿದ್ಯಾರ್ಥಿನಿಯರು ಒಂದೂವರೆ ವರ್ಷದಿಂದ ಹಿಜಾಬ್ ಹಾಕದೆ ಪಾಠ ಕೇಳಿದ್ದು, ಈಗ ಏಕಾಏಕಿ ಧರಿಸಲು ಅನುಮತಿಗೆ ಒತ್ತಾಯಿಸುತ್ತಿದ್ದಾರೆ. ಕಾಲೇಜಿನಲ್ಲಿ ಶಿಸ್ತು ಬಹಳ ಮುಖ್ಯ. ಸರ್ಕಾರದಿಂದ ಅಂತಿಮ ನಿರ್ಧಾರ ಹೊರಬೀಳುವವರೆಗೂ ವಿದ್ಯಾರ್ಥಿನಿಯರು ಹಿಜಾಬ್ ಇಲ್ಲದೆ ತರಗತಿಗೆ ಹೋಗಲಿ ಎಂದು ಶಾಸಕ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆಗಿರುವ ಕೆ.ರಘುಪತಿ ಭಟ್ ಹೇಳಿದರು.

## ಆರ್ಯ ಈಡಿಗರ ಸಂಘಕ್ಕೆ ಎಂ.ತಿಮ್ಮೇಗೌಡ ಪುನರಾಯ್ಕೆ

ಪ್ರಜಾವಾಣಿ ವಾರ್ತೆ



ಕರ್ನಾಟಕ ಆರ್ಯ ಈಡಿಗರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಎಂ.ತಿಮ್ಮೇಗೌಡರ ಜೊತೆಯಲ್ಲಿ ನೂತನ ಉಪಾಧ್ಯಕ್ಷರಾದ ಎಂ.ಕೆ.ಪೋತರಾಜು, ಟಿ.ಶಿವಕುಮಾರ್, ರವೀಂದ್ರಕುಮಾರ್ ಡಿ.ಬೋರಳೆ, ರಾಜೇಂದ್ರ ಜಾಲಪ್ಪ, ಎಸ್.ಎಚ್.ಪದ್ಮಾರವೀಂದ್ರ , ಜಂಟಿ ಕಾರ್ಯದರ್ಶಿ ಆರ್.ಪಿ.ಪ್ರಕಾಶ್, ಖಜಾಂಚಿ ಹರಿಚರಣ್ ಎಂ.ಪಿ., ಜಂಟಿ ಕಾರ್ಯದರ್ಶಿಗಳಾದ ಜಿ.ಒ.ಕೃಷ್ಣ, ಎ.ನಾಗರಾಜ, ಸಂಘಟನಾ ಕಾರ್ಯದರ್ಶಿಗಳಾದ ಕೆ.ಎಸ್.ದುಶ್ಯಂತ್, ಬಿ.ರಾಜಪ್ಪ, ಬಸವರಾಜ್ ಈಳಿಗೇರ, ಮಹಾದೇವ್ ಎನ್.ಈಳಿಗೇರ, ಮಂಜುನಾಥ್ ಎನ್.ಹಾನಗಲ್ ಇದ್ದಾರೆ

**ಬೆಂಗಳೂರು:** ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷರಾಗಿ ಡಾ.ಎಂ.ತಿಮ್ಮೇಗೌಡ ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ರಾಜ್ಯ ಕಾರ್ಯಕಾರಿಣಿ ಸಮಿತಿಗೆ ಜ.12 ರಂದು ಚುನಾವಣೆ ನಡೆದು 53 ಸದಸ್ಯರು ಆಯ್ಕೆಯಾಗಿದ್ದರು. ಸಂಘದ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಐದು ವರ್ಷಗಳ ರಾಜ್ಯ ಪದಾಧಿಕಾರಿಗಳ ಆಯ್ಕೆ ಮತ್ತು ಕಾರ್ಯಕಾರಿಣಿ ಸಮಿತಿಯ ಸಭೆ ಗುರುವಾರ ನಡೆಯಿತು. ಸಹಕಾರ ಸಂಘಗಳ ಉಪ ನಿಬಂಧಕರಾಗಿ ನಿವೃತ್ತರಾಗಿರುವ ದೊಡ್ಡತಮ್ಮೇಗೌಡ ಚುನಾವಣಾಧಿಕಾರಿಯಾಗಿದ್ದರು.

ಉಪಾಧ್ಯಕ್ಷರಾಗಿ ಎಂ.ಕೆ. ಪೋತರಾಜು, ಟಿ.ಶಿವಕುಮಾರ್, ರವೀಂದ್ರಕುಮಾರ್ ಡಿ.ಬೋರಳೆ, ರಾಜೇಂದ್ರ ಜಾಲಪ್ಪ, ಎಸ್.ಎಚ್.ಪದ್ಮಾ ರವೀಂದ್ರ, ಪ್ರಧಾನ ಕಾರ್ಯದರ್ಶಿಯಾಗಿ ಎಚ್.ಟಿ.ಮೋಹನ್ ದಾಸ್, ಖಜಾಂಚಿಯಾಗಿ ಹರಿಚರಣ್ ಎಂ.ಪಿ., ಜಂಟಿ ಕಾರ್ಯದರ್ಶಿಯಾಗಿ ಆರ್.ಪಿ.ಪ್ರಕಾಶ್, ಜಿ.ಒ.ಕೃಷ್ಣ, ಎ.ನಾಗರಾಜ, ಸಂಘಟನಾ ಕಾರ್ಯದರ್ಶಿಯಾಗಿ ಕೆ.ಎಸ್.ದುಶ್ಯಂತ್, ಬಿ.ರಾಜಪ್ಪ, ಬಸವರಾಜ್ ಈಳಿಗೇರ, ಮಹಾದೇವ್ ಎನ್.ಈಳಿಗೇರ, ಮಂಜುನಾಥ್ ಎನ್.ಹಾನಗಲ್ ಎಲ್ಲರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಎಂ.ತಿಮ್ಮೇಗೌಡ ಮಾತನಾಡಿ, 'ಈಡಿಗ ಸಮುದಾಯ ಸಾಕಷ್ಟು ಪ್ರಗತಿ ಸಾಧಿಸಲು ನಮ್ಮ ಹಿರಿಯರಾದ 'ಪ್ರಜಾವಾಣಿ' ಸಂಸ್ಥಾಪಕರಾದ ಕೆ.ಎನ್. ಗುರುಸ್ವಾಮಿ, ನೆಟ್ಟಕಲ್ಲಪ್ಪ, ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ, ಮಾಜಿ ಸಚಿವರಾದ ಬಿ.ಜನಾರ್ಧನ ಪೂಜಾರಿ, ಆರ್.ಎಲ್. ಜಾಲಪ್ಪ, ವೆಂಕಯ್ಯ ಗುತ್ತೇದಾರ್, ಸಂಘದ ಮಾಜಿ ಅಧ್ಯಕ್ಷ ಜೆ.ಪಿ. ನಾರಾಯಣಸ್ವಾಮಿ ಹಾಗೂ ಎಲ್ಲ ನಾಯಕರ ಕೊಡುಗೆ ಅಪಾರವಾದುದು. ಹಲವು ಹಿರಿಯರ ಮಾರ್ಗದರ್ಶನದಿಂದ ಸಂಘವು ಪ್ರಗತಿಯತ್ತ ದಾಪುಗಾಲು ಹಾಕುತ್ತಿದೆ. ಎಲ್ಲರ ಆದರ್ಶಗಳನ್ನು ನಾವು ಪಾಲಿಸಿಕೊಂಡು ಸಮಾಜದ ಪ್ರಗತಿಗೆ ದುಡಿಯುತ್ತೇವೆ' ಎಂದರು.

ನೂತನವಾಗಿ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದ ಆರ್.ಪಿ.ಪ್ರಕಾಶ್ ಮಾತನಾಡಿ, ರಾಜ್ಯದಲ್ಲಿ ಈಡಿಗ ಸಮಾಜವು ವಿವಿಧ ಉಪ ಪಂಗಡಗಳಾಗಿ ಮಾರ್ಪಟ್ಟಿವೆ. ಎಲ್ಲ ಉಪಪಂಗಡಗಳನ್ನು ಒಗ್ಗೂಡಿಸಿ ಸದಸ್ಯತ್ವ ನೋಂದಣಿ ಮಾಡಿಸಲಾಗುವುದು. ಬೆಂಗಳೂರು ನಗರ ಜಿಲ್ಲೆಯಲ್ಲೇ ಈಡಿಗ ಸಮುದಾಯದ ಎರಡು ಲಕ್ಷ ಜನಸಂಖ್ಯೆ ಇದೆ. ಬೆಂಗಳೂರಿನಿಂದಲೇ ಸದಸ್ಯತ್ವ ನೊಂದಣಿಗೆ ಚಾಲನೆ ನೀಡಲಾಗುವುದು ಎಂದರು.

ಉಪಾಧ್ಯಕ್ಷ ಟಿ.ಶಿವಕುಮಾರ್ ಮಾತನಾಡಿ, 'ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ವಿದ್ಯಾರ್ಥಿ ನಿಲಯ, ಶಾಲಾ ಕಾಲೇಜುಗಳನ್ನು ಪ್ರಾರಂಭಿಸಲು ಚಿಂತನೆ ನಡೆದಿದೆ. ಉಳ್ಳವರು ಹೆಚ್ಚಿನ ಸಹಕಾರ ನೀಡಬೇಕಾಗಿದೆ' ಎಂದರು.

ಸಂಘಟನಾ ಕಾರ್ಯದರ್ಶಿ ಕೆ.ಎಸ್. ದುಶ್ಯಂತ್ ಮಾತನಾಡಿ, 'ರಾಜ್ಯದಲ್ಲಿ ನಮ್ಮ ಸಮುದಾಯದವರು ಜನಸಂಖ್ಯೆಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದರೂ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದಿದ್ದೇವೆ. ನಮ್ಮ ಮಕ್ಕಳ ಭವಿಷ್ಯಕ್ಕಾಗಿ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಬೇಕಿದೆ' ಎಂದು ಹೇಳಿದರು.

### ಗೋವಾ ವಿಧಾನಸಭಾ ಚುನಾವಣೆಗೆ ಬಿಜೆಪಿ ಮೊದಲ ಪಟ್ಟಿ; ಕುಟುಂಬ ರಾಜಕಾರಣಕ್ಕೆ ಮಣೆ?

# ಬಿಜೆಪಿ ಪಟ್ಟಿಯಲ್ಲಿ ಪರಿಕ್ಕರ್ ಪುತ್ರನಿಗಿಲ್ಲ ಜಾಗ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಗೋವಾ ವಿಧಾನಸಭೆಗೆ ಫೆ. 14ರಂದು ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಜೆಪಿ ಗುರುವಾರ ಬಿಡುಗಡೆ ಮಾಡಿದೆ. ಮಾಜಿ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಅವರ ಪುತ್ರ ಉತ್ಪಲ್ ಪರಿಕ್ಕರ್ ಅವರಿಗೆ ಪಕ್ಷ ಟಿಕೆಟ್ ನಿರಾಕರಿಸಿದೆ. ಅವರ ಬದಲಾಗಿ, ಪಣಜಿ ಕ್ಷೇತ್ರದಿಂದ ಅಟಾನಾಸಿಯೊ ಬಾಬುಸಾ ಮಾನ್ಸೆರೇಟ್ ಅವರು ಸ್ಪರ್ಧಿಸಲಿದ್ದಾರೆ. ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಸಾಂಕ್ವೇಲಿಯಂ ಕ್ಷೇತ್ರದಿಂದ ಕಣಕ್ಕೆ ಇಳಿಯಲಿದ್ದಾರೆ.

ಮನೋಹರ್ ಪರಿಕ್ಕರ್ ಅವರ ಕ್ಷೇತ್ರವಾಗಿದ್ದ ಪಣಜಿಯಿಂದ ಕಣಕ್ಕಿಳಿಯುವ ಇಚ್ಛೆಯನ್ನು ಉತ್ಪಲ್ ವ್ಯಕ್ತಪಡಿಸಿದ್ದರೂ, ಪಕ್ಷ ಅವರಿಗೆ ಟಿಕೆಟ್ ನೀಡಿಲ್ಲ. ಕಾಂಗ್ರೆಸ್‌ನ ಮಾಜಿ ಸದಸ್ಯರಾಗಿದ್ದ ಮಾನ್ಸೆರೇಟ್ ಅವರು ಪಣಜಿ ಕ್ಷೇತ್ರದ ಹಾಲಿ ಶಾಸಕರಾಗಿದ್ದಾರೆ.

ಇಲ್ಲಿನ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಗೋವಾ ಉಸ್ತುವಾರಿ ದೇವೇಂದ್ರ ಫಡಣವಿಸ್ ಅವರು ಉತ್ಪಲ್ ಅವರಿಗೆ ಟಿಕೆಟ್ ಸಿಗದಿರುವುದಕ್ಕೆ ಸ್ಪಷ್ಟನೆ ನೀಡಿದ್ದಾರೆ.

'ಉತ್ಪಲ್ ಅವರು ಪ್ರತಿನಿಧಿಸಬೇಕು ಎಂದು ಬಯಸಿರುವ ಪಣಜಿ ಕ್ಷೇತ್ರದಲ್ಲಿ ಬಿಜೆಪಿಯ ಹಾಲಿ ಶಾಸಕರಿದ್ದಾರೆ. ಅವರನ್ನು ಬದಲಿಸುವುದು ಸರಿಯಲ್ಲ. ಬೇರೆ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುವ ಆಯ್ಕೆಯನ್ನು ಉತ್ಪಲ್ ಅವರಿಗೆ ನೀಡಲಾಗಿದೆ. ಈ ಬಗ್ಗೆ ಮಾತುಕತೆಗಳು ನಡೆಯುತ್ತಿವೆ' ಎಂದು ಫಡಣವೀಸ್ ತಿಳಿಸಿದ್ದಾರೆ.

> ಪರಿಕ್ಕರ್ ಕುಟುಂಬದ ಮೇಲೆ ಬಿಜೆಪಿಗೆ ಗೌರವವಿದೆ. ಬಿಜೆಪಿ ನೀಡಿರುವ ಆಯ್ಕೆಗಳನ್ನು ಉತ್ಪಲ್ ಅವರು ಒಪ್ಪಿಕೊಳ್ಳಬೇಕು ಎಂಬುದು ನಮ್ಮೆಲ್ಲರ ಬಯಕೆಯಾಗಿದೆ
> **ದೇವೇಂದ್ರ ಫಡಣವೀಸ್,** ಗೋವಾ ಬಿಜೆಪಿ ಉಸ್ತುವಾರಿ

**ಕುಟುಂಬ ರಾಜಕೀಯಕ್ಕೆ ಮಣೆ?:** ಬಿಜೆಪಿ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು 34 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದರು. ಇಬ್ಬರು ದಂಪತಿಗಳು ಪಟ್ಟಿಯಲ್ಲಿರುವುದು ವಿಶೇಷ. ಪಣಜಿಯಿಂದ ಸ್ಪರ್ಧಿಸುತ್ತಿರುವ ಮಾನ್ಸೆರೇಟ್ ಅವರ ಪತ್ನಿಗೆ ತಲೈಗೋವಾ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಹಾಗೆಯೇ, ಮತ್ತೊಬ್ಬ ಮಾಜಿ ಕಾಂಗ್ರೆಸಿಗ ವಿಶ್ವಜಿತ್ ರಾಣೆ ಅವರು ವಾಲ್ಪೋಯಿ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದು, ಅವರ ಪತ್ನಿ ದಿವ್ಯ ರಾಣೆ ಅವರು ಪೋರಿಯಂ ಕ್ಷೇತ್ರದಿಂದ ಅದೃಷ್ಟ ಪರೀಕ್ಷೆಗೆ ಇಳಿಯಲಿದ್ದಾರೆ. ಈ ಎರಡೂ ಜೋಡಿಗಳು ಈ ಹಿಂದೆ ಸಾಂಪ್ರದಾಯಿಕ ಕಾಂಗ್ರೆಸ್ ಕುಟುಂಬಕ್ಕೆ ಸೇರಿದ್ದವು.

ಸಾಮಾನ್ಯವಾಗಿ ಕುಟುಂಬದ ಒಬ್ಬರಿಗೆ ಟಿಕೆಟ್ ನೀಡುವ ಪದ್ಧತಿ ಅನುಸರಿಸಿಕೊಂಡು ಬರುತ್ತಿರುವ ಬಿಜೆಪಿಯು ಗೋವಾದಲ್ಲಿ ಮಾತ್ರ ಕುಟುಂಬದ ಇಬ್ಬರಿಗೆ ಏಕೆ ಟಿಕೆಟ್ ನೀಡಿದೆ ಎಂದು ಫಡಣವೀಸ್ ಅವರನ್ನು ಸುದ್ದಿಗಾರರು ಪ್ರಶ್ನಿಸಿದರು.

'ರಾಜಕೀಯದಲ್ಲಿ ಕೆಲವೊಮ್ಮೆ ಇಂತಹ ಪರಿಸ್ಥಿತಿಗಳನ್ನು ನಾವು ಕಾಣುತ್ತೇವೆ. ಮಾನ್ಸೆರೇಟ್ ಮತ್ತು ಅವರ ಪತ್ನಿ ಇಬ್ಬರೂ ಶಾಸಕರಾಗಿ ಚುನಾಯಿತರಾಗಿ, ಬಳಿಕ ಬಿಜೆಪಿ ಸೇರಿದ್ದರು. ಜೆನ್ನಿಫರ್ ಮಾನ್ಸೆರೇಟ್ ಅವರು ತಮ್ಮದೇ ಪ್ರತ್ಯೇಕವಾದ ಅಸ್ಮಿತೆ ಹೊಂದಿದ್ದಾರೆ. ಮೇಲಾಗಿ ಅವರು ಪ್ರಸ್ತುತ ಸರ್ಕಾರದಲ್ಲಿ ಸಚಿವೆ ಆಗಿದ್ದಾರೆ. ವಿಶ್ವಜಿತ್ ರಾಣೆಗೆ ಅವರ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಪತ್ನಿಗೆ ರಾಣೆ ಅವರ ತಂದೆ ಪ್ರತಾಪ್‌ಸಿಂಗ್ ರಾಣೆ ಪ್ರತಿನಿಧಿಸುತ್ತಿದ್ದ ಕ್ಷೇತ್ರ ನೀಡಲಾಗಿದೆ' ಎಂದಿದ್ದಾರೆ.

ತಮ್ಮ ಹಾಲಿ ಕ್ಷೇತ್ರವಾದ ಪೋರಿಯಂನಿಂದ ತಮ್ಮ ಸೊಸೆ ಸ್ಪರ್ಧಿಸಲು ಹಿರಿಯ ಕಾಂಗ್ರೆಸಿಗ ಹಾಗೂ ಹಾಲಿ ಶಾಸಕ ಪ್ರತಾಪ್‌ಸಿಂಗ್ ರಾಣೆ ಒಪ್ಪಿಕೊಂಡಿದ್ದಾರೆ ಎಂದು ಫಡಣವೀಸ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 50 ವರ್ಷಗಳಿಂದ ಕಾಂಗ್ರೆಸ್ ಟಿಕೆಟ್‌ನಡಿ ಇಲ್ಲಿಂದ ಗೆಲ್ಲುತ್ತಿರುವ ರಾಣೆ ಅವರಿಗೆ ಟಿಕೆಟ್ ನೀಡಲು ಬಿಜೆಪಿ ಮುಂದಾಗಿತ್ತು. ಆದರೆ ಅವರು ಒಪ್ಪದ ಕಾರಣ ಅವರ ಸೊಸೆಗೆ ಟಿಕೆಟ್ ನೀಡಲಾಗಿದೆ ಎಂದು ಫಡಣವೀಸ್ ತಿಳಿಸಿದರು.

ಆದರೆ ಫಡಣವೀಸ್ ಮಾತನ್ನು ರಾಣೆ ತಳ್ಳಿಹಾಕಿದ್ದಾರೆ. ಫಡಣವೀಸ್ ಅವರ ಭೇಟಿಯಲ್ಲಿ ರಾಜಕೀಯ ಚರ್ಚೆಯಾಗಿಲ್ಲ. ನಾನು ನನ್ನ ಕ್ಷೇತ್ರದಿಂದ ಸ್ಪರ್ಧಿಸುತ್ತೇನೆಯೋ ಅಥವಾ ಇಲ್ಲವೋ ಎಂಬುದು ಬೇರೆ ವಿಚಾರ. ನನ್ನ ಹೆಸರನ್ನು ಅನಗತ್ಯವಾಗಿ ಚರ್ಚಿಸಲಾಗಿದೆ ಎಂದು ಪ್ರತಾಪ್‌ಸಿಂಗ್ ಹೇಳಿದ್ದಾರೆ.

**ಕಳಂಕಿತರಿಗೆ ಟಿಕೆಟ್?:** ಕುಟುಂಬ ರಾಜಕಾರಣಕ್ಕೆ ಮಣೆ ಹಾಕಿರುವ ಬಿಜೆಪಿ, ಕಳಂಕಿತರಿಗೆ ಟಿಕೆಟ್ ನೀಡಿದೆ ಎಂಬ ಆರೋಪಗಳು ಕೇಳಿಬಂದಿವೆ. ಮಾನ್ಸೆರೇಟ್ ಅವರು ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಹೊತ್ತಿದ್ದಾರೆ. ಅಲ್ಲದೆ, ಎರಡು ದಶಕಗಳ ಹಿಂದೆ ಗುಂಪಿನೊಂದಿಗೆ ನಗರ ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿದ ಆರೋಪವನ್ನೂ ಎದುರಿಸುತ್ತಿದ್ದಾರೆ.

ಕಳೆದ ತಿಂಗಳು ಲೈಂಗಿಕ ಹಗರಣದಲ್ಲಿ ಹೆಸರು ಕೇಳಿಬಂದಿದ್ದ ಮಾಜಿ ಸಚಿವ ಮಿಲಿಂದ್ ನಾಯಕ್ ಅವರಿಗೂ ಪಕ್ಷ ಟಿಕೆಟ್ ನೀಡಿದೆ. ಹಗರಣ ಬೆಳಕಿಗೆ ಬಂದ ಬಳಿಕ ಅವರನ್ನು ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಸಂಪುಟದಿಂದ ಕೈಬಿಡಲಾಗಿತ್ತು. ಮಾಜಿ ಮುಖ್ಯಮಂತ್ರಿ ಲಕ್ಷ್ಮೀಕಾಂತ್ ಪರ್ಸೇಕರ್, ಹಾಲಿ ಸಚಿವ ದೀಪಕ್ ಪ್ರಭು ಪುಸ್ಕರ್ ಅವರನ್ನು ಪಟ್ಟಿಯಿಂದ ಕೈಬಿಡಲಾಗಿದೆ.

ಬಿಜೆಪಿ ಮುಖಂಡರಾದ ಅರುಣ್ ಸಿಂಗ್ ಹಾಗೂ ದೇವೇಂದ್ರ ಫಡಣವೀಸ್ ಅವರು ಗೋವಾ ವಿಧಾನಸಭಾ ಚುನಾವಣೆಯ ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ದೆಹಲಿಯಲ್ಲಿ ಗುರುವಾರ ಬಿಡುಗಡೆ ಮಾಡಿದರು–ಪಿಟಿಐ ಚಿತ್ರ

## ಬಿಜೆಪಿ ತೊರೆದ ಶಾಸಕ

**ಪಣಜಿ:** ಗೋವಾ ವಿಧಾನಸಭಾ ಚುನಾವಣೆಗೆ ಕೆಲವೇ ವಾರಗಳು ಬಾಕಿಯಿರುವಾಗ, ಶಾಸಕ ವಿಲ್ಫ್ರೆಡ್ ಡಿಸಾ ಅವರು ಬುಧವಾರ ಬಿಜೆಪಿ ತೊರೆದಿದ್ದಾರೆ. ಶಾಸಕ ಸ್ಥಾನ ಹಾಗೂ ಪಕ್ಷದ ಸದಸ್ಯತ್ವ ಎರಡಕ್ಕೂ ಅವರು ರಾಜೀನಾಮೆ ಸಲ್ಲಿಸಿದ್ದಾರೆ.

ಫೆ.14ರಂದು ನಡೆಯಲಿರುವ ಚುನಾವಣೆಯಲ್ಲಿ ತಾವು ಪಕ್ಷೇತರರಾಗಿ ಸ್ಪರ್ಧೆ ಮಾಡುವ ಇಂಗಿತವನ್ನು ವಿಲ್ಫ್ರೆಡ್ ವ್ಯಕ್ತಪಡಿಸಿದ್ದಾರೆ. 2017ರ ಚುನಾವಣೆಯಲ್ಲಿ ನುವೆಮ್ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕಾಗಿ ಆಯ್ಕೆಯಾಗಿದ್ದ ಅವರು, 2019ರಲ್ಲಿ ಇತರ 9 ಶಾಸಕರ ಜೊತೆಗೂಡಿ ಬಿಜೆಪಿ ಸೇರಿದ್ದರು.

ಚುನಾವಣೆಗೂ ಮುನ್ನ ಪಕ್ಷವನ್ನು ತೊರೆಯುವ ಮಾಹಿತಿಯನ್ನು ಬಿಜೆಪಿ ನಾಯಕರಿಗೆ ತಿಳಿಸಿದ್ದಾಗಿ ವಿಲ್ಫ್ರೆಡ್ ಮಾಹಿತಿ ನೀಡಿದ್ದಾರೆ. 2022ರ ಚುನಾವಣೆಯನ್ನು ಬಿಜೆಪಿ ಟಿಕೆಟ್ ಮೇಲೆ ಎದುರಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದರು.

## ಉತ್ಪಲ್‌ಗೆ ಎಎಪಿ ಆಹ್ವಾನ

ಉತ್ಪಲ್

ಉತ್ಪಲ್ ಅವರಿಗೆ ಟಿಕೆಟ್ ನಿರಾಕರಿಸಿರುವ ಬಿಜೆಪಿ ನಡೆಯನ್ನು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಖಂಡಿಸಿದ್ದಾರೆ. ಬಳಸಿ ಬಿಸಾಕುವ ಸಂಸ್ಕೃತಿಯನ್ನು ಬಿಜೆಪಿ ಪಾಲಿಸುತ್ತಿದೆ ಎಂದು ಅವರು ಕಿಡಿಕಾರಿದ್ದಾರೆ. ಉತ್ಪಲ್ ಅವರನ್ನು ಪಕ್ಷಕ್ಕೆ ಆಹ್ವಾನಿಸಿರುವ ಕೇಜ್ರಿವಾಲ್, ಎಎಪಿ ಟಿಕೆಟ್‌ನಡಿ ಸ್ಪರ್ಧಿಸುವಂತೆ ಮನವಿ ಮಾಡಿದ್ದಾರೆ.

ಪಣಜಿ ಕ್ಷೇತ್ರ ಹೊರತುಪಡಿಸಿ, ಬೇರೆ ಆಯ್ಕೆಗಳನ್ನು ಉತ್ಪಲ್ ಅವರಿಗೆ ನೀಡಲಾಗಿತ್ತು ಎಂದು ಬಿಜೆಪಿ ತಿಳಿಸಿದೆ. ಆದರೆ ಉತ್ಪಲ್ ಅವರು ಈ ಎರಡೂ ಆಯ್ಕೆಗಳನ್ನು ನಿರಾಕರಿಸಿದ್ದಾರೆ. ಉತ್ಪಲ್ ಅವರು ಎರಡು ದಿನಗಳಲ್ಲಿ ತಮ್ಮ ಮುಂದಿನ ನಿರ್ಧಾರವನ್ನು ಪ್ರಕಟಿಸುವ ಸಾಧ್ಯತೆಯಿದೆ. ಟಿಕೆಟ್ ನಿರಾಕರಿಸಿರುವುದರಿಂದ ಬೇಸರಗೊಂಡು ಪಕ್ಷವನ್ನು ತೊರೆಯಬೇಡಿ ಎಂದು ಸಚಿವರೊಬ್ಬರು ಉತ್ಪಲ್ ಅವರಲ್ಲಿ ಮನವಿ ಮಾಡಿದ್ದಾರೆ.

# ಬಿಜೆಪಿ ಶಾಸಕನನ್ನು ಓಡಿಸಿದ ಗ್ರಾಮಸ್ಥರು

**ಲಖನೌ (ಪಿಟಿಐ):** ವಿಧಾನಸಭಾ ಚುನಾವಣೆಗೆ ಸಜ್ಜಾದ ಉತ್ತರ ಪ್ರದೇಶದಲ್ಲಿ ಪ್ರಚಾರ ಕಾರ್ಯಕ್ಕೆ ತೆರಳಿದ್ದ ಬಿಜೆಪಿ ಶಾಸಕರೊಬ್ಬರನ್ನು ಗ್ರಾಮಸ್ಥರು ಬೆನ್ನಟ್ಟಿದ್ದಾರೆ. ಪ್ರಚಾರ ನಡೆಸದೆ ಆ ಶಾಸಕ ವಾಪಸ್ಸಾಗಿದ್ದಾರೆ.

ಪ್ರಚಾರಕ್ಕಾಗಿ ಬಿಜೆಪಿ ಶಾಸಕ ವಿಕ್ರಮ್ ಸೈನಿ ಅವರು ಗುರುವಾರ ಮುನ್ವಾರ್‌ಪುರ್ ಗ್ರಾಮಕ್ಕೆ ತೆರಳಿದ್ದರು. ಸೈನಿ ಅವರು ಗ್ರಾಮ ಪ್ರವೇಶಿಸುವುದನ್ನು ಗ್ರಾಮಸ್ಥರು ತಡೆದಿದ್ದಾರೆ. ನಂತರ ಅವರ ವಿರುದ್ಧ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದ್ದಾರೆ. ವಾಪಸ್ ತೆರಳುವಂತೆ ಸೈನಿ ಅವರನ್ನು ಆಗ್ರಹಿಸಿದ್ದಾರೆ.

ಗ್ರಾಮಸ್ಥರ ಪ್ರತಿರೋಧ ಎದುರಿಸಿದ ಶಾಸಕರು, ಬೇರೆ ಆಯ್ಕೆಯಿಲ್ಲದೇ ಕಾರು ಹತ್ತಿ ವಾಪಸ್ ಹೋಗಿದ್ದಾರೆ.

ಈ ಕುರಿತ ವಿಡಿಯೊವನ್ನು ಕಿಸಾನ್ ಏಕತಾ ಮಂಚ್ ಟ್ವೀಟ್ ಮಾಡಿದ್ದು, ಸಾಮಾಜಿಕ ತಾಣಗಳಲ್ಲಿ ವೈರಲ್ ಆಗಿದೆ. ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ಹೋರಾಡುವಾಗ ಸೈನಿ ಅವರು ಆ ಹೋರಾಟವನ್ನು ಲೇವಡಿ ಮಾಡಿದ್ದರು. ಲಖಿಂಪುರ ಖೇರಿ ಪ್ರಕರಣದಲ್ಲಿ ರೈತರ ಪರವಾಗಿ ಅವರು ಒಂದು ಮಾತನ್ನೂ ಹೇಳಿಲ್ಲ. ಹೀಗಿದ್ದೂ ಅವರು ಮತ ಕೇಳಲು ರೈತರ ಮುಂದೆ ಬಂದಿದ್ದಾರೆ. ಅವರ ಸ್ಥಾನ ಯಾವುದು ಎಂಬುದನ್ನು ನಾವು ಅವರಿಗೆ ತೋರಿಸಿದ್ದೇವೆ' ಎಂದು ಸ್ಥಳದಲ್ಲಿದ್ದ ರೈತರು ಹೇಳಿದ್ದಾರೆ.

ಈ ಬಗ್ಗೆ ಸುದ್ದಿಗಾರರ ಜತೆ ಮಾತನಾಡಿರುವ ಶಾಸಕ ಸೈನಿ, ಗ್ರಾಮಸ್ಥರ ಪೈಕಿ ಕೆಲವರು ಮದ್ಯದ ಅಮಲಿನಲ್ಲಿದ್ದರು. ಹೀಗಾಗಿ ಭೇಟಿಗೆ ಪ್ರತಿರೋಧ ವ್ಯಕ್ತಪಡಿಸಿದ್ದರು. ಆದ್ದರಿಂದ ವಾಪಸ್ ಬಂದಿರುವುದಾಗಿ ಹೇಳಿದ್ದಾರೆ.

### ಮುಖ್ಯಾಂಶಗಳು

- ಉತ್ತರ ಪ್ರದೇಶದ ಮುನ್ವಾರ್ ಪುರದಲ್ಲಿ ಘಟನೆ
- ಪ್ರಚಾರಕ್ಕೆ ರೈತರು ಮತ್ತು ಗ್ರಾಮಸ್ಥರಿಂದ ಅಡ್ಡಿ
- ವಿರೋಧದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್

## 'ಹಳೆ ಪಿಂಚಣಿ ವ್ಯವಸ್ಥೆ ತರುತ್ತೇವೆ'

'ರಾಜ್ಯದಲ್ಲಿ ಸಮಾಜವಾದಿ ಪಕ್ಷವು ಅಧಿಕಾರಕ್ಕೆ ಬಂದರೆ ರಾಜ್ಯ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಮರುಜಾರಿ ಮಾಡುತ್ತೇವೆ' ಎಂದು ಪಕ್ಷದ ಮುಖ್ಯಸ್ಥ ಅಖಿಲೇಶ್ ಹೇಳಿದ್ದಾರೆ.

ಪಕ್ಷದ ವರ್ಚ್ಯುವಲ್ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪಿಂಚಣಿ ವಿಷಯವನ್ನು ಪಕ್ಷದ ಪ್ರಣಾಳಿಕೆಯಲ್ಲಿ ಸೇರಿಸಿಕೊಂಡಿದ್ದೇವೆ ಎಂದು ಹೇಳಿದರು.

'ಪಿಂಚಣಿಯು ನೌಕರರ ಹಕ್ಕು. ಅಂಬೇಡ್ಕರ್ ಅವರು ರಚಿಸಿದ್ದ ಸಂವಿಧಾನದಲ್ಲಿದ್ದ ಈ ಹಕ್ಕನ್ನು ನೌಕರರಿಂದ ಕಸಿದುಕೊಳ್ಳಲಾಗಿತ್ತು. ಈ ಹಕ್ಕನ್ನು ನಾವು ಮತ್ತೆ ನೀಡುತ್ತೇವೆ. ಹಳೆಯ ಪಿಂಚಣಿ ವ್ಯವಸ್ಥೆ ಮರುಜಾರಿಯಾದರೆ, ಲಕ್ಷಾಂತರ ನೌಕರರಿಗೆ ಅದರ ಪ್ರಯೋಜನ ದೊರೆಯಲಿದೆ' ಎಂದಿದ್ದಾರೆ.

### ಕಾಂಗ್ರೆಸ್ ತೊರೆದ 'ಲಡಕೀ ಹೂಂ, ಲಡ್ ಸಕತೀ ಹೂಂ' ಅಭಿಯಾನದ ಪೋಸ್ಟರ್ ಗರ್ಲ್

# ಪ್ರಿಯಾಂಕಾ ಮೌರ್ಯ, ಮುಲಾಯಂ ಸಂಬಂಧಿ ಬಿಜೆಪಿಗೆ

**ಲಖನೌ (ಪಿಟಿಐ):** ಉತ್ತರ ಪ್ರದೇಶದಲ್ಲಿ ಬಿಜೆಪಿ ಶಾಸಕರು ಮತ್ತು ಸಚಿವರು ಪಕ್ಷ ತೊರೆದು ಸಮಾಜವಾದಿ ಪಕ್ಷ ಸೇರುತ್ತಿದ್ದರೆ, ಇನ್ನೊಂದೆಡೆ ವಿರೋಧ ಪಕ್ಷಗಳ ಪ್ರಮುಖರನ್ನೇ ತನ್ನತ್ತ ಬಿಜೆಪಿ ಸೆಳೆಯುತ್ತಿದೆ. ಕಾಂಗ್ರೆಸ್‌ನ ಅತ್ಯಂತ ಮಹತ್ವಾಕಾಂಕ್ಷಿ 'ಲಡಕೀ ಹೂಂ, ಲಡ್ ಸಕತೀ ಹೂಂ' (ಹುಡುಗಿ, ಹೋರಾಡಬಲ್ಲೆ) ಅಭಿಯಾನದ ಪೋಸ್ಟರ್ ಗರ್ಲ್ ಆಗಿದ್ದ ಪ್ರಿಯಾಂಕಾ ಮೌರ್ಯಾ ಅವರು ಗುರುವಾರ ಬಿಜೆಪಿ ಸೇರಿದ್ದಾರೆ. ಸಮಾಜವಾದಿ ಪಕ್ಷದ ಮಾಜಿ ಮುಖ್ಯಸ್ಥ ಮುಲಾಯಂ ಸಿಂಗ್ ಯಾದವ್ ಅವರ ಸಂಬಂಧಿ ಮತ್ತು ಪಕ್ಷದ ಶಾಸಕ ಪ್ರಮೋದ್ ಗುಪ್ತಾ ಅವರು ಸಹ ಬಿಜೆಪಿ ಸೇರಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರ ನೇತೃತ್ವದಲ್ಲಿ ಆರಂಭಿಸಲಾಗಿರುವ ಲಡಕೀ ಹೂಂ, ಲಡ್ ಸಕತೀ ಹೂಂ ಅಭಿಯಾನದ ಮುಂಚೂಣಿಯ ರೂವಾರಿಗಳಲ್ಲಿ ಪ್ರಿಯಾಂಕಾ ಮೌರ್ಯ ಒಬ್ಬರಾಗಿದ್ದರು. ಈ ಅಭಿಯಾನದ ಅಡಿ ನಡೆಸಲಾದ ಮ್ಯಾರಾಥಾನ್, ಶಕ್ತಿ ಸಂವಾದದ ಪೋಸ್ಟರ್ ಮತ್ತು ಹೋರ್ಡಿಂಗ್‌ಗಳಲ್ಲಿ ಮೌರ್ಯ ಅವರ ಚಿತ್ರವನ್ನು ಬಳಸಿಕೊಳ್ಳಲಾಗಿತ್ತು. ಈಗ, 'ಪಕ್ಷವು ತನಗೆ ಟಿಕೆಟ್ ನೀಡಿಲ್ಲ' ಎಂದು ಹೇಳಿರುವ ಅವರು, ಬಿಜೆಪಿ ಸೇರಿದ್ದಾರೆ.

'ನಾನು ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದೆ. ಆದರೆ ಟಿಕೆಟ್‌ಗಾಗಿ ಲಂಚ ನೀಡಲು ನನ್ನ ಬಳಿ ಹಣ ಇರಲಿಲ್ಲ. ಹೀಗಾಗಿ ನನಗೆ ಟಿಕೆಟ್ ದೊರೆಯಲಿಲ್ಲ. ಆದರೆ ಒಂದು ತಿಂಗಳ ಹಿಂದಷ್ಟೇ ಪಕ್ಷ ಸೇರಿದ್ದವರಿಗೆ ಟಿಕೆಟ್ ನೀಡಲಾಗಿದೆ. ಇವೆಲ್ಲವೂ ಪೂರ್ವನಿರ್ಧರಿತ. ಈ ಕಾರಣದಿಂದಲೇ ಕಾಂಗ್ರೆಸ್ ತೊರೆದು, ಬಿಜೆಪಿ ಸೇರುತ್ತಿದ್ದೇನೆ' ಎಂದು ಅವರು ಹೇಳಿದ್ದಾರೆ.

ಮಹಿಳೆಯರನ್ನೇ ಕೇಂದ್ರವಾಗಿರಿಸಿಕೊಂಡು ಚುನಾವಣೆ ಎದುರಿಸುತ್ತಿರುವ ಕಾಂಗ್ರೆಸ್‌ಗೆ ಈ ಬೆಳವಣಿಗೆಯಿಂದ ತೀವ್ರ ಹಿನ್ನಡೆಯಾಗಲಿದೆ ಎಂದು ಬಿಜೆಪಿಯ ಕೆಲವು ನಾಯಕರು ಹೇಳಿದ್ದಾರೆ.

**ಮುಲಾಯಂ ದೂರದ ಸಂಬಂಧಿ:** ಗುರುವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಸೇರಿದ ಸಮಾಜವಾದಿ ಪಕ್ಷದ ಶಾಸಕ ಪ್ರಮೋದ್ ಗುಪ್ತಾ ಅವರು ಮುಲಾಯಂ ಸಿಂಗ್ ಅವರ ದೂರದ ಸಂಬಂಧಿ. ಅವರು ಪಕ್ಷ ತೊರೆದು ಬಿಜೆಪಿ ಸೇರಿರುವುದರಿಂದ ಈ ಚುನಾವಣೆಯಲ್ಲಿ ಅಖಿಲೇಶ್ ಯಾದವ್ ಅವರಿಗೆ ಭಾರಿ ಹಿನ್ನಡೆಯಾಗಲಿದೆ ಎಂದು ಬಿಜೆಪಿಯ ನಾಯಕರು ಹೇಳಿದ್ದಾರೆ. ಮುಲಾಯಂ ಕುಟುಂಬದಿಂದ ಬಿಜೆಪಿ ಸೇರುತ್ತಿರುವ ಎರಡನೇ ವ್ಯಕ್ತಿ ಇವರಾಗಿದ್ದಾರೆ. ಇದಕ್ಕೂ ಮುನ್ನ ಮುಲಾಯಂ ಸಿಂಗ್ ಅವರ ಕಿರಿಯ ಮಗನ ಪತ್ನಿ ಅಪರ್ಣಾ ಯಾದವ್ ಅವರು ಬಿಜೆಪಿ ಸೇರಿದ್ದರು. ಹಿಂದುಳಿದ ವರ್ಗಗಳ ನಾಯಕರನ್ನು ಸಮಾಜವಾದಿ ಪಕ್ಷಕ್ಕೆ ಸೇರಿಸಿಕೊಂಡು, ಬಿಜೆಪಿಯನ್ನು ದುರ್ಬಲ ಮಾಡಲು ಅಖಿಲೇಶ್ ಯತ್ನಿಸಿದ್ದರು. ಈಗ ಅವರ ಕುಟುಂಬದವರನ್ನೇ ಬಿಜೆಪಿ ತನ್ನತ್ತ ಸೆಳೆಯುತ್ತಿದೆ. ಈ ಮೂಲಕ ಸಮಾಜವಾದಿ ಪಕ್ಷದ ತಂತ್ರವನ್ನು ದುರ್ಬಲಗೊಳಿಸುತ್ತಿದೆ ಎಂದು ಪಕ್ಷದ ನಾಯಕರು ಹೇಳಿದ್ದಾರೆ.

ಬಿಜೆಪಿ ಸೇರಿದ ಪ್ರಮೋದ್ ಗುಪ್ತಾ (ಎಡಬದಿ) ಮತ್ತು ಪ್ರಿಯಾಂಕಾ ಮೌರ್ಯ ಅವರು ಪಕ್ಷದ ನಾಯಕ ಲಕ್ಷ್ಮೀಕಾಂತ್ ಬಾಜಪೈ ಅವರ ಜತೆಗೆ ಗೆಲುವಿನ ಸಂಜ್ಞೆ ತೋರಿದರು –ಪಿಟಿಐ ಚಿತ್ರ

## 'ಬಿಜೆಪಿಗೆ ಧನ್ಯವಾದಗಳು'

ನಮ್ಮ ಕುಟುಂಬದವರನ್ನು ಸೇರಿಸಿಕೊಳ್ಳುತ್ತಿರುವ ಬಿಜೆಪಿಗೆ ಧನ್ಯವಾದ ಹೇಳಬೇಕು ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಪ್ರತಿಕ್ರಿಯೆ ನೀಡಿದ್ದಾರೆ.

'ನಾವು ಕುಟುಂಬ ರಾಜಕಾರಣ ಮಾಡುತ್ತಿದ್ದೇವೆ, ಕುಟುಂಬದವರನ್ನೇ ರಾಜಕೀಯಕ್ಕೆ ತರುತ್ತಿದ್ದೇವೆ ಎಂದು ಬಿಜೆಪಿ ಸದಾ ನಮ್ಮ ಮೇಲೆ ಆರೋಪ ಮಾಡುತ್ತಿತ್ತು. ಈಗ ನಮ್ಮ ಕುಟುಂಬದವರನ್ನು ಬಿಜೆಪಿ ಸೇರಿಸಿಕೊಳ್ಳುತ್ತಿದೆ. ಈ ಮೂಲಕ ನಮ್ಮ ಮೇಲಿದ್ದ ಆರೋಪವನ್ನು ಬಿಜೆಪಿಯೇ ಇಲ್ಲವಾಗಿಸುತ್ತಿದೆ. ಈ ಸಂಬಂಧ ನನ್ನ ಮೇಲಿದ್ದ ಒತ್ತಡವನ್ನು ಬಿಜೆಪಿ ಕಡಿಮೆ ಮಾಡಿದೆ' ಎಂದು ಅಖಿಲೇಶ್ ಹೇಳಿದ್ದಾರೆ.

## 'ಪಕ್ಷಕ್ಕೆ ನಷ್ಟವಿಲ್ಲ'

'ಪ್ರಿಯಾಂಕಾ ಮೌರ್ಯ ಅವರು ಕಾಂಗ್ರೆಸ್ ಅಭಿಯಾನದ ಮುಂಚೂಣಿಯ ರೂವಾರಿಯಾಗಿರಲಿಲ್ಲ. ಅಭಿಯಾನದ ಪೋಸ್ಟರ್‌ಗೆ ಚಿತ್ರ ನೀಡಿದ ಹಲವರಲ್ಲಿ ಅವರೂ ಒಬ್ಬರು. ಅವರು ಈ ಅಭಿಯಾನದ ಮೂಲಕ ಜನಪ್ರಿಯತೆ ಹೆಚ್ಚಿಸಿಕೊಂಡರು. ಇದಕ್ಕಾಗಿ ಅವರು ಕಾಂಗ್ರೆಸ್‌ಗೆ ಕೃತಜ್ಞತೆ ಹೇಳಬೇಕು' ಎಂದು ಅಖಿಲ ಭಾರತ ಕಾಂಗ್ರೆಸ್ ಮಹಿಳಾ ಮೋರ್ಚಾದ ಕಾರ್ಯಕಾರಿ ಅಧ್ಯಕ್ಷೆ ಎನ್.ಡಿಸೋಜಾ ಅವರು ಹೇಳಿದ್ದಾರೆ.

'ಪ್ರಿಯಾಂಕಾ ಮೌರ್ಯ ಅವರು ಕಾಂಗ್ರೆಸ್‌ನ ಈ ವೇದಿಕೆಯನ್ನು ಬಳಸಿಕೊಂಡರು. ಕೆಲವೇ ದಿನಗಳಲ್ಲಿ ತಮ್ಮ ರಾಜಕೀಯ ನಿಲುವನ್ನೂ ಬದಲಿಸಿಕೊಂಡರು. ಈಗ ಬಿಜೆಪಿ ಸೇರಿದ್ದಾರೆ. ಇದರಿಂದ ಕಾಂಗ್ರೆಸ್‌ನ ಹೋರಾಟದ ಮೇಲೆ ಹೆಚ್ಚಿನ ಪರಿಣಾಮವೇನೂ ಆಗುವುದಿಲ್ಲ' ಎಂದು ಅವರು ಹೇಳಿದ್ದಾರೆ.

## ಚುನಾವಣಾ ಕಣದಲ್ಲಿ..

- ಅಖಿಲೇಶ್ ಯಾದವ್ ಅವರು ಈ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ. ಸಮಾಜವಾದಿ ಪಕ್ಷದ ಭದ್ರಕೋಟೆಯಾದ ಮೈನ್‌ಪುರಿ ಜಿಲ್ಲೆಯ ಕರ್ಹಾಲ್‌ನಿಂದ ಕಣಕ್ಕೆ ಇಳಿಯಲಿದ್ದಾರೆ
- ದಲಿತ ನಾಯಕ ಮತ್ತು ಆಜಾದ್ ಸಮಾಜ್ ಪಾರ್ಟಿಯ ನಾಯಕ ಚಂದ್ರಶೇಖರ್ ಆಜಾದ್ ಅವರು ಗೋರಖ್‌ಪುರ ಸಾದರ ಕ್ಷೇತ್ರದಿಂದ ಕಣಕ್ಕೆ ಇಳಿಯಲಿದ್ದಾರೆ ಎಂದು ಪಕ್ಷ ಘೋಷಿಸಿದೆ. ಇದೇ ಕ್ಷೇತ್ರದಿಂದ ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಬಿಜೆಪಿ ಕಣಕ್ಕೆ ಇಳಿಸುತ್ತಿದೆ
- ಪಂಜಾಬ್ ರೈತ ಸಂಘಟನೆಗಳ ರಾಜಕೀಯ ಪಕ್ಷ 'ಸಂಯುಕ್ತ ಸಮಾಜ್ ಮೋರ್ಚಾ' 17 ಅಭ್ಯರ್ಥಿಗಳ ಪಟ್ಟಿಯನ್ನು ಬುಧವಾರ ಹೊರಬಿಟ್ಟಿದೆ. ಈವರೆಗೂ 57 ಅಭ್ಯರ್ಥಿಗಳನ್ನು ಎಸ್‌ಎಸ್‌ಎಂ ಘೋಷಿಸಿದೆ. ಮುಂದಿನ ಎರಡು ದಿನಗಳಲ್ಲಿ ಎಲ್ಲಾ ಅಭ್ಯರ್ಥಿಗಳ ಹೆಸರನ್ನು ಘೋಷಿಸಲಾಗುವುದು ಎಂದು ಪಕ್ಷ ಹೇಳಿದೆ
- ಉತ್ತರ ಪ್ರದೇಶ ಚುನಾವಣೆಗೆ ಕಾಂಗ್ರೆಸ್ ಎರಡನೇ ಪಟ್ಟಿ ಬಿಡುಗಡೆ ಮಾಡಿದೆ. 41 ಅಭ್ಯರ್ಥಿಗಳಿರುವ ಈ ಪಟ್ಟಿಯಲ್ಲಿ, 16 ಮಹಿಳೆಯರಿಗೆ ಸ್ಥಾನ ನೀಡಲಾಗಿದೆ. ಈವರೆಗೆ 66 ಮಹಿಳೆಯರಿಗೆ ಪಕ್ಷ ಟಿಕೆಟ್ ನೀಡಿದೆ

## ನುಡಿ-ಕಿಡಿ

ಚುನಾವಣೆ ನಡೆಯುವಾಗಲೆಲ್ಲಾ, ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳ ಸಂಬಂಧಿಗಳ ಮೇಲೆ ಕೇಂದ್ರದ ಸಂಸ್ಥೆಗಳು ಶೋಧಕಾರ್ಯ ನಡೆಸುತ್ತವೆ. ಇವು ಯೋಗಿ ಆದಿತ್ಯನಾಥ ಅವರ ಸಂಬಂಧಿ, ಗೋವಾ ಮುಖ್ಯಮಂತ್ರಿ ಸಂಬಂಧಿಗಳ ಮನೆ ಮೇಲೆ ಏಕೆ ನಡೆಯುವುದಿಲ್ಲ?
**ಭೂಪೇಶ್ ಬಘೇಲ್,** ಛತ್ತೀಸಗಡ ಮುಖ್ಯಮಂತ್ರಿ

ಕಾಂಗ್ರೆಸ್ ಅನ್ನು ಮುಗಿಸಲು ಟಿಎಂಸಿಯು ಬಿಜೆಪಿ ಜತೆ ಕೈಜೋಡಿಸಿದೆ. ಹೀಗಾಗಿಯೇ ಹಲವು ರಾಜ್ಯಗಳಲ್ಲಿ ಟಿಎಂಸಿ ಸ್ವತಂತ್ರವಾಗಿ ಚುನಾವಣೆ ಎದುರಿಸುತ್ತಿದೆ. ಈ ಮೂಲಕ ಬಿಜೆಪಿಯೇತರ ಮತಗಳನ್ನು ಟಿಎಂಸಿ ವಿಭಜಿಸುತ್ತದೆ. ಬಿಜೆಪಿ ವಿರುದ್ಧದ ಹೋರಾಟಎಂಬುದು ಆ ಪಕ್ಷದ ನಾಟಕವಷ್ಟೆ
**ಅಧಿರ್ ರಂಜನ್ ಚೌಧರಿ,** ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ

ಗೋವಾದಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಉದ್ದೇಶದಿಂದ ಸ್ವತಃ ನಾನೇಚಿದಂಬರಂ ಅವರನ್ನು ಭೇಟಿ ಮಾಡಿದ್ದೆ. ಅವರ ವರ್ತನೆ ನನ್ನನ್ನು ನಿರಾಶೆಗೊಳಿಸಿತ್ತು. ಆದರೆ ಈಗ ಅವರು ಮಾಧ್ಯಮಗಳ ಮುಂದೆ ಬೇರೆಯದ್ದೇ ಕತೆ ಹೇಳುತ್ತಿದ್ದಾರೆ
**ಪವನ್ ವರ್ಮಾ,** ಟಿಎಂಸಿ ನಾಯಕ

# ಚನ್ನಿ ರಾಜೀನಾಮೆಗೆ ವಿಪಕ್ಷಗಳ ಆಗ್ರಹ

**ಚಂಡೀಗಡ (ಪಿಟಿಐ):** ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಸಂಬಂಧಿಗೆ ಸೇರಿದ ಆಸ್ತಿ ಮೇಲೆ ಜಾರಿ ನಿರ್ದೇಶನಾಲಯ(ಇ.ಡಿ.) ನಡೆಸಿದ ದಾಳಿಯ ಕಾರಣ, ಪಂಜಾಬ್‌ನ ಕಾಂಗ್ರೆಸ್ ಸರ್ಕಾರವನ್ನು ಗುರಿಯಾಗಿಸಿಕೊಂಡು ವಿಪಕ್ಷಗಳು ದಾಳಿ ನಡೆಸಿವೆ. ಚನ್ನಿ ಅವರ ರಾಜೀನಾಮೆಯನ್ನು ವಿಪಕ್ಷಗಳು ಆಗ್ರಹಿಸಿವೆ.

ಮರಳು ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ. ಇತ್ತೀಚೆಗೆ ಚನ್ನಿ ಸಂಬಂಧಿ ನಿವಾಸದ ಮೇಲೆ ದಾಳಿ ನಡೆಸಿತ್ತು.

'ಮುಖ್ಯಮಂತ್ರಿಯ ನೇತೃತ್ವದಲ್ಲೇ ರಾಜ್ಯದಲ್ಲಿ ಮರಳು ಮಾಫಿಯಾ ನಡೆಯುತ್ತಿದೆ ಎಂಬುದು ಎಡಿ ದಾಳಿಯಿಂದ ಸಾಬೀತಾಗಿದೆ. ಮರಳು ದಂದೆಯಲ್ಲಿ ತನ್ನ ಕುಟುಂಬದವರನ್ನು ಸಲಹುತ್ತಿರುವ ಕಾರಣ ಚನ್ನಿ ಅವರು ರಾಜೀನಾಮೆ ನೀಡಬೇಕು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಘ್ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಂಬಂಧಿಗೆ ಸೇರಿದ ಸ್ಥಳದಿಂದ ದೊಡ್ಡ ಮೊತ್ತವನ್ನು ಇ.ಡಿ. ವಶಪಡಿಸಿಕೊಂಡಿರುವುದು ಚನ್ನಿ ಅವರು ಮರಳು ಮಾಫಿಯಾದಲ್ಲಿ ಭಾಗಿಯಾಗಿದ್ದಾರೆ ಎಂಬುದಕ್ಕೆ ಸಾಕ್ಷಿ ಎಂದು ಅವರು ಆರೋಪಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ಗೆ ಆಗಮಿಸಿದ್ದ ವೇಳೆ ಭದ್ರತಾ ಲೋಪವಾಗಿತ್ತು. ಆ ಘಟನೆಯ ಹಗೆ ತೀರಿಸಿಕೊಳ್ಳಲು ಕೇಂದ್ರ ಸರ್ಕಾರ ಇ.ಡಿ. ದಾಳಿ ನಡೆಸಿದೆ ಎಂದು ಚನ್ನಿ ಅವರು ಆರೋಪಿಸಿದ್ದಾರೆ. ಆದರೆ ಈ ಮೊಕದ್ದಮೆ 2018ರಲ್ಲೇ ದಾಖಲಾಗಿದೆ. ಈ ಮೊಕದ್ದಮೆಯ ತನಿಖೆಯನ್ನು ಇ.ಡಿ. ಸಂಪೂರ್ಣಗೊಳಿಸಿದೆ. ಮುಖ್ಯಮಂತ್ರಿ ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಬೇಕು ಎಂದು ತರುಣ್ ಹೇಳಿದ್ದಾರೆ.

ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಅಧ್ಯಕ್ಷ ಸುಖ್ಬೀರ್ ಸಿಂಗ್ ಬಾದಲ್ ಕೂಡಾ ಚನ್ನಿ ಅವರ ರಾಜೀನಾಮೆಯನ್ನು ಕೇಳಿದ್ದಾರೆ. 'ಮರಳು ಅಕ್ರಮ ಗಣಿಗಾರಿಕೆಯಲ್ಲಿ ಚನ್ನಿ ಅವರ ಪಾತ್ರವಿದೆ ಎಂಬ ಸಂದೇಹ ನಮಗೆ ಇತ್ತು. ಚನ್ನಿ ಸಂಬಂಧಿ ಮನೆಯಲ್ಲಿ ದೊಡ್ಡ ಮೊತ್ತದ ಹಣವನ್ನು ಇ.ಡಿ. ವಶಪಡಿಸಿಕೊಂಡ ನಂತರ ಆ ಸಂದೇಹ ನಿಜವಾಗಿದೆ. ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯಲು ಚನ್ನಿ ಅವರಿಗೆ ನೈತಿಕ ಹಕ್ಕು ಇಲ್ಲ. ಅವರು ಕೂಡಲೇ ರಾಜೀನಾಮೆ ನೀಡಬೇಕು' ಎಂದು ಅವರು ಹೇಳಿದ್ದಾರೆ.

## ಕೇಂದ್ರದ ಸಂಚು: ಚನ್ನಿ

**ಚಂಡೀಗಢ (ಪಿಟಿಐ):** ಮರಳು ಅಕ್ರಮ ಗಣಿಗಾರಿಕೆ ಮೊಕದ್ದಮೆಯಲ್ಲಿ ತಮ್ಮನ್ನು ಸಿಲುಕಿಸಲು ಕೇಂದ್ರ ಸರ್ಕಾರ ಸಂಚು ರೂಪಿಸಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'24 ಗಂಟೆಗಳ ಕಾಲ ನನ್ನ ಸಂಬಂಧಿಯ ವಿಚಾರಣೆ ನಡೆಸಲಾಗಿದೆ. ಆ ವೇಳೆ ನನ್ನನ್ನು ಸಿಲುಕಿಸುವ ಪ್ರಯತ್ನಗಳೂ ನಡೆದಿವೆ. ನನ್ನನ್ನು ಬಂಧಿಸಿದ ಕೂಡಲೇ ವಿಚಾರಣೆಗೆ ಒಪ್ಪಿಸಲು ಕೋರ್ಟನ್ನು ಕೂಡಾ 24 ಗಂಟೆಗಳ ತೆರೆದಿಡಲಾಗಿತ್ತು. ಆದರೆ ನನ್ನ ವಿರುದ್ಧ ಯಾವುದೇ ಸಾಕ್ಷಿ ದೊರಕಲಿಲ್ಲ. ಅದಕ್ಕಾಗಿ ಎಫ್‌ಐಆರ್ ದಾಖಲಿಸಲಿಲ್ಲ' ಎಂದು ಅವರು ಹೇಳಿದ್ದಾರೆ.

'ನನ್ನ ಸಂಬಂಧಿ ತಪ್ಪು ಮಾಡಿದ್ದರೆ ಆತನನ್ನು ಗಲ್ಲಿಗೇರಿಸಿ. ಆದರೆ ನನ್ನನ್ನು ಈ ಮೊಕದ್ದಮೆಯಲ್ಲಿ ಎಳೆಯುವ ಪ್ರಯತ್ನಗಳು ಏಕೆ ನಡೆಯುತ್ತಿವೆ?' ಎಂದು ಅವರು ಪ್ರಶ್ನಿಸಿದ್ದಾರೆ.

## ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆಗೆ ಕಾಂಗ್ರೆಸ್ ಮೇಲೆ ಒತ್ತಡ

**ಚಂಡೀಗಡ (ಪಿಟಿಐ):** ಪಂಜಾಬ್ ವಿಧಾನಸಭೆ ಚುನಾವಣೆ ಕೆಲವೇ ದಿನಗಳು ಬಾಕಿ ಇರುವಂತೆ ಆಮ್ ಆದ್ಮಿ ಪಕ್ಷ (ಎಎಪಿ) ಸೇರಿ ಪ್ರಮುಖ ಪಕ್ಷಗಳು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿವೆ. ಆದರೆ ಕಾಂಗ್ರೆಸ್ ಈವರೆಗೂ ಅಂತಹ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಹೀಗಾಗಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಬೇಕು ಎಂಬ ಒತ್ತಡದಲ್ಲಿ ಕಾಂಗ್ರೆಸ್ ಇದೆ.

ಮುಖ್ಯಮಂತ್ರಿ ಅಭ್ಯರ್ಥಿಯನ್ನು ಆದಷ್ಟು ಬೇಗ ಘೋಷಿಸಬೇಕು ಎಂಬ ಕೂಗು ರಾಜ್ಯ ಕಾಂಗ್ರೆಸ್‌ನ ಒಳಗಿನಿಂದಲೇ ಕೇಳಿಬರುತ್ತದೆ. ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಬೇಕು ಎಂದು ರಾಜ್ಯದ ಕೆಲವು ಸಚಿವರು ಒತ್ತಾಯಿಸಿದ್ದಾರೆ.

ಪಕ್ಷವು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಬೇಕು ಎಂದು ಪಂಜಾಬ್ ಸಚಿವ, ಕಾಂಗ್ರೆಸ್ ನಾಯಕ ಬ್ರಹ್ಮ್ ಮೊಹಿಂದ್ರಾ ಒತ್ತಾಯಿಸಿದ್ದಾರೆ. ಜೊತೆಗೆ, ಚನ್ನಿ ಅವರೇ ಸೂಕ್ತ ಅಭ್ಯರ್ಥಿ ಎಂದು ಒತ್ತಿ ಹೇಳಿದ್ದಾರೆ.

# ಶಿರಾಡಿಘಾಟ್ ರಸ್ತೆ ಮೇಲ್ದರ್ಜೆಗೆ: ಕೇಂದ್ರ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿರಾಡಿ ಘಾಟ್ ರಸ್ತೆಯನ್ನು ನಾಲ್ಕು ಪಥದ ರಸ್ತೆಯಾಗಿ ಮೇಲ್ದರ್ಜೆಗೆ ಏರಿಸಬೇಕೆಂಬ ಕರ್ನಾಟಕದ ಬಹು ವರ್ಷಗಳ ಬೇಡಿಕೆ ಕೈಗೂಡುವ ಕಾಲ ಸನ್ನಿಹಿತವಾಗಿದೆ.

ಬೆಂಗಳೂರು–ಮಂಗಳೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯಲ್ಲಿನ ಶಿರಾಡಿ ಘಾಟ್ ಸದ್ಯ ದ್ವಿಪಥ ರಸ್ತೆಯಾಗಿದೆ.



ಇದನ್ನು ₹1200 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸುವ ಮಹತ್ವಾಕಾಂಕ್ಷಿ ಯೋಜನೆಗೆ ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಒಪ್ಪಿಗೆ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಶಿರಾಡಿ ಘಾಟ್ ಮೂಲಕ ಆರು ಪಥಗಳ ಸುರಂಗ ಮಾರ್ಗ ನಿರ್ಮಿಸುವ ಬಗ್ಗೆ ಅಧ್ಯಯನ ಕೈಗೊಳ್ಳಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ಗಡ್ಕರಿ ಸೂಚಿಸಿದ್ದಾರೆ. ಎನ್‌ಎಚ್‌ಎಐ ರಸ್ತೆ ಕಾಮಗಾರಿ ನಿರ್ವಹಿಸಲಿದ್ದು, ಎರಡು ವರ್ಷಗಳ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವ ಭರವಸೆಯನ್ನೂ ಕೇಂದ್ರ ಸಚಿವರು ನೀಡಿದ್ದಾರೆ. ಈ ಯೋಜನೆಗೆ ಅಗತ್ಯ ಇರುವ ಎಲ್ಲ ಅನುಮೋದನೆ ಹಾಗೂ ಸಹಕಾರವನ್ನು ರಾಜ್ಯ ಸರ್ಕಾರ ನೀಡಲಿದೆ ಎಂದು ಬೊಮ್ಮಾಯಿ ತಿಳಿಸಿದ್ದಾರೆ.

ಶಿರಾಡಿ ಘಾಟ್ ಕಿರಿದಾಗಿರುವುದರಿಂದ ಹಾಗೂ ಮಳೆಗಾಲದಲ್ಲಿ ಪದೇ ಪದೇ ಹಾಳಾಗುವುದರಿಂದ ಈ ರಸ್ತೆಯಲ್ಲಿ ಓಡಾಡುವುದು ದುಸ್ತರ ಎಂಬಂತಾಗಿದೆ. ಈ ಯೋಜನೆ ಪೂರ್ಣಗೊಂಡರೆ ಬೆಂಗಳೂರಿನಿಂದ ಮಂಗಳೂರುವರೆಗಿನ ರಸ್ತೆ ಏಕ ರೀತಿಯಲ್ಲಿ ನಾಲ್ಕು ಪಥದ ರಸ್ತೆಯಾಗಲಿದೆ. ಪರಿಸರ ಹಾಗೂ ಆರ್ಥಿಕ ದೃಷ್ಟಿಯಿಂದ ಸುಸ್ಥಿರ ರೀತಿಯಲ್ಲಿ ಹೆದ್ದಾರಿಯನ್ನು ಅಭಿವೃದ್ಧಿ ಪಡಿಸುವುದರಿಂದ ಈ ರಸ್ತೆ ಹಾದುಹೋಗುವ ಉದ್ದಕ್ಕೂ ಆರ್ಥಿಕ ಚಟುವಟಿಕೆಗೆ ನೆರವು ಸಿಗಲಿದೆ ಎಂದೂ ಅವರು ಪ್ರತಿಪಾದಿಸಿದ್ದಾರೆ.

ಶಿರಾಡಿ ಘಾಟ್ ರಸ್ತೆ ರಾಜ್ಯದ ಜೀವನಾಡಿ. ಇದನ್ನು ನಾಲ್ಕು ಪಥ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಒಪ್ಪಿಗೆ ನೀಡಿರುವ ಸಚಿವ ನಿತಿನ್ ಗಡ್ಕರಿ ಅವರಿಗೆ ಧನ್ಯವಾದಗಳು ಎಂದೂ ಹೇಳಿದ್ದಾರೆ.

## 'ಹೊಗೇನಕಲ್ ಯೋಜನೆ 2ನೇ ಹಂತ: ಡಿಪಿಆರ್ ಶೀಘ್ರ'

ಚೆನ್ನೈ (ಪಿಟಿಐ): ಹೊಗೇನಕಲ್ ಕುಡಿಯುವ ನೀರು ಯೋಜನೆಯ ಎರಡನೇ ಹಂತದ ಕಾಮಗಾರಿಯನ್ನು ಅಂದಾಜು ₹ 4,600 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಶೀಘ್ರವೇ ಸಿದ್ಧಪಡಿಸಲಾಗುವುದು ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಗುರುವಾರ ಹೇಳಿದ್ದಾರೆ. ಧರ್ಮಪುರಿ ಹಾಗೂ ಕೃಷ್ಣಗಿರಿ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಇದಾಗಿದೆ.

# ಕೇಂದ್ರ–ರಾಜ್ಯದ ಯೋಜನೆಗಳ ಮಾಹಿತಿಗೆ ವೆಬ್‌ಸೈಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ಜಾಲತಾಣದೊಂದಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಮಾಹಿತಿಗಳಿರುವ ವೆಬ್‌ಸೈಟ್ ಜೋಡಿಸುವುದರಿಂದ ಜನರ ಮತ್ತು ಸರ್ಕಾರದ ನಡುವಿನ ಸಂವಹನಕ್ಕೆ ಸೇತುವೆ ಆಗಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೈಸೂರಿನ ಬೃಹತ್ ಕೌಶಲಾಭಿವೃದ್ಧಿ, ಸ್ವಯಂ ಉದ್ಯೋಗ ಹಾಗೂ ಉದ್ಯೋಗ ನೋಂದಣಿ ಕಾರ್ಯಕ್ರಮದ ಮಾಹಿತಿಗಳನ್ನೊಳಗೊಂಡಪುಸ್ತಕ ಹಾಗೂ ಕೇಂದ್ರ–ರಾಜ್ಯ ಸರ್ಕಾರದ ಯೋಜನೆಗಳ ಮಾಹಿತಿಯ ವೆಬ್‌ಸೈಟ್‌ಗೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಸಮಾಜದ ವಿವಿಧ ಸ್ತರಗಳಲ್ಲಿ ಜನೋಪಯೋಗಿ ಕಾರ್ಯಕ್ರಮಗಳು ಒಂದೇ ಸೂರಿನಡಿ ಲಭ್ಯವಾಗುವುದು ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ಚಿಂತನೆ. ಜನರ ಒಳಿತಿಗಾಗಿ ಇರುವ ಕಾರ್ಯಕ್ರಮಗಳ ಮಾಹಿತಿ ಹಾಗೂ ಅದರ ಲಾಭವನ್ನು ಪಡೆದುಕೊಳ್ಳಲು ಮಾರ್ಗಸೂಚಿಗಳು ಈ ಪುಸ್ತಕದಲ್ಲಿ ಲಭ್ಯವಿದೆ. ರಾಜ್ಯ ಯೋಜನೆಗಳ ಪ್ರಯೋಜನ ಎಲ್ಲರಿಗೂ ತಲುಪಿಸಲು ವಿಸ್ತರಿಸುವಲ್ಲಿ ಈ ಪುಸ್ತಕ ಕೆಲಸ ಮಾಡಲಿದೆ. ಆಡಳಿತಗಾರರಿಗೆ ಹಾಗೂ ಜನರಿಗೆ ಉತ್ತಮ ಮಾರ್ಗದರ್ಶಕ ಆಗಲಿದೆ' ಎಂದರು.

'ರಾಜ್ಯ ಸರ್ಕಾರದ ಯೋಜನೆಗಳ ಮಾಹಿತಿಗಳಿರುವ ವೆಬ್‌ಸೈಟ್‌ನಿಂದ ಸರ್ಕಾರಿ ಕಾರ್ಯಕ್ರಮಗಳ ಉದ್ದೇಶ, ಮಾಹಿತಿ ಹಾಗೂ ಪ್ರಯೋಜನಗಳ ಬಗ್ಗೆಯೂ ಜನರಿಗೆ ಸ್ಪಷ್ಟವಾದ ಮಾಹಿತಿ ಸಿಗಲಿದೆ' ಎಂದೂ ಹೇಳಿದರು.

## 'ಉದ್ಯೋಗ ನೀತಿಯಿಂದ ಯುವಕರಿಗೆ ಲಾಭ'

ಬೆಂಗಳೂರು: 'ಯುವಕರಿಗೆ, ಉದ್ಯೋಗ ಆಕಾಂಕ್ಷಿಗಳಿಗೆ ರಾಜ್ಯದ ಉದ್ಯೋಗ ನೀತಿ ಲಾಭದಾಯಕ ಆಗಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ಕಟ್ಟಡ ಹಾಗೂ ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಆನ್‌ಲೈನ್ ಮೂಲಕ ವಿದ್ಯಾರ್ಥಿ ವೇತನ ವಿತರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

'ದುಡಿಯುವ ವರ್ಗಕ್ಕೆ ಆರ್ಥಿಕ ಶಕ್ತಿ ನೀಡಿದರೆ, ರಾಜ್ಯದ ಆರ್ಥಿಕ ಶಕ್ತಿ ವೃದ್ಧಿಸುತ್ತದೆ. ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ಮೂಲಕ ಮಕ್ಕಳು ಉತ್ತಮ ಶಿಕ್ಷಣ ಪಡೆದು ವಿವಿಧ ಉದ್ಯೋಗಗಳಲ್ಲಿ ತೊಡಗಿಸಿಕೊಂಡು ಆರ್ಥಿಕತೆಯ ಅಭಿವೃದ್ಧಿಗೆ ಕೊಡುಗೆ ನೀಡುವಂತಾಗಬೇಕು' ಎಂದರು.

ಉದ್ಯೋಗ ನೀತಿಗೆ ಸಂಬಂಧಿಸಿದಂತೆ ಅವರು ಸಭೆ ನಡೆಸಿ, ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು. ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್, ಶಾಸಕ ರಾಮದಾಸ್, ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣಾ ಇದ್ದರು.

## ಅತಿಥಿ ಉಪನ್ಯಾಸಕ ಹುದ್ದೆ: 30 ಸಾವಿರಕ್ಕೂ ಹೆಚ್ಚು ಅರ್ಜಿ

ಬೆಂಗಳೂರು: 'ರಾಜ್ಯದಲ್ಲಿ 2021-22ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಅತಿಥಿ ಉಪನ್ಯಾಸಕರ ನೇಮಕ ಪ್ರಕ್ರಿಯೆಗೆ ಭಾರಿ ಸ್ಪಂದನೆ ವ್ಯಕ್ತವಾಗಿದ್ದು, ಗುರುವಾರದವರೆಗೆ 30 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದಾರೆ' ಎಂದು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ತಿಳಿಸಿದ್ದಾರೆ.

'ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಗೌರವಧನವನ್ನು ಇತ್ತೀಚೆಗೆ ಎರಡೂವರೆ ಪಟ್ಟಿಗಿಂತ ಹೆಚ್ಚು ಏರಿಸಲಾಗಿದೆ. ಇದು ಅರ್ಹ ಅಭ್ಯರ್ಥಿಗಳಲ್ಲಿ ಸಕಾರಾತ್ಮಕ ಪರಿಣಾಮ ಉಂಟು ಮಾಡಿದೆ ಎನ್ನುವುದಕ್ಕೆ ಸಲ್ಲಿಕೆಯಾಗಿರುವ ಅರ್ಜಿಗಳೇ ಸಾಕ್ಷಿ' ಎಂದಿದ್ದಾರೆ.

'ಅರ್ಜಿ ಸಲ್ಲಿಸಲು ಶುಕ್ರವಾರ ಮಧ್ಯರಾತ್ರಿ 12 ಗಂಟೆವರೆಗೂ ಅವಕಾಶವಿದೆ. ಈವರೆಗೂ ಅರ್ಜಿ ಸಲ್ಲಿಸದ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳು ಆನ್‌ಲೈನ್‌ಲ್ಲಿ (https://dec.karnataka/gov.in) ಅರ್ಜಿ ಸಲ್ಲಿಸಬಹುದು' ಎಂದು ಅವರು ಹೇಳಿದ್ದಾರೆ.

## 250 ಕೆ.ಜಿ ಸ್ಫೋಟಕ ಪತ್ತೆ: ಇಬ್ಬರು ವಶಕ್ಕೆ

ಬಾಗಲಕೋಟೆ: ಜಿಲ್ಲೆಯ ಹೊನ್ನಾಕಟ್ಟಿ ಗ್ರಾಮದ ತೋಟದ ಮನೆಯೊಂದರ ಮೇಲೆ ಗುರುವಾರ ಬೆಳಿಗ್ಗೆ ದಾಳಿ ನಡೆಸಿರುವ ಬಾಗಲಕೋಟೆ ಪೊಲೀಸರು 250 ಕೆ.ಜಿ ಸ್ಫೋಟಕ ವಸ್ತುಗಳನ್ನು ಪತ್ತೆ ಹಚ್ಚಿದ್ದಾರೆ. ಘಟನೆಗೆ ಸಂಬಂಧಿಸಿದಂತೆ, ವಿಜಯ ಹಾಗೂ ಮಂಜುನಾಥ ಎಂಬುವರನ್ನು ವಶಕ್ಕೆ ಪಡೆದಿದ್ದಾರೆ.

ಕಂಕನಮೇಲಿ, ನಾರಾ ಎಂಬುವವರು ಭೋಗ್ಯಕ್ಕೆ ಪಡೆದಿದ್ದ ಮನೆಯಲ್ಲಿ ಸ್ಫೋಟಕಗಳ ಜೊತೆಗೆ ಗಂಧಕ, ಸೋಡಿಯಂ ನೈಟ್ರೇಟ್ ಹಾಗೂ ಚಾರ್ಕೋಲ್ ಪೌಡರ್ ಸಹ ಸಿಕ್ಕಿದೆ. ಕಲ್ಲು ಗಣಿಗಾರಿಕೆಗೆ ಇವುಗಳನ್ನು ಮಾರಲಾಗುತ್ತಿತ್ತು ಎಂದು ತಿಳಿದುಬಂದಿದೆ. ತನಿಖೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು – 560023.
ದೂರವಾಣಿ: 9449843427, ಇ–ಮೇಲ್: ddfwhfws@gmail.com
Notification No: SNO/ASHA/15/2021-22 Date: 20-01-2022
Ref. No: NRHM/2021-22/IND 269, ASHA Diary
ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಆಶಾ ಕಾರ್ಯಕ್ರಮಕ್ಕೆ ಅವಶ್ಯವಿರುವ ಆಶಾ ದಿನಚರಿ (ಡೈರಿ)ಗಳನ್ನು ಮುದ್ರಿಸಿ ಸರಬರಾಜು ಮಾಡಲು, ಸರಬರಾಜುದಾರರನ್ನು ಅಗತ್ಯ ದಾಖಲೆಗಳೊಂದಿಗೆ ಭಾಗವಹಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್: www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯೂಮೆಂಟ್‌ನ್ನು ದಿನಾಂಕ: 19–01–2022 ಸಂಜೆ 5.00 ಗಂಟೆ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯೂಮೆಂಟ್‌ನ್ನು ದಿನಾಂಕ: 07–02–2022 ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.
ಹೆಚ್ಚಿನ ಮಾಹಿತಿಗಾಗಿ ಕೆಳಸಹಿದಾರರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಬೆಳಿಗ್ಗೆ 11.00 ರಿಂದ ಸಂಜೆ 5.30 ಗಂಟೆಯೊಳಗೆ ಪಡೆಯಬಹುದಾಗಿರುತ್ತದೆ.
ಸಹಿ/– ಯೋಜನಾ ನಿರ್ದೇಶಕರು ಆರ್.ಸಿ.ಹೆಚ್
ವಾಸಾಸಂಇ/ಬೆಂ.ನ/ಅಡ್ವರ್ಟೋ/2952/2021–22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಪಟ್ಟಣ ಪಂಚಾಯತ ಕಾರ್ಯಾಲಯ, ಕಲಘಟಗಿ.
ಕ್ರಮಾಂಕ/ಪಪಂ/ಕಾ.ವಿ./ಟೆಂ.ಪ್ರ/2021–22 ದಿನಾಂಕ: 19–01–2022
ಟೆಂಡರ ಪ್ರಕಟಣೆ ಇ–ಪ್ರೊಕ್ಯೂರಮೆಂಟ್ ಮೂಲಕ
ಈ ಮೂಲಕ ಯಾವತ್ತೂ ನೊಂದಾಯಿತ ಅರ್ಹ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ 2021–22 ನೇ ಸಾಲಿನ ಅಮೃತ ನಿರ್ಮಲ ನಗರ ಅನುದಾನದಡಿ INDENT No 126470, 126376 Goods INDENT 13110 ಕೈಗೊಂಡ ಕಾಮಗಾರಿಗಳನ್ನು ನಿರ್ವಹಿಸಲು ಐಟಂವಾರು ಟೆಂಡರಗಳನ್ನು ಅಹ್ವಾನಿಸಲಾಗಿದೆ. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ :02–02–2022ರ ಸಾಯಂಕಾಲ 04:00 ಗಂಟೆವರೆಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ / ಷರತ್ತುಗಳಿಗಾಗಿ www.eproc.karnataka.gov.in ವೆಬಸೈಟನಿಂದ ಪಡೆಯಬಹುದಾಗಿದೆ.
ಸಹಿ/– ಶ್ರೀ. ವೈ .ಜಿ. ಗದ್ದಿಗೌಡರ ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ, ಕಲಘಟಗಿ
ಸಹಿ/– ಶ್ರೀಮತಿ. ಅನಸೂಯಾ ಹೆಬ್ಬಳ್ಳಿಮಠ ಅಧ್ಯಕ್ಷರು,ಪಟ್ಟಣ ಪಂಚಾಯತ, ಕಲಘಟಗಿ
ವಾ.ಸಾ.ಇ/ಧಾ/908/2021–22/ದೇಶಪಾಂಡೆಪಬ್ಲಿಸಿಟಿ
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ, ಕೃವಿವಿ, ರಾಯಚೂರು
ಮಿಂಚಂಚೆ: spo@uasraichur.edu.in ದೂರವಾಣಿ ಸಂಖ್ಯೆ: 08532 220165
ಇ–ಟೆಂಡರ್ ಪ್ರಕಟಣೆ ಸಂಖ್ಯೆ: SPO/UASR/E-Proc-14/2021-22 Dt: 14-01-2022
:: ಟೆಂಡರ ಪ್ರಕಟಣೆ ::
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ ವೈಜ್ಞಾನಿಕ ಮತ್ತು ಇನ್ನಿತರ ವಸ್ತುಗಳ ಖರೀದಿಗಾಗಿ ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.eproc.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UAS/2021-22/IND 4038, 4039, 4040, 4041, & 4116 to 4123) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ: 31–01–2022 ಆಗಿರುತ್ತದೆ.
ಸಹಿ/– ಸರಕು ಖರೀದಿ ಅಧಿಕಾರಿಗಳು, ಕೃವಿವಿ ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/526/ಎಂ.ಸಿ.&ಎ/2021–22



ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ
ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–06
ನಂ:ದಾಹನಪ್ರಾ:ತಾಶಾ:ಕಿಅ:ಇಪ್ರ:ಟೆಂಪ್ರ: :2021–22/2993 ದಿನಾಂಕ:20–01–2022.
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ರಾಜ್ಯಪಾಲರ ಪರವಾಗಿ ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಕೆಳಕಂಡ ಕಾಮಗಾರಿಯು ಲೋಕೋಪಯೋಗಿ ಇಲಾಖೆಯಿಂದ ನೋಂದಾಯಿತ ಅರ್ಹ ಹಾಗೂ ಇ–ಟೆಂಡರ್ ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿಲ್ಪಟ್ಟ ಗುತ್ತಿಗೆದಾರರಿಂದ ಪ್ರಾಧಿಕಾರದ ನಿಯಮಾವಳಿ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು:– ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯ ಶ್ರೀ ಡಿ.ದೇವರಾಜ ಅರಸು ಬಡಾವಣೆಯಲ್ಲಿ ವರ್ತುಲ ರಸ್ತೆಯ ಪಕ್ಕದಲ್ಲಿನ (ಆರ್.ಟಿ.ಓ. ಕಛೇರಿ ಎದುರು) ಪ್ರಾಧಿಕಾರದ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸುವುದು.
ಅಂದಾಜು ಮೊತ್ತರೂ.ಲಕ್ಷಗಳಲ್ಲಿ:–485.00 ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:–356.87 ಮುಂಗಡ ಹಣ ಠೇವಣಿ (ಇ.ಎಂ.ಡಿ.)ರೂ.ಲಕ್ಷಗಳಲ್ಲಿ:– 5.40
ಟೆಂಡರ್ ದಿನಾಂಕಗಳು:1) ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಮತ್ತು ಪೂರ್ವಭಾವಿ ಸಭೆ 31–01–2022ರ ಸಾಯಂಕಾಲ 16.30 ಘಂಟೆವರೆಗೆ. 3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 19–02–2022ಸಾಯಂಕಾಲ 17.00 ಘಂಟೆವರೆಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 21–02–2022 ಬೆಳಿಗ್ಗೆ 11.00 ಘಂಟೆಗೆ. 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 23–02–2022 ಬೆಳಿಗ್ಗೆ 11.00 ಘಂಟೆಗೆ.
ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ವಾಸಾಇ/ದಾವಣಗೆರೆ/648/ಎಂಸಿಎ/2021–22
ಸಹಿ/– ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.



ಕರ್ನಾಟಕ ಸರ್ಕಾರ
ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆ, ಬೆಳಗಾವಿ
ಸ್ವಾಯತ್ತ ಸಂಸ್ಥೆ
ಡಾ॥ ಬಿ.ಆರ್. ಅಂಬೇಡ್ಕರ ರಸ್ತೆ, ಬೆಳಗಾವಿ–590 001
Website: https://bimsbelgaum.karnataka.gov.in, E-Mail: belgaum.bims@gmail.com
No. BIMS/MEW/TENDER/EQP/CR-46/2021-22 Date: 19/01/2022
SHORT TERM TENDER NOTIFICATION
(ಅಲ್ಪಾವಧಿ ಟೆಂಡರ್) ಇ–ಪ್ರೊಕ್ಯೂರ್ಮೆಂಟ್ ಮುಖಾಂತರ
ಮುಖ್ಯ ಆಡಳಿತಾಧಿಕಾರಿಗಳು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳಗಾವಿ ಇಲ್ಲಿಗೆ Hospital Equipment's & Instruments, B.I.M.S BELAGAVI ಒದಗಿಸಲು ಈ ಕೆಳ ಕಾಣಿಸಿದಂತೆ ಕೆ.ಟಿ.ಪಿ.ಪಿ. ನಿಯಮಾವಳಿ 1999 & 2000 ಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್ ಮೂಲಕ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

| Sl. No | Tender Notification | Description of Tender | Tender Value (Approximate) (Rs. in Lakhs) | Downloading of Tender Document |
|---|---|---|---|---|
| 1 | No. BIMS/MEW/TENDER/EQP/ CR-46/2021-22 D: 19-01-2022 | Hospital Equipment's & Instruments, B.I.M.S BELAGAVI. | Rs.98.00 Lakhs | 20-01-2022 |

ಇ–ಪ್ರೊಕ್ಯೂರಮೆಂಟ್‌ನಲ್ಲಿ ನೊಂದಾಯಿಸಿದ ಟೆಂಡರದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ https://www.e-proc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರನ್ನು ಸ್ವೀಕರಿಸುವ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/– ಮುಖ್ಯ ಆಡಳಿತಾಧಿಕಾರಿಗಳು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ
DIPO/RO No. 1323/2021-22



ಕರ್ನಾಟಕ ಸರ್ಕಾರ
ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (ಇಡಿಸಿಎಸ್) ಸಿಆಸುಇ (ಇ–ಆಡಳಿತ ಇಲಾಖೆ)
ಸಂಖ್ಯೆ 13, ಸಿಆರ್‌ಎನ್ ಛೇಂಬರ್ಸ್, 2ನೇ ಮಹಡಿ, ಧನಲಕ್ಷ್ಮೀ ಬ್ಯಾಂಕ್ ಮೇಲೆ ಕಸ್ತೂರಬಾ ರಸ್ತೆ, ಬೆಂಗಳೂರು – 560001 ದೂ: 080–22230281/22230282
ನಂ. ಇಡಿಸಿಎಸ್/1/ಎಡಿಎಂ/2022–ಇಡಿಸಿಎಸ್ ದಿನಾಂಕ : 20.01.2022
ಟೆಂಡರ್ ಪ್ರಕಟಣೆ
ಮೈಸೂರು (ಡಿ3) ಮತ್ತು ಕಲ್ಬುರ್ಗಿ (ಡಿ4) ಕಂದಾಯ ವಿಭಾಗಗಳಲ್ಲಿ ಗ್ರಾಮ ಒನ್ ಯೋಜನೆಗೆ ಆಪರೇಷನ್ ಪಾಲುದಾರರನ್ನು ಆಯ್ಕೆ ಮಾಡುವ ಬಗ್ಗೆ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ (ಆರ್‌ಎಫ್‌ಪಿ)
ಇಡಿಸಿಎಸ್ ನಿರ್ದೇಶನಾಲಯವು, ''ಮೈಸೂರು (ಡಿ3) ಮತ್ತು ಕಲ್ಬುರ್ಗಿ (ಡಿ4) ಕಂದಾಯ ವಿಭಾಗಗಳಲ್ಲಿ ಗ್ರಾಮ ಒನ್ ಯೋಜನೆಯ ಅನುಷ್ಠಾನಕ್ಕಾಗಿ ಆಪರೇಷನ್ ಪಾಲುದಾರರನ್ನು ಆಯ್ಕೆ ಮಾಡಲು'' ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದು. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 05.02.2022ರ ಸಂಜೆ5.30 ಗಂಟೆಯವರೆಗೆ.
ಸಹಿ/– ನಿರ್ದೇಶಕರು, ಇಡಿಸಿಎಸ್
DIPR/DDU/YC/2947/2021-22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಮುಖ್ಯ ಇಂಜನೀಯರು, ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟ.
ನಂ:ಮು.ಇಂ/ಬಾ.ಪ.ಅ.ಪ್ರಾ/ಟೆಂಡರ್–14/2021–22/3550 ದಿನಾಂಕ:18/01/2022
ಅಲ್ಪಾವಧಿ ಟೆಂಡರ್ ಪ್ರಕಟಣೆ.
(ಇ–ಪ್ರೋಕ್ಯೂರಮೆಂಟ್ ಮುಖಾಂತರ)
ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ಸದರಿ ಕಾಮಗಾರಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತವು ರೂ. 62.44 ಲಕ್ಷಗಳು ಇರುತ್ತದೆ.
ಸದರಿ ಕಾಮಗಾರಿಯ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಯ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ:28.01.2022 ಸಂಜೆ 5.00 ಘಂಟೆ ವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: 31.01.2022 ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್ಡನ್ನು ದಿನಾಂಕ: 02.02.2022 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354–233353 ಸಂಪರ್ಕಿಸಬಹುದಾಗಿದೆ.
ಸಹಿ/–ಮುಖ್ಯ ಇಂಜನೀಯರು, ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟ.
DIPR/BGK/RO-NO-494/MCA/2021-22



ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಕಾರ್ಯಪಾಲಕ ಅಭಿಯಂತರರು–4ರವರ ಕಛೇರಿ (ಬೆಂಘತ್ಯಾನಿನಿ),
2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗೂರು–560 056
ಸಂ: ಕಾಪಾಅ/ಬೆಂಘತ್ಯಾನಿನಿ/ಟೆಂಡ್/01/2021–22 ದಿನಾಂಕ: 20.01.2022
ಪೂರ್ವಾರ್ಹತೆಗಾಗಿ ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು–4, ಘನತ್ಯಾಜ್ಯ ನಿರ್ವಹಣೆ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರು / ಸಂಸ್ಥೆಗಳಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಯೋಜನಾ ವೆಚ್ಚ (ರೂ. ಲಕ್ಷಗಳಲ್ಲಿ) | ಕಾಮಗಾರಿ ಪೂರ್ಣಗೊಳಿಸುವ ಅವಧಿ |
|---|---|---|---|
| 1 | ಮಹದೇವಪುರ ವಿಧಾನಸಭಾ ಕ್ಷೇತ್ರದ ಕಣ್ಣೂರು ಸರ್ವೆ ಸಂಖ್ಯೆ 50ರಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ ವೈಜ್ಞಾನಿಕವಾಗಿ ಘನತ್ಯಾಜ್ಯ ನಿರ್ವಹಣಾ ಘಟಕವನ್ನು ಸ್ಥಾಪಿಸುವುದು ಮತ್ತು ಅದರ ಒಂದು ಬಾರಿಯ ಅಭಿವೃದ್ಧಿ ಕಾಮಗಾರಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳು. | 8,500.00 | 12 ತಿಂಗಳು |

1) ಪೂರ್ವಾರ್ಹತಾ ಡಾಕ್ಯುಮೆಂಟ್‌ಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದೊರೆಯುವ ದಿನಾಂಕ: 27.01.2022ರಿಂದ 28.02.2022ರ ಸಂಜೆ 4.00 ಗಂಟೆಯಿಂದ. 2) ಪೂರ್ವಭಾವಿ ಸಭೆ: 09.02.2022ರ ಸಂಜೆ 3.00 ಗಂಟೆಗೆ. 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28.02.2022ರ ಸಂಜೆ 4.30 ಗಂಟೆಯವರೆಗೆ 4) ತಾಂತ್ರಿಕ– ವಾಣಿಜ್ಯಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 02.03.2022ರ ಸಂಜೆ 4.00 ಗಂಟೆಯ ನಂತರ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು–4, ಬೆಂಘತ್ಯಾನಿನಿ.
"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91–80–26560722 (Dir), 26094000 ಫ್ಯಾಕ್ಸ್: 080–26560723
No.KMIO/SME(1)/Tender/AC Drugs/290/2021-22 Date: 19.01.2022
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

| Sl. No. | Tender No. & Date | Name of the Item |
|---|---|---|
| 1. | No. KMIO/SME(1)/Tender/AC Drugs /290/2021-22 dated: 19.01.2022 | Procurement of Innovator Drugs, Medical Products & Devices to be used for Bone Marrow Transplant Unit at KMIO., |
| 2. | No. KMIO/SME(1)/Tender/Oxygen Plant/29/2021-22 dated: 19.01.2022 | Installation of Oxygen Plant at VTSM Peripheral Cancer Centre,Kalburgi. |

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: 22.01.2022 ರಿಂದ 06.02.2022 ರವರೆಗೆ. ವೆಬ್‌ಸೈಟ್: https://eproc.karnataka.gov.inನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ ರೂ.500/–ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ 06.02.2022 ರಂದು ಮಧ್ಯಾಹ್ನ 3:00 p.m. ಗಂಟೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/– ನಿರ್ದೇಶಕರು
DIPR/DDU/AAPL/RO2933/21-22
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕಾರ್ಯನಿರ್ವಾಹಕ ಇಂಜಿನಿಯರರು. ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಇ–ಟೆಂಡರ್ ಪ್ರಕಟಣೆ
ಇ ಕಚೇರಿ ಗುತ್ತಿಗೆ ಪ್ರಕಟಣೆ ಸಂ. 033/ಪಿಬಿ/ಗುತ್ತಿಗೆ/4202–5054/ಎಸ್‌ಸಿಪಿ–ಟಿಎಸ್‌ಪಿ/2021–22/5048/ದಿನಾಂಕ: 19–01–2022
ದಿನಾಂಕ: 19–01–2022 ರಂದು ಇ–ಪ್ರೊಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 143641, 143796, 147438, 147460, 147403, 147462, 147510, 147486, 145845, 145846, 145848, 145850, 145853, 145863, 145866, 146663, 146664, 146666, 147372, 146678, 146680, 147507, 147459, 147439, 145871, 146682, 146684, 146695, 146699, 145876, 147625, 147461, 147406, 147501, 147495, 145849, 145856, 145868, 146668, 146671, 147457, 145872, 146687, 147464, 146705, 147534 ಮತ್ತು 146703 ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 29–01–2022 (ಮಧ್ಯಾಹ್ನ 4:00 ಗಂಟೆಯುವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ http://www.eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– (ಸತೀಶ ಹೆಚ್. ಜಹಾಗೀರದಾರ) ಕಾರ್ಯನಿರ್ವಾಹಕ ಇಂಜನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ವಾಸಾಇ/ಹಾವೇರಿ/382/2021–22 ದೇಶಪಾಂಡೆಪಬ್ಲಿಸಿಟಿ



KARNATAKA NEERAVARI NIGAM LIMITED
(A Government of Karnataka Enterprises)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332–225213.
ಸಂ. ಕನೀನಿನಿ/ಜಿಆರ್‌ಬಿಸಿಸಿವಿ–3/ಡಿಬಿ/ ಮುರಗೋಡ ಎಲ್‌ಆಯ್‌ಎಸ್ /ಟೆಂಡರ್/2021–22/2328 ದಿ:–20–01–2022.
ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ/ಎರಡನೇ ಕರೆ
(ಇ–ಪ್ರೊಕ್ಯೂರಮೆಂಟ್ ಮೂಲಕ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದವರು, ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಬೆಳಗಾವಿ ಜಿಲ್ಲೆಯ ಕನೀನಿನಿ, ಘಬಕಾನಿ ವಿಭಾಗ ನಂ.3 ಗೋಕಾಕ ವಿಭಾಗ ವ್ಯಾಪ್ತಿಯ ಮುರಗೋಡ ಏತ ನೀರಾವರಿ ಯೋಜನೆಯ ಹೊಲಗಾಗಲುವೆ ಕಾಮಗಾರಿಗಳನ್ನು ಇ–ಪೋರ್ಟಲ್ ಮುಖಾಂತರ ಮಾತ್ರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (07) ಕಾಮಗಾರಿಗಳ ಇಂಡೆಂಟ್ ನಂಬರುಗಳು. 32664, 32667, 32668, 32669,32670, 31467, 31474) ಇಟ್ಟ ಅಂದಾಜು ಟೆಂಡರ ಮೊತ್ತವು ರೂ. 5.04 ಲಕ್ಷದಿಂದ ರೂ. 21.81 ಲಕ್ಷಗಳು ಇರುತ್ತದೆ.ಪ್ಯಾಕೇಜ ಕಾಮಗಾರಿಗಳಿಗೆ ಇಟ್ಟ ಅಂದಾಜು ಟೆಂಡರ ಮೊತ್ತವು (03) ಕಾಮಗಾರಿಗಳು (ಇಂಡೆಂಟ ನಂಬರುಗಳು. 31485, 31487, 31494) ಕಾಮಗಾರಿಗಳಿಗೆ ಇಟ್ಟ ಅಂದಾಜು ಟೆಂಡರ ಮೊತ್ತವು ರೂ. 107.60 ಲಕ್ಷದಿಂದ ದಿಂದ ರೂ. 135.80 ಲಕ್ಷಗಳವರೆಗೆ ಇರುತ್ತದೆ.
ಖಾಲಿ ಟೆಂಡರ್ ಫಾರ್ಮಗಳಿಗಾಗಿ ಅರ್ಜಿ ಸಲ್ಲಿಸುವ ಹಾಗೂ ತುಂಬಿದ ಟೆಂಡರಗಳನ್ನು ಸ್ವೀಕರಿಸುವ ದಿ: 21–01–2022 ರಿಂದ ದಿ: 31–01–2022 ಸಾಯಂಕಾಲ 4.00 ಗಂಟೆಯವರೆಗೆ (ಕಚೇರಿ ವೇಳೆಯಲ್ಲಿ) ಕೆಲಸದ ಹೆಸರು / ಇಎಂಡಿ ಮೊತ್ತ / ಮೀಸಲಾತಿ/ ಗುತ್ತಿಗೆದಾರರ ದರ್ಜೆ ಹಾಗೂ ಇತರೆ ಟೆಂಡರಿನ ನಿಯಮಗಳ ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕಚೇರಿಯಲ್ಲಿ ಕಚೇರಿಯ ಸಮಯದಲ್ಲಿ ಅಥವಾ ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರನಲ್ಲಿ ಯಾವುದೇ ಬದಲಾವಣೆಗಳು / ಮಾರ್ಪಾಡುಗಳು / ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಇ–ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು ಕನೀನಿನಿ ಜಿಆರಬಿಸಿಸಿ ವಿಭಾಗ ನಂ–3, ಗೋಕಾಕ.
DIPR/BGM/RO-NO-1322/MCA/2021-22



ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ)
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ, ಖಾನಾಪೂರ ಕ್ಯಾಂಪ್– 585319, ತಾ: ಶಹಾಪೂರ, ಜಿ: ಯಾದಗಿರಿ.
ಸಂಖ್ಯೆ: ಕೃಭಾಜನಿನಿ/ಸ.ಏ.ನೀ.ವಿ/ಎ.ಎಂ.ಇ ಕಾಮಗಾರಿ/2021–22/846 ದಿನಾಂಕ:13.01.2022
ಅಲ್ಪಾವಧಿ ಟೆಂಡರ್ ಪ್ರಕಟಣೆ ( ಇ–ಪೋರ್ಟಲ್ ಮೂಲಕ)
ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ರವರ ಪರವಾಗಿ ಕಾರ್ಯಪಾಲಕ ಅಭಿಯಂತರರರ, ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ, ಖಾನಾಪೂರ, ರವರು ಅಲ್ಪಾವದಿ, ಶೇಕಡವಾರು ಟೆಂಡರ್‌ನ್ನು ಎರಡು ಲಕೋಟೆ ಟೆಂಡರ್ ಪದ್ಧತಿಯಡಿಯಲ್ಲಿ KPWD /PWD/KBJNL Contractors ಟೆಂಡರನ್ನು ಕರೆಯಲಾಗಿದೆ. ಗುತ್ತಿಗೆದಾರರು ತಮ್ಮ ದಾಖಾಲಾತಿಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಸೂಚಿಸಲಾಗಿದೆ.
1) ಕಾಮಗಾರಿಯ ಹೆಸರು : Annual Maintenance for Sannathi Bridge Cum Barrage Across Bhima River Near Sannathi Village of Chittapur Taluk, Dist Kalaburagi for the year 2021-22 (Indent No. 21607), 2) ಟೆಂಡರ್ ಮೊತ್ತ ರೂ. : 53.33 ಲಕ್ಷಗಳು, 3) ಗುತ್ತಿಗೆದಾರರು ಕ್ಲಾಸ್: Class-I and Above contractors, 4) ಟೆಂಡರ್ ಪ್ರಕ್ರಿಯೆ ದರ : ಇ–ಪೋರ್ಟಲ್‌ನಲ್ಲಿ ನಿಗದಿ ಪಡಿಸಿದಂತೆ, 5) ಇ.ಎಂ.ಡಿ ಮೊತ್ತ : ರೂ. 1.10 ಲಕ್ಷಗಳು, 6) ಪೂರ್ಣ ತುಂಬಿದ ಇ–ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ ದಿ: 18.01.2022 ರಿಂದ 27.01.2022ರ ಸಂಜೆ 5.00 ಗಂಟೆ ವರೆಗೆ, 7) ಪೂರ್ಣ ತುಂಬಿದ ಇ–ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 27.01.2022 ರ ಸಂಜೆ 5.00 ಗಂಟೆ ವರೆಗೆ, 8) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : 29.01.2022ರ ಪೂರ್ವಾಹ್ನ 11.30 ಗಂಟೆಗೆ. 10) ಇ–ಟೆಂಡರ್‌ಗಳನ್ನು ತೆರೆಯುವ ಸ್ಥಳ : ಕಾರ್ಯಪಾಲಕ ಅಭಿಯಂತರರ ಕಛೇರಿ, ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ, ಖಾನಾಪೂರ ಕ್ಯಾಂಪ್.
ಮೇಲೆ ನೀಡಲಾದ ಟೆಂಡರ್‌ನ ಹೆಚ್ಚಿನ ಮಾಹಿತಿಯನ್ನು ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಮತ್ತು ಇ–ಟೆಂಡರ್ ವೆಬ್‌ಸೈಟ್ www.eproc.karnataka.gov.in ನಲ್ಲಿ ಸಹ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ ಖಾನಾಪೂರ ಕ್ಯಾಂಪ್
ವಾ.ಸಾ.ಸಂ.ಇ/ಯಾದಗಿರಿ/352/ಎಂಸಿ&ಎ/2021–22



ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕಾವೇರಿ ಭವನ, ಬೆಂಗಳೂರು–560009,
ದೂರವಾಣಿ: 080–23118888, ಫ್ಯಾಕ್ಸ್: 080–22247317,
ವೆಬ್ ಸೈಟ್: https://ashraya.karnataka.gov.in E-mail: knpmayhfanew@gmail.com
ದಿನಾಂಕ: 20–01–2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
Tender Notification No: RGHCL 91 VHK 2017 dt: 19-01-2022
Tender Notification No: RGHCL 84 VHK 2020-21 dt: 19-01-2022
ಕಾಮಗಾರಿಯ ಹೆಸರು:
(1) ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯ "Affordable Housing In Partnership" ಘಟಕದಡಿ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ನಗರಸಭೆ ಗೋಪಿಶೆಟ್ಟಿಕೊಪ್ಪ ಸ.ನಂ:176, 177, 178, 179 ಮತ್ತು ಗೋವಿಂದಪುರ ಗ್ರಾಮ ವ್ಯಾಪ್ತಿಯ ಸ.ನಂ:24, 27, 28, 29 ರಲ್ಲಿ ಒಟ್ಟು 1836 (ಜಿ+2) ಮನೆಗಳನ್ನು ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವುದು. (Fixed Price No Variation).
Indent No: RGRHCL/2021-22/BD/WORK_INDENT78
(2) ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯ "Affordable Housing In Partnership" ಘಟಕದಡಿ ಬೆಳಗಾವಿ ಜಿಲ್ಲೆಯ ಬೆಳಗಾವಿ ನಗರಸಭೆ ಆಲರ್ವಾಡ್ ಸ.ನಂ:241/ಬಿ ಹಾಗೂ ಆಂಗೋಲ ಗ್ರಾಮ ವ್ಯಾಪ್ತಿಯ ಸ.ನಂ:167, 135/2, 658/1ಎ ರಲ್ಲಿ ಒಟ್ಟು 1484 (ಜಿ+3) ಮನೆಗಳನ್ನು ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವುದು. (Fixed Price No Variation).
Indent No: RGRHCL/2021-22/BD/WORK_INDENT79

| ಕ್ರಮ ಸಂಖ್ಯೆ | ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) (ರೂ. ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ) | ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ |
|---|---|---|---|
| 1 | 11599.05 | 116.00 | 06-02-2022 Up to 16.00 Hrs |
| 2 | 9391.65 | 94.00 | 06-02-2022 Up to 16.00 Hrs |

ಕಾಮಗಾರಿಯ ಬಗ್ಗೆ / ಇನ್ನಿತರೆ ವಿವರಗಳನ್ನು https://eproc.karnataka.gov.in, https://ashraya.karnataka.gov.in/ ನಲ್ಲಿ ಪಡೆಯಬಹುದಾಗಿದೆ.
ಸಹಿ/– ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
DIPR/DDU/AAA/2961/2021-22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಂಕಿತಾ ಅಮರ್

# ಬಣ್ಣದ ಲೋಕದಲ್ಲೇ 'ಅಂಕಿತಾ' ಪಯಣ

'ನಮ್ಮನೆ ಯುವರಾಣಿ' ಧಾರಾವಾಹಿ ಹಾಗೂ 'ಎದೆ ತುಂಬಿ ಹಾಡುವೆನು' ರಿಯಾಲಿಟಿ ಶೋ ಮುಖಾಂತರ ಕನ್ನಡ ಪ್ರೇಕ್ಷಕರಿಗೆ ಪರಿಚಯವಾಗಿರುವ ಅಂಕಿತಾ ಅಮರ್ ಇದೀಗ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. 'ದಿಯಾ' ಖ್ಯಾತಿಯ ನಟ ಪೃಥ್ವಿ ಅಂಬರ್ ನಾಯಕನಾಗಿರುವ, ಮಯೂರ ರಾಘವೇಂದ್ರ ನಿರ್ದೇಶನದ 'ಅಬ ಜಬ ದಬ'ದಲ್ಲಿ ಗಾಯಕಿಯ ಪಾತ್ರದಲ್ಲೇ ಅಂಕಿತಾ ಕಾಣಿಸಿಕೊಳ್ಳಲಿದ್ದಾರೆ.

**ಅಭಿಲಾಷ್ ಪಿ.ಎಸ್.**

**● ಅಂಕಿತಾ ಅಮರ್ ಹಿನ್ನೆಲೆ ಏನು?**

ನಾನು ಹುಟ್ಟಿದ್ದು ಮೈಸೂರಿನಲ್ಲಿ. ಆದರೆ, ಬೆಳೆದಿದ್ದೆಲ್ಲಾ ಬೆಂಗಳೂರಿನಲ್ಲಿ. ಪ್ರೌಢ ಹಾಗೂ ಕಾಲೇಜು ಶಿಕ್ಷಣವನ್ನು ಬೆಂಗಳೂರಿನಲ್ಲಿ ಮುಗಿಸಿ ಉನ್ನತ ಶಿಕ್ಷಣಕ್ಕೆ ಮೈಸೂರಿಗೆ ವಾಪಸಾಗಿದ್ದೆ. ಎಂಎಸ್ಸಿ ಮೆಡಿಕಲ್ ಬಯೋಕೆಮೆಸ್ಟ್ರಿಯಲ್ಲಿ ಎರಡು ಚಿನ್ನದ ಪದಕ ಪಡೆದ ವಿದ್ಯಾರ್ಥಿನಿಯಾಗಿದ್ದೆ.

ನಟನೆ ಎನ್ನುವುದು ಚಿಕ್ಕಂದಿನಿಂದಲೇ ಇದ್ದ ಆಸಕ್ತಿ. ತಂದೆ ಅಮರ್ ಬಾಬು ಹಾಗೂ ತಾಯಿ ಆಶಾ ಇಬ್ಬರೂ 'ಕಲಾಗಂಗೋತ್ರಿ' ಎಂಬ ರಂಗತಂಡದ ಕಲಾವಿದರು. ನನ್ನ ತಂಗಿಯೂ ಇದೀಗ ಈ ತಂಡದ ಸದಸ್ಯೆ. ಜೊತೆಗೆ ನಮ್ಮ ಕುಟುಂಬದವರು ವರನಟ ಡಾ.ರಾಜ್‌ಕುಮಾರ್ ಅವರ ಪರಮಭಕ್ತರು. ಚಿಕ್ಕವಯಸ್ಸಿನಿಂದಲೇ ರಾಜ್‌ಕುಮಾರ್ ಅವರ ಸಿನಿಮಾಗಳನ್ನು ನೋಡುತ್ತಲೇ ಬೆಳೆದವಳು ನಾನು. ಹೀಗಾಗಿ ಸಣ್ಣವಯಸ್ಸಲ್ಲೇ ನನಗೆ ಬಣ್ಣದ ಪರಿಚಯವಿತ್ತು. ಜೊತೆಗೆ ರಂಗಭೂಮಿ, ಸಿನಿಮಾ ಎರಡರ ಪ್ರಭಾವವೂ ಹೆಚ್ಚಿತ್ತು. ನಟನಾ ಕ್ಷೇತ್ರದ ವಾತಾವರಣದ ಪರಿಚಯ ನನ್ನ ಕುತೂಹಲವನ್ನು ಹೆಚ್ಚಿಸಿತ್ತು. 'ತುಂಟ' ಸಿನಿಮಾದಲ್ಲಿ ಬಾಲನಟಿಯಾಗಿದ್ದೆ. 'ಜಗಳಗಂಟಿಯರು' ಧಾರಾವಾಹಿ, ಸಮಾಜಕ್ಕೆ ಸಂದೇಶ ನೀಡುವ ಸರ್ಕಾರದ ಹಲವು ಸಾಕ್ಷ್ಯಚಿತ್ರಗಳಲ್ಲಿ ನಾನು ನಟಿಸಿದ್ದೆ.

**● ಕಿರುತೆರೆ ಪಯಣ ಶುರುವಾಗಿದ್ದು ಹೇಗೆ?**

ಬಹಳ ಆಕಸ್ಮಿಕವಾಗಿ ಆರಂಭವಾದ ಪಯಣ ಇದು. ಬಾಲನಟಿಯಾಗಿದ್ದ ಕಾರಣ ನನ್ನ ನಟನೆಯ ಬಗ್ಗೆ ಹಲವರಿಗೆ ತಿಳಿದಿತ್ತು. 'ಪುಟ್ಟಗೌರಿ ಮದುವೆ' ಧಾರಾವಾಹಿಯಲ್ಲಿ ಮೊದಲು ನಟಿಸಿದ್ದೆ. ಆಗ ನನಗೆ 15 ವರ್ಷ. ಇದಾದ ನಂತರ ಶಿಕ್ಷಣಕ್ಕೆ ಹೆಚ್ಚಿನ ಗಮನ ನೀಡಿದೆ. ಶಿಕ್ಷಣ ಪೂರ್ತಿಯಾದ ಬಳಿಕ ಕಲರ್ಸ್ ಕನ್ನಡದಿಂದ 'ನಮ್ಮನೆ ಯುವರಾಣಿ' ಅವಕಾಶ ಬಂತು. ಅದಕ್ಕೂ ಮುನ್ನವೇ ಕೆಲ ಧಾರಾವಾಹಿಗಳಿಂದ ಆಫರ್‌ಗಳು ಬಂದಿದ್ದವು. ಇದನ್ನು ನಾನು ಒಪ್ಪಿಕೊಂಡಿರಲಿಲ್ಲ.

'ನಮ್ಮನೆ ಯುವರಾಣಿ'ಯಲ್ಲಿ ನಟನೆ ಮಾಡುತ್ತಿದ್ದ ಸಂದರ್ಭದಲ್ಲೇ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ನಡೆಸಿಕೊಡುತ್ತಿದ್ದ 'ಎದೆ ತುಂಬಿ ಹಾಡುವೆನು' ರಿಯಾಲಿಟಿ ಶೋ ನಿರೂಪಕಿಯಾಗುವ ಅವಕಾಶ ದೊರಕಿತು. ಚಿಕ್ಕವಳಿದ್ದಾಗ ಈ ರಿಯಾಲಿಟಿ ಶೋ ಒಂದು ರೀತಿ ವಿಶ್ವವಿದ್ಯಾಲಯದಂತೆ ಕಾಣುತ್ತಿತ್ತು. ಈ ವೇದಿಕೆಯಲ್ಲಿ ಎಸ್‌ಪಿಬಿ ಅವರ ಎದುರು ಹಾಡುವುದು ಕನಸಾಗಿತ್ತು. ಇದನ್ನು ಮನಸಾರೆ ಕೇಳಿಕೊಂಡಿದ್ದ ಕಾರಣ ಇದೀಗ ಆ ಕನಸು ಈಡೇರಿದೆ. ನಿರೂಪಕಿಯಾಗಿ ಹಲವು ವಿಷಯಗಳನ್ನು ನಾನು ಇಲ್ಲಿ ಕಲಿತೆ.

**● ನಟನೆಯ ಜೊತೆಗೆ ನಿಮ್ಮ ಭರತನಾಟ್ಯ ಸಂಕೀರ್ತನೆಯೂ ವೈರಲ್ ಆಗಿತ್ತು. ಈ ಅನುಭವ?**

ಸಾಂಸ್ಕೃತಿಕವಾಗಿ ತೊಡಗಿಸಿಕೊಳ್ಳುವುದು ನನಗೆ ಇಷ್ಟ. ಚಿಕ್ಕವಳಿದ್ದಾಗ ಭರತನಾಟ್ಯ ತರಗತಿಗೆ ಹೋಗುತ್ತಿದ್ದೆ. ಭರತನಾಟ್ಯದಲ್ಲಿ ಇದ್ದ ಪುರಾಣದ ಕಥೆಗಳು ನನ್ನ ಕುತೂಹಲವನ್ನು ಹೆಚ್ಚಿಸಿದ್ದವು. ಶಿಕ್ಷಣದ ಒತ್ತಡದಿಂದ ಭರತನಾಟ್ಯ ಹಾಗೂ ಹಾಡುಗಾರಿಕೆ ಎರಡನ್ನೂ ಅರ್ಧದಲ್ಲೇ ಬಿಡಬೇಕಾಯಿತು. ಆದರೆ ಆಸಕ್ತಿ ಉಳಿದಿತ್ತು. ಈಗಲೂ ನಾನೇನು ಭರತನಾಟ್ಯ ಕಲಿಯುತ್ತಿಲ್ಲ. ತಿಂಗಳಿಗೊಮ್ಮೆ ನಮ್ಮ ಸಂಗೀತ ಶಾಲೆ ನಡೆಸುವ 'ನಗರ ಸಂಕೀರ್ತನೆ'ಯಲ್ಲಿ ನಾನು ಕಳೆದ ನಾಲ್ಕು ವರ್ಷದಿಂದ ಪಾಲ್ಗೊಳ್ಳುತ್ತಿದ್ದೇನೆ. ದೇವರ ನಾಮ ಹಾಡುತ್ತಾ ನಡೆಯುವ ಕಾರ್ಯಕ್ರಮವದು. ದಕ್ಷಿಣ ಕನ್ನಡ ಜಿಲ್ಲೆಯ ಅಶ್ವತ್ಥಪುರದಲ್ಲಿ ನಡೆದ ಇದೇ ರೀತಿಯ ಸಂಕೀರ್ತನೆ ವೈರಲ್ ಆಗಿತ್ತು.

**● ಚಂದನವನಕ್ಕೆ ಹೆಜ್ಜೆ ಇಡುತ್ತಿರುವ ಕ್ಷಣದ ಅನುಭವ?**

ಈ ಚಿತ್ರದಲ್ಲಿ ಪೃಥ್ವಿ ಅಂಬರ್ ಜೊತೆಗೆ ನಟಿಸುತ್ತಿರುವುದು ಖುಷಿ ತಂದಿದೆ. ಅವರ ನಟನೆ ನನಗೆ ಇಷ್ಟ. 'ದಿಯಾ'ದಲ್ಲಿ ಅವರ ಪಾತ್ರವನ್ನು ಮೆಚ್ಚಿಕೊಂಡಿದ್ದೆ. ವೈಯಕ್ತಿಕವಾಗಿ ಭೇಟಿಯಾಗಿ ಇದನ್ನು ಹೇಳಬೇಕು ಎಂದುಕೊಂಡಿರುವಾಗಲೇ ಈ ಅವಕಾಶ ಸಿಕ್ಕಿದೆ. ಮಯೂರ ರಾಘವೇಂದ್ರ ಅವರಿಗೂ ಸಂಗೀತದ ನಂಟಿದೆ. ಈ ಚಿತ್ರತಂಡದ ಜೊತೆ ಕೆಲಸ ಮಾಡುತ್ತಾ ನನಗೂ ಕಲಿಕೆಯ ಅವಕಾಶವಿದೆ ಎಂದುಕೊಂಡಿದ್ದೇನೆ.

ಒಮ್ಮೆ ಬಣ್ಣಹಚ್ಚಿದರೆ ಆ ಬಣ್ಣದ ಗೀಳು ಕೊನೆಯವರೆಗೂ ಇರುತ್ತದೆ. ರಂಗಭೂಮಿಯಿಂದ ಕಿರುತೆರೆ ಅಲ್ಲಿಂದ ಬೆಳ್ಳಿಪರದೆಗೆ... ಈ ಪಯಣದಲ್ಲಿ ಎಲ್ಲ ಕಡೆಯೂ ಬಣ್ಣ, ಅದೇ ಬಣ್ಣವೇ. ವೇದಿಕೆ ಆಗಲಿ ಅಥವಾ ತೆರೆಯೇ ಆಗಲಿ ಸೂಕ್ತವಾದ ಪಾತ್ರ ದೊರಕಿದರೆ ಎಲ್ಲೇ ಪಾತ್ರ ಮಾಡಲೂ ನಾನು ಸಿದ್ಧ. ಬೆಳ್ಳಿಪರದೆ ಮೇಲೆ ಕಾಣಿಸಿಕೊಳ್ಳುವ ಈ ಸಂದರ್ಭವನ್ನು ಬಹಳ ಕಾತುರದಿಂದ ಕಾಯುತ್ತಿದ್ದೇನೆ. ಈ ಪಯಣ ಎಲ್ಲಿಗೆ ಕರೆದೊಯ್ಯುತ್ತೆ ಎನ್ನುವ ಸೂಚನೆಯೂ ನನಗಿಲ್ಲ. ಬಣ್ಣ ಹಚ್ಚುವ ಪಯಣ ಮುಂದುವರಿಯುತ್ತಿದೆ ಎನ್ನುವ ಖುಷಿ ಹಾಗೂ ನೆಮ್ಮದಿ ಇದೆ. ಸದ್ಯಕ್ಕೆ 'ನಮ್ಮನೆ ಯುವರಾಣಿ' ಹಾಗೂ ತೆಲುಗಿನಲ್ಲಿ 'ಶ್ರೀಮತಿ ಶ್ರೀನಿವಾಸ್' ಧಾರಾವಾಹಿ ಮಾಡುತ್ತಿದ್ದೇನೆ. ಜ.24ಕ್ಕೆ ಸಿನಿಮಾದ ಮುಹೂರ್ತವಿದ್ದು, ಒಂದು ಹಾಡಿನ ಚಿತ್ರೀಕರಣವನ್ನೂ ಇದೇ ತಿಂಗಳಲ್ಲಿ ಮಾಡಬೇಕು ಎಂದು ಚಿತ್ರತಂಡ ನಿರ್ಧರಿಸಿದೆ. ಮಾರ್ಚ್‌ನಿಂದ ಚಿತ್ರದ ಚಿತ್ರೀಕರಣ ಪ್ರಾರಂಭವಾಗಲಿದೆ.

**● 'ಅಬ ಜಬ ದಬ'ದಲ್ಲಿ ನಿಮ್ಮ ಪಾತ್ರದ ಬಗ್ಗೆ?**

ನನಗೆ ಹಾಡುವುದು ಎಂದರೆ ಆಸಕ್ತಿ. ಕಳೆದ ನಾಲ್ಕು ವರ್ಷದಿಂದ ಸಂಗೀತ ಕಲಿಯುತ್ತಿದ್ದೇನೆ. 'ನಮ್ಮನೆ ಯುವರಾಣಿ'ಯಲ್ಲಿ 'ಮೀರಾ' ಎನ್ನುವ ಪಾತ್ರ ಹಾಡುವ ಪಾತ್ರವಲ್ಲ. ಆದರೆ ನಾನು ಹಾಡುತ್ತಿದ್ದೆ ಎನ್ನುವ ಕಾರಣಕ್ಕೆ ಹಲವು ದೃಶ್ಯಗಳಲ್ಲಿ ಹಾಡುವ ಅವಕಾಶ ನೀಡಿದರು. ಇದರಿಂದಾಗಿಯೇ 'ಎದೆ ತುಂಬಿ ಹಾಡುವೆನು' ವೇದಿಕೆ ಸಿಕ್ಕಿತು ಎಂದೆನಿಸುತ್ತಿದೆ. ಈ ಸಿನಿಮಾದಲ್ಲೂ ನಾನು ಗಾಯಕಿ. ಈ ಪಾತ್ರಕ್ಕೂ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ನಂಟಿದೆ. ಪೋಸ್ಟರ್‌ನಲ್ಲೂ ಇದನ್ನು ನೀವು ಗಮನಿಸಬಹುದು. ಎಲ್ಲ ಕಡೆಯೂ ನಟನೆ ಜೊತೆ ಈ ಹಾಡುಗಾರಿಕೆ ಅಂಟಿಕೊಂಡು ಬರುತ್ತಿದೆ.

ಅಮೃತ ಅಯ್ಯಂಗಾರ್

ಒಟಿಟಿ

# ವೂಟ್ ಸೆಲೆಕ್ಟ್‌ನಲ್ಲಿ 'ಬಡವ ರಾಸ್ಕಲ್'

**ಡಿ.24ರಂದು** ತೆರೆ ಕಂಡಿದ್ದ ಶಂಕರ್ ಗುರು ನಿರ್ದೇಶನದ, 'ಡಾಲಿ' ಧನಂಜಯ್ ನಟನೆಯ 'ಬಡವ ರಾಸ್ಕಲ್' ಸಿನಿಮಾ ಜ.26ರಂದು ಒಟಿಟಿ ವೇದಿಕೆ ವೂಟ್ ಸೆಲೆಕ್ಟ್‌ನಲ್ಲಿ ಬಿಡುಗಡೆಯಾಗಲಿದೆ.

ಧನಂಜಯ್ ನಿರ್ಮಾಣ ಮಾಡಿದ ಮೊದಲ ಚಿತ್ರ ಇದಾಗಿದೆ. ಮಿಡ್ಲ್ ಕ್ಲಾಸ್ ಎಂಟರ್‌ಟೈನರ್ ಆಗಿದ್ದ ಈ ಚಿತ್ರವು ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಆ್ಯಕ್ಷನ್, ಮಾಸ್ ಸಿನಿಮಾಗಳ ಜೊತೆಗೆ ಭಾವನಾತ್ಮಕ ಸಿನಿಮಾಗಳಲ್ಲೂ ಧನಂಜಯ್ ಮಿಂಚುತ್ತಾರೆ ಎನ್ನುವುದಕ್ಕೆ ಸಾಕ್ಷ್ಯವಾಗಿ 'ರತ್ನನ್ ಪ್ರಪಂಚ' ಹಾಗೂ 'ಬಡವ ರಾಸ್ಕಲ್' ಪ್ರೇಕ್ಷಕರ ಎದುರಿಗಿತ್ತು. ಧನಂಜಯ್ ಅವರಿಗೆ ಜೋಡಿಯಾಗಿ ಈ ಸಿನಿಮಾದಲ್ಲಿ ಅಮೃತ ಅಯ್ಯಂಗಾರ್ ನಟಿಸಿದ್ದರು. ಧನಂಜಯ್ ಅವರ ತಂದೆ–ತಾಯಿ ಪಾತ್ರದಲ್ಲಿ ರಂಗಾಯಣ ರಘು ಹಾಗೂ ತಾರಾ ನಟಿಸಿದ್ದರು.

ಕೊರೊನಾ ಪ್ರಕರಣಗಳು ಏರಿಕೆಯಾಗುತ್ತಿರುವ ಕಾರಣದಿಂದಾಗಿ ರಾತ್ರಿ ಕರ್ಫ್ಯೂ, ವಾರಾಂತ್ಯದ ಕರ್ಫ್ಯೂ ಸೇರಿದಂತೆ ಹಲವು ನಿರ್ಬಂಧಗಳನ್ನು ಸರ್ಕಾರ ಹೇರಿದೆ. ಸೋಮವಾರದಿಂದ ಶುಕ್ರವಾರದವರೆಗೆ ಚಿತ್ರಮಂದಿರಗಳಲ್ಲಿ ಶೇ 50ರಷ್ಟೇ ಆಸನ ಭರ್ತಿಗೆ ಅವಕಾಶ ನೀಡಿರುವುದು ಹಾಗೂ ವಾರಾಂತ್ಯದಲ್ಲಿ ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನಕ್ಕೆ ಅವಕಾಶ ನೀಡದೇ ಇರುವ ಕಾರಣದಿಂದಾಗಿ ಬಿಡುಗಡೆಯಾದ ತಿಂಗಳೊಳಗೇ ಚಿತ್ರವನ್ನು ಒಟಿಟಿಗೆ ನೀಡಲಾಗಿದೆ.

'ಡಾಲಿ' ಧನಂಜಯ್

ಸಿನಿ ಸಂಕ್ಷಿಪ್ತ

# ಮತ್ತೆ ಪೊಲೀಸ್ ಪಾತ್ರದಲ್ಲಿ 'ಡಾಲಿ' ಧನಂಜಯ್

**ನಟ** ಶಿವರಾಜ್‌ಕುಮಾರ್ ನಟನೆಯ 'ಟಗರು' ಸಿನಿಮಾದಲ್ಲಿ 'ಡಾಲಿ' ಪಾತ್ರದ ಮೂಲಕ ಖಳನಟನಾಗಿ ಮಿಂಚಿದ್ದ 'ನಟರಾಕ್ಷಸ' ಧನಂಜಯ್ ಸಾಲು ಸಾಲು ಸಿನಿಮಾಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ನಟ ದುನಿಯಾ ವಿಜಯ್ ಅವರು ನಿರ್ದೇಶಿಸಿದ 'ಸಲಗ' ಸಿನಿಮಾದಲ್ಲಿ 'ಸಾಮ್ರಾಟ್' ಹೆಸರಿನ ಪೊಲೀಸ್ ಅಧಿಕಾರಿ ಪಾತ್ರ ಮಾಡಿದ್ದ ಧನಂಜಯ್, ಇದೀಗ 'ಹೊಯ್ಸಳ' ಎಂಬ ಚಿತ್ರದಲ್ಲಿ ಮತ್ತೆ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಪ್ರೇಕ್ಷಕರ ಮುಂದೆ ಬರಲಿದ್ದಾರೆ. ಸಂಕ್ರಾಂತಿ ದಿನವೇ ಧನಂಜಯ್ ಅವರ 25ನೇ ಸಿನಿಮಾದ ಪೋಸ್ಟರ್ ಬಿಡುಗಡೆ ಮಾಡಿರುವ ಕೆಆರ್‌ಜಿ ಸ್ಟುಡಿಯೋಸ್, ತಮ್ಮ ಎರಡನೇ ಚಿತ್ರದ ಶೀರ್ಷಿಕೆಯನ್ನು ಅನಾವರಣ ಮಾಡಿದೆ.

ಒಟಿಟಿ ವೇದಿಕೆಯಲ್ಲಿ ಬಿಡುಗಡೆಯಾಗಿ ಪ್ರೇಕ್ಷಕರ ಮನಸ್ಸು ಗೆದ್ದ ಧನಂಜಯ್ ನಟನೆಯ 'ರತ್ನನ್ ಪ್ರಪಂಚ' ಚಿತ್ರವನ್ನು ನಿರ್ಮಾಣ ಮಾಡಿದ ಕಾರ್ತಿಕ್ ಮತ್ತು ಯೋಗಿ ಜಿ.ರಾಜ್ ಅವರೇ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಹೊಂಬಾಳೆ ಸಂಸ್ಥೆಯ ಸಂಸ್ಥಾಪಕ ವಿಜಯ್ ಕಿರಗಂದೂರ್ ಅವರು ಈ ಚಿತ್ರವನ್ನು ಅರ್ಪಿಸುತ್ತಿದ್ದಾರೆ. 'ಗೀತಾ' ಸಿನಿಮಾ ನಿರ್ದೇಶಿಸಿದ್ದ ವಿಜಯ್ ಎನ್. ಅವರು ಈ ಚಿತ್ರದ ನಿರ್ದೇಶಕರು.

ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಎಸ್.ಎಸ್. ಥಮನ್ ಅವರು ಈ ಚಿತ್ರಕ್ಕೆ ಸಂಗೀತ ನೀಡಲಿದ್ದಾರೆ. ಮಾಸ್ತಿ ಅವರು ಈ ಚಿತ್ರಕ್ಕೆ ಸಂಭಾಷಣೆಯನ್ನು ಬರೆಯಲಿದ್ದಾರೆ.

ಚಿತ್ರದ ಬಹುತೇಕ ಚಿತ್ರೀಕರಣ ಬೆಳಗಾವಿ ಜಿಲ್ಲೆಯ ಹಲವೆಡೆ ನಡೆಯಲಿದ್ದು, ಒಬ್ಬ ದಿಟ್ಟ ಪೊಲೀಸ್ ಅಧಿಕಾರಿಯ ಸುತ್ತ ಹೆಣೆದಿರುವ ಕಥೆ ಇದಾಗಿದೆ ಎಂದಿದೆ ಚಿತ್ರತಂಡ. ಏಪ್ರಿಲ್‌ನಿಂದ ಚಿತ್ರದ ಚಿತ್ರೀಕರಣ ಪ್ರಾರಂಭವಾಗಲಿದೆ. ಚಿತ್ರದಲ್ಲಿ ನಟಿಸಲಿರುವ ಎಲ್ಲ ಕಲಾವಿದರ ಆಯ್ಕೆಯನ್ನು ಚಿತ್ರ ನಿರ್ಮಾಣ ತಂಡ ಮಾಡುತ್ತಿದ್ದು, ಮುಂಬರುವ ದಿನಗಳಲ್ಲಿ ಕಲಾವಿದರನ್ನು ಪರಿಚಯಿಸುವುದಾಗಿ ಚಿತ್ರತಂಡ ಮಾಹಿತಿ ನೀಡಿದೆ.

# ಫೆಬ್ರುವರಿ ಕೊನೆಗೆ ಚಿತ್ರೋತ್ಸವ?

ಬೆಂಗಳೂರು ಅಂತರ ರಾಷ್ಟ್ರೀಯ ಸಿನಿಮೋತ್ಸವ Bengaluru International Film Festival

ಕೋವಿಡ್ ಆತಂಕ ಚಿತ್ರರಂಗಕ್ಕೆ ಈಗಾಗಲೇ ಸಾಕಷ್ಟು ಏಟು ಕೊಟ್ಟಿದೆ. ಈ ಸಂದರ್ಭದಲ್ಲಿ ಬಹು ನಿರೀಕ್ಷಿತ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಏನಾದೀತು ಎಂಬ ಕುತೂಹಲ, ನಿರೀಕ್ಷೆ ಸಿನಿ ಆಸಕ್ತರಲ್ಲಿ ಉಳಿದಿದೆ.

2020, 2021ರಲ್ಲಿ ಕೋವಿಡ್ ಕಾರಣದಿಂದಲೇ ಮುಂದಕ್ಕೆ ಹೋಗಿದ್ದ ಚಿತ್ರೋತ್ಸವ ಈ ಬಾರಿಯೂ ಒಂದೆರಡು ಬಾರಿ ದಿನಾಂಕ ಮುಂದಕ್ಕೆ ಹಾಕುತ್ತಲೇ ಬಂದಿತು. ವಿಧಾನಪರಿಷತ್ ಚುನಾವಣೆಯ ನೀತಿ ಸಂಹಿತೆ, ಬೆಳಗಾವಿ ಅಧಿವೇಶನ ಸಹ ವಿಳಂಬದ ಕಾರಣಗಳಲ್ಲಿ ಸೇರಿಕೊಂಡವು.

ಸುನೀಲ್ ಪುರಾಣಿಕ್

'ಹೌದು, ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಎಲ್ಲ ಸಿದ್ಧತೆಗಳು ನಡೆದಿವೆ. ಆದರೆ, ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳು ನಾವು ಸ್ವಲ್ಪ ಕಾದು ನೋಡುವಂತೆ ಮಾಡಿವೆ' ಎನ್ನುತ್ತಾರೆ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್.

'ಎಲ್ಲವೂ ಅಂದುಕೊಂಡಂತೆ ನಡೆದರೆ ಫೆಬ್ರುವರಿ ಕೊನೆಯ ವಾರ ಅಥವಾ ಮಾರ್ಚ್ ಮೊದಲ ವಾರದಲ್ಲಿ ಚಿತ್ರೋತ್ಸವ ಏರ್ಪಡಿಸುತ್ತೇವೆ' ಎಂದು ಅವರು ಹೇಳುತ್ತಾರೆ.

'ನಮಗೆ ಈ ಚಿತ್ರೋತ್ಸವವನ್ನು ಹೈಬ್ರಿಡ್ ಮಾದರಿಯಲ್ಲೇ ನಡೆಸಬೇಕು ಎಂಬ ಉದ್ದೇಶವಿದೆ. ನೇರ ಪ್ರದರ್ಶನಗಳು ನಡೆದರೆ ಅದರ ಪರಿಣಾಮ, ಉತ್ಸವದ ವೈಭವವೇ ಬೇರೆ. ಸಿನಿ ಆಸಕ್ತರಿಗೆ ಸಮಗ್ರ ಮಾಹಿತಿ, ಚಿತ್ರರಂಗದ ಪ್ರಮುಖರೊಂದಿಗೆ ಮುಖಾಮುಖಿಗೆ ಅವಕಾಶ ಸಿಗುತ್ತದೆ. ಈ ದೃಷ್ಟಿಯಿಂದ ಚಿತ್ರೋತ್ಸವವನ್ನು ನೇರವಾಗಿಯೇ ನಡೆಸಬೇಕು ಎಂಬ ಆಶಯ ಇದೆ. ಅದೇ ರೀತಿ ಆಗುವ ಭರವಸೆಯೂ ಇದೆ' ಎನ್ನುತ್ತಾರೆ.

ಹೈಬ್ರಿಡ್ ಅಥವಾ ನೇರವಾಗಿಯೇ ಉತ್ಸವ ಏರ್ಪಡಿಸುವ ಸಂಬಂಧ ಚಿತ್ರೋದ್ಯಮದವರೂ ಒಲವು ವ್ಯಕ್ತಪಡಿಸಿದ್ದಾರೆ. ಆದರೆ, ಪ್ರದರ್ಶನ ಸಂಬಂಧಿಸಿ ಶೇ 50ರ ಆಸನ ಭರ್ತಿ ಈಗಾಗಲೇ ಇದೆ. ಉತ್ಸವಕ್ಕೂ ಇದೇ ಇತಿಮಿತಿ ಅನ್ವಯಿಸುವ ಸಾಧ್ಯತೆ ಇದೆ. ಹಾಗಿರುವಾಗ ಚಿತ್ರೋತ್ಸವ ಕಳೆಗಟ್ಟೀತೇ ಎಂಬ ಆತಂಕ ಪ್ರದರ್ಶಕರ ವಲಯದಿಂದ ಕೇಳಿಬಂದಿದೆ.

'ಕೋವಿಡ್ ಸಾಂಕ್ರಾಮಿಕದ ಕಾರಣಕ್ಕೆ ವಿಶ್ವದ ಪ್ರಮುಖ ಚಿತ್ರೋತ್ಸವಗಳೆಲ್ಲ ಆನ್‌ಲೈನ್ ಮೂಲಕವೇ ನಡೆಯುತ್ತಿವೆ. ಪ್ರೇಕ್ಷಕರ ಪಾಲ್ಗೊಳ್ಳುವಿಕೆ, ಚಿತ್ರಗಳ ತಲುಪುವಿಕೆ ವರ್ಚುವಲ್ ಮಾದರಿಯಲ್ಲೇ ಹೆಚ್ಚು ಇರುತ್ತದೆ. ಆದರೆ, ನೇರ ಪ್ರದರ್ಶನದ ಅನುಭವ ಸಿಗಲು ಸಾಧ್ಯವಿಲ್ಲ' ಎನ್ನುತ್ತಾರೆ ಪುರಾಣಿಕ್.

ಜ. 7ರಂದು ಚಿತ್ರೋತ್ಸವದ ದಿನಾಂಕ ನಿಗದಿ ಸಂಬಂಧಿಸಿ ಮುಖ್ಯಮಂತ್ರಿಯವರ ಜತೆ ಮಾತುಕತೆ ನಿಗದಿಯಾಗಿತ್ತು. ಅದು ಮುಂದಕ್ಕೆ ಹೋಗಿದೆ. ಶುಕ್ರವಾರ (ಜ. 21) ನಡೆಯಲಿರುವ ಕೋವಿಡ್ ನಿಯಮಗಳಿಗೆ ಸಂಬಂಧಿಸಿ ಮುಖ್ಯಮಂತ್ರಿ ನೇತೃತ್ವದ ಸಭೆಯ ನಿರ್ಧಾರಗಳನ್ನು ನೋಡಿಕೊಂಡು ಮತ್ತೊಮ್ಮೆ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುತ್ತೇವೆ ಎಂದು ಅವರು ಹೇಳುತ್ತಾರೆ.

ಚಿತ್ರೋತ್ಸವಕ್ಕೆ ಈ ಬಾರಿ ಉತ್ತಮ ಪ್ರತಿಕ್ರಿಯೆ ಬಂದಿದೆ. ಸಾಕಷ್ಟು ಚಿತ್ರಗಳ ಪ್ರದರ್ಶನಕ್ಕಾಗಿ ಈಗಾಗಲೇ ಅರ್ಜಿಗಳು ಸಲ್ಲಿಕೆಯಾಗಿವೆ. ಅವುಗಳ ಪರಿಶೀಲನೆ ನಡೆಯುತ್ತಿದೆ. ಶೀಘ್ರವೇ ಪಟ್ಟಿಯನ್ನೂ ಬಿಡುಗಡೆ ಮಾಡುತ್ತೇವೆ ಎಂದು ಅವರು ವಿವರಿಸುತ್ತಾರೆ.

ಕೋವಿಡ್ ಆತಂಕ ಕಡಿಮೆಯಾಗಿ ಚಿತ್ರೋತ್ಸವದ ಹಾದಿ ಸುಗಮವಾಗಲಿ ಎಂಬುದು ಸಿನಿಮಾಸಕ್ತರ ಆಶಯವೂ ಆಗಿದೆ.

# ಮಂಸೋರೆ ಹೊಸ ಸಿನಿಮಾ '19.20.21'




**'ಹರಿವು'**, 'ನಾತಿಚರಾಮಿ', 'ಆ್ಯಕ್ಟ್–1978' ಸಿನಿಮಾಗಳ ಖ್ಯಾತಿಯ ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಮಂಸೋರೆ ಅವರು, ಇದೀಗ ನೈಜ ಘಟನೆ ಆಧರಿಸಿದ ಸಿನಿಮಾವೊಂದನ್ನು ತೆರೆ ಮೇಲೆ ತರಲು ಸಿದ್ಧತೆ ಆರಂಭಿಸಿದ್ದಾರೆ. ಚಿತ್ರವು ವಿಭಿನ್ನವಾದ ಶೀರ್ಷಿಕೆಯನ್ನು ಹೊಂದಿದ್ದು, ಪ್ರೇಕ್ಷಕರ ಕುತೂಹಲ ಹೆಚ್ಚಿಸಿದೆ.

'19.20.21' ಮಂಸೋರೆ ಅವರ ಹೊಸ ಚಿತ್ರದ ಶೀರ್ಷಿಕೆ. ಭಿನ್ನವಾದ ಪೋಸ್ಟರ್ ಬಿಡುಗಡೆಗೊಳಿಸುವ ಮೂಲಕ ನೈಜ ಘಟನೆಯ ಕಥೆ ಹೇಳಲು ಮಂಸೋರೆ ಅವರು ಸಜ್ಜಾಗಿದ್ದಾರೆ.

ಈ ಕುರಿತು ಮಾಹಿತಿ ಹಂಚಿಕೊಂಡಿರುವ ಅವರು, 'ಅಬ್ಬಕ್ಕ ಸಿನಿಮಾ ಮಾಡುವ ಯೋಜನೆಯನ್ನು ಕೊರೊನಾ ಕಾಲದಲ್ಲಿ ಜರುಗುತ್ತಿರುವ ಅನಿಶ್ಚಿತತೆಗಳ ಕಾರಣದಿಂದ ತಾತ್ಕಾಲಿಕವಾಗಿ ಮುಂದೂಡಿದ್ದೇವೆ. ನಮಗೆ ಸಿನಿಮಾ ಬಿಟ್ಟು ಬೇರೆ ಜಗತ್ತು ತಿಳಿಯದು, ಸಿನಿಮಾವೇ ನಮ್ಮ ಜೀವನ. ಈ ಕೊರೊನಾ ಕಾಲದಲ್ಲಿ ವರ್ಷ ಪೂರ್ತಿ ಮನೆಯಲ್ಲೇ ಕಾಲ ಕಳೆಯುವಾಗ ಬಹಳ ಕಷ್ಟವೆನಿಸಿದರೂ, ಆ ಎರಡು ವರ್ಷಗಳಲ್ಲಿ ನಮಗೆ ಸಾಕಷ್ಟು ಹೋಮ್ ವರ್ಕ್ ಮಾಡಲು, ಕನಸುಗಳನ್ನು ಕಾಣಲು ಸಮಯವೂ ಸಿಕ್ಕಿತು. ಅದರ ಫಲವೇ ಈಗ ಹೊಸ ಸಿನಿಮಾ, ಹೊಸ ಪ್ರಯತ್ನವೊಂದರ ಬೆನ್ನತ್ತಿ ಹೊರಟಿದ್ದೇವೆ. ಆದರೆ ಇದು ಕನಸಲ್ಲ, ಕತೆಯಲ್ಲ, ಸತ್ಯ ಘಟನೆ ಆಧಾರಿತ. ಬಹಳ ಹಿಂದೆಯೇ ಸಿನಿಮಾ ಮಾಡಬೇಕು ಅಂದುಕೊಂಡಿದ್ದ ಒಂದು ಘಟನೆಯು ದೃಶ್ಯರೂಪ ಪಡೆದುಕೊಳ್ಳಲು ಈಗ ಕಾಲ ಕೂಡಿಬಂದಿದೆ. ಈ ವರ್ಷವೇ ಸಿನಿಮಾವನ್ನು ನಿಮ್ಮ ಮುಂದೆ ತರುವ ಆಶಯದೊಂದಿಗೆ, ಅತಿ ಶೀಘ್ರದಲ್ಲೇ ಚಿತ್ರೀಕರಣಕ್ಕೆ ಹೋಗುವ ಸಿದ್ಧತೆಯಲ್ಲಿದ್ದೇವೆ' ಎಂದಿದ್ದಾರೆ ಮಂಸೋರೆ.

'ಹತ್ತೊಂಬತ್ತು, ಇಪ್ಪತ್ತು, ಇಪ್ಪತ್ತೊಂದು...' ಇವು ಎಲ್ಲರ ಬದುಕಿಗೆ ಬಹಳ ಮುಖ್ಯವಾದ ಸಂಖ್ಯೆಗಳು.. ಅದು ಏನು? ಹೇಗೆ? ಎಂಬುವ ಪ್ರಶ್ನೆಗಳಿಗೆ ಉತ್ತರ ತಿಳಿದುಕೊಳ್ಳುವ ಕುತೂಹಲ ಸಿನಿಮಾ ನೋಡುವ ತನಕ ಉಳಿದಿರಲಿ. ಸಿನಿಮಾದ ಪಾತ್ರವರ್ಗ ಮತ್ತು ತಾಂತ್ರಿಕ ವರ್ಗದ ಕುರಿತಾಗಿ ಮುಂಬರುವ ದಿನಗಳಲ್ಲಿ ಮಾಹಿತಿ ಹಂಚಿಕೊಳ್ಳುತ್ತೇವೆ' ಎಂದು ಮಂಸೋರೆ ತಿಳಿಸಿದ್ದಾರೆ.

# 'ಸಪ್ತ ಸಾಗರದಾಚೆ ಎಲ್ಲೋ'

## ಅರ್ಧ ಹಾದಿ ಸವೆಸಿದ ಮನು–ಪ್ರಿಯಾ ಜೋಡಿ

**ಹೇಮಂತ್ ಎಂ.ರಾವ್** ನಿರ್ದೇಶನದ, ನಟ ರಕ್ಷಿತ್ ಶೆಟ್ಟಿ ಅಭಿನಯಿಸುತ್ತಿರುವ 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರದ ಮೊದಲಾರ್ಧದ ಚಿತ್ರೀಕರಣ ಪೂರ್ಣಗೊಂಡಿದೆ.

ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ರಕ್ಷಿತ್ ಶೆಟ್ಟಿ ಮಾಹಿತಿ ಹಂಚಿಕೊಂಡಿದ್ದಾರೆ. ರಕ್ಷಿತ್‌ಗೆ ಜೋಡಿಯಾಗಿ ನಟಿ ರುಕ್ಮಿಣಿ ವಸಂತ್ ಬಣ್ಣ ಹಚ್ಚಿದ್ದು, ಮೊದಲ ಹಂತದ ಚಿತ್ರೀಕರಣದಲ್ಲಿನ 'ಮನು–ಪ್ರಿಯಾ' ಜೋಡಿಯ ಕೆಲ ಫೋಟೊಗಳನ್ನು ಅಪ್‌ಲೋಡ್ ಮಾಡಿದ್ದಾರೆ. ಕಳೆದ ಡಿಸೆಂಬರ್‌ನಲ್ಲೇ ಚಿತ್ರ ಬಿಡುಗಡೆಗೆ ನಿರ್ಧರಿಸಲಾಗಿತ್ತಾದರೂ, ಚಿತ್ರತಂಡವು ಇದನ್ನು ಮುಂದೂಡಿತ್ತು. ಕೋವಿಡ್ ಎರಡನೇ ಅಲೆಯ ಕಾರಣದಿಂದಾಗಿ 21 ದಿನಕ್ಕೇ ಮೊದಲ ಹಂತದ ಚಿತ್ರೀಕರಣವನ್ನು ಚಿತ್ರತಂಡ ಕಳೆದ ಮೇ ತಿಂಗಳಲ್ಲಿ ಸ್ಥಗಿತಗೊಳಿಸಿತ್ತು. ಇದೀಗ ಚಿತ್ರದ ಮೊದಲಾರ್ಧ ಪೂರ್ಣಗೊಂಡಿದೆ.

'ಸಪ್ತ ಸಾಗರದಾಚೆ ಎಲ್ಲೋ' ದಶಕದ ಹಿಂದೆ ನಡೆಯುವ ಪ್ರೇಮಕಥೆಯಾಗಿದ್ದು, ಚಿತ್ರದಲ್ಲಿ ಎರಡು ಶೇಡ್‌ಗಳಲ್ಲಿ ರಕ್ಷಿತ್ ಕಾಣಿಸಿಕೊಳ್ಳಲಿದ್ದಾರೆ. ಚಿತ್ರದ ಮೊದಲಾರ್ಧದ ಪಾತ್ರಕ್ಕಾಗಿ ರಕ್ಷಿತ್ ಅವರು 10–15 ಕೆ.ಜಿ. ತೂಕ ಇಳಿಸಿಕೊಂಡಿದ್ದು, ನಂತರದ ಪಾತ್ರಕ್ಕೆ ದಪ್ಪ ಆಗಬೇಕಾಗಿದೆ. ಇದಕ್ಕಾಗಿ ದ್ವಿತೀಯಾರ್ಧದ ಚಿತ್ರೀಕರಣಕ್ಕೆ ತಿಂಗಳ ಅಂತರ ಇಟ್ಟುಕೊಳ್ಳಲಾಗಿದೆ.

ಸಪ್ತ ಸಾಗರದಾಚೆ ಎಲ್ಲೋ
ರಕ್ಷಿತ್ ಶೆಟ್ಟಿ, ರುಕ್ಮಿಣಿ ವಸಂತ್

ಪನ್ನಗ ಭರಣ ಹಾಗೂ ಪ್ರಜ್ವಲ್ ದೇವರಾಜ್

# ಡೈನಾಮಿಕ್ ಪ್ರಿನ್ಸ್‌ಗೆ ಪನ್ನಗ ಭರಣ ನಿರ್ದೇಶನ

**ಸ್ಯಾಂಡಲ್‌ವುಡ್‌ನ** ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಸಾಲು ಸಾಲು ಸಿನಿಮಾಗಳಿಗೆ ಸಹಿ ಹಾಕುತ್ತಿದ್ದಾರೆ. ಸದ್ಯಕ್ಕೆ 'ಮಮ್ಮಿ' ಹಾಗೂ 'ದೇವಕಿ' ಸಿನಿಮಾ ನಿರ್ದೇಶಿಸಿದ್ದ ಲೋಹಿತ್ ಎಚ್. ನಿರ್ದೇಶನದ 'ಮಾಫಿಯಾ' ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿರುವ ಪ್ರಜ್ವಲ್ ದೇವರಾಜ್, ಇದೀಗ ಪನ್ನಗ ಭರಣ ನಿರ್ದೇಶನದ ಹೊಸ ಸಿನಿಮಾವೊಂದರಲ್ಲಿ ಬಣ್ಣಹಚ್ಚಲಿದ್ದಾರೆ.

ಇತ್ತೀಚೆಗೆ ಬಂಡಿ ಮಹಾಕಾಳಮ್ಮ ದೇವಸ್ಥಾನದಲ್ಲಿ ಚಿತ್ರದ ಸ್ಕ್ರಿಪ್ಟ್ ಪೂಜೆ ಸಮಾರಂಭ ಸರಳವಾಗಿ ನಡೆಯಿತು. ಇದೇ ಮೊದಲ ಬಾರಿಗೆ ಪನ್ನಗ ಭರಣ ಅವರು ಪ್ರಜ್ವಲ್ ಅವರಿಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಚಿತ್ರವನ್ನು ಫಿಲ್ಮಿ ಫೆಲೋ ಸ್ಟುಡಿಯೋಸ್ ಅರ್ಪಿಸುತ್ತಿದ್ದು, ಆಲ್ ಓಶನ್ ಮೀಡಿಯಾ ಪ್ರೈ.ಲಿಮಿಟೆಡ್ ಮತ್ತು ಮಾತಾ ಭಗವತಿ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿದೆ.

ಬಾಲಿವುಡ್‌ನ ಅಧಿರ್ ಭಟ್ ಬರೆದಿರುವ ಕಮರ್ಷಿಯಲ್ ಅಂಶಗಳನ್ನು ಒಳಗೊಂಡಿರುವ ಕಥೆ ಇದಾಗಿದೆ ಎಂದು ಚಿತ್ರತಂಡವು ತಿಳಿಸಿದೆ. 'ಮಾಫಿಯಾ', 'ಗಣ' ಚಿತ್ರಗಳಲ್ಲಿ ಪ್ರಜ್ವಲ್ ತೊಡಗಿಕೊಂಡಿದ್ದು, ಇವುಗಳ ಚಿತ್ರೀಕರಣ ಪೂರ್ಣಗೊಂಡ ಬಳಿಕ ಈ ತಂಡವನ್ನು ಅವರು ಸೇರಿಕೊಳ್ಳಲಿದ್ದಾರೆ. ಚಿತ್ರಕ್ಕೆ ವಾಸುಕಿ ವೈಭವ್ ಸಂಗೀತವಿದ್ದು, ವಿರಾಜ್ ಸಿಂಗ್ ಛಾಯಾಗ್ರಹಣವಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

### ಸುಭಾಷಿತ

ಗುಣಮಟ್ಟ ಕಾಯ್ದುಕೊಳ್ಳುವುದು ಎಂದಿಗೂ ಆಕಸ್ಮಿಕವಾಗಿ ಘಟಿಸುವ ಸಂಗತಿಯಲ್ಲ. ಅದು ಯಾವಾಗಲೂ ಬುದ್ಧಿವಂತ ಪ್ರಯತ್ನದಿಂದ ಒದಗಿಬರುವ ಫಲಿತಾಂಶವಾಗಿರುತ್ತದೆ.

–ಜಾನ್ ರಸ್ಕಿನ್

# ಕಾಯುವವರೇ ಕಳ್ಳರಾದರೆ ಜನರಲ್ಲಿ ವಿಶ್ವಾಸ ಹೇಗೆ ಉಳಿದೀತು?

**ಬೆಂಗಳೂರಿನಲ್ಲಿ** ಮುಖ್ಯಮಂತ್ರಿ ಮನೆಯ ಭದ್ರತೆಗೆ ನಿಯೋಜಿತರಾಗಿದ್ದ ಒಬ್ಬ ಹೆಡ್‌ಕಾನ್‌ಸ್ಟೆಬಲ್ ಮತ್ತೊಬ್ಬ ಕಾನ್‌ಸ್ಟೆಬಲ್ ಡ್ರಗ್ಸ್ ಮಾರುತ್ತಿದ್ದಾಗ ಸಿಕ್ಕಿಬಿದ್ದಿರುವುದು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಗೆ ಹಿಡಿದ ಕನ್ನಡಿ. ಮುಖ್ಯಮಂತ್ರಿ ಮನೆಯ ಬಳಿಗೇ ಆಟೊ ತರಿಸಿಕೊಂಡು ಡ್ರಗ್ಸ್ ಮಾರಲು ಹೊಂಚು ಹಾಕುತ್ತಿದ್ದ ತಮ್ಮ ಸಹೋದ್ಯೋಗಿಗಳನ್ನು ಪೊಲೀಸರೇ ಹಿಡಿದುಕೊಟ್ಟಿರುವುದು ಸಮಾಧಾನಕರ. ಆನಂತರದ ಬೆಳವಣಿಗೆ ಮಾತ್ರ ಸಿನಿಮಾದ ಪೊಲೀಸ್ ಕತೆಗಳಂತೆ ಬೆಳೆಯುತ್ತಲೇ ಹೋಗುತ್ತಿದೆ. ಡ್ರಗ್ಸ್ ಮಾರುತ್ತಿದ್ದ ಪೊಲೀಸರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ ತಕ್ಷಣವೇ, ಜಾಮೀನಿನ ಮೇಲೆ ಇಬ್ಬರೂ ಹೊರಗೆ ಬಂದಿದ್ದಾರೆ. ಇಷ್ಟು ಸಲೀಸಾಗಿ ಹೊರಬರುವಂತೆ ಪ್ರಥಮ ವರ್ತಮಾನ ವರದಿ (ಎಫ್‌ಐಆರ್) ದಾಖಲಿಸಿದ ಆರ್‌.ಟಿ. ನಗರ ಠಾಣೆ ಇನ್‌ಸ್ಪೆಕ್ಟರ್ ಹಾಗೂ ಪಿಎಸ್‌ಐ ಈ ಇಬ್ಬರನ್ನೂ ಕರ್ತವ್ಯಲೋಪದ ಮೇಲೆ ಅಮಾನತು ಮಾಡಲಾಗಿದೆ. ಅವರ ಮೇಲಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ. ಪೊಲೀಸ್ ವ್ಯವಸ್ಥೆಯೇ ತಲೆತಗ್ಗಿಸುವಂತಹ, ಮುಖ್ಯಮಂತ್ರಿಯವರಿಗೇ ಮುಜುಗರ ತಂದಂತಹ ಈ ಪ್ರಕರಣದಲ್ಲಿ ಕೋರ್ಟ್‌ಗೆ ಹಾಜರುಪಡಿಸಿದ ಕೂಡಲೇ ಆರೋಪಿಗಳು ಜಾಮೀನು ಪಡೆದು ಹೊರಬರುತ್ತಾರೆ ಎಂದರೆ, ಕಾನೂನಿನಲ್ಲಿ ಎಷ್ಟು ನ್ಯೂನತೆಗಳು, ಆರೋಪಿಗಳನ್ನು ಬಚಾವು ಮಾಡಬಹುದಾದ ಕಿರಿದಾರಿಗಳು ಇವೆ ಎಂಬುದು ಮೇಲ್ನೋಟಕ್ಕೇ ಕಾಣಿಸುತ್ತದೆ. ಮುಖ್ಯಮಂತ್ರಿಯಾಗುವ ಮುನ್ನ ಬಸವರಾಜ ಬೊಮ್ಮಾಯಿ ಗೃಹ ಸಚಿವರಾಗಿದ್ದರು. ‘ಡ್ರಗ್ಸ್ ವಿರುದ್ಧ ಸಮರ ಸಾರಿದ್ದೇವೆ. ಈ ಜಾಲವನ್ನು ಬುಡಸಮೇತ ಕಿತ್ತುಹಾಕಿದ್ದೇವೆ’ ಎಂದು ಅವರು ಅನೇಕ ಬಾರಿ ಹೇಳಿಕೊಂಡಿದ್ದರು. ಅಂತಹ ದೊಡ್ಡ ಮಟ್ಟದ ಕಾರ್ಯಾಚರಣೆ ನಡೆದಿದ್ದೂ ನಿಜ. ಹಾಗಂತ, ಡ್ರಗ್ಸ್ ಪೆಡ್ಲರ್‌ಗಳು, ಮಾರಾಟ ಜಾಲದ ಜೊತೆ ನಿಕಟ ಸಂಪರ್ಕ ಹೊಂದಿದ್ದ ಪೊಲೀಸರು ಸಿಕ್ಕಿಬಿದ್ದ ಪ್ರಕರಣ ಇದೇ ಮೊದಲನೆಯದಲ್ಲ. 2020ರ ನವೆಂಬರ್‌ನಿಂದ ಈಚೆಗೆ ಇಂತಹ ಐದಾರು ಪ್ರಕರಣಗಳು ಪತ್ತೆಯಾಗಿವೆ. ಡ್ರಗ್ಸ್ ಪೆಡ್ಲರ್‌ಗಳ ಜತೆ ಸಂಪರ್ಕ ಇಟ್ಟುಕೊಂಡಿದ್ದ ಬೆಂಗಳೂರು ಪಶ್ಚಿಮ ವಿಭಾಗದ 14 ಪೊಲೀಸರನ್ನು ವರ್ಗಾವಣೆ ಮಾಡಲಾಗಿತ್ತು. ಡಾರ್ಕ್‌ನೆಟ್ ಮೂಲಕ ಡ್ರಗ್ಸ್ ತರಿಸಿಕೊಂಡು ಮಾರಾಟ ಮಾಡುವ ಆರೋಪಿಗಳಿಗೆ ತನಿಖೆಯ ವಿವರಗಳ ಮಾಹಿತಿ ನೀಡುವ ಮೂಲಕ ಸಹಕರಿಸಿದ್ದ ಸದಾಶಿವನಗರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮತ್ತು ಪೆಡ್ಲರ್ ಜತೆ ನಂಟು ಹೊಂದಿದ್ದ ಸಿದ್ದಾಪುರ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಒಬ್ಬರನ್ನು ಅಮಾನತು ಮಾಡಲಾಗಿತ್ತು. ಆರೋಪಿಗಳನ್ನು ಸುಲಿಗೆ ಮಾಡಿದ ಪ್ರಕರಣಗಳಂತೂ ಇಡೀ ವ್ಯವಸ್ಥೆಗೆ ಕಪ್ಪುಚುಕ್ಕೆ. ಇಂತಹ ಪ್ರಕರಣಗಳು ಮುಂದುವರಿದರೆ, ಪೊಲೀಸ್ ವ್ಯವಸ್ಥೆಯಲ್ಲಿ ಜನರಿಗೆ ವಿಶ್ವಾಸ ಉಳಿಯುವುದಾದರೂ ಹೇಗೆ?

**ಪೊಲೀಸ್ ಇಲಾಖೆಯಲ್ಲಿನ ವರ್ಗಾವಣೆ, ಹುದ್ದೆ ದಯಪಾಲಿಸುವಲ್ಲಿನ ರಾಜಕೀಯ ಹಸ್ತಕ್ಷೇಪಕ್ಕೆ ಮೊದಲು ಕಡಿವಾಣ ಹಾಕಬೇಕಾಗಿದೆ**

ಈ ತರಹದ ಕೃತ್ಯಗಳು ಈಗಿನ ಸರ್ಕಾರದ ಅವಧಿಯಲ್ಲಿ ಮಾತ್ರ ನಡೆದಿವೆ ಎಂದಲ್ಲ. ಪೊಲೀಸ್ ವರ್ಗಾವಣೆಯಲ್ಲಿ ಭ್ರಷ್ಟಾಚಾರ, ರಾಜಕೀಯ ಹಸ್ತಕ್ಷೇಪ ಎಂದಿನಿಂದ ಶುರುವಾಯಿತೋ ಅಂದಿನಿಂದಲೂ ಪೊಲೀಸ್ ಸಿಬ್ಬಂದಿ ಪೈಕಿ ಒಂದಷ್ಟು ಮಂದಿ ತಮ್ಮ ಕೈಕೆಡಿಸಿಕೊಳ್ಳುತ್ತಿದ್ದಾರೆ. ಆಳುವ ಪಕ್ಷದ ಶಾಸಕರು, ಸಂಸದರು ತಮ್ಮ ಕ್ಷೇತ್ರಕ್ಕೆ ತಮ್ಮ ಜಾತಿಯ, ತಮ್ಮ ಮಾತು ಕೇಳುವ ಅಧಿಕಾರಿ ಬೇಕು ಎಂದು ಪಟ್ಟು ಹಿಡಿದು ಹಾಕಿಸಿಕೊಂಡು ಅದನ್ನೇ ಒಂದು ಸಂಪನ್ಮೂಲ ಕೇಂದ್ರವಾಗಿ ಮಾಡಿಕೊಂಡಿರುವುದು ವ್ಯವಸ್ಥೆ ಹದಗೆಡಲು ಒಂದು ಕಾರಣ. ದುಡ್ಡಿನ ಬೆಳೆ ತೆಗೆಯುವ ಆಯಕಟ್ಟಿನ ಪೊಲೀಸ್ ಹುದ್ದೆಗಳಿಗೆ ಭಾರಿ ಪ್ರಮಾಣದ ಲಂಚ ಕೊಟ್ಟು ಬರಬೇಕಾದ ಸ್ಥಿತಿ ಇದೆ. ವರ್ಷ ತುಂಬಲು ಒಂದು ದಿನ ಬಾಕಿ ಇರುವಾಗಲೇ ಮುಂದಿನ ವರ್ಷದ ಕಪ್ಪಕಾಣಿಕೆ ಸಂದಾಯ ಮಾಡದೇ ಇದ್ದರೆ ಮತ್ತೊಬ್ಬ ಅಧಿಕಾರಿ ಆ ಜಾಗಕ್ಕೆ ಬರುತ್ತಾರೆ ಎಂಬುದು ರಹಸ್ಯವಲ್ಲ. ಪೊಲೀಸ್ ವರ್ಗಾವಣೆಯಲ್ಲಿ ಭ್ರಷ್ಟಾಚಾರ, ರಾಜಕೀಯ ಹಸ್ತಕ್ಷೇಪ ಹೆಚ್ಚಾಗಿರುವುದನ್ನು ಮನಗಂಡ ಸುಪ್ರೀಂ ಕೋರ್ಟ್, ಇದನ್ನು ತಡೆಯುವ ಉದ್ದೇಶಕ್ಕಾಗಿ ಪೊಲೀಸ್ ಸಿಬ್ಬಂದಿ ಮಂಡಳಿಯನ್ನು ಎಲ್ಲ ರಾಜ್ಯಗಳೂ ಕಡ್ಡಾಯವಾಗಿ ರಚಿಸಬೇಕು ಎಂದು ಆದೇಶಿಸಿತ್ತು. 2011ರಲ್ಲಿ ಕರ್ನಾಟಕದಲ್ಲೂ ರಚನೆಯಾಗಿತ್ತು. ಡಿವೈಎಸ್‌ಪಿಗಿಂತ ಕೆಳಹಂತದ ಅಧಿಕಾರಿ, ಸಿಬ್ಬಂದಿ ವರ್ಗಾವಣೆಯನ್ನು ಮಂಡಳಿಯೇ ಮಾಡಬೇಕು; ಒಬ್ಬ ವ್ಯಕ್ತಿ ಕನಿಷ್ಠ ಎರಡು ವರ್ಷ ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸಿದ್ದರೆ ಮಾತ್ರ ವರ್ಗಾವಣೆ ಮಾಡಬಹುದು ಹಾಗೂ ಸೇವಾ ಜ್ಯೇಷ್ಠತೆ ಆಧರಿಸಿ ಮಂಡಳಿಗೆ ಸದಸ್ಯರನ್ನು ನೇಮಕ ಮಾಡಬೇಕು ಎಂಬ ನಿಯಮವೂ ಜಾರಿಗೆ ಬಂತು. 2016ರಲ್ಲಿ ಇದಕ್ಕೆ ತಿದ್ದುಪಡಿ ತಂದ ಸರ್ಕಾರವು ವರ್ಗಾವಣೆ ಅರ್ಹತೆಯ ಕನಿಷ್ಠ ಸೇವಾವಧಿಯನ್ನು ಒಂದು ವರ್ಷಕ್ಕೆ ಇಳಿಸಿತು. ಅಲ್ಲದೆ, ಸದಸ್ಯರ ನೇಮಕಕ್ಕೆ ಇದ್ದ ನಿಯಮಗಳನ್ನು ಸಡಿಲಗೊಳಿಸಿತು. ಹೀಗಾಗಿ ಒಂದು ವರ್ಷ ತುಂಬುವಷ್ಟರಲ್ಲೇ ವರ್ಗಾವಣೆಗಾಗಿ ಗಂಟು ಸಿದ್ಧಪಡಿಸಿಕೊಳ್ಳುವ ಅನಿವಾರ್ಯ ಪೊಲೀಸ್ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಎದುರಾಯಿತು. ವರ್ಷಕ್ಕೊಮ್ಮೆ ಹಣದ ಬೆಳೆ ತೆಗೆಯುವ ಅವಕಾಶ ರಾಜಕಾರಣಿಗಳಿಗೆ ಸಿಕ್ಕಿತು. ಹೀಗಾಗಿ, ಪೊಲೀಸ್ ಸಿಬ್ಬಂದಿ ಮಂಡಳಿ ಎಂದರೆ ಅಧಿಕಾರಸ್ಥರು ಕಳುಹಿಸುವ ಪಟ್ಟಿಗೆ ಸಹಿ ಹಾಕುವ, ಸ್ವೀಕೃತಿ–ರವಾನೆ ಶಾಖೆಯಾದಂತಾಗಿದೆ. ವರ್ಗಾವಣೆ, ಹುದ್ದೆ ದಯಪಾಲಿಸುವಲ್ಲಿನ ರಾಜಕೀಯ ಹಸ್ತಕ್ಷೇಪಕ್ಕೆ ಕಡಿವಾಣ ಹಾಕಿ, ಮಂಡಳಿಯ ಉದ್ದೇಶಿತ ಆಶಯವನ್ನು ಜಾರಿ ಮಾಡಿದರೆ ವ್ಯವಸ್ಥೆ ತುಸು ಸರಿದಾರಿಗೆ ಬಂದೀತು. ಹಾಗಂತ, ಇರುವವರೆಲ್ಲರೂ ಭ್ರಷ್ಟರಲ್ಲ. ಯಾರೋ ಒಂದಿಬ್ಬರು ಮಾಡುವ ಕುಕೃತ್ಯಗಳು ಇಡೀ ವ್ಯವಸ್ಥೆಯನ್ನೇ ಸಂಶಯಕ್ಕೆ ದೂಡುತ್ತವೆ. ಇದು ತಪ್ಪಬೇಕು. ದಕ್ಷತೆಯಿಂದ ಕೆಲಸ ನಿರ್ವಹಿಸುವವರಿಗೆ, ಪ್ರಾಮಾಣಿಕರಿಗೆ, ನಾಗರಿಕರ ನೋವು ಆಲಿಸಿ ಸಾಂತ್ವನ ಹೇಳುವ ಸಹೃದಯ ಪೊಲೀಸರ ಬೆಂಬಲಕ್ಕೆ ಸರ್ಕಾರ ಮತ್ತು ಸಾರ್ವಜನಿಕರು ನಿಲ್ಲಬೇಕಾಗಿದೆ. ಆಗಮಾತ್ರ ಪೊಲೀಸ್ ವ್ಯವಸ್ಥೆ ಸುಧಾರಣೆಯಾದೀತು. ಸರ್ಕಾರಕ್ಕೂ ಒಳ್ಳೆಯ ಹೆಸರು, ಜನರಿಗೂ ನೆಮ್ಮದಿ ಸಿಕ್ಕೀತು.

## ದಿನದ ಟ್ವೀಟ್

### ಕಠಿಣ ಕ್ರಮ ಕಾದಿದೆ

**ರಾಜ್ಯದಲ್ಲಿ ಒಂದು ಲಕ್ಷಕ್ಕೂ ಅಧಿಕ ಪೊಲೀಸ್ ಸಿಬ್ಬಂದಿ ಇದ್ದು, ಶಾಂತಿ, ಸುವ್ಯವಸ್ಥೆ ಕಾಪಾಡಲು ಹಗಲಿರುಳು ಶ್ರಮಿಸುತ್ತಿದ್ದಾರೆ. ಆದರೆ ಬೆರಳೆಣಿಕೆಯ ಮಂದಿ ಮಾಡುವ ಕಾನೂನುಬಾಹಿರ ಕೃತ್ಯದಿಂದ ಎಲ್ಲರಿಗೂ ಕೆಟ್ಟ ಹೆಸರು ಬರುತ್ತಿದೆ. ಇಂತಹ ಸಿಬ್ಬಂದಿಯನ್ನು ಸೇವೆಯಿಂದಲೇ ವಜಾಗೊಳಿಸಲು ಕ್ರಮ ವಹಿಸಲಾಗುವುದು.**

**ಆರಗ ಜ್ಞಾನೇಂದ್ರ,** ರಾಜ್ಯ ಗೃಹ ಸಚಿವ

## ಕಿಡಿನುಡಿ

**ಆತ್ಮೀಯ ಬೊಮ್ಮಾಯಿ ಅವರೆ, ರಾಜ್ಯದಲ್ಲಿ ಸಿಪಿಐ ಮತ್ತು ಪಿಎಸ್‌ಐಗಳ ವರ್ಗಾವಣೆಯು ನಗೆಪಾಟಲಾಗಿದೆ. ವರ್ಗಾವಣೆಯ ಆದೇಶಗಳನ್ನು ಹೊರಡಿಸಲಾಗುತ್ತದೆ, ಆ ಅಧಿಕಾರಿಯು ಬಿಜೆಪಿ ಶಾಸಕ ಅಥವಾ ಸಂಸದರನ್ನು ಹಿಡಿದು ಗೃಹ ಇಲಾಖೆ ಜತೆ ದರ ಕುದುರಿಸಿಕೊಳ್ಳುತ್ತಾರೆ ಮತ್ತು ಆದೇಶವನ್ನು ತಡೆಹಿಡಿಯುವಂತೆ ಅಥವಾ ಮಾರ್ಪಡಿಸುವಂತೆ ಮಾಡುತ್ತಾರೆ. ಗುತ್ತಿಗೆದಾರರಿಗೆ 40%, ವರ್ಗಾವಣೆಗೆ ಎಷ್ಟಿದೆ?**

**ಪ್ರಿಯಾಂಕ್ ಖರ್ಗೆ,** ಕಾಂಗ್ರೆಸ್ ಶಾಸಕ

## 25 ವರ್ಷಗಳ ಹಿಂದೆ

ಮಂಗಳವಾರ, 21-1-1997

**• ನಿರ್ಬಂಧ ವಿರೋಧಿಸಿ ಲಾರಿ ಮುಷ್ಕರ**

**ಬೆಂಗಳೂರು, ಜ. 20–** ಬೆಂಗಳೂರು ನಗರದ ಒಳಗೆ ಲಾರಿ ಪ್ರವೇಶ ಮತ್ತು ಸಂಚಾರ ನಿರ್ಬಂಧ ಇಂದು ಬೆಳಿಗ್ಗೆ 8 ಗಂಟೆಯಿಂದ ಜಾರಿಗೆ ಬಂತು. ಇದನ್ನು ವಿರೋಧಿಸಿ ಲಾರಿ ಮಾಲೀಕರು ಇಂದಿನಿಂದ ಅನಿರ್ದಿಷ್ಟ ಅವಧಿಯ ಮುಷ್ಕರ ಆರಂಭಿಸಿದ್ದಾರೆ.

ಬೆಳಿಗ್ಗೆ 8 ಗಂಟೆಯಾಗುತ್ತಿದ್ದಂತೆ, ನಗರವನ್ನು ಪ್ರವೇಶಿಸುವ ಎಲ್ಲ ರಸ್ತೆಗಳಲ್ಲಿ ಭಾರಿ ಸರಕು ಸಾಗಣೆ ಲಾರಿಗಳನ್ನು ತಡೆದು ನಿಲ್ಲಿಸಲಾಯಿತು. ತುಮಕೂರು ರಸ್ತೆಯಲ್ಲಿ ವಿಡಿಯಾ ಕಾರ್ಖಾನೆಯಿಂದ ನೆಲಮಂಗಲದವರೆಗೆ ಸರಕು ಹೊತ್ತ ನೂರಾರು ಲಾರಿಗಳು ನಗರವನ್ನು ಪ್ರವೇಶಿಸಲು ಕಾದು ನಿಂತಿದ್ದವು. ಉಳಿದ ರಸ್ತೆಗಳಲ್ಲೂ ನೂರಾರು ಲಾರಿಗಳಿದ್ದವು.

**• ‘ಜೈಲು ವ್ಯವಸ್ಥೆ ಸುಧಾರಣೆಗೆ ಕ್ರಮ’**

**ಬೆಂಗಳೂರು, ಜ. 20–** ಪರಿಸರದ ಒತ್ತಡ ಹಾಗೂ ಕೆಟ್ಟ ಸಾಮಾಜಿಕ ವಾತಾವರಣ ಕಾರಣವಾಗಿ ಅಪರಾಧಿಗಳಾಗುವವರನ್ನು ಸುಧಾರಿಸಿ ಹೊರಕಳುಹಿಸುವ ವ್ಯವಸ್ಥೆಗೆ ಜೈಲುಗಳಲ್ಲಿ ಆದ್ಯತೆ ನೀಡಲಾಗುತ್ತಿದೆ ಎಂದು ಪ್ರಧಾನಿ ಎಚ್‌.ಡಿ.ದೇವೇಗೌಡ ಇಲ್ಲಿ ಇಂದು ಹೇಳಿದರು.

## 50 ವರ್ಷಗಳ ಹಿಂದೆ

ಶುಕ್ರವಾರ, 21-1-1972

**• ಆಹಾರ ಉತ್ಪಾದನೆ: ವಿದೇಶಿ ತಜ್ಞರ ಭವಿಷ್ಯ ಸುಳ್ಳು ಮಾಡಿದ ವಿಕ್ರಮ**

**ಷಿಲ್ಲಾಂಗ್, ಜ. 20–** ಇಂದು ಮುಗಿಲು ಮುಟ್ಟಿದ ದೀರ್ಘ ಹರ್ಷೋದ್ಗಾರಗಳ ಮಧ್ಯೆ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಮೇಘಾಲಯ ರಾಜ್ಯವನ್ನು ಉದ್ಘಾಟಿಸಿದರು.

ಹಿಂದೆ ಅಸ್ಸಾಮಿನ ಭಾಗವಾಗಿದ್ದ ಖಾಸಿ, ಜಯಂತಿಯ ಮತ್ತು ಗಾರೋ ಗುಡ್ಡಗಾಡು ಪ್ರದೇಶ ಸೇರಿ ಈಗ ಮೇಘಾಲಯ ರಾಜ್ಯವಾಗಿದೆ. ಪೂರ್ಣ ಸ್ಥಾನಮಾನದ ಈ ರಾಜ್ಯವನ್ನು ಉದ್ಘಾಟಿಸಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಇಂದಿರಾ ಗಾಂಧಿಯವರು, ಹೊಸ ರಾಜ್ಯ ಈ ಪ್ರದೇಶದ ನಿವಾಸಿಗಳಿಗೆ ಐತಿಹಾಸಿಕ ಮಹತ್ವದ ಘಟನೆ ಎಂದು ನುಡಿದು, ಇದು ಹೊಸ ಅವಕಾಶಗಳ ಬಾಗಿಲನ್ನು ತೆರೆದಿದೆಯೆಂದರು.

ಭಾರತದಲ್ಲಿ ಕ್ಷಾಮ ಉಂಟಾಗುವುದೆಂದು ಎರಡು ವರ್ಷಗಳ ಹಿಂದೆ ಬ್ರಿಟನ್ ಮತ್ತು ಅಮೆರಿಕದ ಕೆಲವು ತಜ್ಞರುಗಳು ನುಡಿದಿದ್ದ ಭವಿಷ್ಯಕ್ಕೆ ತದ್ವಿರುದ್ಧವಾಗಿ ಕಳೆದ ವರ್ಷ ಭಾರತ ಆಹಾರಧಾನ್ಯಗಳ ಬೆಳೆಯಲ್ಲಿ ವಿಕ್ರಮ ಸ್ಥಾಪಿಸಿತೆಂದು ಶ್ರೀಮತಿ ಗಾಂಧಿ ಹೇಳಿದರು.

ಸಾಮಾಜಿಕ ಸೌಹಾರ್ದ ಬಲಪಡಿಸಲು ವಿಶ್ವಾಸಾರ್ಹ ಧಾರ್ಮಿಕ ಸಂಸ್ಥೆಗಳನ್ನು ಬಳಸಿಕೊಳ್ಳಬೇಕು

# ಒಗ್ಗೂಡಿಸುವ ಶಕ್ತಿಯಾಗಿ ಧರ್ಮ?

ವಿಶ್ಲೇಷಣೆ

ಎ.ರವೀಂದ್ರ

**ಪ್ರಧಾನಿ** ನರೇಂದ್ರ ಮೋದಿ ಅವರು ಈಚೆಗೆ ದಿವ್ಯಕಾಶಿ–ಭವ್ಯಕಾಶಿ ಯೋಜನೆಯನ್ನು ಉದ್ಘಾಟಿಸಿದ ಕಾರ್ಯಕ್ರಮವು ಬಹಳ ಅದ್ಧೂರಿಯಾಗಿತ್ತು. ವಿಶ್ವದ ಅತ್ಯಂತ ಪುರಾತನ ನಗರಗಳಲ್ಲಿ ಒಂದಾಗಿರುವ ಕಾಶಿಯನ್ನು ಕೊಳಕು, ಇಕ್ಕಟ್ಟಿನ ಸ್ಥಿತಿಯಿಂದ ಆಧುನಿಕ ನಗರವನ್ನಾಗಿ ಪರಿವರ್ತಿಸಿ, ಅದರ ಮೂಲ ಪರಂಪರೆಯನ್ನು ಉಳಿಸಿಕೊಳ್ಳುವ ಯೋಜನೆಯು ಗಮನಾರ್ಹ. ₹ 900 ಕೋಟಿ ವೆಚ್ಚದ ಕಾಶಿ ವಿಶ್ವನಾಥಧಾಮ ಯೋಜನೆಯು ನಗರದಾದ್ಯಂತ ಸಂಚಾರವನ್ನು ಸುಗಮಗೊಳಿಸುವ ಕಾರಿಡಾರ್ ನಿರ್ಮಾಣ, ದೇವಸ್ಥಾನದ ಸುತ್ತಲಿನ ಜಾಗಗಳನ್ನು ಸ್ವಚ್ಛಗೊಳಿಸುವುದು, ಘಾಟ್‌ಗಳ ಪುನರುಜ್ಜೀವನ ಮತ್ತು ದೇವಸ್ಥಾನ–ಘಾಟ್‌ಗಳ ನಡುವೆ ಮಾರ್ಗ ನಿರ್ಮಾಣ, ವಸ್ತುಸಂಗ್ರಹಾಲಯ ಮತ್ತು ಮಾರುಕಟ್ಟೆ ನಿರ್ಮಾಣದಂತಹ ಕಾರ್ಯಗಳನ್ನು ಒಳಗೊಂಡಿದೆ.

ಧರ್ಮ ಮತ್ತು ರಾಜಕೀಯವನ್ನು ಪರಸ್ಪರ ಬೆರೆಸಿದ್ದರ ಬಗ್ಗೆ, ಪ್ರಧಾನಿಯವರು ಧಾರ್ಮಿಕ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಕಣ್ಣಿಗೆ ರಾಚುವಂತೆ ಪಾಲ್ಗೊಂಡಿದ್ದರ ಬಗ್ಗೆ ಪ್ರಶ್ನೆಗಳನ್ನು ಎತ್ತಬಹುದು. ಆದರೆ, ವಾರಾಣಸಿಯ ಹೊಸ ನೋಟವು ಹಿಂದೂಗಳಲ್ಲಿ ಹಲವರಲ್ಲಿ ರೋಮಾಂಚನ ಉಂಟುಮಾಡಿದೆ. ಭಾರತದಲ್ಲಿ ಬಹುತೇಕರು ಧಾರ್ಮಿಕ ಮನಸ್ಸಿನವರಾಗಿರುವ ಕಾರಣ, ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಧರ್ಮ ಮತ್ತು ಧರ್ಮದ ಕುರಿತ ಧೋರಣೆಗೆ ಸಂಬಂಧಿಸಿದಂತೆ ಅಮೆರಿಕ ಮೂಲದ ಪ್ಯೂ ರಿಸರ್ಚ್ ಸಂಸ್ಥೆಯವರು 2019ರಿಂದ 2020ರ ನಡುವೆ ಸಂಶೋಧನೆಯೊಂದನ್ನು ನಡೆಸಿದ್ದರು. ಭಾರತೀಯರು ಯಾವ ಧರ್ಮಕ್ಕೇ ಸೇರಿರಲಿ, ಅವರು ಆಹಾರ ಪದ್ಧತಿ, ಮದುವೆ, ಧಾರ್ಮಿಕ ನಂಬಿಕೆಗಳು ಇಂತಹ ವಿಚಾರಗಳಲ್ಲಿ ಬಹಳ ಸಂಪ್ರದಾಯವಾದಿಗಳು ಎಂಬುದನ್ನು ಈ ಅಧ್ಯಯನವು ಕಂಡುಕೊಂಡಿದೆ. ಭಾರತದಲ್ಲಿ ಶೇಕಡ 3ರಷ್ಟು ಜನ ಮಾತ್ರ ದೇವರನ್ನು ನಂಬುವುದಿಲ್ಲ. ಹಿಂದೂಗಳ ಪೈಕಿ ಶೇ 2ರಷ್ಟು ಮಂದಿ ಮಾತ್ರ ನಾಸ್ತಿಕರು. ಮುಸ್ಲಿಮರಲ್ಲಿ ಶೇ 6ರಷ್ಟು ಜನ ನಾಸ್ತಿಕರು.

ಎಲ್ಲ ಧರ್ಮಗಳಲ್ಲಿಯೂ ಇರುವ ಸಮಾನ ಮೌಲ್ಯಗಳಾದ ಪ್ರೀತಿ, ಕರುಣೆ, ದಾನ, ಸೇವಾ ಮನೋಭಾವವನ್ನು ಹೆಚ್ಚಿಸಲು ಧರ್ಮವನ್ನು ಏಕೆ ಬಳಸಿಕೊಳ್ಳಬಾರದು ಎಂಬ ಪ್ರಶ್ನೆ ಮೂಡುತ್ತದೆ. ಅಸಹಿಷ್ಣುತೆ, ದ್ವೇಷ ಭಾಷಣ ಮತ್ತು ಧ್ರುವೀಕರಣ ಹೆಚ್ಚುತ್ತಿರುವ ಸಂದರ್ಭದಲ್ಲಿ ಇದು ಪ್ರಾಯೋಗಿಕವಾಗಿ ಕಾರ್ಯಸಾಧುವಲ್ಲ ಎಂದು ಅನ್ನಿಸಬಹುದು. ವಾಸ್ತವದಲ್ಲಿ, ಇಂತಹ ವಿಭಜನಕಾರಿ ಕಾರ್ಯಗಳಲ್ಲಿ ತೊಡಗಿರುವವರು ಸ್ವಾರ್ಥಿ ರಾಜಕಾರಣಿಗಳು, ಧಾರ್ಮಿಕ ನಾಯಕರು ಮತ್ತು ಕೆಲವು ಕಿಡಿಗೇಡಿಗಳು – ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಎಲ್ಲ ಧರ್ಮಗಳಲ್ಲಿನ ಬಹುಸಂಖ್ಯೆಯ ಜನರು ಶಾಂತಿ ಮತ್ತು ಸೌಹಾರ್ದವನ್ನು ಬಯಸುತ್ತಿದ್ದಾರೆ.

ನೈಜ ಭಾರತೀಯ ಆಗಬೇಕಾದರೆ ಎಲ್ಲ ಧರ್ಮಗಳನ್ನು ಗೌರವಿಸಬೇಕಾಗಿರುವುದು ಮುಖ್ಯ ಎಂದು ಶೇ 80ಕ್ಕಿಂತ ಹೆಚ್ಚಿನವರು ನಂಬಿದ್ದಾರೆ, ಎಲ್ಲ ಧರ್ಮಗಳನ್ನು ಗೌರವಿಸುವುದು ತಮ್ಮ ಧಾರ್ಮಿಕ ಅಸ್ಮಿತೆಯ ಮುಖ್ಯ ಅಂಶ ಎಂದೂ ಅವರು ನಂಬಿದ್ದಾರೆ ಎಂದು ಅಧ್ಯಯನವು ಹೇಳಿದೆ. ಅಂದರೆ, ನಾವು ಎದುರಿಸಬೇಕಿರುವುದು ಬಹಳ ಸಣ್ಣದಾದ ಆದರೆ ಗಂಟಲು ಗಟ್ಟಿಯಿರುವ ಒಂದು ಸಮುದಾಯವನ್ನು. ಧರ್ಮದ ನಿಜ ಆಶಯವು ಬಿಕ್ಕಟ್ಟುಗಳನ್ನು ಸೃಷ್ಟಿಸುವ ಉದ್ದೇಶದ ರಾಜಕಾರಣಕ್ಕೆ ಅತ್ಯುತ್ತಮ ಔಷಧವಿದ್ದಂತೆ. ಕೆಲಸ ಸುಲಭವಲ್ಲ; ಆದರೆ ನನ್ನ ಕೆಲವು ಸಲಹೆಗಳು ಇಲ್ಲಿವೆ:

• ಎರಡು ಕಾರಣಗಳಿಗಾಗಿ, ಸರ್ಕಾರವು ಕಾಶಿ ಮಾದರಿಯ ಯೋಜನೆಯನ್ನು ದೇಶದ ಇತರ ಕಡೆಗಳಲ್ಲಿಯೂ ಜಾರಿಗೊಳಿಸಬೇಕು. ಮೊದಲ ಕಾರಣ: ಇದು ಬಹಳ ಚೆನ್ನಾಗಿ ಆಲೋಚಿಸಿ ರೂಪಿಸಿ, ಕಾಲಮಿತಿಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ಯೋಜನೆ. ಇತರ ನಗರಗಳ ಪುನರುತ್ಥಾನಕ್ಕೆ, ಅದರಲ್ಲೂ ಮುಖ್ಯವಾಗಿ ದೇವಳಗಳ ನಗರಗಳಿಗೆ, ಮೇಲ್ಪಂಕ್ತಿಯನ್ನು ಹಾಕಿಕೊಡಬಹುದಾದ ಯೋಜನೆ ಇದು. ಎರಡನೆಯ ಕಾರಣ: ಮೋದಿ ಮತ್ತು ಆಡಳಿತ ಪಕ್ಷವು ಉತ್ತರ ಭಾರತದ ಕಡೆ ಹೆಚ್ಚು ಒಲವು ಹೊಂದಿದೆ, ಹಿಂದುತ್ವಕ್ಕೆ ಮಾತ್ರ ಆದ್ಯತೆ ಎಂದು ಭಾವಿಸಿದವರಲ್ಲಿ ಇದು ವಿಶ್ವಾಸ ಮರುಸ್ಥಾಪಿಸಬಲ್ಲದು. ಆದರೆ, ಇದರಲ್ಲಿ ಸರ್ಕಾರದ ಪಾತ್ರವು ಮೂಲಸೌಕರ್ಯ ನಿರ್ಮಾಣಕ್ಕೆ ಸೀಮಿತವಾಗಬೇಕು. ದೇವಸ್ಥಾನಗಳ ಸುಧಾರಣೆಯನ್ನು ಅಲ್ಲಿನ ಪ್ರಾಧಿಕಾರಗಳಿಗೆ ಬಿಟ್ಟುಬಿಡಬೇಕು.

ಈ ಕೆಲಸವನ್ನು ದಕ್ಷಿಣ ಭಾರತದಿಂದ ಆರಂಭಿಸುವುದು ಸೂಕ್ತ. ರಾಜ್ಯದ ಹಂಪಿಯನ್ನು ದಕ್ಷಿಣದ ಕಾಶಿಯನ್ನಾಗಿ ಪರಿವರ್ತಿಸಬಹುದು. ಹಂಪಿಯು ವಿರೂಪಾಕ್ಷನ ನೆಲೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು ಇದು. ಯುನೆಸ್ಕೊ ವಿಶ್ವ ಪಾರಂಪರಿಕ ತಾಣವೂ ಹೌದು. ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ದೊಡ್ಡದು. ಆದರೆ ಪ್ರವಾಸಿಗರಿಗೆ ಅಗತ್ಯವಿರುವ ಸೌಲಭ್ಯಗಳು, ಮೂಲಸೌಕರ್ಯ ಇಲ್ಲಿಲ್ಲ. ವಾರಾಣಸಿಯ ಮಾದರಿಯಲ್ಲಿ ಹೊಸ ರೂಪ ಪಡೆಯಲು ಹಂಪಿ ಕಾಯುತ್ತಿದೆ.

• ದಕ್ಷಿಣ ಭಾರತ ಮತ್ತು ಇತರ ಪ್ರದೇಶಗಳಲ್ಲಿ ಹಲವು ದೇವಸ್ಥಾನಗಳು ಆಳುವವರ ಗಮನ ಸೆಳೆಯಲು ಹೆಣಗುತ್ತಿವೆ. ರಾಮನಾಥಸ್ವಾಮಿ ದೇವಸ್ಥಾನ ಇರುವ ತಮಿಳುನಾಡಿನ ರಾಮೇಶ್ವರದಲ್ಲಿ ವಿಶ್ವದ ಅತ್ಯಂತ ಉದ್ದನೆಯ ಕಾರಿಡಾರ್‌ಗಳು ಇವೆ. ಇವುಗಳನ್ನು ನೋಡುವುದೇ ಒಂದು ಆನಂದ. ಜಗನ್ನಾಥ, ಬಲಭದ್ರ ಮತ್ತು ಸುಭದ್ರೆಯರ ಕಟ್ಟಿಗೆಯ ಮೂರ್ತಿಗಳು ಇರುವ ಪುರಿಯ ಜಗನ್ನಾಥ ದೇವಸ್ಥಾನವು ವಾರ್ಷಿಕ ರಥಯಾತ್ರೆಯ ಸಂದರ್ಭದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಸೆಳೆಯುತ್ತದೆ. ಅಲ್ಲಿ ಶಂಕರಾಚಾರ್ಯರು ಸ್ಥಾಪಿಸಿದ ಗೋವರ್ಧನಪೀಠ ಕೂಡ ಇದೆ. ಆಂಧ್ರ ಪ್ರದೇಶದಲ್ಲಿ ತಿರುಮಲ ದೇವಸ್ಥಾನ ಇದೆ. ಇದು ಭಾರತದ ಅತ್ಯಂತ ಶ್ರೀಮಂತ ದೇವಸ್ಥಾನ. ಪ್ರತಿದಿನವೂ ಇಲ್ಲಿಗೆ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಾರೆ.

ಇಂತಹ ಎಲ್ಲ ದೇವಳ ನಗರಿಗಳಿಗೂ ಬದಲಾವಣೆಯ ಅಗತ್ಯವಿದೆ. ಇವು ಧಾರ್ಮಿಕವಾಗಿ ಮಹತ್ವವಾಗಿರುವ ನಗರಗಳು ಎಂಬ ಕಾರಣಕ್ಕೆ ಮಾತ್ರವೇ ಅಲ್ಲ. ಬದಲಿಗೆ, ಈ ನಗರಗಳು ಅರ್ಥ ವ್ಯವಸ್ಥೆ ಹಾಗೂ ಸಮಾಜಕ್ಕೆ ನೀಡುವ ಕೊಡುಗೆಯ ಕಾರಣದಿಂದಾಗಿಯೂ ಬದಲಾವಣೆ ತರಬೇಕಾದ ಅಗತ್ಯವಿದೆ. ಭಾರತದ ದೇವಸ್ಥಾನ ಕೇಂದ್ರಿತ ಅರ್ಥ ವ್ಯವಸ್ಥೆಯ ಪೂರ್ಣ ತಾಕತ್ತನ್ನು ಇನ್ನಷ್ಟೇ ಕಂಡುಕೊಳ್ಳಬೇಕಿದೆ.

ಎಲ್ಲರ ಜೊತೆ, ಎಲ್ಲರ ಅಭಿವೃದ್ಧಿ ಎಂಬ ತತ್ವದ ಹೆಸರಿನಲ್ಲಿ ಪ್ರಮಾಣ ಮಾಡುವ ಪ್ರಧಾನಿಯವರು, ಪುನರುಜ್ಜೀವನದ ಯೋಜನೆಗಳ ಪಟ್ಟಿಯಲ್ಲಿ ಎಲ್ಲ ಧರ್ಮಗಳ ಶ್ರದ್ಧಾ ಕೇಂದ್ರಗಳನ್ನು ಸೇರಿಸಿ, ಆ ಮಾತಿಗೆ ಕ್ರಿಯಾರೂಪ ನೀಡಬೇಕು. ಆರಂಭಿಕ ಹೆಜ್ಜೆಯಾಗಿ, ಚಾರ್ ಧಾಮ್ ಮಾದರಿಯಲ್ಲಿ ಪಂಚಧಾಮದ ಬಗ್ಗೆ ಗಮನ ನೀಡಬೇಕು. ತಮಿಳುನಾಡಿನ ಕ್ಯಾಥೊಲಿಕ್ ಚರ್ಚ್ ವೇಲಾಂಕಣಿ, ಪುಣೆ ಸಮೀಪದ ಶಿರಡಿ ಸಾಯಿಬಾಬಾ ಕೇಂದ್ರ, ರಾಜಸ್ಥಾನದ ಅಜ್ಮೇರ್ ದರ್ಗಾ, ಸಿಖ್ಖರ ಪವಿತ್ರ ಸ್ಥಳವಾದ ಅಮೃತಸರ, ಬೌದ್ಧರ ಪವಿತ್ರ ಕೇಂದ್ರವಾದ ಸಾರಾನಾಥವನ್ನು ಜೋಡಿಸಬೇಕು. ಇವೆಲ್ಲವೂ ಬೇರೆ ಬೇರೆ ಧರ್ಮಗಳ ಜನರನ್ನು ಆಕರ್ಷಿಸುತ್ತವೆ. ಬೇರೆ ಬೇರೆ ಧರ್ಮಗಳ ನಡುವಿನ ಏಕತೆಯ ಮಾದರಿಯಾಗಿ ನಿಂತಿವೆ ಇವು.

ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಪ್ರಸರಣದಲ್ಲಿ ತೊಡಗಿಸಿಕೊಂಡಿರುವ, ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿರುವ ವಿಶ್ವಾಸಾರ್ಹ ಸಂಸ್ಥೆಗಳಾದ ರಾಮಕೃಷ್ಣ ಮಿಷನ್, ಚಿನ್ಮಯ ಮಿಷನ್, ಸಿದ್ಧಗಂಗಾ ಮಠ, ಮದರ್ ತೆರೇಸಾ ಸ್ಥಾಪಿಸಿದ ಮಿಷನರೀಸ್ ಆಫ್ ಚ್ಯಾರಿಟಿಯಂತಹ ಬೇರೆ ಬೇರೆ ಸಂಸ್ಥೆಗಳನ್ನು ಕೋಮುವಾದ ಮತ್ತು ಜಾತಿವಾದವನ್ನು ಹತ್ತಿಕ್ಕಲು, ಬೇರೆ ಬೇರೆ ಧರ್ಮಗಳ ನಡುವೆ ಒಗ್ಗಟ್ಟನ್ನು ಹೆಚ್ಚಿಸಲು ಹಾಗೂ ಸಾಮಾಜಿಕ ಸೌಹಾರ್ದ ಬಲಪಡಿಸಲು ಬಳಸಿಕೊಳ್ಳಬೇಕು.

ಭಾರತೀಯರಿಗೆ ರಾಜಕೀಯ ಮುಖಂಡರು ಅಥವಾ ಬೇರೆ ಯಾವುದೇ ಮುಖಂಡರಿಗಿಂತ ಧಾರ್ಮಿಕ ನಾಯಕರಲ್ಲಿ ನಂಬಿಕೆ ಹೆಚ್ಚು. ಅವರು ಹೇಳಿದ್ದನ್ನು ಕೇಳಿ ಪ್ರಭಾವಿತರಾಗುವ ಸಾಧ್ಯತೆಯೂ ಇರುತ್ತದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ, ‘ಪಾವಿತ್ರ್ಯ, ಪರಿಶುದ್ಧತೆ ಮತ್ತು ದಯೆಯಂತಹ ಮೌಲ್ಯಗಳು ಯಾವುದೇ ಚರ್ಚ್‌ನ ಸ್ವಾಧೀನಕ್ಕೆ ಸೇರಿದವು ಅಲ್ಲ. ಪ್ರತಿಯೊಂದು ವ್ಯವಸ್ಥೆಯೂ ಅತ್ಯುನ್ನತ ವ್ಯಕ್ತಿತ್ವದ ಸ್ತ್ರೀ, ಪುರುಷರಿಗೆ ಜನ್ಮ ನೀಡಿದೆ’.

ಮತಾಂತರವನ್ನು ನಿಷೇಧಿಸುವ ಕಾನೂನಿಗಿಂತಲೂ ಮಿಗಿಲಾಗಿ, ತಮ್ಮ ನಂಬಿಕೆಗಳನ್ನು ಪಾಲಿಸುತ್ತಲೇ ಇನ್ನೊಬ್ಬರ ನಂಬಿಕೆಗಳನ್ನು ಗೌರವಿಸುವ ಮಾರ್ಗಕ್ಕೆ ಹೃದಯಗಳನ್ನು ಪರಿವರ್ತಿಸುವುದು ಇಂದಿನ ಅಗತ್ಯ.

ಲೇಖಕ: ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ

## ಚುರುಮುರಿ

### ಕನ್ನಡ ಪರೀಕ್ಷೆ!

• ಬಿ.ಎನ್.ಮಲ್ಲೇಶ್

‘ಗುರೂ... ನಾನೂ ಕನ್ನಡ ಸಾಹಿತ್ಯ ಪರಿಷತ್ ಮೆಂಬರಾಗಬೇಕು ಅಂತಿದೀನಿ... ಆದ್ರೆ ಅದೇನೋ ಪರೀಕ್ಷೆ ಮಾಡ್ತಾರಂತೆ?’ ತೆಪರೇಸಿಯನ್ನು ಗುಡ್ಡೆ ವಿಚಾರಿಸಿದ.

‘ಹೌದಂತೆ, ಸಿಂಪಲ್ ಪ್ರಶ್ನೆ ಕೇಳ್ತಾರಂತೆ. ಉದಾಹರಣೆಗೆ, ಈಗ ಕನ್ನಡದಲ್ಲಿ ಎಷ್ಟು ಅಕ್ಷರ ಅದಾವೆ?’ ತೆಪರೇಸಿ ಕೇಳಿದ.

‘ನಾನು ಓದೋವಾಗ ಐವತ್ತೋ ಐವತ್ತೆಲ್ಡೋ ಇದ್ವು. ಈಗ ಎಲ್ಲ ರೇಟಾಗಿದಾವೆ, ಅವೂ ಜಾಸ್ತಿಯಾಗಿರಬೇಕು’.

‘ನಿನ್ತೆಲಿ, ಹೋಗ್ಲಿ ನಿಂಗೆ ಈ ಸಂಧಿ ಸಮಾಸ ಗೊತ್ತಾ?’

‘ಸಮೋಸ ಗೊತ್ತು, ಅದೆ ಆಲೂಗಡ್ಡೆ ಹಾಕಿ ಮಾಡ್ತಾರಲ್ಲ. ಆದ್ರೆ ಈ ಸಂದಿ ಅಂದ್ರೆ ಏನು? ಮನೆ ಅಕ್ಕಪಕ್ಕ ಇರ್ತಾವಲ್ಲ ಅವಾ?’

‘ಥೂ ನಿನ್ನ, ಈಗ ಅದು ಬಿಡು... ಮದ್ಯಪಾನದಲ್ಲಿ ‘ದ್ಯ’ ಅಲ್ಪಪ್ರಾಣನೋ ಮಹಾಪ್ರಾಣನೋ?’

‘ಮದ್ಯಪಾನ ಅಂದ್ರೆ ನಂಗೆ ಮಹಾಪ್ರಾಣನೇ, ನೋ ಡೌಟ್...’

‘ನೀನು ಮೆಂಬರಾದಂಗೆ ಬಿಡು. ನಿಂಗೆ ಬೈಲಾ ಅಂದ್ರೆ ಏನು ಗೊತ್ತಾ?’

‘ಗೊತ್ತು... ಬೈಲಾ ಅಂದ್ರೆ ಬೈಯ್ಯೋದು. ಮಂಡ್ಯ ಕಡೆ ಹೋಗ್ಲಾ ಬಾರ್ಲಾ ಅಂತಾರಲ್ಲ, ಹಂಗೆ ಇದು ಬೈಲಾ...’

‘ವಾಹ್ ಎಷ್ಟ್ ತಿಳ್ಕಂಡೀಯಲೆ... ನಿಂಗೆ ಈ ಹೊಕ್ಕಳ ಸೀಳೋದು ಅಂದ್ರೆ ಗೊತ್ತಾ?’

‘ಹೊಕ್ಕಳ ಗಿಕ್ಕಳ ಅಂದ್ರೆ ನಂಗೊಂಥರ ಗುಳುಗುಳು ಆಗುತ್ತಪ್ಪ, ಬೇರೇನರೆ ಕೇಳು...’

‘ಗುಡ್ಡೆ ಸಾಹಿತ್ಯ ಪರಿಷತ್ ಪರೀಕ್ಷೇಲಿ ಫೇಲಾದ’ ಇದು ವರ್ತಮಾನ ಕಾಲನೋ ಭವಿಷ್ಯತ್ ಕಾಲನೋ?’

‘ಲೇಯ್ ತೆಪರ, ಕಾಲ ಯಾವುದರೆ ಆಗ್ಲಿ, ನಂಗೆ ಕನ್ನಡ ಮಾತಾಡಕೆ ಬರ್‍ತತೋ ಇಲ್ಲೋ? ನಿಂಗದು ಅರ್ಥ ಆಗ್ತತೋ ಇಲ್ಲೋ? ಅಷ್ಟು ಸಾಕು. ಕನ್ನಡ ಉಳಿದಿರೋದು ನಮ್ಮಂಥ ದಡ್ಡರಿಂದ. ನಿಮ್ಮಂಥ ಟಸ್ಸು ಪುಸ್ಸು ಡಿಗ್ರಿ ಮಂದಿಯಿಂದ ಅಲ್ಲ. ಸುಮ್ನೆ ಮೆಂಬರ್‌ಶಿಪ್ ಕೊಡ್ಸು...’ ಗುಡ್ಡೆಗೆ ಸಿಟ್ಟು ಬಂತು.

‘ಅಪ್ಪಣೆ ಗುಡ್ಡೆ ಮಹಾಪ್ರಭು’ ಎಂದ ತೆಪರೇಸಿ. ಇಬ್ಬರೂ ಒಟ್ಟಿಗೇ ನಕ್ಕರು.

## ಸಂಗತ

# ತ್ಯಾಜ್ಯ ಪುನರ್ಬಳಕೆಯ ಬತ್ತಳಿಕೆ

### ಮನೆಬಳಕೆಗೆ ಇನ್ನೂ ಸವೆಸಬಹುದಾದ ಪದಾರ್ಥಗಳು ಇರುವಾಗ ಹೊಸದರ ವೃಥಾ ಖರೀದಿ ಏಕೆ?

• ಬಿ.ಎಸ್.ಭಗವಾನ್

**ಅರಣ್ಯ ನಾಶ**, ಪರಿಸರ ಮಾಲಿನ್ಯ, ಹವಾಮಾನ ವೈಪರೀತ್ಯ, ಜಾಗತಿಕ ತಪನ, ಸಾಗರ ಮಟ್ಟ ಹೆಚ್ಚಳ... ಹೀಗೆ ಆಧುನಿಕ ಜಗತ್ತು ಎಡವಟ್ಟುಗಳ ಸರಣಿಗೇ ಕಾರಣವಾಗಿದೆ. ಅನ್ಯ ಜಗತ್ತೊಂದು ಇರುವುದೇ ಆದರೆ ಅದು ‘ಪುನರ್ಬಳಕೆಯ ಜಗತ್ತು’. ಕಸ, ರದ್ದಿ ಎಂದು ಬಿಸಾಡಹೊರಟ ಪದಾರ್ಥವೊಂದನ್ನು ಯುಕ್ತ ರೀತಿಯಲ್ಲಿ ಸಂಸ್ಕರಿಸಿ ಮರುಬಳಕೆಗೆ ತಂದುಕೊಳ್ಳುವುದೇ ಪುನರ್ಬಳಕೆ. ಪರಿಯಾವರಣದ ಸಮತೋಲನಕ್ಕೆ, ಸಂಪನ್ಮೂಲಗಳ ಉಳಿತಾಯಕ್ಕೆ ಈ ಯಜ್ಞ ಅಗತ್ಯ, ಅನಿವಾರ್ಯ.

ಬೀದಿಯಲ್ಲಿ ಕಸದ ಗಾಡಿ ಬರುತ್ತಲೇ ಒಣ ಕಸ, ಹಸಿ ಕಸ ಎಂದು ಪ್ರತ್ಯೇಕಿಸಿ ಒಪ್ಪಿಸಲು ಸಿದ್ಧವಾದರೆ ಪೌರತ್ವದ ಮೊದಲ ಘನ ಕಾರ್ಯ ಮುಗಿದಂತೆಯೆ. ಯಾವ ಊರಿನಲ್ಲಿ ಕಸದಬುಟ್ಟಿಯೊಂದಿಗಿನ ಅನುಸಂಧಾನಕ್ಕೆ ಮೊದಲ ಆದ್ಯತೆ ದೊರಕುವುದೋ ಅಲ್ಲಿ ಅಭ್ಯುದಯದ ಹಾದಿಗೆ ಕೆಂಪುಹಾಸು.

ಸಂತೆ ಕೂಡಿದೆ ಎನ್ನುವುದು ಏನನ್ನಾದರೂ ಖರೀದಿಸಲು ಸಮರ್ಥನೆಯಾಗಬಾರದು! ಮಾರುಕಟ್ಟೆ, ಮಾಲ್‌ನ ಅಂಗಳದಲ್ಲಿ ನಿಂತು ಏನೇನು ಕೊಳ್ಳಲಿ ಅಂತ ಆಲೋಚಿಸುವುದು ಸರಿ. ಆದರೆ ಮನೆಯಿಂದ ಹೊರಡುವ ಮುನ್ನ ಯಾವ್ಯಾವ ಬಾಬತ್ತುಗಳಿಗೆ ಉಪಯೋಗಿಸಲು ಆಯಸ್ಸುಂಟೆ ಎಂದು ಅಷ್ಟೇ ಗಂಭೀರವಾಗಿ ಕಣ್ಣು ಹಾಯಿಸಬೇಕಿದೆ. ಕಾರಣ ಸ್ಪಷ್ಟ. ಇನ್ನೂ ಸವೆಸಬಹುದಾದ ಪದಾರ್ಥಗಳು ಇರುವಾಗ ಹೊಸದರ ವೃಥಾ ಖರೀದಿ ಏಕೆ? ಅನಗತ್ಯವನ್ನು ಕೊಂಡರೆ ಕಸದ ಬುಟ್ಟಿಗೆ ಹೊಸ ತ್ಯಾಜ್ಯ ಜಮೆಯಷ್ಟೆ.

ಜೈವಿಕ ವಿಘಟನೆಗೆ ಒಳಪಡಿಸಲಾಗದ ಕಾರಣ ಪ್ಲಾಸ್ಟಿಕ್ ತ್ಯಾಜ್ಯ ಅತಿ ಅಪಾಯಕಾರಿ. ಪುನರ್ಬಳಕೆ ವಿಳಂಬವಾದರೋ ಅದು ಇತರೆ ರಾಸಾಯನಿಕಗಳೊಡನೆ ಬೆರೆಯುವುದು, ಮಾಲಿನ್ಯದ ಒಂದು ಮೂಲವಾಗುವುದು. ಸ್ಟೀಲ್ ಲೋಟ, ಚಮಚ, ಬಟ್ಟೆ ಚೀಲ ಒಂದೊಂದು ಜೊತೆಯಲ್ಲಿದ್ದರಾಯಿತು. ಹೋಟೆಲ್, ಮಾಲ್‌ಗಳಿಗೆ ನೀಡುವ ಭೇಟಿ ಪರಿಸರಸ್ನೇಹಿಯಾದೀತು. ಅಂದಹಾಗೆ ‘ಸ್ಟ್ರಾ’ ಇಲ್ಲದೆ ಎಳನೀರು, ಹಣ್ಣಿನ ರಸ, ಮಜ್ಜಿಗೆ ಸೇವಿಸಿ ನಮ್ಮನ್ನು ಹೀರುವ ಪ್ಲಾಸ್ಟಿಕ್‌ನಿಂದ ಪಾರಾಗಬಹುದು!

1031ರಲ್ಲಿ ಜಪಾನಿನಲ್ಲಿ ಕಾಗದದ ತೀವ್ರ ಕೊರತೆ ಎದುರಿಸಲು ಕಂಡುಕೊಂಡ ಉಪಾಯ ಪುನರ್ಬಳಕೆ. ಅಂತೆಯೆ ಅಮೆರಿಕದಲ್ಲಿ 1690ರಲ್ಲಿ ಮುದ್ರಣ ಕಾಗದದ ಅಭಾವ ಭರಿಸಲು ಹಳೇ ಬಟ್ಟೆ, ಚಿಂದಿ ಹತ್ತಿ, ಮಾಸಿದ ನಾರು ರುಬ್ಬಲಾಯಿತು. ಸ್ವಾರಸ್ಯವೆಂದರೆ, ಸ್ಥಾಪಿಸಿದ್ದ ಅರಸರ ಪ್ರತಿಮೆಗಳು ಸಮರಕ್ಕಾಗಿ ಕರಗಿ ಮದ್ದುಗುಂಡುಗಳಾದ ಪ್ರಸಂಗಗಳು ಇತಿಹಾಸದಲ್ಲಿ ಅವೆಷ್ಟೋ.

ಪುನರ್ಬಳಕೆಗೆ ಪ್ರಕೃತಿಯೇ ಪಾಠವಾಗುವುದು. ಮರ ಹಳೇ ಬೇರಿನಿಂದಲೇ ಹೊಸದನ್ನು ಚಿಗುರಿಸುತ್ತದೆ, ಇನ್ನೊಂದು ಬೇರನ್ನು ಅದು ನೆಲಕ್ಕಿಳಿಸದು! ನದಿಯ ಹರಿವಿಗೆ ಈಗಾಗಲೇ ಇರುವ ಹಾದಿಯೇ ಸಾಕು. ಕಸದ ಡಬ್ಬಗಳು ಮುಖ ಮಾಡಬೇಕಾದದ್ದು ಸಂಸ್ಕರಣ ಘಟಕದತ್ತಲೇ ವಿನಾ ಭೂಭರ್ತಿಯತ್ತಲಲ್ಲ. ಜಾಗತಿಕ ಮಟ್ಟದಲ್ಲಿ ಪ್ರತಿವರ್ಷ ಸರಾಸರಿ 550 ಕೋಟಿ ಮರಗಳನ್ನು ಭೂಭರ್ತಿಯ ಸಲುವಾಗಿ ಕಟಾಯಿಸಲಾಗುತ್ತಿದೆ. ಈ ಅಂಕಿ ಅಂಶಗಳು ಗಮನೀಯ.

ಒಂದು ಸಾಧಾರಣ ಅಲ್ಯೂಮಿನಿಯಂ ಕ್ಯಾನ್ ಪುನರ್ಬಳಕೆಯಾದರೆ 100 ವಾಟ್‌ಗಳ ಬಲ್ಬ್ ಅನ್ನು 20 ತಾಸುಗಳು ಉರಿಸುವಷ್ಟು ವಿದ್ಯುತ್ ಉಳಿತಾಯವಾದೀತು. ಪ್ರತೀ ಟನ್ ಕಾಗದದ ಪುನರ್ಬಳಕೆಯಿಂದ 185 ಗ್ಯಾಲನ್‌ಗಳಷ್ಟು ಗ್ಯಾಸೊಲಿನ್ ಮಿಗುತ್ತದೆ. 10 ಲಕ್ಷ ಲ್ಯಾಪ್‌ಟಾಪ್‌ಗಳ ಪುನರ್ಬಳಕೆಯಿಂದ ಉಳಿಯುವ ಹಣದಿಂದ ಅಮೆರಿಕದಲ್ಲಿ ವರ್ಷವೊಂದಕ್ಕೆ 3,500 ಮನೆಗಳ ವಿದ್ಯುತ್ ಬಿಲ್ ಪಾವತಿಸಬಹುದು.

ವಿಶ್ವಮಾನ್ಯ ವಿಜ್ಞಾನಿ ಐನ್‌ಸ್ಟೀನ್ ಅಮೆರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯಕ್ಕೆ ಸಂಶೋಧಕ ಪ್ರಾಧ್ಯಾಪಕರಾಗಿ ಸೇರಿದರು. ಅವರಿಗೆ ಕೊಠಡಿ ನಿಯೋಜಿಸಿದ ಅಧಿಕಾರಿಗಳು ‘ಸರ್, ಮತ್ತೇನು ಅನುಕೂಲ ಬೇಕು, ಸಂಕೋಚವಿಲ್ಲದೆ ಕೇಳಿ’ ಎಂದರು. ‘ಒಂದು ಕಸದ ಡಬ್ಬಿ ಇಡಿ, ನಾನದನ್ನು ಬಹಳ ಪ್ರೀತಿಸುತ್ತೇನೆ’ ಅಂದರು ಅವರು. ಕಾರಣ ಕೇಳಿದಾಗ ‘ನಾನು ತಪ್ಪು ಲೆಕ್ಕಾಚಾರ ಹಾಕಿದ ಚೀಟಿಗಳು ಹೇಗೂ ಅಲ್ಲಿರುತ್ತವೆ. ತಿದ್ದಿಕೊಳ್ಳಲು ನನಗೆ ಅವೇ ಅಲ್ಲವೆ ನಿಜ ಸ್ಫೂರ್ತಿ’ ಎಂದರಂತೆ ಮಹಾನ್ ಮೇಧಾವಿ. ವಸ್ತುವಿರಲಿ, ಪರಿಕರವಿರಲಿ ‘ನೋಡಿ ಇಷ್ಟು ವರ್ಷಗಳಿಂದಲೂ ನಾನದನ್ನು ಬಳಸುತ್ತಿದ್ದೇನೆ’ ಎನ್ನುವ ಬೀಗಿನಲ್ಲಿ ಮರುಬಳಕೆಯ ಸೊಗಡಿದೆ, ಅಭಿಮಾನವಿದೆ.

ಈ ದಿಸೆಯಲ್ಲಿ ಜಪಾನಿನ ಟೋಕುಶಿಮ ಜಿಲ್ಲೆಯ 2,000 ಜನಸಂಖ್ಯೆಯ ಕಮಿಕಸ್ಟು ಎಂಬ ಪುಟ್ಟ ಹಳ್ಳಿ ಮಾದರಿಯಾಗಿದೆ. ಅದೀಗ ‘ಶೂನ್ಯ ತ್ಯಾಜ್ಯ’ ಗ್ರಾಮ. ಗ್ರಾಮಸ್ಥರು ತೊಟ್ಟ ಸಂಕಲ್ಪ, ದಿಟ್ಟ ಕ್ರಮ ಫಲ ನೀಡಿವೆ. ಕಸವನ್ನು 35 ಬಗೆ ವಿಂಗಡಿಸಲಾಗುತ್ತದೆ. ಮನೆ ಮನೆಯ ಅಡುಗೆಮನೆಯಲ್ಲೂ ಬೀಳುವ ಹಣ್ಣು, ಕಾಯಿ, ತರಕಾರಿಯ ಸಿಪ್ಪೆ, ತೊಟ್ಟುಗಳಾದಿಯಾಗಿ ಪುನರ್ಬಳಕೆಗೆ ಸಿದ್ಧವಾಗುತ್ತವೆ. ಮನಸ್ಸಿದ್ದರೆ ಮಾರ್ಗ.

ಪುನರ್ಬಳಕೆ ಎನ್ನುವುದು ಒಂದು ಸದವಕಾಶ. ಗ್ರಹಿಸಬೇಕಾದ ಸೂಕ್ಷ್ಮವೆಂದರೆ ‘ಶೂನ್ಯ ತ್ಯಾಜ್ಯ’ ಎಗ್ಗಿಲ್ಲದ ಪುನರ್ಬಳಕೆಯನ್ನು ನಿರ್ದೇಶಿಸದು. ಅದರ ಇಂಗಿತ ಮಿತ ಪುನರ್ಬಳಕೆಯೇ. ಬದುಕಿದ್ದಕ್ಕೆ ಸಾಕ್ಷಿಯಾಗಿ ಏನೋ ಒಳ್ಳೆಯದನ್ನು ಬಿಟ್ಟು ಹೋದರು ಎಂದು ಭಾವೀ ಪೀಳಿಗೆಯ ಮಂದಿ ಭಾವಿಸಬೇಕು. ಅಷ್ಟು ತ್ಯಾಜ್ಯ ಉಳಿಸಿ ಹೋದರು ಅಂತ ಪರಿತಪಿಸುವಂತೆ ನಮ್ಮ ನಡೆ ಹಗುರಾಗಬಾರದು.

## ವಾಚಕರ ವಾಣಿ

### ಬಿಸಿಯೂಟ ತಯಾರಿ: ಕನಿಷ್ಠ ಕೂಲಿಯಾದರೂ ಸಿಗಲಿ

ನಮ್ಮ ಪರಿಚಯದವರ ಮಕ್ಕಳು ಹೋಗುತ್ತಿರುವ ಸರ್ಕಾರಿ ಶಾಲೆಯ ಅಡುಗೆ ಸಿಬ್ಬಂದಿ ಇತ್ತೀಚೆಗೆ ರಾಜೀನಾಮೆ ನೀಡಿ ಕೂಲಿ ಕೆಲಸದತ್ತ ಮುಖ ಮಾಡಿದರು. ಕೊರೊನಾ ಅವಧಿಯಲ್ಲಿ ಸುಮಾರು ಒಂದು ವರ್ಷ ಮಕ್ಕಳಿಗೆ ಬಿಸಿಯೂಟ ಇರಲಿಲ್ಲ. ಆಗ ನಿರುದ್ಯೋಗಿಗಳಾದ ಬಿಸಿಯೂಟ ತಯಾರಕರು ನಿಚ್ಚಳವಾಗಿ ನಿರ್ಗತಿಕರಾದರು. ಇವರಿಗೆ ಕೊರೊನಾ ಪ್ಯಾಕೇಜ್‌ನಲ್ಲೂ ಏನೂ ದೊರೆಯಲಿಲ್ಲ. ಹೀಗಾಗಿ ಇವರು ರಾಜೀನಾಮೆ ನೀಡಬೇಕಾಯಿತು. ಸಮಸ್ಯೆ ಏನೆಂದರೆ, ಬಿಸಿಯೂಟ ತಯಾರಿಸಲು ಅವರ ಜಾಗಕ್ಕೆ ಎಷ್ಟೇ ಪ್ರಯತ್ನ ಮಾಡಿದರೂ ಯಾರೂ ಬರಲು ಒಪ್ಪಲಿಲ್ಲ. ತದನಂತರ ಊರ ಹಿರಿಯರ ಕೋರಿಕೆಯ ಮೇರೆಗೆ, ಮಕ್ಕಳಿಗೆ ಊಟ ತಪ್ಪಬಾರದೆಂದು ಪೋಷಕರೇ ಬಂದು ಕೆಲಸಕ್ಕೆ ಸೇರಿಕೊಂಡರು. ಕಾರಣವಿಷ್ಟೇ, ಅಲ್ಲಿ ದೊರಕುವುದು ತಿಂಗಳಿಗೆ ಕೇವಲ ಎರಡೂವರೆ ಸಾವಿರ ರೂಪಾಯಿಯ ಆಸುಪಾಸು. ಹಾಗಾಗಿ ಇವತ್ತು ಕೂಲಿಗೆ ಹೋದರೆ ಪ್ರತಿದಿನ ₹ 250-300 ಸಿಗದೇ ಇರದು. ಅಂದರೆ ತಿಂಗಳಿಗೆ ಎಂಟರಿಂದ ಒಂಬತ್ತು ಸಾವಿರ ದುಡಿದುಕೊಳ್ಳಬಹುದು.

ಬೆಲೆ ಏರಿಕೆಯ ಇಂದಿನ ಪ್ರಕೋಪದಲ್ಲಿ ತಿಂಗಳಿಗೆ ಎರಡೂವರೆ ಸಾವಿರ ರೂಪಾಯಿ ಪಡೆದು ಯಾರಾದರೂ ಕುಟುಂಬ ನಿರ್ವಹಣೆ ಮಾಡಬಲ್ಲರೇ? ದೇಶದ ನಿರ್ಮಾತೃಗಳಾಗಬಲ್ಲ ಮಕ್ಕಳಿಗೆ ಊಟ ತಯಾರಿಸುವ ತಾಯಂದಿರಿಗೇಕೆ ಈ ಪರಿ ಅನ್ಯಾಯ? ಇದು ಹರತಾಳ, ಹೋರಾಟಗಳಿಂದ ಈಡೇರಿಸಬೇಕಾದ ಬೇಡಿಕೆಯಲ್ಲ. ಕೇವಲ ಮಾತೃ ಹೃದಯದಿಂದ ಪರಿಗಣಿಸಬೇಕಾದ ಬೇಡಿಕೆ. ಅವರೇನೂ ಭಾರಿ ಮೊತ್ತ ಕೇಳುತ್ತಿಲ್ಲ. ಸರ್ಕಾರವೇ ನಿಗದಿಪಡಿಸಿರುವ ಕನಿಷ್ಠ ಕೂಲಿಯ ಮೊತ್ತವನ್ನಾದರೂ ಕೊಡಬೇಕು.

**ಸರೋಜಿನಿ ನಾಯಕ್,** ಶಿವಮೊಗ್ಗ

### ‘ಗಂಗಾ-ಕಾವೇರಿ’ ಪಾದಯಾತ್ರೆ ಯಾರಿಂದ?

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಇತ್ತೀಚೆಗೆ ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಪಾದಯಾತ್ರೆ ನಡೆಸಿದರು. ಇದರಿಂದ ತಮಗೆ ಹೆಚ್ಚು ಪ್ರಚಾರ ಸಿಕ್ಕಿ, ಮುಂದೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ತಾವು ಮುಖ್ಯಮಂತ್ರಿ ಆಗಬಹುದೆಂಬುದು ಇದರ ಹಿಂದಿನ ಉದ್ದೇಶ ಎಂಬ ಅಭಿಪ್ರಾಯವಿದೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಅವರು ಮಹದಾಯಿ ಯೋಜನೆ ಜಾರಿಗೆ ಒತ್ತಾಯಿಸಿ ಮೇಕೆದಾಟು ಮಾದರಿಯಲ್ಲಿ ನರಗುಂದ- ಕಣಕುಂಬಿವರೆಗೆ ಪಾದಯಾತ್ರೆ ನಡೆಸುವುದಾಗಿ ಹೇಳಿದ್ದಾರೆ. ಉಪಮುಖ್ಯಮಂತ್ರಿಯಾದರೂ ಆಗಬಹುದು ಎಂಬುದು ಇವರ ಉದ್ದೇಶವೇ?! ಹಾಗೆಯೇ ಜೆಡಿಎಸ್ ಮುಖಂಡ ಎಚ್‌.ಡಿ.ಕುಮಾರಸ್ವಾಮಿ ಅವರು ‘ಜನತಾ ಜಲಧಾರೆ’ ಕಾರ್ಯಕ್ರಮವನ್ನು ಮುಂದಿನ ದಿನಗಳಲ್ಲಿ ಮಾಡಲಿದ್ದಾರಂತೆ.

ಈ ಮೊದಲು ಗಂಗಾ- ಕಾವೇರಿ ನದಿಗಳ ಜೋಡಣೆಯ ವಿಷಯ ಕೇಳಿಬಂದಿತ್ತು. ಮುಂದಿನ ಪ್ರಧಾನಮಂತ್ರಿ ಆಗುವ ಕನಸು ಕಾಣುತ್ತಿರುವವರು ‘ಗಂಗಾ- ಕಾವೇರಿ ನದಿಗಳ ಜೋಡಣೆ ಯೋಜನೆ’ ಜಾರಿಗೆ ಆಗ್ರಹಿಸಿ ಕರ್ನಾಟಕದ ತಲಕಾವೇರಿಯಿಂದ ಹಿಮಾಲಯದವರೆಗೆ ಪಾದಯಾತ್ರೆ ಮಾಡಬಹುದೇ?!

**ಸಿ.ಸಿದ್ದರಾಜು ಆಲಕೆರೆ,** ಮಂಡ್ಯ

### ಅಸಹಜ ಬದಲಾವಣೆ ನಿಲ್ಲದು

‘ಎಲ್ಲರ ಕನ್ನಡ: ತಕರಾರೇಕೆ?’ ಎನ್ನುವ ಬರಹದಲ್ಲಿ (ಚರ್ಚೆ, ಜ. 20) ಡಾ. ಚಲಪತಿ ಅವರು ನನ್ನ ಲೇಖನದಲ್ಲಿನ (ಚರ್ಚೆ, ಜ. 7) ಅಭಿಪ್ರಾಯಕ್ಕೆ ಪ್ರತಿಕ್ರಿಯಿಸುತ್ತಾ, ‘ಲಿಪಿ ಬದಲಾವಣೆಯ ಈ ಸವಾಲಿನಲ್ಲಿ ಪ್ರತಿಭಾ ಅವರ ಗಮನವಿರುವುದು ಸಾಹಿತ್ಯ ಮತ್ತು ಸಿನಿಮಾ ಸಾಹಿತ್ಯದ ಕಡೆಗೆ ಮಾತ್ರ. ಕನ್ನಡವನ್ನು ಬದಲಾಯಿಸುವ ಶಕ್ತಿಯಿರುವುದು ಸಾಹಿತ್ಯಕ್ಕೆ ಮಾತ್ರ ಎಂಬಂತಿದೆ ಸಾಹಿತಿಯೂ ಆಗಿರುವ ಅವರ ವಾದ’ ಎಂದಿದ್ದಾರೆ.

ಭಾಷಾಶಾಸ್ತ್ರದ ವಿದ್ಯಾರ್ಥಿನಿಯಾದ ನಾನು, ‘ಕಂಪ್ಯಾರಿಟಿವ್ ದ್ರವಿಡಿಯನ್ ಲಿಂಗ್ವಿಸ್ಟಿಕ್ಸ್’ ಅಧ್ಯಯನಕ್ಕೆ ಪ್ರೊ. ಕುಶಾಲಪ್ಪ ಗೌಡ ಅವರ ಮಾರ್ಗದರ್ಶನದಲ್ಲಿ ಅಲ್ಪಸ್ವಲ್ಪ ಮಾಹಿತಿ ಪಡೆದಿದ್ದೇನೆ. ಕನ್ನಡದ ಜನರ ಇಂದಿನ ಟ್ರೆಂಡ್ ಬಗ್ಗೆ ಹೇಳಲು ಬಳಸಿದ ಒಂದು ಉದಾಹರಣೆಯನ್ನು ಮುಂದಿಟ್ಟು, ಅದೊಂದರ ಕಡೆಗೆ ಮಾತ್ರ ನನ್ನ ಗಮನ ಎಂದು ಹೇಳಿರುವುದು ಅವರ ಗ್ರಹಿಕೆಯ ಮಿತಿಯಾಗಿದೆ. ತಾಂತ್ರಿಕ ಕ್ಷೇತ್ರದಲ್ಲಿ ಕನ್ನಡ ಅಳವಡಿಕೆಯಲ್ಲಿ ಎನ್‌ಜಿಇಎಫ್‌ನಲ್ಲಿ ಇಪ್ಪತ್ತು ವರ್ಷ ಕೆಲಸ ಮಾಡಿ, ತಾಂತ್ರಿಕ ನಿಘಂಟು ಸಮಿತಿಯ ಸದಸ್ಯೆಯಾಗಿ ಪಡೆದ ಅನುಭವ ನನಗೆ ಇದೆ. ತಾಂತ್ರಿಕ ನಿಘಂಟನ್ನು ಸಂಸ್ಕೃತ ಭೂಯಿಷ್ಠ ಮಾಡಬಾರದೆಂದು ನಾನು ಮತ್ತು ನನ್ನ ಸಹೋದ್ಯೋಗಿ ಹಾಗೂ ಸಹ ಸದಸ್ಯೆಯಾಗಿದ್ದ ಡಾ. ಸಂಧ್ಯಾರೆಡ್ಡಿ ರೋಹಿಡೇಕರ್ ಮುಂತಾದವರೊಡನೆ ಮಾಡುತ್ತಿದ್ದ ಚರ್ಚೆ–ಜಗಳ ನಮಗೆ ಮಾತ್ರ ಗೊತ್ತು. ಪೊಲೀಸ್ ಪದಕ್ಕೆ ಆರಕ್ಷಕ ಎನ್ನುವ ಪದವನ್ನು ರೋಹಿಡೇಕರ್ ಅವರು ಮೊದಲು ಜಾರಿಗೆ ತಂದರೂ ನಂತರ ಪೊಲೀಸ್ ಪದವನ್ನೇ ಕನ್ನಡಕ್ಕೂ ಅಳವಡಿಸಿಕೊಳ್ಳಿ ಎನ್ನುವ ಸರ್ಕಾರಿ ನೋಟಿಸನ್ನು ಹಲವು ಬಾರಿ ಅಧಿಕೃತವಾಗಿ ಹೊರಡಿಸಿದರೂ ಅಷ್ಟರಲ್ಲಾಗಲೇ ಆರಕ್ಷಕ ಎನ್ನುವ ಪದವನ್ನು ಪೊಲೀಸ್ ಇಲಾಖೆ ಜಾರಿಗೆ ತಂದೇ ಬಿಟ್ಟಿತ್ತು.

ಎಂಜಿನೀರಿಂಗ್ ಸ್ಟೆನ್ಸಿಲ್ಸ್ ರೂಪುಗೊಳಿಸಿದ ಪ್ರಥಮ ದೇಶ ಭಾಷೆ ಕನ್ನಡ. ಅದಕ್ಕಾಗಿ ಕನ್ನಡ ವರ್ಣಮಾಲೆಯ ಪ್ರಮಾಣೀಕರಣ (ಸ್ಟ್ಯಾಂಡರ್‌ಡೈಸೇಷನ್) ಮಾಡುತ್ತಿದ್ದಾಗ ಒತ್ತಕ್ಷರಗಳನ್ನು ಅಳವಡಿಸುವ ಬಗ್ಗೆ ತಜ್ಞರ ಸಮಿತಿ ಎಷ್ಟು ಸಾಹಸ ಮಾಡಿತು ಅನ್ನುವುದು ಗೊತ್ತು. ಕಂಪ್ಯೂಟರ್ ಬರುವ ಮೊದಲು, ಕನ್ನಡ ಸಾಫ್ಟ್‌ವೇರ್ ಕಂಡುಹಿಡಿಯುವ ಮೊದಲು ಕನ್ನಡ ದಸ್ತಾವೇಜುಗಳನ್ನು ಮೈಕ್ರೊಫಿಲಂ ಮಾಡುವಾಗ ಅಕ್ಷರಗಳು ಕಲಸಿಹೋಗುವುದನ್ನು ತಡೆಯಲು ವರ್ಣಮಾಲೆಯ ಪ್ರಮಾಣೀಕರಣ ಎಷ್ಟು ಅಗತ್ಯವಾಗಿತ್ತು ಇವತ್ತಿನವರಿಗೆ ಗೊತ್ತಿಲ್ಲ. ಅದೃಷ್ಟವಶಾತ್ ಬಹಳ ಬೇಗ ಕಂಪ್ಯೂಟರ್ ಬಂದು ಕನ್ನಡ ಸಾಫ್ಟ್‌ವೇರ್ ಕಂಡುಹಿಡಿದಿದ್ದರಿಂದ ಹಿಂದಿಗಿಂತ ಮೊದಲೇ ಕನ್ನಡವನ್ನು ಕಂಪ್ಯೂಟರ್‌ನಲ್ಲಿ ಅಳವಡಿಸಲು ಸಾಧ್ಯವಾಯಿತು. ತಾಂತ್ರಿಕ ಕ್ಷೇತ್ರದಲ್ಲಿ ಕನ್ನಡದ ಬೆಳವಣಿಗೆ ಬಗ್ಗೆ ಅತೀವ ಹೆಮ್ಮೆ ಪಡಬೇಕು. ಕನ್ನಡದಲ್ಲಿ ತಾಂತ್ರಿಕ ಪಠ್ಯಗಳನ್ನು ಸಿದ್ಧಪಡಿಸುವ ಕೆಲಸ ಎಷ್ಟು ಕಷ್ಟ ಎನ್ನುವ ಪ್ರಾಯೋಗಿಕ ಅನುಭವ ಇದೆ ನನಗೆ. ನಮಗಿರುವ ಲಿಪಿಯ ಸವಲತ್ತುಗಳನ್ನು ಅನವಶ್ಯಕವಾಗಿ ಬಿಟ್ಟುಕೊಟ್ಟು ಇನ್ನಷ್ಟು ಗೊಂದಲ ಹುಟ್ಟಿಸುವ ವ್ಯರ್ಥ ಯತ್ನಗಳನ್ನು ಒಪ್ಪಲಾಗುವುದಿಲ್ಲ. ಅಸಹಜ ಬದಲಾವಣೆಗಳು- ಅದು ‘ಮೇಲಿನಿಂದ ಆಗಲಿ ಕೆಳಗಿನಿಂದ ಆಗಲಿ’- ನಿಲ್ಲುವುದಿಲ್ಲ. ಸಹಜ ಬದಲಾವಣೆಗಳನ್ನು ನಿಲ್ಲಿಸಲಾಗುವುದಿಲ್ಲ.

**ಪ್ರತಿಭಾ ನಂದಕುಮಾರ್,** ಬೆಂಗಳೂರು

### ‘ಮದ್ಯ ಪ್ರದೇಶ’?!

ಮದ್ಯದ ದರ ಇಳಿಸಿ
ಮನೆಯಲ್ಲೇ ಬಾರ್ ಮಾಡಿಕೊಳ್ಳಲು
ಅವಕಾಶ ಕಲ್ಪಿಸಿ
ಸೂಪರ್ ಮಾರ್ಕೆಟ್,
ಮಾಲ್‌ಗಳಲ್ಲೆಲ್ಲಾ
ಮದ್ಯ ಮಾರಾಟಕ್ಕೆ ಮುಂದಾಗಿದೆ
ಮಧ್ಯಪ್ರದೇಶ ಸರ್ಕಾರ!
ತನ್ನ ಹೆಸರನ್ನು ‘ಮದ್ಯ ಪ್ರದೇಶ’ವೆಂದು
ಬದಲಿಸಿಕೊಂಡರೆ ಅದು
ಆ ಮೂಲಕ ನೀಡಿದಂತಾಗುತ್ತದೆ
ಮದ್ಯಕ್ಕೆ ಮಹಾನ್ ಪುರಸ್ಕಾರ!

**ಜೆ.ಬಿ.ಮಂಜುನಾಥ,** ಪಾಂಡವಪುರ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಕೋವಿಡ್ ದೃಢ ದರ ರಾಜ್ಯಗಳ ನಡುವೆ ಭಾರಿ ಅಂತರ

● ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್ ಭಾರತದಲ್ಲಿ ತೀವ್ರಗತಿಯಲ್ಲಿ ಹರಡಲು ಶುರು ಮಾಡಿದ ಬಳಿಕ ದೇಶದಲ್ಲಿ ಕೋವಿಡ್ ದೃಢಪಡುವ ದರ (ಪಾಸಿಟಿವಿಟಿ ದರ) ಗಣನೀಯವಾಗಿ ಏರಿಕೆಯಾಗಿದೆ. ಡಿಸೆಂಬರ್ ಕೊನೆಯ ಹೊತ್ತಿಗೆ ದೇಶದಲ್ಲಿ ಛಾಪು ಮೂಡಿಸಿದ್ದ ಓಮೈಕ್ರಾನ್, ಜನವರಿ ತಿಂಗಳಿನಲ್ಲಿ ಇಡೀ ದೇಶವನ್ನು ವ್ಯಾಪಿಸಿದ್ದು, ಪ್ರಕರಣಗಳು ಭಾರಿ ಸಂಖ್ಯೆಯಲ್ಲಿ ಹೆಚ್ಚಾಗಲು ಕಾರಣವಾಗಿದೆ.

ಬಹುತೇಕ ರಾಜ್ಯಗಳಲ್ಲಿ ಕೋವಿಡ್ ದೃಢಪಡುವ ದರ ಐದಾರು ಪಟ್ಟು ಹೆಚ್ಚಳವಾಗಲು ಈ ವೈರಾಣು ಕಾರಣವಾಗಿದೆ. ಡಿಸೆಂಬರ್ ಕೊನೆಯ ವಾರದಲ್ಲಿ ವಿವಿಧ ರಾಜ್ಯಗಳಲ್ಲಿ ಶೇ 1ರಷ್ಟು ಇರದ ದೃಢಪಡುವ ದರ, ಜನವರಿ ತಿಂಗಳ ಮೊದಲ ವಾರದಲ್ಲೇ ಶೇ 2ರಿಂದ ಶೇ 5ರವರೆಗೂ ಏರಿಕೆಯಾಗಿತ್ತು. ವಿವಿಧ ರಾಜ್ಯಗಳಲ್ಲಿ ಕೋವಿಡ್ ದೃಢಪಡುವ ದರದಲ್ಲಿ ಸಾಕಷ್ಟು ಅಂತರವಿದೆ. ಜನವರಿ 3ನೇ ವಾರದ ಹೊತ್ತಿಗೆ ದೇಶದ ಮೂರು ರಾಜ್ಯಗಳಲ್ಲಿ ಮಾತ್ರ ಈ ದರ ಶೇ 5ರ ಒಳಗಿದೆ. ಐದು ರಾಜ್ಯಗಳಲ್ಲಿ ಈ ದರ ಶೇ 10ರ ಒಳಗಿದೆ. ಆದರೆ ಗೋವಾ, ಕೇರಳ ಹಾಗೂ ಪುದುಚೇರಿಗಳಲ್ಲಿ ಈ ದರ ಶೇ 30 ದಾಟಿದೆ. ಪುದುಚೇರಿಯಲ್ಲಿ ಅತಿಹೆಚ್ಚು ಅಂದರೆ, ಶೇ 43ರಷ್ಟು ಪ್ರಕರಣಗಳು ದೃಢಪಡುತ್ತಿವೆ.

ಕರ್ನಾಟಕದಲ್ಲಿ ನಾಲ್ಕು ವಾರಗಳ ಹಿಂದೆ ಶೇ 0.5ರಷ್ಟಿದ್ದ ಪಾಸಿಟಿವಿಟಿ ದರವು ಈಗ ಶೇ 18ಕ್ಕೆ ಹೆಚ್ಚಳವಾಗಿರುವುದು, ಕೋವಿಡ್ ವ್ಯಾಪಿಸುತ್ತಿರುವ ಪರಿಯನ್ನು ಸೂಚಿಸುತ್ತದೆ. ಹಾಗೆಯೇ ಮಹಾರಾಷ್ಟ್ರ, ಉತ್ತರ ಪ್ರದೇಶ ಹಾಗೂ ತಮಿಳುನಾಡಿನಲ್ಲಿ ಪ್ರಕರಣಗಳು ದೃಢಪಡುವ ಪ್ರಮಾಣ ಶೇ 20ನ್ನು ದಾಟಿದೆ. ಕೋವಿಡ್ ಎರಡನೇ ಅಲೆಯ ಪ್ರಭಾವ ದೇಶದಲ್ಲಿ ಕಡಿಮೆಯಾದರೂ, ಕೇರಳದಲ್ಲಿ ಮಾತ್ರ ಹಾಗೆಯೇ ಮುಂದುವರಿದಿತ್ತು. ಅಂದಿನಿಂದ ಈವರೆಗೂ ರಾಜ್ಯದಲ್ಲಿ ಸೋಂಕಿತರು ನಿರಂತರವಾಗಿ ಏರಿಕೆಯಾಗುತ್ತಿದ್ದಾರೆ. ಹೀಗಾಗಿ ರಾಜ್ಯದ ಪಾಸಿಟಿವಿಟಿ ದರ ಅತಿಹೆಚ್ಚು ದಾಖಲಾಗಿದೆ. ಮಣಿಪುರದಲ್ಲಿ ಶೇ 4.7ರಷ್ಟಿದ್ದ ಈ ದರ ಶೇ 7.1ಕ್ಕೆ ಹೆಚ್ಚಳವಾಗಿದೆ.

ಕೆಲವು ರಾಜ್ಯಗಳಲ್ಲಿ ಪ್ರಕರಣಗಳು ಖಚಿತವಾಗುತ್ತಿರುವ ಪ್ರಮಾಣ ಏರುಗತಿಯಲ್ಲಿದ್ದರೆ, ಕೆಲವು ರಾಜ್ಯಗಳಲ್ಲಿ ನಿಧಾನವಾಗಿ ಇಳಿಕೆಯಾಗುತ್ತಿರುವುದು ಸಮಾಧಾನ ಮೂಡಿಸಿದೆ. ದೆಹಲಿಯಲ್ಲಿ ಶೇ 30ರಷ್ಟಿದ್ದ ಈ ದರವು 23ಕ್ಕೆ ಕುಸಿದಿದೆ. ಇದು ಸಕಾರಾತ್ಮಕವಾಗಿದ್ದರೂ, ಇನ್ನಷ್ಟು ಕುಸಿತ ಆಗುವವರೆಗೂ ನಿರ್ಬಂಧಗಳನ್ನು ಮುಂದುವರಿಸಲು ಸರ್ಕಾರ ನಿರ್ಧರಿಸಿದೆ. ಗೋವಾದಲ್ಲಿ ಕಳೆದ ವಾರ ಶೇ 45ರಷ್ಟು ಇದ್ದ ಈ ದರ, ಪ್ರಸ್ತುತ 38.76ಕ್ಕೆ ಕುಸಿದಿದೆ. ಬಿಹಾರದಲ್ಲಿ ಜನವರಿ 11-15ರ ನಡುವೆ ನಿತ್ಯವೂ 6,300 ಪ್ರಕರಣಗಳು ವರದಿಯಾಗುತ್ತಿದ್ದು, ಇವು ಕ್ರಮೇಣ ಇಳಿಕೆಯಾಗಿವೆ. ಹೀಗಾಗಿ ದೃಢಪಡುವ ಪ್ರಮಾಣವು ಶೇ 3.67ರಿಂದ ಶೇ 2.94ಕ್ಕೆ ಇಳಿಕೆಯಾಗಿದೆ. ಇನ್ನು, ಛತ್ತೀಸಗಡದಲ್ಲೂ ಸೋಂಕಿತರು ಕಡಿಮೆಯಾಗುತ್ತಿದ್ದು, ದೃಢಪಡುವಿಕೆ ದರವು ಶೇ 11.17ರಿಂದ ಶೇ 10.30ಕ್ಕೆ ಇಳಿಕೆಯಾಗಿದೆ.

## ರಾಜ್ಯಗಳ ಕೋವಿಡ್ ಚಿತ್ರಣ




ಆಧಾರ: ಕೇಂದ್ರ ಆರೋಗ್ಯ ಸಚಿವಾಲಯದ ಕೋವಿಡ್ ಬುಲೆಟಿನ್‌ಗಳು, ಪಿಟಿಐ, ಐಸಿಎಂಆರ್, ಪಿಐಬಿ

## ಪಾಸಿಟಿವಿಟಿ: ಭಾರಿ ಪ್ರಮಾಣದಲ್ಲಿ ಏರಿಕೆ

ದೇಶದಲ್ಲಿ ಕೋವಿಡ್ ದೃಢಪಡುವ ದರವು ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. 2022ರ ಮೊದಲ ಇಪ್ಪತ್ತು ದಿನಗಳಲ್ಲಿ ಕೋವಿಡ್ ದೃಢಪಡುವ ದರವು ಶೇ 2.05ರಿಂದ ಶೇ 16.41ಕ್ಕೆ ಏರಿಕೆಯಾಗಿದೆ. ಈ ಅವಧಿಯಲ್ಲಿ ದೇಶದ ಹಲವು ರಾಜ್ಯಗಳಲ್ಲಿ ಕೋವಿಡ್ ದೃಢಪಡುವ ದರವು ಏರಿಕೆಯಾಗಿದೆ.

ಈ ದರವು 14.36 ಶೇಕಡಾವಾರು ಅಂಶಗಳಷ್ಟು ಏರಿಕೆಯಾಗಿದೆ. ಇದು ಶೇ 543ರಷ್ಟು ಏರಿಕೆ




## ಗುಣಮುಖರೇ ಹೆಚ್ಚು

ದೇಶದಲ್ಲಿ ಈಗ ಪತ್ತೆಯಾಗಿರುವ ಒಟ್ಟು ಕೋವಿಡ್ ಪ್ರಕರಣಗಳಲ್ಲಿ ಶೇ 93ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಜನರು ಗುಣಮುಖರಾಗಿ ಮನೆಗೆ ಹೋಗಿದ್ದಾರೆ. ಕೋವಿಡ್‌ನಿಂದ ಮೃತಪಟ್ಟವರ ಪ್ರಮಾಣ ಶೇ 2ಕ್ಕಿಂತಲೂ ಕಡಿಮೆ ಇದೆ. ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದ್ದರೂ, ಆಸ್ಪತ್ರೆಗೆ ದಾಖಲಾಗಬೇಕಾದ ಅಗತ್ಯ ಬೀಳುವ ಕೋವಿಡ್ ರೋಗಿಗಳ ಪ್ರಮಾಣ ಕಡಿಮೆ ಇದೆ.

ಈಗ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳಲ್ಲಿ ರೋಗದ ತೀವ್ರತೆ ಕಡಿಮೆ ಇದೆ ಎಂದು ಸರ್ಕಾರದ ಸಂಸ್ಥೆಗಳು ಹೇಳಿವೆ. ಆದರೆ ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಡೆಗಣಿಸಬಾರದು ಎಂದೂ ಈ ಸಂಸ್ಥೆಗಳು ಹೇಳಿವೆ. ರೋಗದ ತೀವ್ರತೆ ಕಡಿಮೆ ಇದ್ದರೂ, ಕೋವಿಡ್‌ನಿಂದ ಮೃತಪಡುವವರ ಸಂಖ್ಯೆ ಏರಿಕೆಯಾಗುತ್ತಿದೆ. ಜನವರಿ ಆರಂಭದಲ್ಲಿ ಪ್ರತಿದಿನ ಕೋವಿಡ್‌ನಿಂದ ಮೃತಪಡುವವರ ಸಂಖ್ಯೆ 100ರ ಆಸುಪಾಸಿನಲ್ಲಿತ್ತು. ಈಗ ಈ ಸಂಖ್ಯೆ 500ರ ಆಸುಪಾಸಿಗೆ ಏರಿಕೆಯಾಗಿದೆ.




## ಹೊಸ ಪ್ರಕರಣಗಳ ಜಿಗಿತ

ಈ ವರ್ಷದ ಮೊದಲ ಇಪ್ಪತ್ತು ದಿನಗಳಲ್ಲಿ ದೇಶದಲ್ಲಿ ಪ್ರತಿದಿನ ಪತ್ತೆಯಾಗುವ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ ಹಲವುಪಟ್ಟು ಹೆಚ್ಚಾಗಿದೆ. ಈ ವರ್ಷದ ಮೊದಲ ದಿನ ಪತ್ತೆಯಾಗಿದ್ದ ಹೊಸ ಪ್ರಕರಣಗಳ ಸಂಖ್ಯೆ 22,775ರಷ್ಟಿತ್ತು. ಆದರೆ 20 ದಿನಗಳ ನಂತರ ಈ ಸಂಖ್ಯೆ 3 ಲಕ್ಷವನ್ನು ದಾಟಿದೆ. ಆದರೆ ಈ ಅವಧಿಯಲ್ಲಿ ಪ್ರತಿದಿನ ನಡೆಸಲಾಗುತ್ತಿರುವ ಕೋವಿಡ್ ಪರೀಕ್ಷೆಗಳ ಸಂಖ್ಯೆ 11 ಲಕ್ಷದಿಂದ 19 ಲಕ್ಷಕ್ಕೆ ಏರಿಕೆಯಾಗಿದೆ. ಈಗ ಪತ್ತೆಯಾಗುತ್ತಿರುವ ಕೋವಿಡ್ ಪ್ರಕರಣಗಳಲ್ಲಿ ರೋಗದ ತೀವ್ರತೆ ಕಡಿಮೆ ಇರುವ ಕಾರಣ, ಪರೀಕ್ಷೆಗಳ ಸಂಖ್ಯೆಯನ್ನು ಕಡಿಮೆ ಮಾಡುವಂತೆ ಕೇಂದ್ರ ಸರ್ಕಾರವೇ ಸೂಚನೆ ನೀಡಿದೆ.




- ಈ ವರ್ಷದ ಆರಂಭದಲ್ಲಿ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆಯು ನಾಲ್ಕು ದಿನಗಳಿಗೆ ಒಮ್ಮೆ ದುಪ್ಪಟ್ಟಾಗುತ್ತಿತ್ತು
- ಜನವರಿ ಮೊದಲ ವಾರದ ಅಂತ್ಯದ ವೇಳೆಗೆ ಹೊಸ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗುವ ಅವಧಿಯು ಎರಡು ದಿನಗಳಿಗೆ ಕುಸಿದಿತ್ತು
- ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸದೇ ಇರುವ ಕಾರಣ, ಪತ್ತೆಯಾಗುವ ಹೊಸ ಪ್ರಕರಣಗಳ ಸಂಖ್ಯೆಯ ಏರಿಕೆಯೂ ಇಳಿಕೆಯಾಗಿದೆ
- ಈಗ ದೇಶದಲ್ಲಿ ಪ್ರತಿದಿನ ಪತ್ತೆಯಾಗುವ ಹೊಸ ಪ್ರಕರಣಗಳ ಸಂಖ್ಯೆ ಏಳರಿಂದ ಎಂಟು ದಿನಕ್ಕೊಮ್ಮೆ ದುಪ್ಪಟ್ಟಾಗುತ್ತಿದೆ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 24

## ಲಿಂಗಾಕಾರದಲ್ಲಿ ಶಿವನ ಪೂಜೆ

ಶ್ರವಣ-ಪಠಣ-ಮನನ ಎಂಬ ಮೂರು ಮುಕ್ತಿಸಾಧನಗಳನ್ನು ಅನುಸರಿಸಲು ಅಸಮರ್ಥರಾದವರು ಹೆಚ್ಚಿನ ಶ್ರಮವಿಲ್ಲದೆ ಯಾವ ಕ್ರಮ ಅನುಸರಿಸಿ ಮುಕ್ತಿ ಪಡೆಯಬಹುದೆಂದು ಪ್ರಯಾಗದ ಮುನಿಗಳು ಕೇಳುತ್ತಾರೆ. ಆಗ ಸೂತಮುನಿ ಸರಳವಾಗಿ ಶಿವನನ್ನು ಆರಾಧಿಸುವ ವಿವರ ತಿಳಿಸುತ್ತಾನೆ. 'ಮನೆಯಲ್ಲಿ ಅಥವಾ ಗುಡಿಯಲ್ಲಿ ಶಂಕರನ ಲಿಂಗ ಮತ್ತು ಪ್ರತಿಮೆಗಳನ್ನು ಪ್ರತಿಷ್ಠಾಪಿಸಿ ನಿತ್ಯ ಪೂಜಿಸಿದರೆ ಮುಕ್ತಿಯನ್ನು ಪಡೆಯಬಹುದು. ವಂಚನೆ ಇಲ್ಲದೆ, ಶಕ್ತಿ ಇದ್ದಷ್ಟು ಪೂಜಾದ್ರವ್ಯಗಳನ್ನು ಶಿವಲಿಂಗ ಮತ್ತು ಮೂರ್ತಿಗಳಿಗೆ ಅರ್ಪಿಸಬೇಕು. ಹೆಚ್ಚು ಜನ ಸೇರುವುದಿದ್ದರೆ ಪವಿತ್ರವಾದ ಮಠ, ಪುಣ್ಯತೀರ್ಥಕ್ಷೇತ್ರಗಳನ್ನು ಪೂಜೆಗಾಗಿ ವಿನಿಯೋಗಿಸಬೇಕು. ಶಿವಲಿಂಗ ಮತ್ತು ಶಿವಮೂರ್ತಿಗಳಿಗೆ ಮಂಟಪ, ಗೋಪುರ ನಿರ್ಮಿಸಬೇಕು. ವಸ್ತ್ರ, ಗಂಧ, ಹಾರ, ಧೂಪ, ದೀಪ ಮತ್ತು ಅನೇಕ ಬಗೆಯ ಅನ್ನಗಳುಳ್ಳ ಮತ್ತು ಹೋಳಿಗೆ ಮುಂತಾದ ನೈವೇದ್ಯಗಳನ್ನು ಶಿವಲಿಂಗಮೂರ್ತಿಗೆ ಅರ್ಪಿಸಬೇಕು. ಶ್ವೇತಚ್ಛತ್ರಿ, ಧ್ವಜ, ವ್ಯಜನ ಅಂದರೆ ಬೀಸಣಿಗೆ, ಚಾಮರ ಮೊದಲಾದವುಗಳಿಂದ ಶಂಕರನ ಲಿಂಗ ಮತ್ತು ಮೂರ್ತಿಗಳನ್ನು ಅಲಂಕರಿಸಬೇಕು. ಆಮೇಲೆ ಪ್ರದಕ್ಷಿಣೆ, ನಮಸ್ಕಾರ, ಯಥಾಶಕ್ತಿ ಶಿವಪಂಚಾಕ್ಷರೀಮಂತ್ರದ ಜಪ ಮುಂತಾದ ಆವಾಹನದಿಂದ ವಿಸರ್ಜನೆಯವರೆಗಿನ ಎಲ್ಲಾ ಪೂಜಾಕ್ರಮವನ್ನು ಭಕ್ತಿಯಿಂದ ನಿತ್ಯವೂ ಶಿವಲಿಂಗ ಮತ್ತು ಶಿವಮೂರ್ತಿಗಳಿಗೆ ಮಾಡಬೇಕು. ಹೀಗೆ ನಿತ್ಯವೂ ಶಿವಲಿಂಗ ಮತ್ತು ಶಿವಮೂರ್ತಿಗಳನ್ನು ಪೂಜಿಸುವವರು, ಶ್ರವಣ-ಪಠಣ-ಮನನ ಎಂಬ ಮೂರು ಮುಕ್ತಿಸಾಧನದ ಕ್ರಮಗಳಿಲ್ಲದೇ, ಶಿವನ ಅನುಗ್ರಹದಿಂದ ಸಿದ್ಧಿಯನ್ನು ಮುಕ್ತಿಯನ್ನೂ ಪಡೆಯಬಹುದು' ಎಂದು ಸೂತಮುನಿ ಸರಳ ಮುಕ್ತಿಮಾರ್ಗವನ್ನು ತಿಳಿಸುತ್ತಾನೆ.

ಸೂತಮುನಿಯಿಂದ ಶಿವನನ್ನು ಒಲಿಸಿಕೊಳ್ಳುವ ಸರಳ ಮುಕ್ತಿಮಾರ್ಗವನ್ನು ತಿಳಿದ ಮುನಿಗಳು, 'ಇತರೆ ದೇವರುಗಳನ್ನು ಮೂರ್ತಿಯಲ್ಲಿಯೇ ಪೂಜಿಸುತ್ತೇವೆ. ಆದರೆ ಪರಮೇಶ್ವರನನ್ನು ಮಾತ್ರ ಲಿಂಗ ಮತ್ತು ಮೂರ್ತಿ ಎರಡರಲ್ಲೂ ಪೂಜಿಸಲು ಕಾರಣವೇನು?' ಅಂತ ತಮ್ಮನ್ನು ಬಹುಕಾಲದಿಂದ ಕಾಡುತ್ತಿದ್ದ ಪ್ರಶ್ನೆಯೊಂದನ್ನು ಕೇಳುತ್ತಾರೆ. ಸೂತಮುನಿಯು, 'ನೀವು ಕೇಳಿದ ವಿಷಯ ತುಂಬಾ ಪವಿತ್ರವಾದುದು. ಇದಕ್ಕೆ ಮಹಾದೇವನ ಹೊರತು ಇನ್ನಾರೂ ಉತ್ತರ ಹೇಳಲಾರರು. ಪರಮಶಿವ ಹೇಳಿದ್ದನ್ನು ಗುರುಗಳಾದ ವ್ಯಾಸರು ನನಗೆ ಹೇಳಿದ್ದಾರೆ. ಅದನ್ನು ನಿಮಗೆ ತಿಳಿಸುತ್ತೇನೆ ಕೇಳಿ' ಎನ್ನುತ್ತಾನೆ.

ಜಗತ್ತಿನಲ್ಲಿ ಶಿವನೋರ್ವನೇ ಬ್ರಹ್ಮಸ್ವರೂಪ. ಆಕಾಶದಂತೆ ಎಲ್ಲೆಲ್ಲಿಯೂ ಇರುವವನು ಶಿವನೊಬ್ಬನೇ. ಆದ ಕಾರಣ, ಆಕಾಶದಂತೆ ಅವಯವಗಳಿಲ್ಲದ ಅಸೀಮರೂಪಿ ಶಿವ. ಆದರೆ ಮಾಯಾಮಯರಾದ ಬ್ರಹ್ಮ, ವಿಷ್ಣು ಮೊದಲಾದ ದೇವರುಗಳು ಜೀವರೂಪವುಳ್ಳವರಾದ್ದರಿಂದ, ಅವರ ರೂಪಕ್ಕನುಗುಣವಾಗಿ ಮೂರ್ತಿರೂಪದಲ್ಲಿ ಪೂಜಿಸುತ್ತೇವೆ. ಆದರೆ ಶಿವನು ಅಸೀಮವಾದ ಬ್ರಹ್ಮಾಂಡ ಸ್ವರೂಪಿ. ಹೀಗಾಗಿ ಶಿವನೂ ಮಾಯದ ಅವಯವಗಳುಳ್ಳ ಆಕಾರವೂ ಹೊಂದಿದ್ದಾನೆ ಮತ್ತು ಪಾರಮಾರ್ಥಿಕವಾಗಿ ಅವಯವಗಳಿಲ್ಲದ ನಿರಾಕಾರನೂ ಆಗಿದ್ದಾನೆ. ನಿರಾಕಾರದಲ್ಲೂ ಶಿವನನ್ನು ಪೂಜಿಸಬಹುದು. ಆದರೆ, ಸಾಮಾನ್ಯ ಜನ ನಿರಾಕಾರದಲ್ಲಿ ಪೂಜಿಸುವಾಗ ಅಥವಾ ಪ್ರಾರ್ಥನೆ ಮಾಡುವಾಗ ಧೃತಿಗೆಡುತ್ತಾರೆ. ಅದೇ ಆಕಾರರೂಪದಲ್ಲಿ ಶಿವನನ್ನು ಪೂಜಿಸಿದಾಗ ಜನರ ಮನಸ್ಸು ಒಂದು ಕಡೆ ಭಕ್ತಿಭಾವದಲ್ಲಿ ಕೇಂದ್ರೀಕೃತವಾಗುತ್ತದೆ. ಇದಕ್ಕಾಗಿ ಶಿವನನ್ನು ಲಿಂಗರೂಪದಲ್ಲಿ ಪೂಜಿಸುವುದು ಅನುಕೂಲ' ಎಂದು ಸೂತಮುನಿ ತಿಳಿಸುತ್ತಾನೆ.

ಈಶ್ವನು ನಿರಾಕಾರನಾದುದರಿಂದ ನಿರಾಕಾರವಾದ ಲಿಂಗವು ಪೂಜೆಗೆ ಯೋಗ್ಯವಾದುದು. ಹಾಗೆ, ಮಾಯಾಮಯವಾಗಿ ಸಾಕಾರನೂ ಆಗಿರುವುದರಿಂದ, ಈಶ್ವರನ ಪೂಜೆಗೆ ಶಿವಮೂರ್ತಿಯು ಯೋಗ್ಯವಾದುದು. ಬ್ರಹ್ಮಸ್ವರೂಪನಾದ ಶಿವನು ಸಾಕಾರ ಮತ್ತು ನಿರಾಕಾರ ರೂಪನಾದುದುರಿಂದ ಲಿಂಗ ಮತ್ತು ಮೂರ್ತಿಗಳೆರಡರಲ್ಲಿಯೂ ಜನಗಳಿಂದ ನಿತ್ಯವೂ ಪೂಜಿಸಲ್ಪಡುತ್ತಾನೆ. ಉಳಿದ ದೇವ-ದೇವತೆಗಳು ಬ್ರಹ್ಮರೂಪರಲ್ಲ. ಆ ದೇವರುಗಳು ಜೀವವುಳ್ಳವರಾಗಿರುವುದರಿಂದ ನಿರಾಕಾರರಲ್ಲ. ಆದ್ದರಿಂದ ಆ ದೇವರುಗಳನ್ನು ನಿರಾಕಾರವಾದ ಲಿಂಗದಲ್ಲಿ ಪೂಜಿಸುವುದಿಲ್ಲ. ಬದಲಿಗೆ ಅವರ ಮೂರ್ತರೂಪದಲ್ಲೇ ಪೂಜಿಸಲ್ಪಡುತ್ತಾರೆ. ವೇದಾಂತಗಳು ಶಂಕರನೋರ್ವನೇ ಬ್ರಹ್ಮಸ್ವರೂಪ ಎಂದು ಓಂಕಾರಾರ್ಥದಲ್ಲಿ ಹೇಳಿವೆ. ಅಂದರೆ ಓಂಕಾರದ ಅರ್ಥವೆ ಬ್ರಹ್ಮ. ಓಂಕಾರದ ಮೂಲಕ ಶಂಕರನು ಬ್ರಹ್ಮವೆಂದು ವೇದಾಂತಗಳು ಸಾರಿವೆ ಎಂದು ವಿವರಿಸುತ್ತಾನೆ ಸೂತಮುನಿ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಲವ್ ಜಿಹಾದ್' ಪ್ರಕರಣವೊಂದನ್ನು ತಡೆದಿರುವುದಾಗಿ ಬಜರಂಗ ದಳ ಹೇಳಿಕೊಂಡಿದೆ. ಜೈಪುರದಿಂದ ಅಜ್ಮೇರ್‌ಗೆ ಸಾಗುತ್ತಿದ್ದ ರೈಲಿನಲ್ಲಿ ಮುಸ್ಲಿಂ ಪುರುಷನ ಜೊತೆ ಹಿಂದೂ ಯುವತಿಯೊಬ್ಬಳು ಪ್ರಯಾಣಿಸುತ್ತಿರುವ ಕುರಿತು ಸುಳಿವು ಸಿಗುತ್ತಲೇ ಸ್ಥಳಕ್ಕೆ ಧಾವಿಸಿ ಅವರಿಬ್ಬರನ್ನು ವಶಕ್ಕೆ ತೆಗೆದುಕೊಂಡು ರೈಲ್ವೇ ಪೊಲೀಸ್ ಠಾಣೆಗೆ (ಜಿಆರ್‌ಪಿಎಫ್) ಒಪ್ಪಿಸಿರುವುದಾಗಿ ಬಜರಂಗ ದಳದ ಸದಸ್ಯರು ಹೇಳಿದ್ದಾರೆ. ಆ ಕುರಿತ ವರದಿಯನ್ನು ಹಲವಾರು ಸ್ಥಳೀಯ ಪತ್ರಿಕಾ ವೆಬ್‌ಸೈಟ್‌ಗಳ ಪ್ರಕಟಿಸಿವೆ. ಈ ವರದಿಯನ್ನು ಸಾಕಷ್ಟು ಫಾಲೋಯರ್‌ಗಳನ್ನು ಹೊಂದಿರುವ ಟ್ವಿಟರ್ ಮತ್ತು ಫೇಸ್‌ಬುಕ್ ಪುಟಗಳು ಹಂಚಿಕೊಂಡಿವೆ.

ಇದು 'ಲವ್ ಜಿಹಾದ್' ಪ್ರಕರಣವಲ್ಲ ಎಂದು ಆಲ್ಟ್ ನ್ಯೂಸ್ ವೇದಿಕೆ ವರದಿ ಮಾಡಿದೆ. ಉಜ್ಜೈನ್‌ನ ಜಿಆರ್‌ಪಿ ಇನ್‌ಸ್ಪೆಕ್ಟರ್ ಆರ್.ಎಸ್. ಮಹಾಜನ್ ಈ ಮಾಹಿತಿಯನ್ನು ದೃಢಪಡಿಸಿದ್ದಾರೆ. ಈ ಘಟನೆ ಜ.14ರಂದು ನಡೆದಿದೆ. ಮಹಿಳೆ ಮತ್ತು ಪುರುಷ ಇಬ್ಬರೂ ವಿವಾಹಿತರು. ಅವರಿಬ್ಬರೂ ರೈಲಿನ ಒಂದೇ ಬೋಗಿಯಲ್ಲಿ ಇಂದೋರ್‌ನಿಂದ ಜೈಪುರಕ್ಕೆ ಪ್ರಯಾಣಿಸುತ್ತಿದ್ದರು. ಇಬ್ಬರ ಕುಟುಂಬಗಳೂ ಪರಸ್ಪರ ಪರಿಚಿತ ಕುಟುಂಬಗಳಾಗಿದ್ದವು. ಈ ಪ್ರಕರಣದಲ್ಲಿ 'ಲವ್ ಜಿಹಾದ್' ಅಂಶವಿರಲಿಲ್ಲ. ಕೂಡಲೇ ಅವರಿಬ್ಬರನ್ನೂ ಬಿಡುಗಡೆ ಮಾಡಲಾಯಿತು ಎಂದು ಮಹಾಜನ್ ಹೇಳಿದ್ದಾರೆ.

## ಗುಂಡಣ್ಣ

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜನವರಿ 21, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ-ಹೇಮಂತ ಋತು ಮಕರ ಮಾಸದ 07 ನೇ ದಿನ ತಿಥಿ: (ಪೌಷ ಕೃಷ್ಣ) ತೃತೀಯ ಗಂ. 08-52 ನಕ್ಷತ್ರ: ಮಘಾ ಗಂ. 09-43 ಯೋಗ: ಸೌಭಾಗ್ಯ ಗಂ. 15-05 ಕರಣ: ವಿಷ್ಟಿ ಗಂ. 08-52. ರಾಹುಕಾಲ : ಬೆಳಿಗ್ಗೆ 10:30-12:00 ಸೂರ್ಯೋದಯ : 07-01 ಸೂರ್ಯಾಸ್ತ : 06-22
ಮುಸ್ಲಿಂ ದಿನಾಂಕ : 17 ಜುಮಾದುಸ್ಸಾನಿ ದಿನ ವಿಶೇಷ : ಸಂಕಷ್ಟಹರ ಚತುರ್ಥಿ ( ಚಂದ್ರೋದಯ ರಾತ್ರಿ 09-22 ), ಹುತಾತ್ಮ ಹೇಮು ಕಲನಿಯವರ ಸ್ಮರಣಾರ್ಥ ದಿನ (ಸಿಂಧಿ)
ಅದೃಷ್ಟ ಸಂಖ್ಯೆ: 03, 15

**ಮೇಷ:** ಬಹು ವಿಧದ ಉದ್ಯೋಗಾವಕಾಶಗಳು ನಿಮ್ಮ ಪಾಲಿಗೆ ಬರಲಿವೆ. ಅದನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳಿ. ಕೆಲವು ನಿಗೂಢ ಸಂಗತಿಗಳನ್ನು ಬಯಲಿಗೆ ತರುವ ಪ್ರಯತ್ನ ನಡೆಯಲಿದೆ.

**ವೃಷಭ:** ಮನೆಯಲ್ಲಿ ಶುಭಕಾರ್ಯಗಳು ಕೈಗೂಡಿದ್ದು ನಿಮ್ಮ ಜವಾಬ್ದಾರಿಕೆ ಹೆಚ್ಚಿದೆ. ಕೊಡು ಕೊಳ್ಳುವ ವಿಚಾರಗಳಲ್ಲಿ ಒಬ್ಬರೇ ತೀರ್ಮಾನ ಕೈಗೊಳ್ಳುವುದು ಸೂಕ್ತವಲ್ಲ. ಕಾರ್ಯ ನಿರ್ವಿಘ್ನವಾಗಿ ನೆರವೇರಲು ವಿಘ್ನೇಶ್ವರನ ಸ್ತೋತ್ರ ಪಠಿಸಿ.

**ಮಿಥುನ:** ಪಾಲುದಾರರಲ್ಲಿ ಒಮ್ಮತ ಮೂಡಿಸುವಲ್ಲಿ ಯಶಸ್ವಿಯಾಗುವಿರಿ. ವಿವಾದವಿರುವ ಬಹುತೇಕ ವಿಷಯಗಳು ಈ ದಿನ ಇತ್ಯರ್ಥಗೊಂಡು ಮನಸ್ಸಿಗೆ ಹಿತವೆನಿಸುವುದು. ಬಾಕಿ ಇರುವ ಕೆಲಸಗಳನ್ನು ಪೂರ್ಣಗೊಳಿಸುವಿರಿ.

**ಕರ್ಕಾಟಕ:** ವ್ಯಾಪಾರ, ವೃತ್ತಿಯಲ್ಲಿ ಆರೋಗ್ಯಕರ ಪೈಪೋಟಿ ಕಂಡುಬಂದರೂ ಸಹ ಸಮಾಧಾನಕರ ಲಾಭ ಇರುವುದು. ಮಗನ ಕೆಲಸದ ವಿಚಾರದಲ್ಲಿ ವಿದೇಶದಲ್ಲಿರುವ ಸ್ನೇಹಿತ ನೆರವಿಗೆ ಬರಲಿದ್ದಾರೆ.

**ಸಿಂಹ:** ಮಕ್ಕಳ ಹೆಸರಿನಲ್ಲಿ ಮಾಡಬೇಕಾಗಿರುವ ಧರ್ಮ ಕಾರ್ಯಗಳನ್ನು ಶ್ರದ್ಧೆಯಿಂದ ಆಚರಿಸುವಿರಿ. ಉದ್ದಿಮೆದಾರರಿಗೆ ಸರ್ಕಾರದಿಂದ ಪ್ರತಿಕೂಲ ಉಂಟಾಗಲಿದೆ. ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಹೆಚ್ಚಿನ ಆದಾಯ.

**ಕನ್ಯಾ:** ನಿಮ್ಮ ನಾಜೂಕಿನ ಕೆಲಸ-ಕಾರ್ಯಗಳಿಂದಾಗಿ ಹೆಚ್ಚಿನ ವಿಶೇಷ ಮನ್ನಣೆ ಗಳಿಸುವಿರಿ. ಜೊತೆಯಲ್ಲಿ ಸಹೋದ್ಯೋಗಿಗಳೊಂದಿಗೆ ಹೊಂದಿಕೊಂಡು ಹೋಗುವ ಗುಣ ಸ್ವಭಾವಗಳನ್ನು ಅಳವಡಿಸಿಕೊಳ್ಳುವುದು ಒಳ್ಳೆಯದು.

**ತುಲಾ:** ಅನಿರೀಕ್ಷಿತ ಪ್ರಯಾಣದಿಂದಾಗಿ ಖರ್ಚು-ವೆಚ್ಚಗಳು ಅಧಿಕವಾಗಲಿವೆ. ಶೀಘ್ರವಾಗಿ ನಿರ್ದಿಷ್ಟವಾದ ಕಾರ್ಯವೊಂದನ್ನು ಪೂರೈಸಲೇಬೇಕೆಂಬ ನಿಮ್ಮ ಯೋಚನೆಯು ಕನಸಾಗಿಯೇ ಉಳಿಯುವುದು. ಹಿರಿಯರ ಬಗ್ಗೆ ಗಮನಹರಿಸಿ.

**ವೃಶ್ಚಿಕ:** ರೈತರಿಗೆ ತಮ್ಮ ಬೆಳೆಗಳಿಗೆ ಉತ್ತಮ ಬೆಲೆ ದೊರೆಯುವ ಸಂಭವವಿದೆ. ರಾಜಕೀಯ ವ್ಯವಹಾರಗಳ ಪ್ರಬಲಾಕಾಂಕ್ಷಿಯಾಗಿರುವ ನೀವು ಇನ್ನಷ್ಟು ಚುರುಕಾಗಬೇಕಾಗಿದೆ. ಕ್ರೀಡಾಪಟುಗಳಿಗೆ ಪ್ರಾಯೋಜಕರು ದೊರೆತು ಸಂತಸ.

**ಧನು:** ನಿವೃತ್ತಿ ಜೀವನದ ನಂತರದ ಕೆಲಸಗಳ ಬಗ್ಗೆ ಯೋಜನೆ ರೂಪಿಸಿಕೊಳ್ಳುವಿರಿ. ಮಗಳಿಗೆ ಆತ್ಮೀಯರೊಬ್ಬರ ಸಹಾಯದಿಂದ ಉದ್ಯೋಗ ದೊರೆಯಲಿದೆ. ಸಾಧು ಸಂತರ ಅಥವಾ ಪೀಠಾಧಿಪತಿಗಳ ದರ್ಶನ ಆಕಸ್ಮಿಕವಾಗಿ ಸಿಗಲಿದೆ.

**ಮಕರ:** ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಸೂಕ್ತ ರೀತಿಯಲ್ಲಿ ಮಾಡಿಕೊಳ್ಳುವಿರಿ. ಪ್ರಭಾವಶಾಲಿ ವ್ಯಕ್ತಿಯೊಂದಿಗಿನ ಭೇಟಿಯನ್ನು ತಳ್ಳಿಹಾಕದೆ ನಿಮ್ಮ ವೃತ್ತಿ ಕ್ಷೇತ್ರಕ್ಕೆ ಲಾಭ ಉಂಟಾಗುವಂತೆ ನೋಡಿಕೊಳ್ಳಿ.

**ಕುಂಭ:** ನಿಮ್ಮ ಈಗಿನ ವ್ಯವಹಾರ ಕ್ಷೇತ್ರವನ್ನು ವಿಸ್ತರಿಸಲು ಈ ದಿನ ಸೂಕ್ತವಾಗಿದೆ. ಬಂಧುಮಿತ್ರರೊಡನೆ ಸಂತೋಷದ ಕ್ಷಣಗಳನ್ನು ಹಂಚಿಕೊಳ್ಳಲಿದ್ದೀರಿ. ಕೆಲಸ-ಕಾರ್ಯಗಳು ಮಂದಗತಿಯಲ್ಲಿ ನಡೆಯಲಿವೆ.

**ಮೀನ:** ರಂಗನಟರಿಗೆ ಚಲನಚಿತ್ರಗಳಲ್ಲಿ ನಟಿಸಲು ಅವಕಾಶಗಳು ಸಿಗಲಿವೆ. ತೋಟ ಮತ್ತು ಎಸ್ಟೇಟ್ ಕೆಲಸಗಾರರಿಗೆ ಸಂಪಾದನೆ ಹೆಚ್ಚಲಿದೆ. ಹವಾಮಾನದ ವ್ಯತ್ಯಾಸದಿಂದಾಗಿ ಅನಾರೋಗ್ಯದ ಭೀತಿ ಉಂಟಾಗುವುದು.

## ಬೆರಗಿನ ಬೆಳಕು

ಗುರುರಾಜ ಕರಜಗಿ

## ಧೀಶಕ್ತಿಯ ಪ್ರಚೋದನೆ

**ಶ್ರೀಯನಾಯುವ ಬಲವ ಜಯವ ಬೇಡಿರ್ದೊಡಂ |**
**ಗಾಯತ್ರಿಯನೆ ಪರಮಮಂತ್ರವೆಂದಾರ್ಯರ್ ||**
**ಧೀಯಂ ಪ್ರಚೋದಿಸೆಂದನುದಿನದಿ ಬೇಡಿದರು |**
**ಶ್ರೇಯಸ್ಸು ಧೀ ಮಹಿಮೆ - ಮಂಕುತಿಮ್ಮ || 546 ||**

**ಪದ-ಅರ್ಥ:** ಶ್ರೀಯನಾಯುವ = ಶ್ರೀಯನ್ನು(ಐಶ್ವರ್ಯವನ್ನು) + ಆಯುವ(ಆಯುಷ್ಯವನ್ನು), ಬೇಡಿರ್ದೊಡಂ(ಬೇಡಿಕೊಂಡರೂ), ಆರ್ಯರ್ = -ಹಿರಿಯರು, ದೃಷ್ಟಾರರು. ಧೀಯಂ = ಬುದ್ಧಿಯನ್ನು, ಪ್ರಚೋದಿಸೆಂದನುದಿನದಿ = ಪ್ರಚೋದಿಸು + ಎಂದು + ಅನುದಿನದಿ.

**ವಾಚ್ಯಾರ್ಥ:** ಐಶ್ವರ್ಯವನ್ನು, ಆಯುಷ್ಯವನ್ನು, ಶಕ್ತಿಯನ್ನು, ಜಯವನ್ನು ಬೇಡಿದಾಗ ಅದಕ್ಕೆಲ್ಲ ಗಾಯತ್ರಿಯೇ ಪರಮಮಂತ್ರವೆಂದರು ದೃಷ್ಟಾರರು. ಬುದ್ಧಿಯನ್ನು ಪ್ರಚೋದಿಸು ಎಂದು ಪ್ರತಿನಿತ್ಯವೂ ಬೇಡಿದರು. ಶ್ರೇಯಸ್ಸು ಬುದ್ಧಿಯ ಮಹಿಮೆ.

**ವಿವರಣೆ:** ನಮ್ಮ ಬದುಕೇ ಸದಾ ಬೇಡುತ್ತಲೇ ಇರುವುದು. ಮೇಲಿನವರನ್ನು, ಪಕ್ಕದವರನ್ನು, ಭಗವಂತನನ್ನು ಬೇಡುತ್ತಲೇ ಇರುತ್ತೇವೆ. ರವೀಂದ್ರನಾಥ್ ಟ್ಯಾಗೋರರು ತಮ್ಮ ಗೀತಾಂಜಲಿಯಲ್ಲಿ ಹೇಳಿದಂತೆ, 'ಭಗವಂತಾ, ನೀನು ನನ್ನ ಬೇಡಿಕೆಯ ಭಿಕ್ಷಾಪಾತ್ರೆಯನ್ನು ತುಂಬುತ್ತಲೇ ಇದ್ದರೂ, ಅದು ಸದಾಕಾಲ ಖಾಲಿಯಾಗಿಯೇ ಇರುತ್ತದೆ'. ನಾವು ಬೇಡುವುದು ಐಶ್ವರ್ಯವನ್ನು, ದೀರ್ಘ ಆಯುಸ್ಸನ್ನು, ಶಕ್ತಿಯನ್ನು ಜಯವನ್ನು. ಹೀಗೆ ನಾವು ಬೇಡಿದಾಗ ಅಂದಿನ ದೃಷ್ಟಾರರು ಗಾಯತ್ರಿಯ ಮಹಿಮೆಯನ್ನು ಹೇಳಿ, ನಮ್ಮೆಲ್ಲ ಬೇಡಿಕೆಗಳನ್ನು ಪೂರೈಸಲು ಗಾಯತ್ರಿಯೇ ಪರಮ ಮಂತ್ರ ಎಂದರು. ಆ ಮಂತ್ರದ ಮೂಲಕ ನಿನ್ನ ಧೀಶಕ್ತಿಯನ್ನು ಅಂದರೆ ಬುದ್ಧಿಶಕ್ತಿಯನ್ನು ಪ್ರಚೋದಿಸಿಕೋ ಎಂದು ಸೂಚಿಸಿದರು. ಯಾಕೆಂದರೆ ವಿವೇಕಯುತವಾದ ಬುದ್ಧಿ ನಮ್ಮೆಲ್ಲ ಅಪೇಕ್ಷೆಗಳನ್ನು ನಡೆಸುತ್ತದೆ. ಗಾಯತ್ರಿ ಮಂತ್ರ ಇಂತಿದೆ:

**ತತ್ ಸವಿತ್ಯ ವರೇಣ್ಯಮ್ ||**
**ಭರ್ಗೋ ದೇವಸ್ಯ ಧೀಮಹಿ |**
**ಧಿಯೋ ಯೋನ: ಪ್ರಚೋದಯಾತ್ ||**

'ಧರ್ಮಶಾಸ್ತ್ರಗಳ ಚರಿತ್ರೆ' ಎಂಬ ಬೃಹತ್ ಆಧಾರ ಗ್ರಂಥವನ್ನು ರಚಿಸಿರುವ ಶ್ರೀ ಪಿ.ವಿ. ಕಾಣೆಯವರು ನೀಡಿದ ಗಾಯತ್ರಿ ಮಂತ್ರದ ಅರ್ಥ: 'ನಮ್ಮ ಬುದ್ಧಿಯನ್ನು ಪ್ರಚೋದಿಸುವ ಸವಿತೃದೇವನ ಮಹತ್ತಾದ ತೇಜಸ್ಸನ್ನು ನಾವು ಧ್ಯಾನಿಸುತ್ತೇವೆ'. ಸರಳವಾಗಿ ಹೇಳುವುದಾದರೆ ಗಾಯತ್ರಿ ಮಂತ್ರವು ಸೂರ್ಯನ ಉಪಾಸನಾ ಮಂತ್ರ.

ಈ ಮಂತ್ರವನ್ನು ರಚಿಸಿದ್ದು ವಿಶ್ವಾಮಿತ್ರ ಮಹರ್ಷಿಗಳು ಎಂದು ಕೆಲವರು ನಂಬುತ್ತಾರೆ. ಈ ಮಂತ್ರ ಋಗ್ವೇದದ ಒಂದು ಭಾಗವೂ ಹೌದು. ಇದರ ಮೂರನೆಯ ಸಾಲು ಕಗ್ಗದ ಪ್ರಮುಖ ಅಂಶ. 'ಧಿಯೋ ಯೋ ನಃ ಪ್ರಚೋದಯಾತ್' ಮಂತ್ರದ ಪ್ರಾರ್ಥನಾ ಭಾಗ. ಮೊದಲು ಸಾಲು ಸ್ತೋತ್ರ, ಎರಡನೆಯ ಸಾಲು ಧ್ಯಾನದ ಭಾಗಗಳು. ಧೀ ಎಂದರೆ ಬುದ್ಧಿಶಕ್ತಿ. ಭಗವಂತ ಸರ್ವಲೋಕಗಳಲ್ಲಿ, ಸರ್ವಜೀವಗಳಲ್ಲಿ ಇದ್ದಾನೆ. ಅವನು ಬೆಳಕಿನ ಬೆಳಕಾಗಿದ್ದಾನೆ. ಎಲ್ಲರಿಗಿಂತ ಹಿರಿಯನಾಗಿದ್ದಾನೆ, ಅತ್ಯಂತ ಪ್ರಕಾಶಮಾನನಾಗಿದ್ದಾನೆ ಎಂದು ಹೃದಯದಲ್ಲಿ ಸ್ಥಾಪಿಸಿಕೊಂಡ ಮೇಲೆ ಆ ಭಗವಂತನ ಕೃಪೆ ತನ್ನ ಮನಸ್ಸು ಹಾಗೂ ಬುದ್ಧಿಗಳ ಮೇಲೆ ಆಗಲಿ ಎಂದು ಪ್ರಾರ್ಥಿಸುತ್ತಾನೆ. ಧೀ ಶಕ್ತಿ ಮನುಷ್ಯನನ್ನು ಚಿಂತನೆಗೆ ಒಡ್ಡುತ್ತದೆ, ಬ್ರಹ್ಮಜ್ಞಾನದ ಕಡೆಗೆ ಕರೆದೊಯ್ಯುತ್ತದೆ. ಅದು ವಿಶೇಷ ಹಾಗೂ ಉನ್ನತ ಕ್ರಿಯಾಶೀಲತೆಯತ್ತ ಪ್ರಚೋದಿಸುತ್ತದೆ. ಈ ಜ್ಞಾನ ಮತ್ತು ಕ್ರಿಯೆಗಳು ಆನಂದದೆಡೆಗೆ ಮಾರ್ಗದರ್ಶನ ಮಾಡುತ್ತವೆ. ಆದ್ದರಿಂದ, ಭಗವಂತನಿಂದ ಪ್ರಚೋದಿತವಾದ ಧೀಶಕ್ತಿ ನಮ್ಮೆಲ್ಲ ಶ್ರೇಯಸ್ಸುಗಳಿಗೆ ಕಾರಣವಾಗುತ್ತದೆ.

## ಪದಬಂಧ 4845

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
3.ಕಳೆಯುವ ಲೆಕ್ಕವಿದು (5)
5.ಸರಕ್ಕನೇ ಧರಿಸಿಕೊಂಡ ಮಾಲೆ! (2)
6.ಗುರುವಾರದ ಮರುದಿನ (4)
7.ಬೆಂಕಿಯನ್ನು ಆರಿಸುವ ಸಿಬ್ಬಂದಿ (7)
10.ರುಚಿಕಟ್ಟಾದ ಅಡುಗೆಯನ್ನು ಹೀಗೆನ್ನಿ (4)
11.ಶುನಕದ ಹತ್ತಿರ ಕಾಣಿಸಿದ ಗಿಳಿ (2)
13.ಕಟುಕರ ಅಂಗಡಿಯಿದು (5)
14.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)

**ಮೇಲಿಂದ ಕೆಳಕ್ಕೆ**
1.ವಿಳಾಸ ಇಲ್ಲಿದೆ (2)
2.ಕೊನೆಗೆ ಚಾರನಿದ್ದರೆ ಇದು ಪ್ರಸ್ತಾಪ! (3)
4.ಪಟ್ಟಣ ಇಲ್ಲಿ ಕಾಣುತ್ತಿದೆ (3)
5.ಅರಸುತ್ತಿದ್ದ ರಾಜ ತಿರುಗಿದ್ದಾನಲ್ಲಾ? (3)
6.ಸೊಣಗ ಇಲ್ಲಿಗೆ ಬಂದಿದೆ (3)
8.ಶಾಸನವನ್ನು ಮಾಡುವವನು (3)
9.ಉಲ್ಟಾ ಕಾಣುತ್ತಿರುವ ಕೆನ್ನೆ (3)
10.ಈತ ನೃತ್ಯ ಮಾಡುವವನು (3)
11.ಉಲ್ಟಾ ಪಲ್ಟಾ ಆಗಿರುವ ಕೊಡಲಿ (3)
12.ಕುರುಡಿ ಹಿಡಿದಿರುವ ಬಳ್ಳಿ ತುದಿ ಕಾಣುತ್ತಿದೆಯೇ? (2)




## 4844ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ತಾಕಲಾಟ 3.ಹಾಲಾಹಲ
5.ನವಿರು 7.ಕರುಳು
9.ವಿಕ 10.ಕೋವಿದ
11.ಅಂಕ 12.ಹರಕೆ 14.ವಿನಮ
16.ರತ್ನಾಕರ 17.ತಲೆಮಾರು

**ಮೇಲಿಂದ ಕೆಳಕ್ಕೆ:**
1.ತಾರ್ಕಿಕ 2.ಟನ 3.ಹಾರು
4.ಲಮಕ 6.ವಿವಾಹವಿಚ್ಛೇದನ
8.ರುದ್ರನಾಟಕ 9.ವಿಧಿಬರಹ
11.ಅಂಬರ 13.ಕೆಸರು
14.ವಿರ 15.ಮತ

## ಸುಡೊಕು 5231

| | | | | | | | | |
|---|---|---|---|---|---|---|---|---|
| | 1 | | 3 | | 8 | | 2 | |
| 8 | | 6 | | | | 5 | | 3 |
| | 5 | | 4 | | 6 | | 7 | |
| 5 | | | 1 | | 2 | | 4 | |
| | 2 | 9 | | | | | | |
| 6 | | | 8 | | 9 | 2 | | 5 |
| | 8 | | 6 | | 1 | | 9 | |
| 7 | | 2 | | 8 | | 3 | | 1 |
| | 6 | | 2 | | 3 | | 5 | |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## 5230 ಸುಡೊಕು

| | | | | | | | | |
|---|---|---|---|---|---|---|---|---|
| 2 | 9 | 4 | 1 | 5 | 6 | 7 | 8 | 3 |
| 6 | 1 | 7 | 3 | 8 | 4 | 5 | 2 | 9 |
| 8 | 5 | 3 | 7 | 2 | 9 | 4 | 1 | 6 |
| 3 | 2 | 9 | 5 | 4 | 1 | 6 | 7 | 8 |
| 7 | 6 | 8 | 2 | 9 | 3 | 1 | 4 | 5 |
| 5 | 4 | 1 | 6 | 7 | 8 | 9 | 3 | 2 |
| 1 | 7 | 6 | 8 | 3 | 5 | 2 | 9 | 4 |
| 4 | 3 | 5 | 9 | 1 | 2 | 8 | 6 | 7 |
| 9 | 8 | 2 | 4 | 6 | 7 | 3 | 5 | 1 |

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

**... ಸವಿನೆನಪು ...**



ಶ್ರೀ ಡಿ. ಕೃಷ್ಣಾರೆಡ್ಡಿ ಮತ್ತು ಶ್ರೀಮತಿ ಅಮರಾವತಮ್ಮ
ದೊಮ್ಮಲೂರು, ಬೆಂಗಳೂರು
ನಿಧನ: 21-1-1992 ನಿಧನ 12-7-2007

ನಿಮ್ಮ ಪ್ರೀತಿ, ಆದರ್ಶಗಳೇ ನಮ್ಮ ಜೀವನಕ್ಕೆ ದಾರಿದೀಪ, ನಿಮ್ಮಗಳ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ
ಕೆ. ಹೇಮಾರೆಡ್ಡಿ,
ಎಚ್. ಸುನಿಲ್‌ಕುಮಾರ್ ಮತ್ತು ದೀಕ್ಷಾ ಎಂ.,
ರಿಯಾ ಎಸ್. ರೆಡ್ಡಿ, ಮಾ॥ ದಕ್ಷ್.ಎಸ್.,
ಎಚ್.ಭರತ್,
ಎಚ್. ಶೋಭ ಮತ್ತು ಡಾ॥ ವಿ.ರಾಜೀವ್ ಎಂ.ಡಿ.,
ಆರ್. ಪ್ರಣವ್ ಸ್ವರೂಪ್, ಆರ್. ಹರಿತ್ರ ರೆಡ್ಡಿ
ಹಾಗೂ ಬಂಧು-ಮಿತ್ರರು

**ವೈಕುಂಠ ಸಮಾರಾಧನೆ**



ನನ್ನ ಪೂಜ್ಯ ಪತಿಯವರಾದ
ಶ್ರೀ ಎಸ್. ಶಿವಣ್ಣನವರು
ದಿನಾಂಕ 12-1-2022 ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 22-1-2022 ಶನಿವಾರ ವೈಕುಂಠ ಸಮಾರಾಧನೆಯನ್ನು ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು : ಶ್ರೀಮತಿ ಲಕ್ಷ್ಮೀದೇವಮ್ಮ-ಪತ್ನಿ, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು
Mobile: 9916876658

**ಭಾವಪೂರ್ಣ ಶ್ರದ್ಧಾಂಜಲಿ**

**ಶ್ರೀ ಬಿ. ಎಸ್. ಮುದ್ದಪ್ಪನವರು**
ಮಹಾಸಭೆಯ ಮಾಜಿ ಕೋಶಾಧ್ಯಕ್ಷರು ಹಾಗೂ ನಿವೃತ್ತ ಐ.ಎ.ಎಸ್. ಅಧಿಕಾರಿಗಳಾಗಿದ್ದ ಶ್ರೀಯುತರು "ವೀರಶೈವ-ಲಿಂಗಾಯತ ಭವನ" ನಿರ್ಮಾಣ ಸಮಿತಿಯ ಅಧ್ಯಕ್ಷರಾಗಿ ಪ್ರತಿನಿತ್ಯ ಕಟ್ಟಡದ ಪ್ರಗತಿಯನ್ನು ಪರಿಶೀಲಿಸಿ ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ಕಾರಣೀಭೂತರಾಗಿದ್ದರು. ಅವರ ಈ ಸೇವೆ ಅವಿಸ್ಮರಣೀಯ. ಭವನ ಇರುವವರೆಗೂ ಅವರ ನೆನಪು ಚಿರಸ್ಥಾಯಿಯಾಗಿರುತ್ತದೆ.
ಇವರು ದಿನಾಂಕ: 18-01-2022ರಂದು ಲಿಂಗೈಕ್ಯರಾಗಿರುತ್ತಾರೆ.
ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾಗೂ ಶ್ರೀಯುತರ ಅಗಲುವಿಕೆಯಿಂದ ಸಮಾಜ ಮತ್ತು ಅವರ ಕುಟುಂಬಕ್ಕಾಗಿರುವ ಅಗಾಧ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.
ಪ್ರಕಟಣೆ
ಡಾ. ಭೀಮಣ್ಣ ಖಂಡ್ರೆ, ಮಾಜಿ ಸಚಿವರು, ಗೌರವಾಧ್ಯಕ್ಷರು | ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು ಹಾಗೂ ಮಾಜಿ ಸಚಿವರು, ಅಧ್ಯಕ್ಷರು | ಶ್ರೀ ಎನ್. ತಿಪ್ಪಣ್ಣ, ಮಾಜಿ ಸಭಾಪತಿಗಳು, ಹಿರಿಯ ಉಪಾಧ್ಯಕ್ಷರು | ಶ್ರೀ ಈಶ್ವರ ಖಂಡ್ರೆ, ಶಾಸಕರು ಮತ್ತು ಮಾಜಿ ಸಚಿವರು, ಮಹಾಪ್ರಧಾನ ಕಾರ್ಯದರ್ಶಿ
ಅಖಿಲ ಭಾರತ ವೀರಶೈವ ಮಹಾಸಭಾ (ರಿ.)
ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

# 'ಸಲಹಾ ಸಮಿತಿ ಅನುಮತಿ ನೀಡಿದರೆ ತರಗತಿ ಮತ್ತೆ ಆರಂಭ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ತಾಂತ್ರಿಕ ಸಲಹಾ ಸಮಿತಿ ಅನುಮತಿ ನೀಡಿದರೆ ತರಗತಿಗಳನ್ನು ಮತ್ತೆ ತೆರೆಯಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಗುರುವಾರ ಹೇಳಿದರು.



ಬಿ.ಸಿ. ನಾಗೇಶ್

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ತಾಂತ್ರಿಕ ಸಲಹಾ ಸಮಿತಿ ಶಿಫಾರಸಿನಂತೆ ಕೆಲ ನಗರಗಳಲ್ಲಿ ಶಾಲೆಗಳನ್ನು ಮುಚ್ಚಲಾಗಿದೆ. ಶುಕ್ರವಾರದ ಸಭೆಯಲ್ಲಿ ಸಮಿತಿ ಸಲಹೆಯಂತೆ ನಿರ್ಧಾರ ಕೈಗೊಳ್ಳುತ್ತೇವೆ' ಎಂದರು.

'ಶಿಕ್ಷಣ ಇಲಾಖೆಯ ಅಧಿಕಾರಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸ್ಥಿತಿಗತಿ ಕುರಿತು ಮಾಹಿತಿ ನೀಡಿದ್ದಾರೆ. ಅಂತಿಮವಾಗಿ ಅವರೇ ನಿರ್ಧಾರ ತೆಗೆದುಕೊಳ್ಳಲಿದ್ದಾರೆ' ಎಂದು ಸ್ಪಷ್ಟಪಡಿಸಿದರು.

'ಮಕ್ಕಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಶಾಲೆಗಳನ್ನು ನಡೆಸುವುದೇ ಸೂಕ್ತ. ಶಾಲೆಯಲ್ಲಿ ಕಲಿತರೆ ಹೆಚ್ಚು ಪರಿಣಾಮಕಾರಿ. ಇದು ನನ್ನ ವೈಯಕ್ತಿಕ ಅಭಿಪ್ರಾಯ' ಎಂದೂ ಹೇಳಿದರು.

'ಮಕ್ಕಳಿಗೆ ತೊಂದರೆ ಕೊಟ್ಟು ನಾವು ಶಾಲೆ ಆರಂಭಿಸುವ ಉದ್ದೇಶವಿಲ್ಲ. ಮಕ್ಕಳ ಆರೋಗ್ಯ ಆಧರಿಸಿ ಶಾಲಾ-ಕಾಲೇಜುಗಳನ್ನು ಮುಚ್ಚಿದ್ದೆವು. ಈಗ ತೆರೆಯಲು ಯಾರಿಂದಲೂ ಒತ್ತಡವೂ ಇಲ್ಲ' ಎಂದರು.

'ಪ್ರಸ್ತುತ 1ರಿಂದ 5 ವರ್ಷದೊಳಗಿನ 2,250, 5 ರಿಂದ 10ರ ಒಳಗಿನ 6,762 ವಿದ್ಯಾರ್ಥಿಗಳು, ಪದವಿಪೂರ್ವ ಹಂತದ 166 ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸೋಂಕು ಕಾಣಿಸಿಕೊಂಡಿದೆ' ಎಂದು ಮಾಹಿತಿ ನೀಡಿದರು.

**ಫೆಬ್ರುವರಿಗೆ ಮುಕ್ತಾಯ:** 'ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ಪ್ರಕ್ರಿಯೆಗೆ ಕೆಲವು ದಿನಗಳ ಹಿಂದೆ ತಾಂತ್ರಿಕ ಕಾರಣಗಳಿಂದ ಸ್ವಲ್ಪ ಸಮಸ್ಯೆ ಆಗಿತ್ತು. ಮೂರು ದಿನಗಳ ಹಿಂದೆ ಸರ್ವರ್ ತೊಂದರೆಯಿಂದ ಮುಂದೂಡಲಾಗಿತ್ತು. ಈಗ ಎಲ್ಲ ಪ್ರಕ್ರಿಯೆಗಳು ಸರಿದಾರಿಗೆ ಬಂದಿದೆ. ಫೆಬ್ರುವರಿ ಒಳಗೆ ಕೌನ್ಸೆಲಿಂಗ್ ಪ್ರಕ್ರಿಯೆ ಮುಕ್ತಾಯ ಆಗಲಿದೆ' ಎಂದರು.

## ಕೋವಿಡ್: ಮಾಹಿತಿಗೆ 14 ಮಂದಿ ವಕ್ತಾರರು

**ಬೆಂಗಳೂರು:** ಕೋವಿಡ್‌ಗೆ ಸಂಬಂಧಿಸಿದ ಅಧಿಕೃತ ಮಾಹಿತಿಗಳನ್ನು ಮಾಧ್ಯಮಗಳಿಗೆ ನೀಡಲು ಆರೋಗ್ಯ ಇಲಾಖೆಯು 14 ಮಂದಿ ವೈದ್ಯರನ್ನು ವಕ್ತಾರರನ್ನಾಗಿ ನೇಮಿಸಿದೆ.

ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಂ.ಕೆ.ಸುದರ್ಶನ್, ಕ್ಲಿನಿಕಲ್ ತಜ್ಞರ ಸಮಿತಿ ಅಧ್ಯಕ್ಷ ಡಾ.ಕೆ. ರವಿ, ಸದಸ್ಯರಾದ ಡಾ.ಸಿ. ಎನ್.ಮಂಜುನಾಥ್, ಡಾ.ಸಿ.ನಾಗರಾಜ್, ಡಾ.ಬಸವರಾಜ್, ಡಾ.ಪ್ರದೀಪ್ ರಂಗಪ್ಪ, ತಾಂತ್ರಿಕ ಸಲಹಾ ಸಮಿತಿ ಸದಸ್ಯರಾದ ಡಾ.ವಿ.ರವಿ, ಡಾ.ಬಿ. ಎಲ್.ಶಶಿಭೂಷಣ್, ಡಾ.ಗಿರಿಧರ್ ಬಾಬು, ಡಾ.ಶಿವಾನಂದ, ಡಾ.ಸವಿತಾ ಜಿ., ಶ್ವಾಸಕೋಶ ತಜ್ಞರಾದ ಡಾ. ಸತ್ಯನಾರಾಯಣ ಮೈಸೂರು, ಡಾ. ರವೀಂದ್ರ ಮೆಹ್ತಾ ಹಾಗೂ ಮಕ್ಕಳ ತಜ್ಞ ಡಾ. ವಿಶ್ವನಾಥ್ ಕಾಮೋಜಿ ಅವರು ವಕ್ತಾರರಾಗಿ ನೇಮಕಗೊಂಡಿದ್ದಾರೆ.

## 3ನೇ ಅಲೆಯಲ್ಲಿ ಸಾವಿನ ಪ್ರಮಾಣ ಗಮನಾರ್ಹ ಕಡಿಮೆ

**ನವದೆಹಲಿ (ಪಿಟಿಐ):** ಕೋವಿಡ್-19 ಪಿಡುಗಿನ 2ನೇ ಅಲೆಗೆ ಹೋಲಿಸಿದಾಗ ಮೂರನೇ ಅಲೆ ಸಂದರ್ಭದಲ್ಲಿ ಸಾವಿನ ಪ್ರಮಾಣ ಗಮನಾರ್ಹವಾಗಿ ಕಡಿಮೆ ಇರುವುದು ಕಂಡುಬಂದಿದೆ ಎಂದು ಕೇಂದ್ರ ಸರ್ಕಾರ ಗುರುವಾರ ಹೇಳಿದೆ.

ಸದ್ಯ, ಕೋವಿಡ್ ಪೀಡಿತರಲ್ಲಿ ತೀವ್ರ ಅನಾರೋಗ್ಯ ಕಂಡುಬರುತ್ತಿಲ್ಲ. ಮರಣ ಪ್ರಮಾಣವೂ ಕಡಿಮೆ ಇದೆ. ವ್ಯಾಪಕವಾಗಿ ಕೋವಿಡ್ ಲಸಿಕೆ ನೀಡಿರುವುದೇ ಇದಕ್ಕೆ ಕಾರಣ ಎಂದು ಕೇಂದ್ರ ತಿಳಿಸಿದೆ.

ದೇಶದ ವಯಸ್ಕರ ಪೈಕಿ ಶೇ 94ರಷ್ಟು ಜನರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ. ಶೇ 72ರಷ್ಟು ಜನರಿಗೆ ಎರಡೂ ಡೋಸ್‌ಗಳನ್ನು ನೀಡಲಾಗಿದೆ. 15-18 ವರ್ಷ ವಯೋಮಾನದವರ ಪೈಕಿ ಶೇ 52ರಷ್ಟು ಮಂದಿಗೆ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ.

- 11 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ 50 ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳು
- ಶೇ 5ಕ್ಕಿಂತಲೂ ಅಧಿಕ ಕೋವಿಡ್ ದೃಢ ಪ್ರಮಾಣ ದಾಖಲಾದ ಜಿಲ್ಲೆಗಳ ಸಂಖ್ಯೆ 515

## ಮಹಾರಾಷ್ಟ್ರ: ಇದೇ 24 ರಿಂದ ಭೌತಿಕ ತರಗತಿ ಪುನರಾರಂಭ

ಪ್ರಜಾವಾಣಿ ವಾರ್ತೆ

**ಮುಂಬೈ:** ಮಹಾರಾಷ್ಟ್ರದ ಶಾಲೆಗಳಲ್ಲಿ ಇದೇ 24 ಸೋಮವಾರದಿಂದ ಭೌತಿಕ ತರಗತಿಗಳನ್ನು ಪುನರಾರಂಭಿಸಲು ಸರ್ಕಾರ ನಿರ್ಧರಿಸಿದೆ.

ಕೊರೊನಾ ಪ್ರಕರಣಗಳು ಕಡಿಮೆಯಿರುವ ಪ್ರದೇಶಗಳಲ್ಲಿರುವ ಶಾಲೆಗಳು, 1 ರಿಂದ 12 ನೇ ತರಗತಿ ಹಾಗೂ ಪೂರ್ವ ಪ್ರಾಥಮಿಕ ತರಗತಿಗಳನ್ನು ಸೋಮವಾರದಿಂದ (ಜ.24) ಆರಂಭಿಸಲಿವೆ ಎಂದು ಮಹಾರಾಷ್ಟ್ರದ ಶಾಲಾ ಶಿಕ್ಷಣ ಸಚಿವೆ ಪ್ರೊ. ವರ್ಷಾ ಗಾಯಕ್‌ವಾಡ್ ಅವರು ತಿಳಿಸಿದರು.

**ರಾಜ್ಯ ಕೋವಿಡ್ ಅಂಕಿ-ಅಂಶ**

| | |
|---|---|
| 33,76,953 ▲ | ಒಟ್ಟು ಸೋಂಕಿತರು (32,29,199 ನಿನ್ನೆಯ ವಿವರ) |
| 2,93,231 ▲ | ಸಕ್ರಿಯ ಪ್ರಕರಣಗಳು |
| 30,45,177 ▲ | ಗುಣಮುಖರಾದವರು |
| 38,515 ▲ | ಒಟ್ಟು ಸಾವು |

ದಿನದ ಏರಿಕೆ

| | | |
|---|---|---|
| ಹೊಸ ಪ್ರಕರಣ | 47,754 | ▲ |
| ಗುಣಮುಖ | 22,143 | ▼ |
| ಸಾವು | 29 | ▲ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

## 'ಬಿಜೆಪಿ ನಾಯಕರ ವಿರುದ್ಧ ಕ್ರಮ ತೆಗೆದುಕೊಳ್ಳದಿದ್ದರೆ ಹೋರಾಟ'

**ಬೆಂಗಳೂರು:** 'ಕೋವಿಡ್ ನಿಯಮ ಉಲ್ಲಂಘಿಸಿದ ಎಲ್ಲರ ವಿರುದ್ಧ ಕ್ರಮ ಕೈಗೊಳ್ಳುವ ವಿಷಯದಲ್ಲಿ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿ ಸ್ಪಂದಿಸಿದ್ದಾರೆ. ನಿಯಮ ಉಲ್ಲಂಘಿಸಿರುವ ಎಲ್ಲ ಬಿಜೆಪಿ ನಾಯಕರ ವಿರುದ್ಧ ಕ್ರಮ ಜರುಗಿಸದಿದ್ದರೆ ಅಧಿಕಾರಿಗಳ ವಿರುದ್ಧ ಹೋರಾಟ ಮಾಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಕೇವಲ ನಮ್ಮ ಪಕ್ಷದ ನಾಯಕರ ವಿರುದ್ಧ ಪ್ರಕರಣ ದಾಖಲಿಸಿ, ಆಡಳಿತ ಪಕ್ಷದವರ ವಿರುದ್ಧ ಪ್ರಕರಣ ದಾಖಲಿಸದಿದ್ದರೆ, ಸುಮ್ಮನೆ ಕುಳಿತುಕೊಳ್ಳುವುದಿಲ್ಲ' ಎಂದರು. 'ಕೋವಿಡ್ ನಿಯಮ ವಿರುದ್ಧವಾಗಿ ನಡೆದುಕೊಂಡ ಎಲ್ಲರ ವಿರುದ್ಧ ಪ್ರಕರಣ ದಾಖಲಿಸುವುದು ಅಧಿಕಾರಿಗಳಿಗೆ ಬಿಟ್ಟ ವಿಚಾರ. ಅವರ ನಡೆ ನೋಡಿ, ಅವರ ವಿರುದ್ಧ ಹೇಗೆ ಹೋರಾಟ ಮಾಡಬೇಕೆಂದು ತೀರ್ಮಾನಿಸುತ್ತೇವೆ' ಎಂದರು.

## ಐಸೋಲೇಷನ್ ಸ್ಥಳದಿಂದ ಪರಾರಿ

**ಮಡಿಕೇರಿ:** ನಗರದ ರೆಡ್ಡಿ ಬಿಲ್ಡಿಂಗ್‌ನಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ಮಾಡುತ್ತಿದ್ದ ಜಾರ್ಖಂಡ್ ಮೂಲದ, ಕೊರೊನಾ ಸೋಂಕಿತ 57 ಕಾರ್ಮಿಕರ ಪೈಕಿ ಮೂವರು ಸೋಂಕಿತರು ಹಾಗೂ ಏಳು ಮಂದಿ ಪ್ರಾಥಮಿಕ ಸಂಪರ್ಕಿತರು ಐಸೋಲೇಷನ್ ಸ್ಥಳದಿಂದ ಪರಾರಿಯಾಗಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತಾಲ್ಲೂಕು ಆರೋಗ್ಯಾಧಿಕಾರಿ ಚೇತನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸೋಂಕಿತರ ಮೇಲೆ ಕಣ್ಗಾವಲು ಇಡದ ಕಟ್ಟಡ ಮಾಲೀಕರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು ಎಂದು ತಿಳಿಸಿದರು.

# 67 ವಿದ್ಯಾರ್ಥಿಗಳಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

**ಕಲಬುರಗಿ:** ಕಲಬುರಗಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳ ವಿವಿಧ ಶಾಲೆಗಳ 67 ವಿದ್ಯಾರ್ಥಿಗಳಲ್ಲಿ ಕೋವಿಡ್ ದೃಢಪಟ್ಟಿದೆ.

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಕರಡಕಲ್ಲ ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ವಸತಿ ನಿಲಯದ 14 ವಿದ್ಯಾರ್ಥಿಗಳಿಗೆ ಸೋಂಕು ತಗುಲಿದೆ.

ಮಾನ್ವಿ ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ 17, ಕವಿತಾಳದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರು ಹಾಗೂ ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಬಡದಾಳ ಶಾಲೆಯ 6, ಗೊಬ್ಬುರ ಶಾಲೆಯ 12, ದೇಸಾಯಿ ಕಲ್ಲೂರ ಶಾಲೆಯ 9 ಮಕ್ಕಳಿಗೆ ಕೋವಿಡ್ ದೃಢಪಟ್ಟಿದೆ.

ಬೀದರ್ ಜಿಲ್ಲೆ ಕಮಲನಗರ ತಾಲ್ಲೂಕಿನ ಠಾಣಾಕುಶನೂರು ಗ್ರಾಮದಲ್ಲಿ ಕರ್ನಾಟಕ ಪಬ್ಲಿಕ್ ಬಾಲಕರ ಶಾಲೆ, ಪದವಿಪೂರ್ವ ಕಾಲೇಜು, ಬಾಲಕಿಯರ ಪ್ರೌಢ ಶಾಲೆ ಒಂದೇ ಆವರಣದಲ್ಲಿದ್ದು, ಒಟ್ಟು 12 ಮಕ್ಕಳು ಹಾಗೂ 8ಜನ ಶಿಕ್ಷಕರಿಗೆ ಸೋಂಕು ತಗುಲಿದೆ. ಸೋಂಕಿತರಿಗೆ ಹೋಂ ಕ್ವಾರಂಟೈನ್‌ನಲ್ಲಿ ಇರಲು ಸೂಚಿಸಲಾಗಿದೆ.

**ಅಕ್ಕಮಹಾದೇವಿ ವಿವಿಗೆ ರಜೆ ಘೋಷಣೆ (ವಿಜಯಪುರ):** ಇಲ್ಲಿನ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಅನೇಕ ವಿದ್ಯಾರ್ಥಿನಿಯರಲ್ಲಿ ಸೋಂಕು ದೃಢಪಟ್ಟಿದ್ದು, ಜ. 21ರಿಂದ 27ರ ವರೆಗೆ ರಜೆ ಘೋಷಿಸಲಾಗಿದೆ ಎಂದು ವಿ.ವಿ. ಹೇಳಿಕೆ ತಿಳಿಸಿದೆ.

**ಚನ್ನರಾಯಪಟ್ಟಣ ತಾಲ್ಲೂಕು ಶಾಲೆಗಳಿಗೆ ರಜೆ (ಹಾಸನ):** ಸೋಂಕು ಏರಿಕೆ ಕಾರಣ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಜ. 21ರಿಂದ 26ರವರೆಗೆ 1 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿ ಆರ್.ಗಿರೀಶ್ ರಜೆ ಘೋಷಿಸಿದ್ದಾರೆ. ಬುಧವಾರ 87 ವಿದ್ಯಾರ್ಥಿಗಳಿಗೆ ಸೋಂಕು ಪತ್ತೆಯಾಗಿದೆ.

**ವಸತಿ ಶಾಲೆಯ 40 ವಿದ್ಯಾರ್ಥಿಗಳಿಗೆ ಕೋವಿಡ್ (ಆನಂದಪುರ):** ಸಮೀಪದ ಇರುವಕ್ಕಿಯ ಮೆಟ್ರಿಕ್ ಪೂರ್ವ ಇಂದಿರಾ ವಸತಿಶಾಲೆಯ 40 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ವಸತಿಶಾಲೆಯನ್ನು ಕಂಟೈನ್ಮೆಂಟ್ ಝೋನ್ ಎಂದು ಘೋಷಿಸಲಾಗಿದೆ.

**ಕಾಗೋಡು ತಿಮ್ಮಪ್ಪಗೆ ಸೋಂಕು ದೃಢ (ಸಾಗರ ):** ಸಾಗರದ ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರಿಗೆ ಕೋವಿಡ್ ಪಾಸಿಟಿವ್ ಇರುವುದು ಗುರುವಾರ ದೃಢಪಟ್ಟಿದೆ ಎಂದು ಕಾಗೋಡು ಪುತ್ರಿ ಕೆಪಿಸಿಸಿ ಕಾರ್ಯದರ್ಶಿ ಡಾ.ರಾಜನಂದಿನಿ ಕಾಗೋಡು ತಿಳಿಸಿದ್ದಾರೆ.

**ಯೋಗಾಭ್ಯಾಸ** ತಮಿಳುನಾಡಿನ ಕನ್ಯಾಕುಮಾರಿಯ ಕೋವಿಡ್ ಆರೈಕೆ ಕೇಂದ್ರವೊಂದರಲ್ಲಿ ರೋಗಿಗಳು ಗುರುವಾರ ಯೋಗಾಭ್ಯಾಸ ನಡೆಸಿದರು –ಪಿಟಿಐ ಚಿತ್ರ

## ಪರಿಹಾರ: ನೆರವಿಗೆ ಕಾನೂನು ಸೇವಾ ಪ್ರಾಧಿಕಾರಗಳಿಗೆ ಸೂಚನೆ

**ನವದೆಹಲಿ (ಪಿಟಿಐ):** ಕೋವಿಡ್-19 ನಿಂದಾಗಿ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ತಲುಪಿಸುವ ಕಾರ್ಯದಲ್ಲಿ ನೆರವಾಗಲು ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳಿಗೆ ಸುಪ್ರೀಂಕೋರ್ಟ್ ಗುರುವಾರ ಸೂಚಿಸಿದೆ.

ಕೋವಿಡ್‌ನಿಂದ ಮೃತಪಟ್ಟವರು ಹಾಗೂ ಅವರ ಕುಟುಂಬಗಳಿಗೆ ವಿತರಿಸಲಾದ ಪರಿಹಾರ ಕುರಿತ ವಿವರಗಳನ್ನು ಕಾನೂನು ಸೇವಾ ಪ್ರಾಧಿಕಾರಗಳೊಂದಿಗೆ ತಕ್ಷಣವೇ ಹಂಚಿಕೊಳ್ಳುವಂತೆ ಎಲ್ಲ ರಾಜ್ಯಗಳಿಗೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಹಾಗೂ ಸಂಜೀವ್ ಖನ್ನಾ ಅವರಿದ್ದ ನ್ಯಾಯಪೀಠ ಈ ಸಂಬಂಧ ಆದೇಶ ಹೊರಡಿಸಿತು.

ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಒಂಬುಡ್ಸ್‌ಮನ್ ಹಾಗೂ ಸಂತ್ರಸ್ತ ಕುಟುಂಬಗಳಿಗೆ ನೆರವು ನೀಡುವವರಾಗಿ ನಿರ್ವಹಿಸಬೇಕು ಎಂದೂ ನ್ಯಾಯಪೀಠ ಆದೇಶಿಸಿತು.

## ಮಾದಕವಸ್ತು ತುಂಬಿದ ಕಂಟೈನರ್ ವಶ

ಪ್ರಜಾವಾಣಿ ವಾರ್ತೆ

**ಅಹಮದಾಬಾದ್:** ಗುಜರಾತ್‌ನ ಕಛ್ ಜಿಲ್ಲೆಯ ಮುಂದ್ರಾ ಬಂದರಿನಿಂದ ಮಾದಕ ವಸ್ತು ತುಂಬಿದ ಕಂಟೈನರ್ ವಶಪಡಿಸಿಕೊಳ್ಳಲಾಗಿದೆ ಎಂದು ದೆಹಲಿಯ ಮಾದಕವಸ್ತು ನಿಗ್ರಹ ಸಂಸ್ಥೆ (ಎನ್‌ಸಿಬಿ) ಹೇಳಿದೆ. ಪಂಜಾಬ್‌ಗೆ ಕಳ್ಳಸಾಗಣೆ ಮಾಡಲು ಕೆನಡಾದಿಂದ ಈ ಮಾದಕವಸ್ತುವನ್ನು ತರಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಪಂಜಾಬ್‌ನ ಕೈಗಾರಿಕಾ ಸಂಸ್ಥೆಯೊಂದು ಕೆನಡಾದ ಒಂಟಾರಿಯೊದ ಅಮರ್‌ಜೀತ್ ಎಂಬಾತನಿಂದ ಮಾದಕವಸ್ತುವನ್ನು ಆಮದು ಮಾಡಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಇದೇ ಬಂದರಿನಿಂದ ರೆವಿನ್ಯೂ ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) 3,000 ಕೆ.ಜಿಯಷ್ಟು ಹೆರಾಯಿನ್ ಮಾದಕವಸ್ತುವನ್ನು ವಶಪಡಿಸಿಕೊಂಡಿತ್ತು.

# ಕೋವಿಶೀಲ್ಡ್, ಕೋವ್ಯಾಕ್ಸಿನ್ ಮಾರುಕಟ್ಟೆಗೆ: ಸಮಿತಿ ಶಿಫಾರಸು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಗಳನ್ನು ಸಾಮಾನ್ಯ ಮಾರುಕಟ್ಟೆಯಲ್ಲಿ ಒದಗಿಸಲು ಕೇಂದ್ರದ ಔಷಧ ನಿಯಂತ್ರಣ ಮಂಡಳಿಯ ತಜ್ಞರ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಫಾರ್ಮಾ ಕಂಪನಿಗಳಾದ ಸೀರಂ ಇನ್ಸಿಟ್ಯೂಟ್ ಆಫ್ ಇಂಡಿಯಾ ಮತ್ತು ಭಾರತ್ ಬಯೋಟೆಕ್, ಈ ಕುರಿತು ಭಾರತೀಯ ಔಷಧ ನಿಯಂತ್ರಣ ಸಮಿತಿಗೆ ಅರ್ಜಿ ಸಲ್ಲಿಸಿದ್ದವು.

ಎರಡೂ ಲಸಿಕೆಗಳು ಈಗ ತುರ್ತು ಬಳಕೆಯ ಪಟ್ಟಿಯಲ್ಲಿವೆ. ಅದರ ಬದಲು ಸಾಮಾನ್ಯ ಮಾರುಕಟ್ಟೆಯಲ್ಲೂ ಅವು ದೊರೆಯುವಂತಾಗಬೇಕು ಎಂದು ಕಂಪನಿಗಳು ಕೋರಿಕೊಂಡಿದ್ದವು.

ಎರಡೂ ಕಂಪನಿಗಳು ಅನುಮತಿ ಕೋರಿದ್ದ ಬಳಿಕ, ಡಿಸಿಜಿಐ ಮತ್ತಷ್ಟು ಹೆಚ್ಚಿನ ದಾಖಲೆ ಮತ್ತು ದತ್ತಾಂಶ ಕಳುಹಿಸಿಕೊಡುವಂತೆ ಹೇಳಿತ್ತು. ಅದಾದ ನಂತರ ಸೀರಂ ಮತ್ತು ಭಾರತ್ ಬಯೋಟೆಕ್ ಕಂಪನಿಗಳು ದಾಖಲೆ ಸಲ್ಲಿಸಿದ್ದವು. ಅವುಗಳನ್ನು ಪರಿಶೀಲಿಸಿ, ಸಮಿತಿ ಸರ್ಕಾರಕ್ಕೆ ಶಿಫಾರಸು ಸಲ್ಲಿಸಿದೆ.

ಕೋವಿಡ್ ವಿರುದ್ಧ ದೇಶದಲ್ಲಿ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಗಳನ್ನು ಆದ್ಯತೆಯ ಮೇರೆಗೆ ನೀಡಲಾಗುತ್ತಿದೆ. ಅದರ ಜತೆಗೆ ವಿದೇಶಿ ಕಂಪನಿಗಳ ಲಸಿಕೆ ಕೂಡ ಲಭ್ಯವಿದೆ.

# 2020ರ ದೆಹಲಿ ಗಲಭೆ ಪ್ರಕರಣ ದಿನೇಶ್ ಯಾದವ್‌ಗೆ 5 ವರ್ಷ ಜೈಲು

**ನವದೆಹಲಿ(ಪಿಟಿಐ):** ಫೆಬ್ರುವರಿ 2020ರ ಈಶಾನ್ಯ ದೆಹಲಿಯ ಗಲಭೆಗೆ ಸಂಬಂಧಿಸಿದಂತೆ ಮೊದಲ ಅಪರಾಧಿ ದಿನೇಶ್ ಯಾದವ್‌ಗೆ ದೆಹಲಿ ನ್ಯಾಯಾಲಯವು ಗುರುವಾರ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಮನೆಗೆ ಬೆಂಕಿ ಹಚ್ಚಿದ ಗಲಭೆಯ ಗುಂಪಿನ ಭಾಗವಾಗಿದ್ದಕ್ಕಾಗಿ ದಿನೇಶ್ ಅವರನ್ನು ದೋಷಿ ಎಂದು ಕಳೆದ ತಿಂಗಳು ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ವೀರೇಂದ್ರ ಭಟ್ ಅವರು ತೀರ್ಪು ನೀಡಿದ್ದರು.

ಇದು ಪೌರತ್ವ (ತಿದ್ದುಪಡಿ) ಕಾಯಿದೆಯ ಗಲಭೆ ಪ್ರಕರಣಗಳಲ್ಲಿ ಆದ ಮೊದಲ ಶಿಕ್ಷೆಯಾಗಿದೆ.

ಇದರ ಜೊತೆಗೆ ₹ 12,000 ದಂಡವನ್ನು ಪಾವತಿಸುವಂತೆಯೂ ಯಾದವ್‌ಗೆ ಸೂಚಿಸಲಾಗಿದೆ ಎಂದು ವಿಚಾರಣೆ ವೇಳೆ ಅವರನ್ನು ಪ್ರತಿನಿಧಿಸಿದ್ದ ವಕೀಲ ಶಿಖಾ ಗಾರ್ಗ್ ಹೇಳಿದ್ದಾರೆ. ಶಿಕ್ಷೆಯ ವಿವರವಾದ ಆದೇಶಕ್ಕಾಗಿ ಕಾಯಲಾಗುತ್ತಿದೆ ಎಂದಿದ್ದಾರೆ.

ಪ್ರಾಸಿಕ್ಯೂಷನ್ ಪ್ರಕಾರ, ಯಾದವ್ 'ಗಲಭೆಯ ಗುಂಪಿನ ಸಕ್ರಿಯ ಸದಸ್ಯ'ಮತ್ತು ಫೆಬ್ರವರಿ 25 ರಂದು ರಾತ್ರಿ ಮನೋರಿ ಎಂಬ 73 ವರ್ಷದ ಮಹಿಳೆಯ ಮನೆಯನ್ನು ಧ್ವಂಸಗೊಳಿಸಿ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಭಾಗವಹಿಸಿದ್ದರು ಎಂದು ತಿಳಿದು ಬಂದಿದೆ.

ಸುಮಾರು 150-200 ಗಲಭೆಕೋರರ ಗುಂಪೊಂದು ನನ್ನ ಮನೆಯ ಮೇಲೆ ದಾಳಿ ಮಾಡಿ ಮನೆಯ ಎಲ್ಲಾ ವಸ್ತುಗಳು ಮತ್ತು ಎಮ್ಮೆಯನ್ನು ಲೂಟಿ ಮಾಡಿದೆ ಎಂದು ಮನೋರಿ ಆರೋಪಿಸಿದ್ದಾರೆ.

25 ವರ್ಷದ ಯಾದವ್ ಅವರನ್ನು ಜೂನ್ 8, 2020 ರಂದು ಬಂಧಿಸಲಾಗಿತ್ತು. ನ್ಯಾಯಾಲಯವು ಆಗಸ್ಟ್ 3, 2021 ರಂದು ಅವರ ವಿರುದ್ಧ ಆರೋಪಗಳನ್ನು ಪಟ್ಟಿ ಮಾಡಿತ್ತು.

ಫೆಬ್ರುವರಿ 2020 ರಲ್ಲಿ ಈಶಾನ್ಯ ದೆಹಲಿಯಲ್ಲಿ ಪೌರತ್ವ (ತಿದ್ದುಪಡಿ) ಕಾಯಿದೆಯ ಬೆಂಬಲಿಗರು ಮತ್ತು ವಿರೋಧಿ ಪ್ರತಿಭಟನಾಕಾರರ ನಡುವಿನ ಹಿಂಸಾಚಾರವು ಕೋಮು ಘರ್ಷಣೆಯ ಸ್ವರೂಪ ಪಡೆದುಕೊಂಡಿತ್ತು. ಗಲಭೆಯಲ್ಲಿಕನಿಷ್ಠ 53 ಜನರು ಸಾವನ್ನಪ್ಪಿದ್ದರು ಮತ್ತು 700 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಪ್ರಜಾವಾಣಿ
**ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ಉದ್ಯೋಗಾವಕಾಶ**

**General**

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

**Part-Time Jobs**

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

**Wanted**

ಬೆಂಗಳೂರಿನ ಕಂಪನಿಗೆ ಡ್ರೈವರ್ ಮತ್ತು ಆಫೀಸ್ ಕೆಲಸಕ್ಕೆ ಜನ ಬೇಕಾಗಿದ್ದಾರೆ. ವಸತಿ ಉಚಿತ. ಸಂಪರ್ಕಿಸಿ: 9886170123/ 7349251309.

**Marketing & Sales**

ಹೆಚ್.ಎಸ್.ಆರ್ ಲೇಔಟ್ ನಲ್ಲಿರುವ ಸುಪ್ರಸಿದ್ಧ ಆಸ್ಪತ್ರೆಗೆ ಏರಿಯಾ ಮ್ಯಾನೇಜರ್ ಮತ್ತು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಹುದ್ದೆಗೆ ದ್ವಿ ಚಕ್ರ ವಾಹನ ಉಳ್ಳ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಒಳ್ಳೆಯ ವೇತನ ಹಾಗೂ Incentive ನೀಡಲಾಗುವುದು. ಸಂಪರ್ಕಿಸಿ : 7823921202, 9942910318, 8939479777. Mail Id: hr@iswarya.in zm2@iswarya.in

**ಭವಿಷ್ಯ**

**Astrology**

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ:9591580089.

ನಿಮ್ಮ ಏನೇ ಸಮಸ್ಯೆ ಇರಲಿ ಎಷ್ಟೇ ಕಠಿಣವಾಗಿರಲಿಗುಪ್ತ ಸಮಸ್ಯೆ ಇರಲಿ 1 ದಿನದಲ್ಲಿ ಕೇರಳದಿಂದ ಪರಿಹಾರ ಮಾಡಿಕೊಡಲಾಗುತ್ತದೆ 9148890039 ಚಂದನ್ ಶರ್ಮಾ.

★॥ಶ್ರೀಶಕ್ತಿ ಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್ ಕಚೇರಿ, ಸಾಲಬಾಧೆ, ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9591588881

★॥ನಂ.1 ವಶೀಕರಣ ಸ್ಪೆಷಲಿಸ್ಟ್॥★ ಉದ್ಯೋಗ, ವ್ಯಾಪಾರ,ಸಾಲದಭಾದೆ, ಸ್ತ್ರೀವಶೀಕರಣ, ಗಂಡಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 1100 ರೂಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್.ಮಂಜುನಾಥಭಟ್. 9008968867

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ಮತ್ತು ವಾಸ್ತುಕೇಂದ್ರ, ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್ ಗುರು ಶ್ರೀದೇವನಂದನ್ ರವರಿಂದ ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ ನೆಮ್ಮದಿಗಾಗಿ,ಸಿರಿಸಂಪತ್ತು,ಸ್ತ್ರೀ ಪುರುಷ,ದಾಂಪತ್ಯ,ಮದುವೆ, ಸಂತಾನ,ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಛಾ ಅತಿಘೋರ,ನಿಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ ಆಕರ್ಷಣ ಸಂಮೋಹನ,ದುಷ್ಟಶಕ್ತಿಗಳು ಉಚ್ಚಾಟನೆ ಮತ್ತು ಶತ್ರು ಸಂಬಂಧಿತ ಮಾಟ,ದೃಷ್ಟಿಶಾಪಗಳಿಗೆ ಇಲ್ಲೇ ಇಂದೇ_ಪರಿಹಾರಕ್ಕೆ ಸಂಪರ್ಕಿಸಿರಿ: 8217437023 ನಿಮ್ಮ ಇಚ್ಛೆಗೆ 24ಘಂಟೆಗಳು ಮಾತ್ರ.

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

**ರಿಯಲ್ ಎಸ್ಟೇಟ್ ಸೆಲ್ಲಿಂಗ್**

**Mysore**

GOVIANU LUXURIA, High-end Luxury Flats in Mysore, Zoo Road, near Mysore Mall, Rera-003588, www.govianu.com. 8103990990

**ಪ್ರವಾಸ**

**Travel**

10.02.2022/ 10.03.2022- 11/15 ದಿನಗಳು ಕಾಶಿಯತ್ರ, ದೆಹಲಿ, ಆಗ್ರ, ಅಲಹಾಬದ್, ಗಯಾ, ಅಯೋದ್ಯ, ಹರಿದ್ವರ, ಇತ್ಯಾದಿ.ಜನವರಿ, ಪೆಬ್ರವರಿ, ಮಾರ್ಚನಲ್ಲಿ ಅಂಡಮಾನ್ ಹವಳದ್ವೀಪ Royal Package- 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

ಶೇ.50% ಕಾಶಿ, ಗಯಾ, ಅಲಹಾಬಾದ್ 7ದಿನ ರೂ. 12,499.ರಿಯಾಯಿತಿ ದರದಲ್ಲಿ ರೂ.6,499 ಶ್ರೀ ವಾಸವಿ ಟೂರ್ಸ & ಟ್ರಾವೆಲ್ಸ್ (ರಿ) 9343779464, 8951221582

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

| Per word | Ordinary | Bold | Ordinary Semi Display | Bold Semi Display |
|---|---|---|---|---|
| | 60 | 85 | 70 | 115 |

| CD Per Sqcm | Single Col | Double Col | Multi Col |
|---|---|---|---|
| | 430 | 450 | 475 |

SPECIAL OFFER

| | | | | | |
|---|---|---|---|---|---|
| PAY | 2 | And | GET | 1 | Free |
| PAY | 3 | And | GET | 2 | Free |
| PAY | 5 | And | GET | 5 | Free |

condition apply*
For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

## ಸಂಕ್ಷಿಪ್ತ ಸುದ್ದಿ

### ಲೈಬೀರಿಯಾದಲ್ಲಿ ಕಾಲ್ತುಳಿತ: 29 ಸಾವು

**ಮೊನ್ರೋವಿಯಾ (ಎಪಿ):** ಲೈಬೀರಿಯಾದ ರಾಜಧಾನಿಯಾದ ಇಲ್ಲಿ ಕ್ರೈಸ್ತ ಧಾರ್ಮಿಕ ಸಮಾರಂಭವೊಂದರಲ್ಲಿ ಬುಧವಾರ ರಾತ್ರಿ ಕಾಲ್ತುಳಿತ ಸಂಭವಿಸಿ 11 ಮಂದಿ ಮಕ್ಕಳು, ಒಬ್ಬರು ಗರ್ಭಿಣಿ ಸಹಿತ 29 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಚಾಕು, ಚೂರಿ ಹಿಡಿದಿದ್ದ ಕೊಲೆಗಡುಕರ ಗುಂಪೊಂದು ದಾಳಿ ನಡೆಸಿದ್ದರಿಂದ ಜನ ಭಯಗೊಂಡು ಚೆಲ್ಲಾಪಿಲ್ಲಿಯಾಗಿ ಓಡಿದಾಗ ಕಾಲ್ತುಳಿತ ಸಂಭವಿಸಿತು. ಘಟನೆಯ ಸಂಬಂಧ ಒಬ್ಬನನ್ನು ಬಂಧಿಸಲಾಗಿದೆ.

### 'ಬ್ರಹ್ಮೋಸ್' ಕ್ಷಿಪಣಿ ಪರೀಕ್ಷೆ ಯಶಸ್ವಿ

**ಬಾಲಸೋರ್, ಒಡಿಶಾ (ಪಿಟಿಐ):** ಸ್ವದೇಶಿ ನಿರ್ಮಿತ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿ 'ಬ್ರಹ್ಮೋಸ್'ನ ಪರೀಕ್ಷಾರ್ಥ ಪ್ರಯೋಗ ಗುರುವಾರ ಯಶಸ್ವಿಯಾಗಿ ನಡೆಯಿತು.

'ಒಡಿಶಾ ಕರಾವಳಿಯ ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ (ಐಟಿಆರ್) ಈ ಪರೀಕ್ಷೆ ನಡೆಸಲಾಯಿತು' ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮೂಲಗಳು ತಿಳಿಸಿವೆ.

'ನಿಯಂತ್ರಣ ವ್ಯವಸ್ಥೆಯ ಸೇರಿದಂತೆ ಹೊಸ ತಂತ್ರಜ್ಞಾನಗಳನ್ನು ಈ ಕ್ಷಿಪಣಿಯಲ್ಲಿ ಅಳವಡಿಸಲಾಗಿದೆ. ಕ್ಷಿಪಣಿ ಪರೀಕ್ಷೆಗೆ ಸಂಬಂಧಿಸಿದ ದತ್ತಾಂಶಗಳ ವಿಶ್ಲೇಷಣಾ ಕಾರ್ಯ ನಡೆಯುತ್ತಿದೆ' ಎಂದು ಇದೇ ಮೂಲಗಳು ಹೇಳಿವೆ.

### ಟೊಂಗಾ ವಿಮಾನ ನಿಲ್ದಾಣದ ಬೂದಿ ತೆರವು

**ವೆಲ್ಲಿಂಗ್ಟನ್ (ಎಪಿ):** ಪೆಸಿಫಿಕ್ ಸಮುದ್ರದಲ್ಲಿ ಜ್ವಾಲಾಮುಖಿ ಸ್ಫೋಟಿಸಿ ಟೊಂಗಾ ದ್ವೀಪದ ಫುಅಅಮೊಟೊ ಅಂತರರಾಷ್ಟ್ರೀಯ ವಿಮಾನನಿಲ್ದಾಣದ ರನ್‌ವೇಯಲ್ಲಿ ತುಂಬಿದ್ದ ಬೂದಿಯನ್ನು ಗುರುವಾರ ತೆರವುಗೊಳಿಸಲಾಗಿದ್ದು, ನ್ಯೂಜಿಲೆಂಡ್ ಕಳುಹಿಸಿಕೊಟ್ಟ ಪರಿಹಾರ ಸಾಮಗ್ರಿ ಹೊತ್ತು ವಿಮಾನ ಅಲ್ಲಿ ಇಳಿದಿದೆ.

ಅರುಣಾಚಲ ಪ್ರದೇಶದ ಮಿರಾಮ್ ಬಗ್ಗೆ ಮಾಹಿತಿ ಇಲ್ಲ ಎಂದ ಚೀನಾ

# ಯುವಕನ ಪತ್ತೆಗೆ ಪಿಎಲ್‌ಎ ನೆರವು ಕೋರಿದ ಸೇನೆ

**ನವದೆಹಲಿ/ಬೀಜಿಂಗ್ (ಪಿಟಿಐ):** ಕಾಣೆಯಾಗಿರುವ, ಅರುಣಾಚಲ ಪ್ರದೇಶದ ಯುವಕ ಮಿರಾಮ್ ತರೋನ್‌ನನ್ನು ಚೀನಾಕ್ಕೆ ಸೇರಿದ ಪ್ರದೇಶದಲ್ಲಿ ಪತ್ತೆ ಮಾಡಲು ಭಾರತೀಯ ಸೇನೆಯು ಪಿಎಲ್‌ಎ ನೆರವು ಕೇಳಿದೆ.

'ಉಭಯ ದೇಶಗಳು ಅನುಸರಿಸುತ್ತಿರುವ ಸ್ಥಾಪಿತ ಶಿಷ್ಟಾಚಾರದ ಪ್ರಕಾರ ಯುವಕನನ್ನು ವಾಪಸು ತರಲು ಪ್ರಯತ್ನಿಸಲಾಗುತ್ತಿದೆ' ಎಂದು ರಕ್ಷಣಾ ಇಲಾಖೆ ಮೂಲಗಳು ಗುರುವಾರ ಹೇಳಿವೆ.

ಮಿರಾಮ್ ಅಪಹರಣಕ್ಕೆ ಒಳಗಾಗಿದ್ದಾನೆ ಎನ್ನಲಾದ ಮಾಹಿತಿ ಲಭಿಸುತ್ತಿದ್ದಂತೆಯೇ, ಭಾರತೀಯ ಸೇನೆಯು ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯನ್ನು(ಪಿಎಲ್‌ಎ) ಸಂಪರ್ಕಿಸಿತು. ಗಿಡಮೂಲಿಕೆ ಸಂಗ್ರಹಿಸಲು ಹಾಗೂ ಬೇಟೆಯಾಡಲು ತೆರಳಿದ್ದ ವ್ಯಕ್ತಿಯೊಬ್ಬ ದಾರಿ ತಪ್ಪಿಸಿಕೊಂಡಿದ್ದು, ನಾಪತ್ತೆಯಾಗಿದ್ದಾನೆ ಎಂಬುದಾಗಿ ಪಿಎಲ್‌ಎಗೆ ಮಾಹಿತಿ ನೀಡಲಾಯಿತು' ಎಂದು ಇಲಾಖೆ ಮೂಲಗಳು ಹೇಳಿವೆ.

ಆದರೆ ಯುವಕನನ್ನು ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಸಿಬ್ಬಂದಿ ಅಪಹರಿಸಿದ ಬಗ್ಗೆ ತನಗೆ ಯಾವುದೇ ಮಾಹಿತಿಯೂ ಇಲ್ಲ ಎಂದು ಚೀನಾದ ವಿದೇಶಾಂಗ ಸಚಿವಾಲಯ ತಿಳಿಸಿದೆ.

'ಗಡಿ ಭಾಗದಲ್ಲಿ ಪಿಎಲ್‌ಎ ನಿಯಂತ್ರಣ ಸಾಧಿಸಿದ್ದು, ಅಕ್ರಮವಾಗಿ ಚೀನಾ ನೆಲದೊಳಗೆ ಪ್ರವೇಶಿಸುವುದು ಮತ್ತು ಹೊರ ಹೋಗುವ ಚಟುವಟಿಕೆಗಳನ್ನು ಹತ್ತಿಕ್ಕುತ್ತಿದೆ' ಎಂದು ಅದು ಹೇಳಿದೆ.

**ಟ್ವಿಟರ್‌ನಲ್ಲಿ ಮನವಿ:** 'ಸಿಯಾಂಗ್ ಜಿಲ್ಲೆಯ ಝಿಡೋ ಗ್ರಾಮದ ನಿವಾಸಿ ಮಿರಾಮ್ ತರೋನ್ ತನ್ನ ಸ್ನೇಹಿತನೊಂದಿಗೆ ಮಂಗಳವಾರ ಸಂಜೆ ಸುಮಾರು 6.30ಕ್ಕೆ ಬಿಶಿಂಗ್ ಗ್ರಾಮದ ಬಳಿ ಬೇಟೆಯಾಡಲು ಹೋಗಿದ್ದ ವೇಳೆ ಆತನನ್ನು ಪಿಎಲ್‌ಎ ಅಪಹರಿಸಿದೆ. ಬಾಲಕನನ್ನು ರಕ್ಷಿಸಿ, ವಾಪಸು ಕರೆತರಲು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕ್ರಮಕೈಗೊಳ್ಳಬೇಕು' ಎಂದು ಬಿಜೆಪಿ ಸಂಸದ ತಾಪಿರ್ ಗಾವೊ ಅವರು ಟ್ವಿಟರ್‌ನಲ್ಲಿ ಬುಧವಾರ ಮನವಿ ಮಾಡಿದ್ದರು.

ಕಾಂಗ್ರೆಸ್ ಶಾಸಕ ನಿನಾಂಗ್ ಎರಿಂಗ್ ಸಹ ಟ್ವೀಟ್ ಮಾಡಿ, 'ಮಿರಾಮ್‌ನನ್ನು ಸುರಕ್ಷಿತವಾಗಿ ವಾಪಸು ಕರೆತರಲು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸಹಾಯ ಮಾಡಬೇಕು. ಜತೆಗೆ, ಚೀನಾದ ನುಸುಳುಕೋರರ ಬಗ್ಗೆ ಪರಿಶೀಲನೆ ನಡೆಸಬೇಕು' ಎಂದು ಕೋರಿದ್ದರು.

'ಮಿರಾಮ್‌ನೊಂದಿಗಿದ್ದ ಜಾನಿ ಯಾಯಿಂಗ್ ತಪ್ಪಿಸಿಕೊಂಡು ಬಂದು, ಗ್ರಾಮಸ್ಥರಿಗೆ ಮಾಹಿತಿ ನೀಡಿದ್ದಾನೆ' ಎಂದು ಮೂಲಗಳು ಹೇಳಿವೆ.

### ಪ್ರಧಾನಿ ವಿರುದ್ಧ ರಾಹುಲ್ ವಾಗ್ದಾಳಿ

ಯುವಕನನ್ನು ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ(ಪಿಎಲ್‌ಎ) ಅಪಹರಿಸಿದೆ ಎನ್ನಲಾದ ವಿಷಯವಾಗಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಗುರುವಾರ ವಾಗ್ದಾಳಿ ನಡೆಸಿದ್ದಾರೆ.

'ಈ ಪ್ರಕರಣ ಕುರಿತು ಪ್ರಧಾನಿ ಮೌನವಾಗಿದ್ದಾರೆ. ತನಗೆ ಯಾರ ಬಗ್ಗೆಯೂ ಕಾಳಜಿ ಇಲ್ಲ ಎಂಬುದನ್ನು ಅವರ ಈ ಮೌನವೇ ಹೇಳುತ್ತದೆ' ಎಂದು ಟೀಕಿಸಿದ್ದಾರೆ.

'ಅಪಹರಣಕ್ಕೆ ಒಳಗಾಗಿರುವ ಯುವಕನ ಕುಟುಂಬದೊಂದಿಗೆ ನಾನು ನಿಲ್ಲುತ್ತೇನೆ. ಆತ ಸುರಕ್ಷಿತವಾಗಿ ವಾಪಸು ಬರುವ ಬಗ್ಗೆ ಭರವಸೆ ಇದೆ' ಎಂದು ಹೇಳಿದ್ದಾರೆ.

'ಗಣರಾಜ್ಯೋತ್ಸವಕ್ಕೆ ಕೆಲವೇ ದಿನಗಳು ಬಾಕಿ ಇರುವಾಗಲೇ, ಭಾರತದ ಯುವಕನನ್ನು ಚೀನಾ ಅಪಹರಿಸಿದೆ. ಈ ವಿಷಯಕ್ಕೆ ಸಂಬಂಧಿಸಿ ಪ್ರಧಾನಿ ಮೌನವಾಗಿದ್ದಾರೆ. ಪುಕ್ಕಲುತನದ ಮೌನವೇ ಈ ವಿದ್ಯಮಾನ ಕುರಿತ ಅವರ ಹೇಳಿಕೆಯಾಗಿದೆ' ಎಂದು ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

'ಭಾರತದ ಗಡಿ ದಾಟಿ ಬಂದು, ನಾಗರಿಕನೊಬ್ಬನನ್ನು ಅಪಹರಿಸಲು ಚೀನಾಕ್ಕೆ ಧೈರ್ಯ ಹೇಗೆ ಬಂತು' ಎಂದು ಕಾಂಗ್ರೆಸ್‌ನ ಮುಖ್ಯವಕ್ತಾರ ರಣದೀಪ್ ಸುರ್ಜೇವಾಲಾ ಅವರು ಪ್ರಧಾನಿಯನ್ನು ಪ್ರಶ್ನಿಸಿದ್ದಾರೆ.

ಗಣರಾಜ್ಯೋತ್ಸವಕ್ಕೆ ಸಿದ್ಧತೆ

ಗಣರಾಜ್ಯೋತ್ಸವದ ಅಂಗವಾಗಿ ಟೈಲರ್ ಒಬ್ಬರು ಕೋಲ್ಕತ್ತದಲ್ಲಿ ಗುರುವಾರ ರಾಷ್ಟ್ರ ಧ್ವಜ ಸಿದ್ಧಪಡಿಸುವುದರಲ್ಲಿ ನಿರತರಾಗಿದ್ದರು -ಪಿಟಿಐ ಚಿತ್ರ

# 'ಉಯಿಲು ಮಾಡದೇ ಮಹಿಳೆ ಮೃತಪಟ್ಟರೆ ಮೂಲ ಉತ್ತರಾಧಿಕಾರಿಗಳಿಗೆ ಆಸ್ತಿ'

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮಕ್ಕಳಿಲ್ಲದ ಹಾಗೂ ಉಯಿಲು ಬರೆಯದ ಹಿಂದೂ ಮಹಿಳೆ ಮರಣ ಹೊಂದಿದಾಗ, ಆಕೆ ಹೊಂದಿದ್ದ ಪೂರ್ವಾರ್ಜಿತ ಆಸ್ತಿ ಪಾಲಕರ ಅಥವಾ ಪತಿಯ ಉತ್ತರಾಧಿಕಾರಿಗಳಿಗೆ ಸೇರುತ್ತದೆ ಎಂದು ಸುಪ್ರೀಂಕೋರ್ಟ್ ಗುರುವಾರ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಹಾಗೂ ಕೃಷ್ಣ ಮುರಾರಿ ಅವರಿದ್ದ ನ್ಯಾಯಪೀಠ ಈ ತೀರ್ಪು ನೀಡಿದ್ದು, ಹಿಂದೂ ಉತ್ತರಾಧಿಕಾರ ಕಾಯ್ದೆಯಲ್ಲಿನ ನಿಬಂಧನೆಗಳನ್ನು ವಿವರಿಸಿದೆ.

'ಮಕ್ಕಳು ಇಲ್ಲದ ಹಾಗೂ ಯಾವುದೇ ಉಯಿಲು ಮಾಡಿರದ ಹಿಂದೂ ಮಹಿಳೆ ಮೃತಪಟ್ಟಾಗ, ತಂದೆ ಅಥವಾ ತಾಯಿಯಿಂದ ಆಕೆ ಪಡೆದಿದ್ದ ಆಸ್ತಿ ಪಾಲಕರ ಉತ್ತರಾಧಿಕಾರಿಗಳಿಗೇ ಸೇರುತ್ತದೆ. ಒಂದು ವೇಳೆ, ಪತಿ ಅಥವಾ ಮಾವನಿಂದ ಆಸ್ತಿಯನ್ನು ಪಡೆದಿದ್ದರೆ, ಅಂಥ ಸ್ವತ್ತು ಪತಿಯ ಉತ್ತರಾಧಿಕಾರಿಗಳಿಗೆ ಹೋಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಆಸ್ತಿಹಕ್ಕುಗಳಿಗೆ ಸಂಬಂಧಿಸಿ ಪುರುಷ ಹಾಗೂ ಮಹಿಳೆಯರ ಮಧ್ಯೆ ಸಮಾನತೆ ಇರಬೇಕು ಎಂಬುದೇ ಈ ಕಾಯ್ದೆಯ ಮುಖ್ಯ ಉದ್ದೇಶ. ಪೂರ್ವಾರ್ಜಿತ ಆಸ್ತಿ ಮೇಲೆ ಮಹಿಳೆಯೂ ಸಂಪೂರ್ಣ ಹಕ್ಕು ಹೊಂದಿದ್ದಾಳೆ ಎಂಬುದನ್ನು ಈ ಕಾಯ್ದೆ ಸಾರುತ್ತದೆ ಎಂದು ನ್ಯಾಯಪೀಠ ಹೇಳಿದೆ.

ಆಸ್ತಿ ಹಕ್ಕುಗಳಿಗೆ ಸಂಬಂಧಿಸಿ ಅರುಣಾಚಲಂ ಗೌಂಡರ್ ಎಂಬುವವರ ಉತ್ತರಾಧಿಕಾರಿಗಳು ಮೇಲ್ಮನವಿ ಸಲ್ಲಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣಾ ನ್ಯಾಯಾಲಯ ಹಾಗೂ ಮದ್ರಾಸ್ ಹೈಕೋರ್ಟ್ ನೀಡಿದ್ದ ತೀರ್ಪುಗಳನ್ನು ರದ್ದುಗೊಳಿಸಿದ ನ್ಯಾಯಪೀಠ, 'ದುರದೃಷ್ಟವಶಾತ್, ಕಾಯ್ದೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿರುವ ಅಂಶಗಳತ್ತ ಎರಡೂ ಕೋರ್ಟ್‌ಗಳು ಗಮನಹರಿಸಿಲ್ಲ' ಎಂದು ಅಭಿಪ್ರಾಯಪಟ್ಟಿತು.

# 'ತಾರತಮ್ಯವಿರದ ವ್ಯವಸ್ಥೆ ರೂಪಿಸಲು ಕ್ರಮ'

## ಸ್ವಾತಂತ್ರ್ಯದ ಅಮೃತ ಮಹೋತ್ಸವದಿಂದ ಸುವರ್ಣ ಭಾರತದತ್ತ ಕಾರ್ಯಕ್ರಮ

**ನವದೆಹಲಿ (ಪಿಟಿಐ):** 'ನವೀನ ಚಿಂತನಾ ಕ್ರಮ ಹಾಗೂ ಪ್ರಗತಿಗೆ ಪೂರಕವಾದ ನಿರ್ಧಾರಗಳ ತಳಹದಿ ಮೇಲೆ ವ್ಯವಸ್ಥೆಯೊಂದನ್ನು ರೂಪಿಸಲಾಗುತ್ತಿದೆ. ಈ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ತಾರತಮ್ಯಕ್ಕೆ ಅವಕಾಶ ಇರುವುದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು.

ದೇಶದ 75ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ, ಸ್ವಾತಂತ್ರ್ಯದ ಅಮೃತ ಮಹೋತ್ಸವದಿಂದ ಸುವರ್ಣ ಭಾರತ ದತ್ತ ಎಂಬ ರಾಷ್ಟ್ರೀಯ ಕಾರ್ಯಕ್ರಮಕ್ಕೆ ವರ್ಚುವಲ್ ವಿಧಾನದ ಮೂಲಕ ಚಾಲನೆ ನೀಡಿ ಮಾತನಾಡಿದರು.

'ಒಬ್ಬ ವ್ಯಕ್ತಿಯ ಅಭಿವೃದ್ಧಿ ಹಾಗೂ ದೇಶದ ಪ್ರಗತಿ ಒಟ್ಟಿಗೆ ಸಾಗುತ್ತವೆ. ಹೀಗಾಗಿ ದೇಶದ ಏಳಿಗೆಗಾಗಿ ಪ್ರತಿಯೊಬ್ಬರು ತಮ್ಮ ಪಾಲಿನ ಕರ್ತವ್ಯ ನಿಭಾಯಿಸಲು ಒತ್ತು ನೀಡುವುದು ಅಗತ್ಯ.ಜಾಗತಿಕ ಮಟ್ಟದಲ್ಲಿಯೂ ಸೇರಿ ದೇಶದ ವರ್ಚಸ್ಸಿಗೆ ಧಕ್ಕೆ ತರುವಂತಹ ಪ್ರಯತ್ನಗಳು ನಡೆಯುತ್ತಿವೆ. ಇಂಥ ಪ್ರಯತ್ನಗಳಿಗೆ ವಿರೋಧ ವ್ಯಕ್ತವಾಗಬೇಕು ಹಾಗೂ ದೇಶ ಕುರಿತು ಸಮಂಜಸವಾದ ಚಿತ್ರಣ ನೀಡುವ ಪ್ರಯತ್ನ ನಡೆಯಬೇಕು' ಎಂದೂ ಪ್ರಧಾನಿ ಹೇಳಿದರು.

ವಿಶ್ವದೆಲ್ಲೆಡೆ ಅನುಯಾಯಿಗಳನ್ನು ಹಾಗೂ ಪ್ರಭಾವ ಹೊಂದಿರುವ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಂತಹ ಸಂಘಟನೆಗಳು ಜಗತ್ತಿಗೆ ಭಾರತದ ನೈಜ ಚಿತ್ರಣ ನೀಡುವ ಕಾರ್ಯ ಮಾಡಬೇಕು ಎಂದು ಮನವಿ ಮಾಡಿದರು.

'ಅಮೃತ ಮಹೋತ್ಸವದ ಈ ಕಾಲವು ಮಲಗಿ ಕನಸು ಕಾಣುವುದಕ್ಕಾಗಿ ಅಲ್ಲ. ಬದಲಾಗಿ, ನಮ್ಮ ಸಂಕಲ್ಪಗಳನ್ನು ಪೂರೈಸಿಕೊಳ್ಳುವುದಕ್ಕಾಗಿ. ಮುಂದಿನ 25 ವರ್ಷಗಳು ಕಠಿಣ ಪರಿಶ್ರಮ, ತ್ಯಾಗ ಮತ್ತು ಸಂಯಮದಿಂದ ತಪಸ್ಸು ಮಾಡಬೇಕಿದೆ. ನೂರಾರು ವರ್ಷಗಳ ಗುಲಾಮಗಿರಿಯಲ್ಲಿ ನಮ್ಮ ಸಮಾಜವು ಕಳೆದುಕೊಂಡಿರುವುದನ್ನು ಮರಳಿ ಪಡೆಯಲು ಈ ಅವಧಿಯು ಬಹಳ ಮುಖ್ಯ ಎಂದರು.

**ಚಾಲನೆ:** ಸ್ವಾತಂತ್ರ್ಯದಅಮೃತಮಹೋತ್ಸವದ ಅಂಗವಾಗಿ ವರ್ಷಪೂರ್ತಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಿಗೆ ಪ್ರಧಾನಿ ಚಾಲನೆ ನೀಡಿದರು.

30ಕ್ಕೂ ಅಧಿಕ ಪ್ರಚಾರ ಸಭೆಗಳು ಹಾಗೂ 15,000ಕ್ಕೂ ಹೆಚ್ಚು ವಿವಿಧ ಕಾರ್ಯಕ್ರಮಗಳನ್ನು ಈ ಅವಧಿಯಲ್ಲಿ ಆಯೋಜಿಸಲಾಗುತ್ತದೆ.

# ಬುಡ್ಗಾಂ: ಎಲ್‌ಇಟಿ ಉಗ್ರನ ಸೆರೆ

ಪ್ರಜಾವಾಣಿ ವಾರ್ತೆ

**ಶ್ರೀನಗರ:** ಬುಡ್ಗಾಂ ಜಿಲ್ಲೆಯ ಚದೂರ ಪ್ರದೇಶದಲ್ಲಿ ಗುರುವಾರ ಲಷ್ಕರ್–ಎ–ತೈಬಾ(ಎಲ್‌ಇಟಿ) ಸಂಘಟನೆಗೆ ಸೇರಿದ ಉಗ್ರನನ್ನು ಭದ್ರತಾ ಪಡೆಗಳು ಬಂಧಿಸಿದ್ದು, ಬಂಧಿತ ಉಗ್ರನಿಂದ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಂಡಿವೆ.

ದಕ್ಷಿಣ ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಮೆಮಂದರ್ ಪ್ರದೇಶದ ನಿವಾಸಿಯಾದ ಜಹಾಂಗೀರ್ ಅಹ್ಮದ್ ನೈಕೂ ಬಂಧಿತ ಉಗ್ರ.

'ಉಗ್ರ ಅಡಗಿರುವ ಖಚಿತ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ನಡೆಸಿದ ಶೋಧ ಕಾರ್ಯಾಚರಣೆ ವೇಳೆ ಎಲ್‌ಇಟಿಯ ಉಗ್ರ ಸೆರೆಸಿಕ್ಕಿದ್ದಾನೆ. ಉಗ್ರನಿಂದ ಒಂದು ಪಿಸ್ತೂಲ್, 16 ಪಿಸ್ತೂಲ್ ಗುಂಡುಗಳು ಹಾಗೂ ಇತರೆ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

**ಪುಲ್ವಾಮದಲ್ಲಿ ಉಗ್ರ ಸಹಚರನ ಸೆರೆ:** ಪುಲ್ವಾಮ ಜಿಲ್ಲೆಯ ರಾಜಪೋರಾ ಪ್ರದೇಶದಲ್ಲಿ ಗುರುವಾರ ಉಗ್ರ ಸಹಚರನೊಬ್ಬನನ್ನು ಭದ್ರತಾ ಪಡೆಗಳು ಸೆರೆ ಹಿಡಿದಿವೆ.

ಉಗ್ರ ಸಹಚರನನ್ನು ರಾಹಿಲ್ ಶೌಕಿತ್ ದಾರ್ ಎಂದು ಗುರುತಿಸಲಾಗಿದೆ. ಸೆರೆಸಿಕ್ಕ ಈತನ ಕೆಲವು ದಿನಗಳ ಹಿಂದೆ ನಾಪತ್ತೆಯಾಗಿರುವ ಕುರಿತು ರಾಜ್‌ಪೋರಾ ಠಾಣೆಯಲ್ಲಿ ದೂರು ದಾಖಲಾಗಿತ್ತು.

### ಷೇರುಪೇಟೆ ವಹಿವಾಟು ▼634




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 17,938 |
| ಇಂದಿನ ಅಂತ್ಯ | 17,757 |
| ▼ | 181 |
| ದಿನದ ಕನಿಷ್ಠ | 17,648 |

### ವಿನಿಮಯ ದರ

| | |
|---|---|
| $ ಡಾಲರ್ | 74.51 |
| £ ಪೌಂಡ್ | 101.42 |
| € ಯುರೊ | 84.54 |
| ¥ ಯೆನ್ (100ಕ್ಕೆ) | 65 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹440 |
| 12 ಮೊಟ್ಟೆಗೆ | ₹60 |
| ಮೈಸೂರು | |
| 100 ಮೊಟ್ಟೆಗೆ | ₹435 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1310 (1310) |
| ಸೋಯಾ (ರಿಫೈನ್ಡ್) | ₹1225 (1210) |
| ಸೂರ್ಯಕಾಂತಿ (ರಿಫೈನ್ಡ್) | ₹1250 (1230) |
| ಪಾಮೋಲಿನ್ | ₹1175 (1172) |

# ಎಫ್‌ಡಿಐ ಒಳಹರಿವು ಇಳಿಕೆ

**ವಿಶ್ವಸಂಸ್ಥೆ (ಪಿಟಿಐ):** ಭಾರತಕ್ಕೆ ವಿದೇಶಿ ನೇರ ಬಂಡವಾಳ ಹೂಡಿಕೆಯು (ಎಫ್‌ಡಿಐ) 2020ಕ್ಕೆ ಹೋಲಿಸಿದರೆ 2021ರಲ್ಲಿ ಶೇಕಡ 26ರಷ್ಟು ಇಳಿಕೆ ಆಗಿದೆ ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ.

ವಿಲೀನ ಮತ್ತು ಸ್ವಾಧೀನ ಪ್ರಕ್ರಿಯೆಗಳು ದೊಡ್ಡ ಮಟ್ಟದಲ್ಲಿ ನಡೆಯದೇ ಇರುವುದೇ 2021ರಲ್ಲಿ ಎಫ್‌ಡಿಐ ಒಳಹರಿವು ಕಡಿಮೆ ಆಗಲು ಒಂದು ಮುಖ್ಯ ಕಾರಣ ಎಂದು ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನದ (ಯುಎನ್‌ಸಿಟಿಎಡಿ) 2021ರ 'ಇನ್‌ವೆಸ್ಟ್‌ಮೆಂಟ್ ಟ್ರೆಂಡ್ಸ್ ಮಾನಿಟರ್' ವರದಿಯಲ್ಲಿ ತಿಳಿಸಲಾಗಿದೆ.

ಕೋವಿಡ್‌ನ ಎರಡನೇ ಅಲೆಯು ಭಾರತದ ಆರ್ಥಿಕ ಚಟುವಟಿಕೆಗಳ ಮೇಲೆ ಹೆಚ್ಚಿನ ಪರಿಣಾಮ ಉಂಟಾಮಾಡಿತು ಎಂದು ವರದಿಯು ತಿಳಿಸಿದೆ.

2020ರಲ್ಲಿ ಭಾರತಕ್ಕೆ ₹ 4.74 ಲಕ್ಷ ಕೋಟಿ ಎಫ್‌ಡಿಐ ಹರಿದುಬಂದಿತ್ತು. ಇದು 2019ರಲ್ಲಿ ಆಗಿದ್ದ ಹೂಡಿಕೆಗಿಂತಲು ಶೇ 27ರಷ್ಟು ಹೆಚ್ಚು.

ದೀರ್ಘಾವಧಿಗೆ ಅನುಕೂಲಕರ ಹಣಕಾಸು ಸ್ಥಿತಿ, ಸರ್ಕಾರದ ಉತ್ತೇಜಕ ಕೊಡುಗೆಗಳು ಮತ್ತು ವಿದೇಶಿ ಹೂಡಿಕೆ ಯೋಜನೆಗಳಿಂದಾಗಿ ಮೂಲಸೌಕರ್ಯ ವಲಯದ ಬಗ್ಗೆ ಹೂಡಿಕೆದಾರರ ವಿಶ್ವಾಸವು ಉತ್ತಮವಾಗಿದೆ. ಇನ್ನೊಂದೆಡೆ, ಕೈಗಾರಿಕೆ ಮತ್ತು ಜಾಗತಿಕ ಪೂರೈಕೆ ವ್ಯವಸ್ಥೆಯ ಬಗ್ಗೆ ಹೂಡಿಕೆದಾರರ ವಿಶ್ವಾಸವು ಕುಗ್ಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಜಾಗತಿಕ ಮಟ್ಟದಲ್ಲಿ ವಿದೇಶಿ ಹೂಡಿಕೆಯು 2020ಕ್ಕೆ ಹೋಲಿಸಿದರೆ 2021ರಲ್ಲಿ ಶೇ 77ರಷ್ಟು ಹೆಚ್ಚಾಗಿದ್ದು, ಕೋವಿಡ್‌ಗೂ ಮುಂಚಿನ ಮಟ್ಟವನ್ನು ದಾಟಿದೆ ಎಂದು ವರದಿ ತಿಳಿಸಿದೆ.

'ಅಭಿವೃದ್ಧಿಶೀಲ ದೇಶಗಳಲ್ಲಿ ಹೂಡಿಕೆಯ ಚೇತರಿಕೆಯು ಉತ್ತೇಜನಕಾರಿ ಆಗಿದೆ. ಆದರೆ, ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೈಗಾರಿಕೆ ಮತ್ತು ವಿದ್ಯುತ್, ಆಹಾರ ಅಥವಾ ಆರೋಗ್ಯ ಕ್ಷೇತ್ರಗಳಲ್ಲಿ ಹೊಸ ಹೂಡಿಕೆ ಆಗದೇ ಇರುವುದು ಕಳವಳಕ್ಕೆ ಪ್ರಮುಖ ಕಾರಣವಾಗಿದೆ' ಎಂದು ಯುಎನ್‌ಸಿಟಿಎಡಿ ಪ್ರಧಾನ ಕಾರ್ಯದರ್ಶಿ ರೆಬೆಕಾ ಗ್ರಿನ್‌ಸ್ಪಾನ್ ಹೇಳಿದ್ದಾರೆ.

2021ರಲ್ಲಿ ಒಟ್ಟಾರೆ ಆಮದು ಪ್ರಮಾಣ ಶೇ 3.9ರಷ್ಟು ಹೆಚ್ಚಳ

# ತೈಲ ಆಮದು: ತಗ್ಗಿದ ಒಪೆಕ್ ಪಾಲು

**ನವದೆಹಲಿ (ರಾಯಿಟರ್ಸ್):** ಭಾರತಕ್ಕೆ ಆಮದಾಗುವ ಕಚ್ಚಾ ತೈಲದಲ್ಲಿ ಒಪೆಕ್ ದೇಶಗಳ ಪಾಲು 2021ರಲ್ಲಿ ಒಂದು ದಶಕಕ್ಕೂ ಹೆಚ್ಚಿನ ಅವಧಿಯ ಕನಿಷ್ಠ ಮಟ್ಟಕ್ಕೆ ತಲುಪಿದೆ. ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಒಟ್ಟು ಪ್ರಮಾಣದಲ್ಲಿ ಶೇಕಡ 3.9ರಷ್ಟು ಹೆಚ್ಚಳ ಆಗಿದ್ದರೂ, ಅದರಲ್ಲಿ ಒಪೆಕ್ ದೇಶಗಳ ಪಾಲು ತಗ್ಗಿದೆ ಎಂಬುದನ್ನು ಅಂಕಿ–ಅಂಶಗಳು ತೋರಿಸುತ್ತಿವೆ.

2008ರಲ್ಲಿ ಭಾರತವು ಆಮದು ಮಾಡಿಕೊಂಡ ಒಟ್ಟು ಕಚ್ಚಾ ತೈಲದಲ್ಲಿ, ಪೆಟ್ರೋಲಿಯಂ ರಫ್ತು ದೇಶಗಳ ಒಕ್ಕೂಟದಿಂದ (ಒಪೆಕ್) ಬಂದ ಪಾಲು ಶೇ 87ರಷ್ಟು ಇತ್ತು. ಇದು 2021ರಲ್ಲಿ ಶೇ 70ಕ್ಕೆ ಇಳಿಕೆಯಾಗಿದೆ. 2021ರಲ್ಲಿ ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣದಲ್ಲಿ ಶೇ 3.9ರಷ್ಟು ಏರಿಕೆ ಕಂಡುಬಂದಿದ್ದು, ಪ್ರತಿದಿನಕ್ಕೆ 42 ಲಕ್ಷ ಬ್ಯಾರೆಲ್‌ಗೆ ತಲುಪಿದೆ.

ಇಂಧನ ಬೇಡಿಕೆಯು ಹೆಚ್ಚುತ್ತಿರುವ ಕಾರಣ, ಆಮದು ಪ್ರಮಾಣವು ಇನ್ನಷ್ಟು ಜಾಸ್ತಿ ಆಗುವ ಸಾಧ್ಯತೆ ಇದೆ. ಹಿಂದಿನ ವರ್ಷದಲ್ಲಿ ಲಾಕ್‌ಡೌನ್ ಜಾರಿಗೊಳಿಸಿದ್ದ ಕಾರಣದಿಂದಾಗಿ, ತೈಲ ಸಂಸ್ಕರಣಾ ಘಟಕಗಳು ತೈಲ ಸಂಸ್ಕರಣೆಯನ್ನು ಕಡಿಮೆ ಮಾಡಿದ್ದವು.

ಡಿಸೆಂಬರ್‌ನಲ್ಲಿ ಆಮದು ಪ್ರಮಾಣವು 11 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿತ್ತು. ಪ್ರತಿದಿನ 47 ಲಕ್ಷ ಬ್ಯಾರೆಲ್ ಆಮದು ಮಾಡಿಕೊಳ್ಳಲಾಗಿತ್ತು. ಇದು ನವೆಂಬರ್‌ನಲ್ಲಿ ಮಾಡಿಕೊಂಡಿದ್ದ ಆಮದು

ಪ್ರಮಾಣಕ್ಕೆ ಹೋಲಿಸಿದರೆ ಶೇ 5ರಷ್ಟು ಜಾಸ್ತಿ. 'ಒಮೈಕ್ರಾನ್ ಹರಡುವಿಕೆಗೆ ಸಂಬಂಧಿಸಿದ ಭೀತಿ ಕಡಿಮೆ ಆಗುತ್ತಿರುವ ಕಾರಣ, ಸಂಸ್ಕರಣಾ ಘಟಕಗಳು ಪೂರ್ಣ ಸಾಮರ್ಥ್ಯದೊಂದಿಗೆ ಕೆಲಸ ಮಾಡುವ ನಿರೀಕ್ಷೆ ಇದೆ. ಇಂಧನ ಬೇಡಿಕೆ ಜಾಸ್ತಿ ಆಗುತ್ತಿದೆ. ದೇಶವು ತೈಲ ಆಮದು ಮಾಡಿಕೊಳ್ಳುವ ಪ್ರಮಾಣವು ಶೇ 5ರಷ್ಟು ಜಾಸ್ತಿ ಆಗಬಹುದು' ಎಂದು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್‌ನ ಅಧ್ಯಕ್ಷ ಎಂ.ಕೆ. ಸುರಾನಾ ಹೇಳಿದರು.

ತೈಲ ಸಂಸ್ಕರಣಾ ಘಟಕಗಳು ಅಮೆರಿಕ ಮತ್ತು ಕೆನಡಾದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲ ಆಮದು ಮಾಡಿಕೊಂಡ ಕಾರಣದಿಂದಾಗಿ, ಒಪೆಕ್ ದೇಶಗಳ ಪಾಲು ತಗ್ಗಿತು ಎಂಬುದನ್ನು ಅಂಕಿ–ಅಂಶಗಳು ತೋರಿಸುತ್ತಿವೆ. ವೆನೆಜುವೆಲಾ ಮತ್ತು ಇರಾನ್ ಮೇಲೆ ಅಮೆರಿಕವು ನಿರ್ಬಂಧಗಳನ್ನು ವಿಧಿಸಿರುವ ಕಾರಣ, ಭಾರತದ ಕಂಪನಿಗಳು ಆಮದಿಗೆ ಅಮೆರಿಕ, ಕೆನಡಾ, ಗಯಾನಾ ಮತ್ತು ಆಫ್ರಿಕಾದ ಕೆಲವು ಸಣ್ಣ ದೇಶಗಳ ಕಡೆ ಮುಖ ಮಾಡಿವೆ.

### ಚಿನ್ನ, ಬೆಳ್ಳಿ ದರ ಹೆಚ್ಚಳ

**ನವದೆಹಲಿ (ಪಿಟಿಐ):** ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ, ಬೆಳ್ಳಿ ದರ ಏರಿಕೆ ಆಗಿದೆ. 10 ಗ್ರಾಂ ಚಿನ್ನದ ಬೆಲೆ ₹ 415ರಷ್ಟು ಹೆಚ್ಚಾಗಿದ್ದು, ₹ 48,327ರಂತೆ ಮಾರಾಟವಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 858ರಷ್ಟು ಏರಿಕೆಯಾಗಿ ₹ 64,429ಕ್ಕೆ ತಲುಪಿದೆ.

# ಐಸಿಸಿ ಟೆಸ್ಟ್ ತಂಡದಲ್ಲಿ ರೋಹಿತ್, ಪಂತ್

## ಏಕದಿನ, ಟಿ20 ತಂಡಗಳಲ್ಲಿ ಸ್ಥಾನ ಗಳಿಸಲು ಭಾರತದ ಆಟಗಾರರು ವಿಫಲ

**ದುಬೈ (ಪಿಟಿಐ):** ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಗುರುವಾರ ಪ್ರಕಟಿಸಿರುವ ವರ್ಷದ ಟೆಸ್ಟ್ ತಂಡದಲ್ಲಿ ಭಾರತದ ರೋಹಿತ್ ಶರ್ಮಾ, ರಿಷಭ್ ಪಂತ್ ಮತ್ತು ಆರ್. ಅಶ್ವಿನ್ ಸ್ಥಾನ ಗಳಿಸಿದ್ದಾರೆ.

ಆದರೆ, ಇದೇ ಸಂದರ್ಭದಲ್ಲಿ ಪ್ರಕಟಿಸಿರುವ ಏಕದಿನ ಮತ್ತು ಟಿ20 ತಂಡಗಳಲ್ಲಿ ಭಾರತದ ಒಬ್ಬ ಆಟಗಾರನಿಗೂ ಸ್ಥಾನ ಲಭಿಸಿಲ್ಲ.

2021ರ ಸಾಧನೆಗಳ ಆಧಾರದಲ್ಲಿ ಈ ತಂಡಗಳನ್ನು ಆಯ್ಕೆ ಮಾಡಲಾಗಿದೆ. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ರನ್ನರ್ಸ್ ಅಪ್ ಆಗಿತ್ತು. ಚಾಂಪಿಯನ್ ಆಗಿರುವ ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಕೂಡ ಈ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ.

ಹೋದ ವರ್ಷದಲ್ಲಿ ಭಾರತವು ಒಟ್ಟು 14 ಟೆಸ್ಟ್‌ಗಳಲ್ಲಿ ಆಡಿದೆ. ಅದರಲ್ಲಿ ಎಂಟು ಗೆದ್ದಿದೆ. ಮೂರರಲ್ಲಿ ಸೋತಿದೆ. ಮೂರರಲ್ಲಿ ಡ್ರಾ ಮಾಡಿಕೊಂಡಿದೆ.

ಆರಂಭಿಕ ಬ್ಯಾಟರ್ ರೋಹಿತ್ ಶರ್ಮಾ 47.68ರ ಸರಾಸರಿಯಲ್ಲಿ 906 ರನ್‌ಗಳನ್ನು ಗಳಿಸಿದ್ದಾರೆ. ಅದರಲ್ಲಿ ಎರಡು ಶತಕಗಳು ಸೇರಿವೆ. ಎರಡೂ ಶತಕಗಳನ್ನು ಅವರು ಇಂಗ್ಲೆಂಡ್ ವಿರುದ್ಧ ಗಳಿಸಿದ್ದಾರೆ. ಒಂದು ಚೆನ್ನೈನಲ್ಲಿ ಇನ್ನೊಂದು ಓವಲ್‌ನಲ್ಲಿ.

ರೋಹಿತ್ ಶರ್ಮಾ

ರಿಷಭ್ ಪಂತ್

ಆರ್. ಅಶ್ವಿನ್

ವಿಕೆಟ್‌ಕೀಪರ್ –ಬ್ಯಾಟರ್ ಪಂತ್ 12 ಪಂದ್ಯಗಳನ್ನು ಆಡಿ 748 ರನ್‌ಗಳನ್ನು ಗಳಿಸಿದ್ದಾರೆ. ಅಹಮದಾಬಾದ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಶತಕ ಹೊಡೆದಿದ್ದರು. ಕೀಪಿಂಗ್‌ನಲ್ಲಿ ಅವರು 39 ಬಲಿ ಪಡೆದಿದ್ದಾರೆ.

ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಒಂಬತ್ತು ಪಂದ್ಯಗಳಿಂದ 54 ವಿಕೆಟ್‌ಗಳನ್ನು ಗಳಿಸಿದ್ದಾರೆ. ತವರಿನಲ್ಲಿ ನಡೆದಿದ್ದ ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ಎದುರಿನ ಸರಣಿಗಳಲ್ಲಿ ಮಿಂಚಿದ್ದರು. ಬ್ಯಾಟಿಂಗ್ ನಲ್ಲಿಯೂ ಉಪಯುಕ್ತ ಕಾಣಿಕೆ ನೀಡಿದ್ದ ಅವರು 355 ರನ್‌ಗಳನ್ನು ಕಲೆಹಾಕಿದ್ದರು.

ಈ ತಂಡದಲ್ಲಿ ಶ್ರೀಲಂಕಾದ ದಿಮುತ ಕರುಣಾರತ್ನೆ, ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್, ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್, ನ್ಯೂಜಿಲೆಂಡ್‌ನ ಕೈಲ್ ಜೆಮಿಸನ್, ಪಾಕಿಸ್ತಾನದ ಫವಾದ್ ಆಲಂ, ಹಸನ್ ಅಲಿ ಮತ್ತು ಶಾಹೀನ್ ಆಫ್ರಿದಿ ಸ್ಥಾನ ಪಡೆದಿದ್ದಾರೆ.

ಏಕದಿನ ತಂಡದಲ್ಲಿ ಭಾರತದ ಆಟಗಾರರಿಗೆ ಸ್ಥಾನ ಲಭಿಸಿಲ್ಲ. ಆದರೆ, ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ವೆಸ್ಟ್ ಇಂಡೀಸ್‌ನ ಆಟಗಾರರೂ ಈ ಪಟ್ಟಿಯಲ್ಲಿ ಇಲ್ಲ.

ಪಾಕಿಸ್ತಾನದ ಬಾಬರ್ ಆಜಂ ಈ ತಂಡಕ್ಕೆ ನಾಯಕರಾಗಿ ಆಯ್ಕೆಯಾಗಿದ್ದಾರೆ. ದಕ್ಷಿಣ ಆಫ್ರಿಕಾದ ಜನೆಮನ್ ಮಲಾನ್, ರಸಿ ವ್ಯಾನ್ ಡರ್ ಡಸೆ, ಬಾಂಗ್ಲಾದೇಶದ ಶಕೀಬ್ ಅಲ್ ಹಸನ್, ಮುಸ್ತಫಿಜುರ್ ರೆಹಮಾನ್, ಮುಷ್ಫಿಕುರ್ ರಹೀಂ, ಶ್ರೀಲಂಕಾದ ವಾಣಿಂದು ಹಸರಂಗಾ, ದಿಶಮಂತಾ ಚಾಮೀರಾ, ಐರ್ಲೆಂಡ್‌ನ ಪಾಲ್ ಸ್ಟರ್ಲಿಂಗ್ ಮತ್ತು ಸಿಮಿ ಸಿಂಗ್ ಇದರಲ್ಲಿದ್ದಾರೆ. ಭಾರತ ತಂಡವು ಕಳೆದ ವರ್ಷದಲ್ಲಿ ಏಕದಿನ ಮಾದರಿಯಲ್ಲಿ ಕಡಿಮೆ ಪಂದ್ಯಗಳನ್ನು ಆಡಿದೆ. ಕೊಹ್ಲಿ, ರಾಹುಲ್ ಮತ್ತು ರೋಹಿತ್ ಶರ್ಮಾ ಕೇವಲ ಮೂರು ಪಂದ್ಯಗಳಣ್ನು ಆಡಿದ್ದಾರೆ. ಶಿಖರ್ ಧವನ್ ಒಬ್ಬರೇ ಆರು ಪಂದ್ಯಗಳನ್ನು ಆಡಿ 297 ರನ್‌ಗಳನ್ನು ಗಳಿಸಿದ್ದಾರೆ.

ಬೌಲರ್‌ಗಳಲ್ಲಿ ಭುವನೇಶ್ವರ್ ಕುಮಾರ್ ಐದು ಪಂದ್ಯ ಆಡಿ 9 ವಿಕೆಟ್ ಗಳಿಸಿದ್ದಾರೆ. ಐರ್ಲೆಂಡ್‌ನ ಸ್ಟರ್ಲಿಂಗ್ 14 ಪಂದ್ಯಗಳನ್ನು ಆಡಿ 705 ರನ್‌ಗಳನ್ನು ಗಳಿಸಿದ್ದಾರೆ.ಹೋದ ವರ್ಷ ಟಿ20 ವಿಶ್ವಕಪ್ ಟೂರ್ನಿಯಲ್ಲಿ ತೋರಿದ ಕಳಪೆ ಪ್ರದರ್ಶನದಿಂದಾಗಿ ಚುಟುಕು ತಂಡದಲ್ಲಿಯೂ ಭಾರತದ ಆಟಗಾರರು ಸ್ಥಾನ ಪಡೆದಿಲ್ಲ.

### ಕೃಷಿ ಉತ್ಪನ್ನ ರಫ್ತು ದಾಖಲೆ?

**ನವದೆಹಲಿ (ಪಿಟಿಐ):** ಕೃಷಿ ಉತ್ಪನ್ನಗಳ ರಫ್ತು ಪ್ರಮಾಣವು ಏಪ್ರಿಲ್–ನವೆಂಬರ್ ಅವಧಿಯಲ್ಲಿ ಶೇಕಡ 23.21ರಷ್ಟು ಹೆಚ್ಚಳವಾಗಿದ್ದು, ₹ 3.71 ಲಕ್ಷ ಕೋಟಿಯ (50 ಬಿಲಿಯನ್ ಅಮೆರಿಕನ್ ಡಾಲರ್) ಗಡಿಯನ್ನು ಇದೇ ಮೊದಲ ಬಾರಿಗೆ ದಾಟುವ ಸಾಧ್ಯತೆ ಇದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಹೇಳಿದೆ.

ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ರಫ್ತು ಪ್ರಮಾಣ ಹೆಚ್ಚಿಸಲು ಸಚಿವಾಲಯವು ಹಲವು ಕ್ರಮಗಳನ್ನು ಕೈಗೊಂಡಿದೆ. ಅಕ್ಕಿ (ಬಾಸ್ಮತಿ ಹೊರತುಪಡಿಸಿ), ಗೋಧಿ, ಸಕ್ಕರೆ, ಇತರ ಧಾನ್ಯಗಳ ರಫ್ತು ಪ್ರಮಾಣದಲ್ಲಿ ಇದುವರೆಗೆ ಆರೋಗ್ಯಕರ ಬೆಳವಣಿಗೆ ಕಂಡುಬಂದಿದೆ ಎಂದು ತಿಳಿಸಿದೆ.

### ಮುಂಬೈ ಧಾರಣೆ

ಶೇಂಗಾ

20-1-2022

| | |
|---|---|
| ಜಾವಾ 70/80(ಹೊಸ) | 11150-11200 |
| ಜಾವಾ 80/90(ಹೊಸ) | 10850-10900 |
| ದಪ್ಪ ಮಧ್ಯಪ್ರದೇಶ(ಹೊಸ) | 9700-9800 |
| ದಪ್ಪ ಗುಜರಾತ್(ಹೊಸ) | 8500-8600 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1320 (1320) |
| ಒಂದು ವಾರದ ಡೆಲಿವರಿ | 1315 (1315) |
| ಸೋಯಾ ಕಚ್ಚಾ | 1167 (1152) |
| ಪಾಮ್ ವಾರದ ಡೆಲಿವರಿ | 1173 (1170) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1200 (1175) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

| | |
|---|---|
| ಅಪರಂಜಿ ಚಿನ್ನ 10ಗ್ರಾಂ | 48,600 (48,150) |
| ಬೆಳ್ಳಿ ಕೆ.ಜಿ | 64,500 (63,600) |

ಆವರಣದಲ್ಲಿ ಹಿಂದಿನ ದಿನದ ಧಾರಣೆ

# 60 ಸಾವಿರ ಮಟ್ಟದಿಂದ ಕೆಳಗಿಳಿದ ಸೆನ್ಸೆಕ್ಸ್

**ಮುಂಬೈ (ಪಿಟಿಐ):** ಮಾಹಿತಿ ತಂತ್ರಜ್ಞಾನ, ಇಂಧನ ಮತ್ತು ಹಣಕಾಸು ವಲಯದ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಸತತ ಮೂರನೇ ದಿನವೂ ನಕಾರಾತ್ಮಕ ವಹಿವಾಟು ನಡೆಯಿತು.

ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಹೂಡಿಕೆದಾರರು ಮಾರಾಟಕ್ಕೆ ಗಮನ ನೀಡಿದ್ದು ಸಹ ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 634 ಅಂಶ ಇಳಿಕೆ ಆಗಿ 59,464 ಅಂಶಗಳಲ್ಲಿ ದಿನದ ವಹಿವಾಟು ಅಂತ್ಯವಾಯಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 181 ಅಂಶ ಇಳಿಕೆಯಾಗಿ 17,757 ಅಂಶಗಳಿಗೆ ಇಳಿಕೆ ಆಯಿತು.

ಜಾಗತಿಕ ಹಣದುಬ್ಬರದ ಆತಂಕ ಮತ್ತು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಿಸುವ ಸಾಧ್ಯತೆಯ ಕಾರಣಗಳಿಂದಾಗಿ ದೇಶಿ ಮಾರುಕಟ್ಟೆಗಳಲ್ಲಿ ಸತತ ಮೂರನೇ ದಿನವೂ ವಹಿವಾಟು ಇಳಿಕೆ ಕಾಣುವಂತಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

**ರೂಪಾಯಿ ಮೌಲ್ಯ ಇಳಿಕೆ:** ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಗುರುವಾರ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 7 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 74.51ರಂತೆ ವಿನಿಮಯಗೊಂಡಿತು.

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |
| **ಪುತ್ತೂರು** | |
| ಕೋಕ | 11000-26000 |
| ಹಳತು | 27500-45000 |
| **ಕುಮಟ** | |
| ಚಿಪ್ಪು | 23300-37999 |
| ಕೋಕ | 16699-28109 |
| ಹೊಸಚಾಲಿ | 36019-41224 |
| ಹಳೆಚಾಲಿ | 51500-52500 |
| **ಸಿದ್ದಾಪುರ** | |
| ಬಿಳಿಗೋಟು | 22399-31199 |
| ಚಾಲಿ | 44099-48299 |
| ಕೋಕ | 23099-31882 |
| ಹೊಸಚಾಲಿ | 30199-40499 |
| ಕೆಂಪುಗೋಟು | 26191-32289 |
| ರಾಶಿ | 46199-47309 |
| ತಟ್ಟಿಬೆಟ್ಟೆ | 38899-46889 |
| **ಯಲ್ಲಾಪುರ** | |
| ಬಿಳಿಗೋಟು | 27099-31629 |
| ಕೋಕ | 20101-31161 |
| ಹೊಸಚಾಲಿ | 35499-40699 |
| ಹಳೆಚಾಲಿ | 45051-48921 |
| ಕೆಂಪುಗೋಟು | 29099-36519 |
| ರಾಶಿ | 43600-52002 |
| ತಟ್ಟಿಬೆಟ್ಟೆ | 40299-42699 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ | 400-700 |
| ದ್ವಿತಳಿ | 476-840 |

**ಮೂಡಿಗೆರೆ ಕಾಫಿ (₹ 50ಕೆ.ಜಿಗೆ)**

| | ಮುದ್ರೆಮನೆ |
|---|---|
| ಎಪಿ | 15800 |
| ಎಸಿ | 7310 |
| ಆರ್‌ಪಿ | 6900 |
| ಆರ್‌ಸಿ | 4055 |

### ಟೊಯೋಟ 'ಹಿಲಕ್ಸ್' ಬಿಡುಗಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಟೊಯೋಟ ಕಿರ್ಲೋಸ್ಕರ್ ಮೋಟರ್ ಕಂಪನಿಯು ತನ್ನ ಐಕಾನಿಕ್ ಎಸ್‌ಯುವಿ 'ಹಿಲಕ್ಸ್' ಬಿಡುಗಡೆ ಮಾಡಿದೆ.

ಈ ಮಾದರಿಯ ಬುಕಿಂಗ್ ಆರಂಭವಾಗಿದ್ದು ಏಪ್ರಿಲ್‌ನಿಂದ ವಿತರಣೆ ಆರಂಭವಾಗುವ ನಿರೀಕ್ಷೆ ಇದೆ. ಕಂಪನಿಯು ಫೆಬ್ರುವರಿಯಲ್ಲಿ ಇದರ ಬೆಲೆ ಪ್ರಕಟಿಸುವ ನಿರೀಕ್ಷೆ ಇದೆ.

2.8 ಲೀಟರ್, 4 ಸಿಲಿಂಡರ್ ಟರ್ಬೊ ಡೀಸೆಲ್ ಎಂಜಿನ್ ಹೊಂದಿದ್ದು, ಮ್ಯಾನುಯಲ್ ಮತ್ತು ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಆಯ್ಕೆಗಳಲ್ಲಿ ಲಭ್ಯವಿದೆ.

ಬೆಂಗಳೂರಿಗೆ ಸಮೀಪದ ಬಿಡದಿಯ ಘಟಕದಲ್ಲಿ ಇದನ್ನು ತಯಾರಿಸಲಾಗುವುದು. ಶೇ 30ರಷ್ಟು ಬಿಡಿಭಾಗಗಳು ಸ್ಥಳೀಯವಾಗಿ ಲಭ್ಯವಾಗುವಂಥವು ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

### ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ದೊಡ್ಡ | ₹2600-2800 |
| ಮಧ್ಯಮ | ₹2000-2600 |
| ಸಣ್ಣ | ₹1000-2000 |

# ಐಎಸ್‌ಎಲ್: ಜೆಎಫ್‌ಸಿ–ಮುಂಬೈ ಪಂದ್ಯ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ ನಡೆಯಬೇಕಾಗಿದ್ದ ಪಂದ್ಯವನ್ನು ಮುಂದೂಡಲಾಗಿದೆ. ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಜೆಮ್ಶೆಡ್‌ಪುರ ಎಫ್‌ಸಿ ಮತ್ತು ಮುಂಬೈ ಸಿಟಿ ಎಫ್‌ಸಿ ನಡುವೆ ಹಣಾಹಣಿ ನಡೆಯಬೇಕಾಗಿತ್ತು.

ಆದರೆ ಪಂದ್ಯವನ್ನು ಮುಂದೂಡಲಾಗಿದೆ ಎಂದು ಗುರುವಾರ ಸಂಜೆ ಆಯೋಜಕರು ತಿಳಿಸಿದ್ದಾರೆ. ವಾಸ್ಕೋದ ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆಯಬೇಕಾಗಿದ್ದ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ಮತ್ತು ಎಟಿಕೆ ಮೋಹನ್ ಬಾಗನ್ ನಡುವಿನ ಪಂದ್ಯವನ್ನು ಕೂಡ ಮುಂದೂಡಲಾಗಿದೆ. ಎಟಿಕೆ ಮೋಹನ್ ಬಾಗನ್ ತಂಡದ ನಾಲ್ವರಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಕಾರಣ ಕಳೆದ ವಾರದಿಂದ ಕೆಲವು ಪಂದ್ಯಗಳನ್ನು ಮುಂದೂಡಲಾಗುತ್ತಿದೆ. ಕಳೆದ ಶನಿವಾರದಿಂದ ಸೋಮವಾರದ ವರೆಗೆ ಸತತ ಮೂರು ದಿನ ಪಂದ್ಯಗಳನ್ನು ಮುಂದೂಡಲಾಗಿತ್ತು. ಈ ವರೆಗೆ ಒಟ್ಟು ಆರು ಪಂದ್ಯಗಳನ್ನು ಮುಂದೂಡಿದಂತಾಗಿದೆ.

ಮುಂಬೈ ತಂಡದ ಇಗರ್ ಆಂಗುಲೊ

ಮೂರು ತಂಡಗಳು ಈ ವರೆಗೆ ತಲಾ 12 ಪಂದ್ಯಗಳನ್ನು ಆಡಿದ್ದು ಏಳು ತಂಡಗಳು 11 ತಲಾ 11 ಪಂದ್ಯ ಆಡಿವೆ. ಎಟಿಕೆ ಮೋಹನ್ ಬಾಗನ್‌ಗೆ ಒಂಬತ್ತು ಪಂದ್ಯಗಳನ್ನಷ್ಟೇ ಆಡಲು ಸಾಧ್ಯವಾಗಿದೆ.

ತಲಾ ಐದು ಜಯ ಮತ್ತು ಐದು ಡ್ರಾದೊಂದಿಗೆ 20 ಪಾಯಿಂಟ್ ಗಳಿಸಿರುವ ಕೇರಳ ಬ್ಲಾಸ್ಟರ್ಸ್ ಪಾಯಿಂಟ್ ಪಟ್ಟಿಯ ಅಗ್ರ ಸ್ಥಾನದಲ್ಲಿದ್ದು 19 ಪಾಯಿಂಟ್‌ಗಳೊಂದಿಗೆ ಜೆಮ್ಶೆಡ್‌ಪುರ ಎಫ್‌ಸಿ ಎರಡನೇ ಸ್ಥಾನದಲ್ಲಿದೆ. ಹೈದರಾಬಾದ್ ಎಫ್‌ಸಿ ಮತ್ತು ಮುಂಬೈ ಸಿಟಿ ಎಫ್‌ಸಿ ತಂಡಗಳು ಕ್ರಮವಾಗಿ ಮೂರು ಹಾಗೂ ನಾಲ್ಕನೇ ಸ್ಥಾನ ಗಳಿಸಿವೆ.

ಬೆಂಗಳೂರು ಎಫ್‌ಸಿ 11 ಪಂದ್ಯಗಳಲ್ಲಿ ಮೂರು ಜಯ, ತಲಾ ನಾಲ್ಕು ಡ್ರಾ ಮತ್ತು ಸೋಲಿನೊಂದಿಗೆ 13 ಪಾಯಿಂಟ್ ಗಳಿಸಿ ಎಂಟನೇ ಸ್ಥಾನದಲ್ಲಿದೆ.

### ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಏಕದಿನ ಪಂದ್ಯ ಇಂದು: ಜಯಿಸುವ ಒತ್ತಡದಲ್ಲಿ ಭಾರತ

# ರಾಹುಲ್ ನಾಯಕತ್ವದ ಪರೀಕ್ಷೆ

ಪರ್ಲ್, ದಕ್ಷಿಣ ಆಫ್ರಿಕಾ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ತಮ್ಮ ನಾಯಕತ್ವದ ಸಾಮರ್ಥ್ಯವನ್ನು ಸಂಪೂರ್ಣವಾಗಿ ಪಣಕ್ಕೊಡ್ಡಬೇಕಾದ ಒತ್ತಡದಲ್ಲಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ಸೋತಿತ್ತು. ಇದೀಗ ಮೂರು ಪಂದ್ಯಗಳ ಸರಣಿ ಗೆಲುವಿನ ಕನಸು ಜೀವಂತವಾಗುಳಿಯಬೇಕಾದರೆ ಶುಕ್ರವಾರ ನಡೆಯುವ ಎರಡನೇ ಪಂದ್ಯದಲ್ಲಿ ತಂಡವು ಜಯಿಸಲೇಬೇಕಾದ ಒತ್ತಡದಲ್ಲಿದೆ.

ರಾಹುಲ್ ನಾಯಕತ್ವದ ಮೊದಲ ಸರಣಿ ಇದಾಗಿದೆ. ವಿರಾಟ್ ಕೊಹ್ಲಿ ನಾಯಕತ್ವ ಬಿಟ್ಟ ನಂತರ ಬ್ಯಾಟಿಂಗ್‌ನಲ್ಲಿ ಹೇಗೆ ಮಿಂಚುತ್ತಾರೆ ಎಂಬ ಕುತೂಹಲಕ್ಕೆ ಬುಧವಾರದ ಪಂದ್ಯದಲ್ಲಿ ಉತ್ತರ ಸಿಕ್ಕಿದೆ. ಅವರು ತಮ್ಮ ಅರ್ಧಶತಕದ ಮೂಲಕ ತಮ್ಮ ರನ್‌ಗಳ ಹಸಿವು ಇನ್ನೂ ಇದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಶಿಖರ್ ಧವನ್ ಕೂಡ ಮಿಂಚಿದ್ದರು. ಕೊನೆಯ ಹಂತದಲ್ಲಿ ಶಾರ್ದೂಲ್ ಠಾಕೂರ್ ಗಳಿಸಿದ್ದ ಮಿಂಚಿನ ಅರ್ಧ ಶತಕವು ಮುದ ನೀಡಿತ್ತು. ಆದರೆ ತಂಡಕ್ಕೆ ಗೆಲುವಿನ ದಡ ಮುಟ್ಟಿಸುವಲ್ಲಿ ಸಫಲವಾಗಿರಲಿಲ್ಲ.

ಆದರೆ, ನಾಯಕ ರಾಹುಲ್ ಸೇರಿ ದಂತೆ ಉಳಿದ ಬ್ಯಾಟರ್‌ಗಳು ನಿರೀಕ್ಷಿತ ಆಟವಾಡಲಿಲ್ಲ. ಆದ್ದರಿಂದ ಆತಿಥೇಯರು ನೀಡಿದ ಗುರಿಯನ್ನು ಮುಟ್ಟಲು ಸಾಧ್ಯವಾಗಲಿಲ್ಲ. ಅದೇ ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಮತ್ತು ರಸಿ ವ್ಯಾನ್ ಡರ್ ಡಸೆನ್ ಶತಕ ಬಾರಿಸಿದ್ದರು. ಭಾರತದ ಬೌಲಿಂಗ್ ಪಡೆಗೆ ಬಿಸಿ ಮುಟ್ಟಿಸಿದರು. ಬೂಮ್ರಾ ಎರಡು ವಿಕೆಟ್ ತೆಗೆದುಕೊಂಡಿದ್ದರು. ಉಳಿದವರು ದುಬಾರಿಯಾಗಿದ್ದರು. ಈ ಲೋಪಗಳನ್ನು ತಿದ್ದಿಕೊಂಡು ತಂಡವನ್ನು ಮುನ್ನಡೆಸುವತ್ತ ರಾಹುಲ್ ಮೆರೆಯುವ ಚಾಣಾಕ್ಷತೆಯ ಮೇಲೆ ಈಗ ಕುತೂಹಲದ ಕಣ್ಣುಗಳು ನೆಟ್ಟಿವೆ. ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರಿಗೂ ಇದು ಪ್ರಮುಖ ಸವಾಲಾಗಲಿದೆ.

ರಾಹುಲ್ ದ್ರಾವಿಡ್ ಮತ್ತು ಕೆ.ಎಲ್. ರಾಹುಲ್

**ತಂಡಗಳು: ಭಾರತ:** ಕೆ.ಎಲ್. ರಾಹುಲ್ (ನಾಯಕ), ಜಸ್‌ಪ್ರೀತ್ ಬೂಮ್ರಾ, ಶಿಖರ್ ಧವನ್, ಋತುರಾಜ್ ಗಾಯಕವಾಡ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ವೆಂಕಟೇಶ್ ಅಯ್ಯರ್, ರಿಷಭ್ ಪಂತ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್‌ಕೀಪರ್), ಯಜುವೇಂದ್ರ ಚಾಹಲ್, ಆರ್. ಅಶ್ವಿನ್, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್, ಪ್ರಸಿದ್ಧ ಕೃಷ್ಣ, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ಜಯಂತ್ ಯಾದವ್, ನವದೀಪ್ ಸೈನಿ.

**ದಕ್ಷಿಣ ಆಫ್ರಿಕಾ:** ತೆಂಬಾ ಬವುಮಾ (ನಾಯಕ), ಕೇಶವ್ ಮಹಾರಾಜ್, ಕ್ವಿಂಟನ್ ಡಿಕಾಕ್ (ವಿಕೆಟ್‌ಕೀಪರ್), ಜುಬೈರ್ ಹಮ್ಜಾ, ಮಾರ್ಕೊ ಜ್ಯಾನ್ಸೆನ್, ಜೆನ್‌ಮನ್ ಮಲಾನ್, ಸಿಸಾಂದ ಮಗಾಲ, ಏಡನ್ ಮರ್ಕರಂ, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ವೇಯ್ನ್ ಪಾರ್ನೆಲ್, ಆ್ಯಂಡಿಲ್ ಪಿಶುವಾಯೊ, ಡ್ವೇನ್ ಪ್ರಿಟೋರಿಯಸ್, ಕಗಿಸೊ ರಬಾಡ, ತಬ್ರೇಜ್ ಶಮ್ಸಿ.

**ಪಂದ್ಯ ಆರಂಭ:** ಮಧ್ಯಾಹ್ನ 2.00; **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್

ಶಾರ್ದೂಲ್ ಠಾಕೂರ್

ರಸಿ ವ್ಯಾನ್ ಡರ್ ಡಸೆನ್

## ಎಂಟರ ಘಟ್ಟಕ್ಕೆ ಸಿಂಧು, ಪ್ರಣಯ್

### ಬ್ಯಾಡ್ಮಿಂಟನ್: ಆಕರ್ಷಿ– ಮಾಳವಿಕಾ ಮುಖಾಮುಖಿ

ಲಖನೌ (ಪಿಟಿಐ): ಎದುರಾಳಿಯ ವಿರುದ್ಧ ಸುಲಭ ಜಯ ಸಾಧಿಸಿದ ಪಿ.ವಿ. ಸಿಂಧು ಅವರು ಸೈಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಕಠಿಣ ಸವಾಲು ಮೀರಿ ನಿಂತ ಎಚ್.ಎಸ್.ಪ್ರಣಯ್ ಕೂಡ ಎಂಟರ ಘಟ್ಟಕ್ಕೆ ಲಗ್ಗೆ ಇರಿಸಿದರು.

ಬಿಬಿಡಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಹಿಳಾ ವಿಭಾಗದ ಅಗ್ರ ಶ್ರೇಯಾಂಕಿತೆ ಸಿಂಧು ಅಮೆರಿಕದ ಲಾರೆನ್ ಲ್ಯಾಮ್ ಎದುರು 21–16, 21–13ರಲ್ಲಿ ಗೆಲುವು ಸಾಧಿಸಿದರು. ಪ್ರಣಯ್ ಎರಡನೇ ಸುತ್ತಿನ ಪಂದ್ಯದಲ್ಲಿ ಭಾರತದವರೇ ಆದ ಪ್ರಿಯಾಂಶು ರಾಜಾವತ್ ಅವರನ್ನು 21-11, 16-21, 21-18ರಲ್ಲಿ ಮಣಿಸಿದರು.

ಮಾಜಿ ವಿಶ್ವ ಚಾಂಪಿಯನ್ ಹಾಗೂ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಮುಂದಿನ ಪಂದ್ಯದಲ್ಲಿ ಆರನೇ ಶ್ರೇಯಾಂಕಿತೆ, ಥಾಯ್ಲೆಂಡ್‌ನ ಸುಪನಿಡ ಕಟೆಥಾಂಗ್ ಅವರನ್ನು ಎದುರಿಸುವರು. ಇಂಡಿಯನ್ ಓಪನ್ ಟೂರ್ನಿಯಲ್ಲೂ ಎಂಟರ ಘಟ್ಟದಲ್ಲಿ ಸಿಂಧು ಮತ್ತು ಕಟೆಥಾಂಗ್ ಎದುರಾಗಿದ್ದರು. ಎಡಗೈ ಆಟಗಾರ್ತಿ ಕಟೆಥಾಂಗ್ ಆ ಪಂದ್ಯದಲ್ಲಿ ಗೆದ್ದಿದ್ದರು.

ಪ್ರಣಯ್‌ಗೆ ಮುಂದಿನ ಹಂತದಲ್ಲಿ ಫ್ರಾನ್ಸ್‌ನ ಅರ್ನಾಡ್ ಮರ್ಕಲ್ ಎದುರಾಳಿ. ಭಾರತದ ಕಾರ್ತಿಕೇಯ್ ಗುಲ್ಶನ್ ಕುಮಾರ್ ವಿರುದ್ಧ 21-8, 21-12ರಲ್ಲಿ ಜಯ ಗಳಿಸಿ ಅರ್ನಾಡ್ ಎಂಟರ ಘಟ್ಟ ಪ್ರವೇಶಿಸಿದ್ದಾರೆ.

**ಆಕರ್ಷಿ–ಮಾಳವಿಕಾ ಮುಖಾಮುಖಿ:** ಭಾರತದ ಆಕರ್ಷಿ ಕಶ್ಯಪ್ ಮತ್ತು ಮಾಳವಿಕಾ ಬಾನ್ಸೋದ್ ಅವರು ಮಹಿಳಾ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಮುಖಾಮುಖಿಯಾಗುವರು. ಗುರುವಾರದ ಪಂದ್ಯದಲ್ಲಿ ಆಕರ್ಷಿ 21-9, 21-6ರಲ್ಲಿ ಸಾಯ್ ಉತ್ತೇಜಿತಾ ರಾವ್ ಎದುರು ಜಯ ಗಳಿಸಿದರೆ ಮಾಳವಿಕಾ 21-10, 21-8ರಲ್ಲಿ ಪ್ರೇರಣಾ ನೀಲೂರಿ ವಿರುದ್ಧ ಗೆದ್ದರು. ಭಾರತದ ಸಾಮಿಯಾ ಇಮದ್ ಫಾರೂಕಿ 21-6, 21-15ರಲ್ಲಿ ಕನಿಕಾ ಕನ್ವಲ್ ಅವರನ್ನು ಮಣಿಸಿದರು. ಅನುಪಮಾ ಉಪಾಧ್ಯಾಯ 21-12, 21-19ರಲ್ಲಿ ಸ್ಮಿತ್ ತೋಶ್ನಿವಾಲ್ ಎದುರು ಗೆದ್ದರು.

ಎಚ್.ಎಸ್.ಪ್ರಣಯ್ –ಎಎಫ್‌ಪಿ ಚಿತ್ರ

### ಮಿಥುನ್ ಪ್ರಬಲ ಹೋರಾಟ

ಪುರುಷರ ವಿಭಾಗದಲ್ಲಿ ಕರ್ನಾಟಕದ ಮಿಥುನ್ ಮಂಜುನಾಥ್ ಮತ್ತು ಮಲೇಷ್ಯಾದ ಸೂಂಗ್ ಜೂ ವೆನ್ ನಡುವಿನ ಹೋರಾಟ ರೋಚಕವಾಗಿತ್ತು. ಒಂದು ತಾಸು 20 ನಿಮಿಷಗಳ ಹಣಾಹಣಿಯಲ್ಲಿ ಮಿಥುನ್ 16-21, 21-16, 23-21ರಲ್ಲಿ ಜಯ ದಾಖಲಿಸಿದರು.

ಆದರೆ ಚಿರಾಗ್ ಸೇನ್, ಕೌಶಲ್ ಧರ್ಮಮೇರ್ ಮತ್ತು ರಘು ಮರಿಸ್ವಾಮಿ ಅವರ ಹೋರಾಟ ಅಂತ್ಯಗೊಂಡಿತು. ರಷ್ಯಾದ ಸರ್ಜಿ ಸಿರಾಂತ್ 18-21, 22-20, 21-12ರಲ್ಲಿ ಚಿರಾಗ್ ಸೇನ್ ಅವರನ್ನು ಮಣಿಸಿದರೆ ಮಲೇಷ್ಯಾದ ಚೀಮ್ ಜುನ್ ವೀಗೆ ಕುಶಾಲ್ 16-21, 13-21ರಲ್ಲಿ ಮಣಿದರು. ರಘು 9-21, 9-21ರಲ್ಲಿ ಫ್ರಾನ್ಸ್‌ನ ಲೂಕಾಸ್ ಕ್ಲೀರ್‌ಬಾಟ್ ಎದುರು ಸೋತರು.

ಪುರುಷರ ಡಬಲ್ಸ್ ವಿಭಾಗದಲ್ಲಿ ನಾಲ್ಕನೇ ಶ್ರೇಯಾಂಕದ ಎಂ.ಆರ್. ಅರ್ಜುನ್ ಮತ್ತು ಧ್ರುವ್ ಕಪಿಲ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಅವರಿಗೆ ಅವರಿಗೆ ಆಯುಷ್ ಮಖಿಜ ಮತ್ತು ವೆಂಕಟ್ ಗೌರವ್ ಪ್ರಸಾದ್ ಅವರಿಂದ ವಾಕ್ ಓವರ್ ಲಭಿಸಿತ್ತು.

ಮಿಥುನ್ ಮಂಜುನಾಥ್

## ವಿಶ್ವಕಪ್: ಭಾರತ ತಂಡ ಕ್ವಾರ್ಟರ್‌ಫೈನಲ್‌ಗೆ

ತರೌಬಾ, ಟ್ರಿನಿಡಾಡ್: ಕೋವಿಡ್‌ನಿಂದ ಬಳಲಿದ ನಾಯಕ ಯಶ್ ಧುಳ್ ಮತ್ತು ನಾಲ್ವರು ಆಟಗಾರರ ಗೈರುಹಾಜರಿಯಿಂದಾಗಿ ಒತ್ತಡದಲ್ಲಿದ್ದ ಭಾರತ ತಂಡವು 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಐರ್ಲೆಂಡ್ ಎದುರು ಕೆಚ್ಚೆದೆಯ ಆಟವಾಡಿತು.

ಬುಧವಾರ ತಡರಾತ್ರಿ ಮುಗಿದ ಪಂದ್ಯದಲ್ಲಿ ಭಾರತ ತಂಡವು 174 ರನ್‌ಗಳಿಂದ ಐರ್ಲೆಂಡ್ ತಂಡವನ್ನು ಮಣಿಸಿ, ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಇಟ್ಟಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು ಅಂಗಕ್ರಿಷ್ ರಘುವಂಶಿ (79; 79ಎ, 4X10, 6X2) ಮತ್ತು ಹರ್ನೂರ್ ಸಿಂಗ್ (88; 101ಎ, 4X12) ನೀಡಿದ ಅಮೋಘ ಆರಂಭದ ಬಲದಿಂದ 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 307 ರನ್ ಗಳಿಸಿತು. ಅದಕ್ಕುತ್ತರವಾಗಿ ಐರ್ಲೆಂಡ್ ತಂಡವು 39 ಓವರ್‌ಗಳಲ್ಲಿ 133 ರನ್ ಗಳಿಸಿ ಆಲೌಟ್ ಆಯಿತು.

**ಲಕ್ಷ್ಮಣ್ ಮೆಚ್ಚುಗೆ:** ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಜೂನಿಯರ್ ಹುಡುಗರು ಅಮೋಘ ಆಟವಾಡಿದ್ದಾರೆ. ದೊಡ್ಡ ಅಂತರದ ಜಯ ಸಾಧಿಸಿದ್ದಾರೆ ಎಂದು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪಂದ್ಯಕ್ಕೂ ಮುನ್ನವಷ್ಟೇ; ನಾಯಕ ಯಶ್ ಧುಳ್, ಉಪನಾಯಕ ಶೇಖ್ ರಶೀದ್ ಮತ್ತು ನಾಲ್ವರು ಆಟಗಾರರಿಗೆ ಕೋವಿಡ್ ಖಚಿತವಗಿತ್ತು. ಆದ್ದರಿಂದ ಅವರನ್ನು ಪ್ರತ್ಯೇಕವಾಸಕ್ಕೆ ಕಳುಹಿಸಲಾಯಿತು. ಇಂತಹ ಆಘಾತದ ನಡುವೆಯೂ ತಂಡವು ಅಮೋಘ ಆಟವಾಡಿರುವುದನ್ನು ಲಕ್ಷ್ಮಣ್ ಶ್ಲಾಘಿಸಿದ್ದಾರೆ.

‘ಇಡೀ ಬಳಗದಲ್ಲಿ 11 ಆಟಗಾರರಷ್ಟೇ ಇದ್ದಾರೆ. ಆದರೂ ದೃತಿಗೆಡದೇ, ಗಾಯಗೊಳ್ಳದೇ ಇಡೀ ಪಂದ್ಯದಲ್ಲಿ ತಂಡವು ತೋರಿದ ಸ್ಥೈರ್ಯ ಮತ್ತು ಚಾಕಚಕ್ಯತೆಯ ಆಟ ಅಮೋಘವಾಗಿತ್ತು’ ಎಂದು ಟ್ವೀಟ್ ಮಾಡಿದ್ದಾರೆ.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 5ಕ್ಕೆ307 (ಅಂಗಕ್ರಿಷ್ ರಘುವಂಶಿ 79, ಹರ್ನೂರ್ ಸಿಂಗ್ 88, ರಾಜ್ ಬಾವಾ 42, ನಿಶಾಂತ್ ಸಿಂಧು 36, ರಾಜವರ್ಧನ್ ಹಂಗರಗೇಕರ್ ಔಟಾಗದೆ 39, ಮುಜಾಮಿಲ್ ಶರ್ಜಾದ್ 79ಕ್ಕೆ3), ಐರ್ಲೆಂಡ್: 39 ಓವರ್‌ಗಳಲ್ಲಿ 133 (ಜೊಶುವಾ ಕಕ್ಸ್ 28, ಸ್ಕಾಟ್ ಮೆಕ್‌ಬೆತ್ 32, ಗರ್ವ್ ಸಂಗ್ವಾನ್ 23ಕ್ಕೆ2, ಅನೀಶ್ವರ್ ಗೌತಮ್ 11ಕ್ಕೆ2, ಕೌಶಲ್ ತಾಂಬೆ 8ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 174 ರನ್‌ಗಳ ಜಯ.

## ಕೇಂದ್ರ ಗುತ್ತಿಗೆ: ರಾಹುಲ್, ಪಂತ್‌ಗೆ ಬಡ್ತಿ?

ನವದೆಹಲಿ (ಪಿಟಿಐ): ಬಿಸಿಸಿಐ ಶೀಘ್ರದಲ್ಲಿ ಪ್ರಕಟಿಸಲಿರುವ ಕೇಂದ್ರಿಯ ಗುತ್ತಿಗೆಯಲ್ಲಿ ಕೆ.ಎಲ್. ರಾಹುಲ್ ಮತ್ತು ರಿಷಭ್ ಪಂತ್ ಎ ಪ್ಲಸ್ ದರ್ಜೆಗೆ ಬಡ್ತಿ ಪಡೆಯುವ ಸಾಧ್ಯತೆ ಇದೆ.

ಇದು ಅಗ್ರದರ್ಜೆಯಾಗಿದ್ದು, ಈಗಾಗಲೇ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಜಸ್‌ಪ್ರೀತ್ ಬೂಮ್ರಾ ಇದ್ದಾರೆ. ಆದರೆ ಎ ದರ್ಜೆಯಲ್ಲಿರುವ ಅಜಿಂಕ್ಯ ರಹಾನೆ ಮತ್ತು ಚೇತೇಶ್ವರ್ ಪೂಜಾರ ತಮ್ಮ ಸ್ಥಾನ ಉಳಿಸಿಕೊಳ್ಳುವರೇ ಎಂಬುದನ್ನು ಕಾದು ನೋಡಬೇಕು.

ಕೇಂದ್ರ ಗುತ್ತಿಗೆಯಲ್ಲಿ ಒಟ್ಟು ನಾಲ್ಕು ವಿಭಾಗಗಳಿವೆ. ಎ ಪ್ಲಸ್ (₹ 7ಕೋಟಿ), ಎ (₹ 5 ಕೋಟಿ), ಬಿ (₹ 3 ಕೋಟಿ) ಹಾಗೂ ಸಿ (₹ 1 ಕೋಟಿ) ವಿಭಾಗಗಳಲ್ಲಿ ಆಟಗಾರರನ್ನು ಆಯ್ಕೆ ಮಾಡಲಾಗುತ್ತದೆ. ಬಿಸಿಸಿಐನ ಮೂವರು ಪದಾಧಿಕಾರಿಗಳು, ಆಯ್ಕೆ ಸಮಿತಿಯ ಐವರು ಮತ್ತು ರಾಷ್ಟ್ರೀಯ ತಂಡದ ಮುಖ್ಯ ಕೋಚ್ ಸೇರಿ ಈ ಆಟಗಾರರನ್ನು ಆಯ್ಕೆ ಮಾಡುತ್ತಾರೆ.

ಸದ್ಯದ ಪಟ್ಟಿಯಲ್ಲಿರುವ 28 ಆಟಗಾರರೂ ತಮ್ಮ ಸ್ಥಾನ ಉಳಿಸಿ ಕೊಳ್ಳುವ ಸಾಧ್ಯತೆ ಇದೆ. ಸಿ ಗುಂಪಿನಲ್ಲಿರುವ ಬೌಲರ್ ಮೊಹಮ್ಮದ್ ಸಿರಾಜ್, ಬಿ ಗುಂಪಿನ ಲ್ಲಿರುವ ಶಾರ್ದೂಲ್ ಠಾಕೂರ್ ಉತ್ತಮವಾಗಿ ಆಡಿದ್ದು, ಬಡ್ತಿ ಗಳಿಸುವ ಸಾಧ್ಯತೆ ಇದೆ.

ಭಾರತದ ಇಂದುಮತಿ ಕದಿರೇಶನ್ ಮತ್ತು ಇರಾನ್‌ನ ಜಹ್ರಾ ಜರ್ಬಾಲಿ ಅವರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಮುನ್ನುಗ್ಗಿದರು –ಪಿಟಿಐ ಚಿತ್ರ

## ಮಹಿಳೆಯರ ಏಷ್ಯಾಕಪ್: ಡ್ರಾ ಪಂದ್ಯದಲ್ಲಿ ಭಾರತ ತಂಡ

ನವಿ ಮುಂಬೈ (ಪಿಟಿಐ): ಅವಕಾಶಗಳನ್ನು ಕೈಚೆಲ್ಲಿದ ಭಾರತ ತಂಡ ಎಎಫ್‌ಸಿ ಮಹಿಳೆಯರ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಇರಾನ್ ಜೊತೆ ಗೋಲುರಹಿತ ಡ್ರಾಗೆ ಸಮಾಧಾನಪಟ್ಟುಕೊಂಡಿತು. ಹೀಗಾಗಿ ತಂಡದ ಕ್ವಾರ್ಟರ್ ಫೈನಲ್ ಹಾದಿ ಕಠಿಣವಾಗಿದೆ.

ದಶಕದ ನಂತರ ಟೂರ್ನಿಯಲ್ಲಿ ಆಡಲು ಅವಕಾಶ ಪಡೆದಿರುವ ಥಾಮಸ್ ಡೆನರ್ಬಿ ಕೋಚ್ ಆಗಿರುವ ಭಾರತ ತಂಡ ಮೊದಲಾರ್ಧದಲ್ಲಿ ನೀರಸ ಆಟವಾಡಿತು.

ದ್ವಿತೀಯಾರ್ಧದಲ್ಲಿ ಚೇತರಿಕೆ ಕಂಡಿತು. ಆದರೂ ಚೆಂಡನ್ನು ಗುರಿ ಮುಟ್ಟಿಸುವಲ್ಲಿ ಯಶಸ್ವಿಯಾಗಲಿಲ್ಲ. ಭಾನುವಾರದ ಪಂದ್ಯದಲ್ಲಿ ತಂಡ ಚೀನಾ ಥೈಪೆಯನ್ನು ಎದುರಿಸಲಿದೆ.

## ಹಾಕಿ:ಸವಿತಾ ಬಳಗಕ್ಕೆ ಪ್ರಶಸ್ತಿ ಜಯದ ಕನಸು

ಮಸ್ಕತ್ (ಪಿಟಿಐ): ಭಾರತದ ಮಹಿಳಾ ಹಾಕಿ ತಂಡವು ಶುಕ್ರವಾರ ಇಲ್ಲಿ ಆರಂಭವಾಗಲಿರುವ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ಜಯದ ವಿಶ್ವಾಸದಲ್ಲಿದೆ.

ಹೋದ ವರ್ಷ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸುವ ಮೂಲಕ ಹಾಕಿ ತಂಡವು ಅಮೋಘ ಸಾಧನೆ ಮಾಡಿತ್ತು. ಇದೇ ಹುಮ್ಮಸ್ಸಿನಲ್ಲಿ ಈಗ ಏಷ್ಯಾ ಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಮಲೇಷ್ಯಾ ತಂಡವನ್ನು ಎದುರಿಸಲಿದೆ. ಗೋಲ್‌ಕೀಪರ್ ಸವಿತಾ ಪೂನಿಯಾ ತಂಡವನ್ನು ಅವರು ಮುನ್ನಡೆಸಲಿದ್ದಾರೆ. ‘ತಂಡದಲ್ಲಿರುವ ನಾವೆಲ್ಲರೂ ಬಹಳ ಸಮಯದಿಂದ ಜೊತೆಗೂಡಿ ಆಡುತ್ತಿದ್ದೇವೆ. ಇದರಿಂದಾಗಿ ಪರಸ್ಪರ ಉತ್ತಮ ಹೊಂದಾಣಿಕೆ ಇದೆ. ಈ ಅನುಭವವು ತಂಡಕ್ಕೆ ಬಲ ತುಂಬಿದೆ’ ಎಂದು ಸವಿತಾ ಹೇಳಿದ್ದಾರೆ.

ಹಾಲಿ ಚಾಂಪಿಯನ್ ಕೂಡ ಆಗಿರುವ ಭಾರತ ತಂಡವು ಈ ಬಾರಿ ಎ ಗುಂಪಿನಲ್ಲಿ ಆಡುತ್ತಿದೆ. ಇದರಲ್ಲಿ ಮಲೇಷ್ಯಾ, ಜಪಾನ್ ಮತ್ತು ಸಿಂಗಪುರ ತಂಡಗಳ ವಿರುದ್ಧ ಆಡಲಿದೆ.

ಇದೇ 26ರಂದು ಸೆಮಿಫೈನಲ್ ಪಂದ್ಯಗಳು ಮತ್ತು 28ರಂದು ಫೈನಲ್ ನಡೆಯಲಿದೆ.

ಹೊಸದಾಗಿ ನೇಮಕವಾಗಿರುವ ಮುಖ್ಯ ಕೋಚ್ ಜೆನೆಕ್ ಶಾಪ್‌ಮ್ಯಾನ್ ಅವರಿಗೂ ಇದು ಮೊದಲ ಟೂರ್ನಿಯಾಗಿದೆ. ಅವರು ಈಹಿಂದೆ ಕೋಚ್ ಆಗಿದ್ದ ಶಾರ್ಡ್ ಮರೈನ್ ಅವರೊಂದಿಗೆ ತಾಂತ್ರಿಕ ಸಲಹೆಗಾರರಾಗಿದ್ದರು.

ಈ ವರ್ಷ ತಂಡವು ಏಷ್ಯಾಕಪ್ ನಂತರ ಕಾಮನ್‌ವೆಲ್ತ್ ಕ್ರೀಡಾಕೂಟ, ಏಷ್ಯನ್ ಕ್ರೀಡಾಕೂಟಗಳಲ್ಲಿ ಆಡಲಿದೆ. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಥಾನ ಪಡೆಯಲು ತಂಡವು ಪ್ರಯತ್ನಿಸಲಿದೆ.

ಶುಕ್ರವಾರ ನಡೆಯಲಿರುವ ಇನ್ನೊಂದು ಪಂದ್ಯದಲ್ಲಿ ಜಪಾನ್ ಮತ್ತು ಸಿಂಗಪುರ ಮುಖಾಮುಖಿಯಾಗಲಿವೆ. ಬಿ ಗುಂಪಿನಲ್ಲಿ ದಕ್ಷಿಣ ಕೊರಿಯಾ ಮತ್ತು ಇಂಡೋನೇಷ್ಯಾ ಹಾಗೂ ಚೀನಾ ಮತ್ತು ಥಾಯ್ಲೆಂಡ್ ಹಣಾಹಣಿ ನಡೆಸಲಿವೆ.

## ಫುಟ್‌ಬಾಲ್: ಚೀನಾಗೆ ಜಯ

ಮುಂಬೈ (ಪಿಟಿಐ): ಚೀನಾ ಥೈಪೆಯನ್ನು 4–0 ಗೋಲುಗಳಿಂದ ಮಣಿಸಿದ ಚೀನಾ ಗುರುವಾರ ಆರಂಭಗೊಂಡ ಎಎಫ್‌ಸಿ ಮಹಿಳೆಯರ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಮುಂಬೈ ಫುಟ್‌ಬಾಲ್ ಅರೆನಾದಲ್ಲಿ ನಡೆದ ಪಂದ್ಯದ ಮೊದಲ 10 ನಿಮಿಷಗಳಲ್ಲೇ ಎರಡು ಗೋಲು ಗಳಿಸಿ ತಂಡ ಮುನ್ನಡೆ ಸಾಧಿಸಿತು.

ವಾಂಗ್ ಶುವಾಂಗ್ 3ನೇ ನಿಮಿಷ ಮತ್ತು 68ನೇ ನಿಮಿಷಗಳಲ್ಲಿ ಗೋಲು ಗಳಿಸಿದರೆ ವಾಂಗ್ ಶಾಂಶಾನ್ (9ನೇ ನಿ) ಮತ್ತು ಜಾಂಗ್ ಕ್ಸಿನ್ (54ನೇ ನಿ) ಗೋಲು ದಾಖಲಿಸಿದರು. ಪುಣೆಯಲ್ಲಿ ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಜಪಾನ್ ತಂಡ ಮ್ಯಾನ್ಮಾರ್ ಎದುರು ಸೆಣಸಲಿದೆ.

## ಕಬಡ್ಡಿ: ಬೆಂಗಾಲ್‌ಗೆ ರೋಚಕ ಜಯ; ಬುಲ್ಸ್‌ಗೆ ನಿರಾಶೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪವನ್ ಶೆರಾವತ್ ಮತ್ತೆ ಮಿಂಚಿದರು. ಆದರೆ ಅವರ ಆಟಕ್ಕೆ ಸೆಡ್ಡು ಹೊಡೆದ ಮಣಿಂದರ್ ಸಿಂಗ್ ಅವರ ಚಾಣಾಕ್ಷ ಆಟದಿಂದಾಗಿ ಬೆಂಗಾಲ್ ವಾರಿಯರ್ಸ್ ತಂಡವು ಬೆಂಗಳೂರು ಬುಲ್ಸ್ ವಿರುದ್ಧ ರೋಚಕ ಜಯ ಸಾಧಿಸಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಬುಲ್ಸ್ ತಂಡವು 39–40 ರಿಂದ ಬೆಂಗಾಲ್ ವಿರುದ್ಧ ಸೋತಿತು.

ಬುಲ್ಸ್ ನಾಯಕ ಪವನ್ 13 ಪಾಯಿಂಟ್ಸ್ ಗಳಿಸಿದರು. ರೇಡರ್ ಚಂದನ್ ರಂಜೀತ್ ಎಂಟು ಮತ್ತು ಸೌರಭ್ ನಂದಾಲ್ ನಾಲ್ಕು ಅಂಕ ಗಳಿಸಿದರು.

ಬೆಂಗಾಲ್ ತಂಡದ ನಾಯಕ ಮಣಿಂದರ್ ಒಂಬತ್ತು ಮತ್ತು ಸುಖೇಶ್ ಹೆಗಡೆ ಏಳು ಅಂಕ ಗಳಿಸಿ ಮಿಂಚಿದರು.

ಉಭಯ ತಂಡಗಳು ಆರಂಭದಿಂದಲೂ ತುರುಸಿನ ಪೈಪೋಟಿ ನಡೆಸಿದವು. ಅರ್ಧ ವಿರಾಮದ ವೇಳೆಗೂ ಬೆಂಗಾಲ್ ತಂಡವು ಕೇವಲ ಒಂದು ಅಂಕದ ಅಂತರದಿಂದ (14–13) ಮುನ್ನಡೆಯಲ್ಲಿತ್ತು. ಕೊನೆಯವರೆಗೂ ಜಿದ್ದಾಜಿದ್ದಿನ ಆಟ ನಡೆಯಿತು.

**ಇಂದಿನ ಪಂದ್ಯ (ರಾತ್ರಿ)**

ದಬಂಗ್ ಡೆಲ್ಲಿ Vs ಹರಿಯಾಣ ಸ್ಟೀಲರ್ಸ್ 7.30

ಯು.ಪಿ.ಯೋಧಾ Vs ಬೆಂಗಾಲ್ ವಾರಿಯರ್ಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

### ಗುಜರಾತ್‌ಗೆ ಜಯ

ಮಹೇಂದ್ರ ರಜಪೂತ್ ಮತ್ತು ರಾಕೇಶ್ ನರ್ವಾಲ್ ಅವರ ಅಮೋಘ ಆಟದಿಂದ ಗುಜರಾತ್ ಜೈಂಟ್ಸ್ ತಂಡವು ತಮಿಳ್ ತಲೈವಾಸ್ ಎದುರು ಎರಡು ಅಂಕಗಳ ಅಂತರದ ರೋಚಕ ಜಯ ಸಾಧಿಸಿತು. ಮಹೇಂದ್ರ (9) ಮತ್ತು ರಾಕೇಶ್ (6) ಮಿಂಚಿದರು. ಅದರಿಂದಾಗಿ ಗುಜರಾತ್ ತಂಡವು 37–35ರಿಂದ ತಮಿಳ್ ತಂಡವನ್ನು ಮಣಿಸಿತು.

ತಮಿಳ್ ತಂಡದ ಮಂಜೀತ್ (12) ಅವರ ಅಮೋಘ ಆಟವು ವ್ಯರ್ಥವಾಯಿತು. ರೇಡರ್ ಅಜಿಂಕ್ಯ ಪವಾರ್ ಹತ್ತು ಅಂಕ ಗಳಿಸಿದರು.

**ಪಾಯಿಂಟ್ಸ್ ಪಟ್ಟಿ**

| ತಂಡ | ಪಂದ್ಯ | ಜಯ | ಸೋಲು | ಟೈ | ಪಾಯಿಂಟ್ಸ್ |
|---|---|---|---|---|---|
| ದಬಂಗ್ ಡೆಲ್ಲಿ | 11 | 7 | 2 | 2 | 42 |
| ಬೆಂಗಳೂರು ಬುಲ್ಸ್ | 12 | 7 | 4 | 1 | 40 |
| ಪಟ್ನಾ ಪೈರೇಟ್ಸ್ | 11 | 7 | 3 | 1 | 40 |
| ಬೆಂಗಾಲ್ ವಾರಿಯರ್ಸ್ | 12 | 6 | 5 | 1 | 35 |
| ಯುಪಿ ಯೋಧಾ | 11 | 4 | 4 | 3 | 33 |
| ಜೈಪುರ್ ಪಿಂಕ್ ಪ್ಯಾಂಥರ್ಸ್ | 11 | 5 | 5 | 1 | 32 |
| ತಮಿಳ್ ತಲೈವಾಸ್ | 11 | 3 | 3 | 5 | 31 |
| ಯು ಮುಂಬಾ | 11 | 3 | 3 | 5 | 31 |
| ಹರಿಯಾಣ ಸ್ಟೀಲರ್ಸ್ | 11 | 4 | 5 | 2 | 29 |
| ಗುಜರಾತ್ ಜೈಂಟ್ಸ್ | 11 | 3 | 5 | 3 | 28 |
| ಪುಣೇರಿ ಪಲ್ಟನ್ | 11 | 4 | 7 | - | 22 |
| ತೆಲುಗು ಟೈಟನ್ಸ್ | 11 | 1 | 8 | 2 | 17 |

(ಗುರುವಾರದ ಪಂದ್ಯಗಳ ಅಂತ್ಯಕ್ಕೆ)

### ಆಸ್ಟ್ರೇಲಿಯನ್ ಓಪನ್: ರಡುಕಾನು, ಗಾರ್ಬೈನ್‌ಗೆ ನಿರಾಶೆ

# ಮೆಡ್ವೆಡೆವ್ ಜಯಭೇರಿ

ಮೆಲ್ಬರ್ನ್ (ಎಎಫ್‌ಪಿ/ಎಪಿ): ಸ್ಥಳೀಯ ಆಟಗಾರ ನಿಕ್ ಕಿರ್ಗಿಯೋಸ್ ಅವರ ಸವಾಲನ್ನು ಸಮರ್ಥವಾಗಿ ಮೀರಿದ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್, ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತು ಪ್ರವೇಶಿಸಿದರು. ಎರಡು ತಾಸು 58 ನಿಮಿಷಗಳ ಹಣಾಹಣಿಯಲ್ಲಿ ಮೆಡ್ವೆಡೆವ್ 7-6 (7/1), 6-4, 4-6, 6-2ರಲ್ಲಿ ಜಯ ಗಳಿಸಿದರು.

ರಾಡ್ ಲೇವರ್ ಅರೆನಾದಲ್ಲಿ ಸ್ಥಳೀಯ ಪ್ರೇಕ್ಷಕರನ್ನು ರೋಮಾಂಚನದ ತುತ್ತತುದಿಗೆ ಕೊಂಡೊಯ್ದ ಕಿರ್ಗಿಯೋಸ್ ಎದುರಾಳಿಗೆ ಪ್ರಬಲ ಪೈಪೋಟಿ ನೀಡಿದರು.

ಆದರೆ ಪಟ್ಟು ಬಿಡದ ಮೆಡ್ವೆಡೆವ್ ಮುಂದಿನ ಹಂತಕ್ಕೆ ಲಗ್ಗೆ ಇರಿಸಿದರು. ಮೂರನೇ ಸುತ್ತಿನಲ್ಲಿ ಅವರಿಗೆ ನೆದರ್ಲೆಂಡ್ಸ್‌ನ ಬಾಟಿಕ್ ವ್ಯಾನ್ ಡಿ ಜಂಡ್‌ಶುಲ್ಪ್ ಎದುರಾಳಿ.

ಮಹಿಳೆಯರ ವಿಭಾಗದಲ್ಲಿ ಬ್ರಿಟನ್‌ನ ಎಮಾ ರಡುಕಾನು ಮತ್ತು ಸ್ಪೇನ್‌ನ ಗಾರ್ಬೈನ್ ಮುಗುರುಜಾ ಸೋತು ಹೊರಬಿದ್ದರು. ಪುರುಷರ ವಿಭಾಗದಲ್ಲಿ ಬ್ರಿಟನ್‌ನ ಆ್ಯಂಡಿ ಮರೆ ಕೂಡ ಆಘಾತ ಅನುಭವಿಸಿದರು.

ಕಳೆದ ಬಾರಿ ಅಮೆರಿಕ ಓಪನ್ ಟೂರ್ನಿಯ ಪ್ರಶಸ್ತಿ ಗೆದ್ದು ಗಮನ ಸೆಳೆದಿದ್ದ ಎಮಾ ರಡುಕಾನು ಇಲ್ಲಿಯೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರ್ತಿಯರಲ್ಲಿ ಒಬ್ಬರಾಗಿದ್ದರು.

ಆದರೆ ಅವರ ಕನಸನ್ನು ಮಾಂಟೆನಿಗ್ರೊದ ಡಂಕಾ ಕೊವಿನಿಚ್ ಭಗ್ನಗೊಳಿಸಿದರು. 17ನೇ ಶ್ರೇಯಾಂಕಿತ ಆಟಗಾರ್ತಿಯನ್ನು ಡಂಕಾ 4–6, 6–4, 6–3ರಲ್ಲಿ ಮಣಿಸಿದರು. ಅಮೆರಿಕ ಓಪನ್‌ನ ಮಾಜಿ ಚಾಂಪಿಯನ್ ಸ್ಲಾನೆ ಸ್ಟೀಫನ್ಸ್ ಅವರನ್ನು ಮೊದಲ ಸುತ್ತಿನಲ್ಲಿ ಸೋಲಿಸಿ 19 ವರ್ಷದ ರಡುಕಾನು ಭರವಸೆ ಮೂಡಿಸಿದ್ದರು.

ಮೂರನೇ ಶ್ರೇಯಾಂಕಿತೆ ಗಾರ್ಬೈನ್ ಮುಗುರುಜಾ ಫ್ರಾನ್ಸನ್ ಅಲಿಜ್ ಕಾರ್ನೆಟ್‌ಗೆ 6–3, 6–3ರಲ್ಲಿ ಮಣಿದರು. ಅವರು ಟೂರ್ನಿಯಿಂದ ಹೊರಬಿದ್ದ ಗರಿಷ್ಠ ಶ್ರೇಯಾಂಕದ ಆಟಗಾರ್ತಿಯಾಗಿದ್ದಾರೆ.

ಆರನೇ ಶ್ರೇಯಾಂಕದ ಅನೆತ್ ಕೊಂತಾವ್ಹೇಟ್ ಡೆನ್ಮಾರ್ಕ್‌ನ ಕ್ಲಾರಾ ಟೌಜನ್ ಎದುರು ಸೋತು ಸ್ವಲ್ಪ ಹೊತ್ತಿನಲ್ಲೇ ಈ ಮುಗುರುಜಾ ಕೂಡ ವಾಪಸ್ ಆಗಿದ್ದಾರೆ. ಅನೆತ್ ಕೊಂತಾವ್ಹೇಟ್ 2–6, 4–6ರಲ್ಲಿ ಸೋತಿದ್ದರು.

ಎರಡನೇ ಶ್ರೇಯಾಂಕಿತೆ ಬೆಲಾರಸ್‌ನ ಅರಿನಾ ಸಬಲೆಂಕಾ ವಿಶ್ವ ರ‍್ಯಾಂಕಿಂಗ್‌ನಲ್ಲಿ 100ನೇ ಸ್ಥಾನದಲ್ಲಿರುವ ವಾಂಗ್ ಕ್ಸಿನ್ಯು ಎದುರು 1-6, 6-4, 6-2ರಲ್ಲಿ ಜಯ ಗಳಿಸಿದರು. ಅನಸ್ತೇಸಿಯಾ ಪೌಲಿಚೆಂಕೋವ 6-2, 6-2ರಲ್ಲಿ ಸ್ಯಾಮ್ ಸ್ಟೌಜರ್ ಅವರನ್ನು ಮಣಿಸಿದರು.

### ಎರಡನೇ ಸುತ್ತಿಗೆ ಸಾನಿಯಾ–ರಾಮ್

ಟೆನಿಸ್‌ಗೆ ವಿದಾಯ ಹೇಳುವುದಾಗಿ ಘೋಷಿಸಿದ ಮರುದಿನವೇ ಭಾರತದ ಸಾನಿಯಾ ಮಿರ್ಜಾ ಅವರು ಅಮೋಘ ಜಯ ಸಾಧಿಸಿದ್ದಾರೆ. ಅಮೆರಿಕದ ರಾಜೀವ್ ರಾಮ್ ಜೊತೆಗೂಡಿ ಮಿಶ್ರ ಡಬಲ್ಸ್‌ನಲ್ಲಿ ಗುರುವಾರ ಕಣಕ್ಕೆ ಇಳಿದ ಅವರು ಸರ್ಬಿಯಾದ ಅಲೆಕ್ಸಾಂಡ್ರ ಕ್ರೂನಿಚ್ ಮತ್ತು ನಿಕೋಲಾ ಕಾಸಿಚ್ ಜೋಡಿಯನ್ನು 6-3, 7-6ರಲ್ಲಿ ಮಣಿಸಿದರು.

ಬುಧವಾರ ಮಹಿಳೆಯರ ಡಬಲ್ಸ್‌ನ ಮೊದಲ ಸುತ್ತಿನಲ್ಲಿ ಸೋತ ಮೇಲೆ, ಈ ಋತುವಿನ ನಂತರ ಆಡುವುದಿಲ್ಲ ಎಂದು ಸಾನಿಯಾ ಘೋಷಿಸಿದ್ದರು.

69 ನಿಮಿಷಗಳ ಹಣಾಹಣಿಯಲ್ಲಿ ರಾಜೀವ್ ರಾಮ್ ಅಪ್ರತಿಮ ಆಟವಾಡಿದರು. ಪ್ರಬಲ ಸರ್ವ್‌ಗಳ ಮೂಲಕ ಎದುರಾಳಿಗಳನ್ನು ಕಂಗೆಡಿಸಿದ ಅವರು ನೆಟ್ ಬಳಿ ಅಮೋಘ ಡ್ರಾಪ್‌ಗಳ ಮೂಲಕವೂ ಮಿಂಚಿದರು. ಕಳೆದ ವರ್ಷದ ಆವೃತ್ತಿಯಲ್ಲಿ ರಾಜೀವ್ ರಾಮ್ ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಜಿಕೋವ ಜೊತೆಗೂಡಿ ಪ್ರಶಸ್ತಿ ಗೆದ್ದಿದ್ದರು.

ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಚೆಂಡು ರಿಟರ್ನ್ ಮಾಡಿದ ಬಗೆ –ಎಎಫ್‌ಪಿ ಚಿತ್ರ

### ಮರೆಗೆ ನಿರಾಶೆ

ಆ್ಯಂಡಿ ಮರೆ 120ನೇ ರ‍್ಯಾಂಕ್‌ನ ಜಪಾನ್ ಆಟಗಾರ ತರೊ ಡ್ಯಾನಿಯಲ್‌ಗೆ 4–6, 4–6, 4–6ರಲ್ಲಿ ಮಣಿದರು. ಈ ಹಿಂದೆ ಇವರಿಬ್ಬರು ಒಮ್ಮೆ ಮಾತ್ರ ಮುಖಾಮುಖಿಯಾಗಿದ್ದರು. ಡೇವಿಡ್ ಕಪ್‌ನ ಆ ಪಂದ್ಯದಲ್ಲಿ ಮರೆ ಕೇವಲ ಐದು ಗೇಮ್‌ಗಳನ್ನು ಮಾತ್ರ ಸೋತಿದ್ದರು.